ಶನಿವಾರ, ಮೇ 23, 2026| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರಕ್ಷಣಾ ತರಬೇತಿ

ಜಮ್ಮುವಿನಲ್ಲಿ 'ಶಕ್ತಿ ಉದ್ಘೋಷ್ ಫೌಂಡೇಷನ್' ಶುಕ್ರವಾರ ಆಯೋಜಿಸಿದ್ದ ಸ್ವಯಂ ರಕ್ಷಣಾ ತರಬೇತಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು ಭಾಗಿಯಾಗಿದ್ದರು





ದಾಖಲೆ ವೀರ

ಒಡಿಶಾದ ಅನಿಮೇಶ್ ಕುಜೂರ್ ಅವರು ಶುಕ್ರವಾರ ರಾಂಚಿಯಲ್ಲಿ ನಡೆದ ರಾಷ್ಟ್ರೀಯ ಸೀನಿಯರ್ ಅಥ್ಲೆಟಿಕ್ಸ್ ಫೆಡರೇಷನ್ ಕಪ್ ಕೂಟದಲ್ಲಿ 100 ಮೀ. ಓಟವನ್ನು 10.15 ಸೆಕೆಂಡ್‌ಗಳಲ್ಲಿ ಕ್ರಮಿಸಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು

ಶನಿವಾರ, ಮೇ 23, 2026 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನೆರವು

ಅಫ್ಗಾನಿಸ್ತಾನದ ಮಕ್ಕಳ ರೋಗನಿರೋಧಕ ಲಸಿಕೆ ಯೋಜನೆಗೆ ನೆರವು ನೀಡುವ ಸಲುವಾಗಿ ಭಾರತವು ಅಗತ್ಯ ವಸ್ತುಗಳನ್ನು ಪೂರೈಕೆ ಮಾಡಿದೆ



ಧರಣಿ

ಬೆಲೆ ಏರಿಕೆ ಖಂಡಿಸಿ ಎನ್‌ಸಿಪಿ (ಶರದ್ ಪವಾರ್ ಬಣ)ದ ಕಾರ್ಯಕರ್ತರು ಠಾಣೆಯ ಜಿಲ್ಲಾಧಿಕಾರಿ ಕಚೇರಿ ಮುಂದೆ ಜಾಗಟೆ ಬಡಿದು ಪ್ರತಿಭಟಿಸಿದರು



ಕಾಂಗ್ರೆಸ್–ಬಿಜೆಪಿ ಜಟಾಪಟಿ: ನಾಲ್ವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಚಿಕ್ಕಮಗಳೂರು: ನಗರದ ಹೊರವಲಯದ ರಾಂಪುರ ಬಳಿ ರಸ್ತೆ ಅಭಿವೃದ್ಧಿ ವಿಚಾರಕ್ಕೆ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಗುರುವಾರ ನಡೆದ ಬೀದಿ ಜಗಳ ಸಂಬಂಧ ಪೊಲೀಸರು ಎರಡೂ ಪಕ್ಷಗಳ ನಾಲ್ವರ ವಿರುದ್ಧ ಸ್ವಯಂ ಪ್ರೇರಿತ ಎಫ್‌ಐಆರ್ ದಾಖಲಿಸಿದ್ದಾರೆ.

ಬಿಜೆಪಿ ಯುವ ಮೋರ್ಚಾ ಜಿಲ್ಲಾ ಘಟಕದ ಅಧ್ಯಕ್ಷ ಸಂತೋಷ್ ಕೋಟ್ಯಾನ್, ಬಿಜೆಪಿ ಕಾರ್ಯಕರ್ತ ರಾಜೇಶ್ ಕಲ್ಲುದೊಡ್ಡಿ, ಕಾಂಗ್ರೆಸ್ ಕಾರ್ಯಕರ್ತರಾದ ಕೌಶಿಕ್ ಮತ್ತು ಹೇಮಂತ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇತರ 15ರಿಂದ 20 ಜನ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಹೆಡ್ ಕಾನ್‌ಸ್ಟೆಬಲ್ ಪ್ರವೀಣ್ ನೀಡಿರುವ ದೂರು ಆಧರಿಸಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆ ಕಾಮಗಾರಿ ವೀಕ್ಷಣೆಗೆ ಸಿ.ಟಿ. ರವಿ ಗುರುವಾರ ತೆರಳಿದ್ದರು. ಕಾಂಗ್ರೆಸ್ ಕಾರ್ಯಕರ್ತರು ರಸ್ತೆಗೆ ಅಡ್ಡ ಕುಳಿತು ಘೋಷಣೆ ಕೂಗಿದ್ದರು. ಬಿಜೆಪಿ ಕಾರ್ಯಕರ್ತರು ಪ್ರತಿಯಾಗಿ ಘೋಷಣೆ ಕೂಗಿದ್ದರು. ಈ ಸಂದರ್ಭದಲ್ಲಿ ಎರಡೂ ಪಕ್ಷಗಳ ಕಾರ್ಯಕರ್ತರು ನೂಕಾಟ, ತಳ್ಳಾಟ ಮಾಡಿ ಕೈ ಕೈ ಮಿಲಾಯಿಸಿದ್ದರು.

ರಾಜ್ಯದಲ್ಲೂ ಸದ್ದು ಮಾಡಿದ ‘ಜಿರಳೆ’

ಸಿಜೆಪಿ: ಟೌನ್‌ಹಾಲ್ ಬಳಿ ಜನರ ಜಮಾವಣೆಗೆ ಪೊಲೀಸರ ನಿರ್ಬಂಧ



‘ಒಡಿಶಾ ಕಾಕ್ರೋಚ್ ಪಾರ್ಟಿ’ ಹೆಸರಿನಲ್ಲಿ ನಿರುದ್ಯೋಗಿ ಯುವಕರು ಭುವನೇಶ್ವರದಲ್ಲಿ ಪ್ರತಿಭಟನೆ ನಡೆಸಿದರು – ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಕ್ರೋಚ್ ಜನತಾ ಪಾರ್ಟಿಯಿಂದ (ಸಿಜೆಪಿ) ಇಲ್ಲಿನ ಟೌನ್‌ಹಾಲ್ ಬಳಿ ಮೇ 24ರಂದು ‘ಶಾಂತಿಯುತ ಮಾನವ ಸರಪಳಿ ನಿರ್ಮಾಣ’ ಎನ್ನುವ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂಬ ಪೋಸ್ಟ್ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

‘ಟೌನ್‌ಹಾಲ್ ಎದುರು ಮಾನವ ಸರಪಳಿ ನಿರ್ಮಾಣಕ್ಕೆ ಅವಕಾಶ ಇಲ್ಲ’ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ತಿಳಿಸಿದ್ದಾರೆ.

‘ಕಾಕ್ರೋಚ್ ಜನತಾ ಪಾರ್ಟಿ ಕರ್ನಾಟಕ’ ಶೀರ್ಷಿಕೆ ಅಡಿ ಪೋಸ್ಟ್ ಹೊರಡಿಸಲಾಗಿದೆ. ಮಾನವ ಸರಪಳಿ ನಿರ್ಮಿಸುವ ಸಲುವಾಗಿ ಟೌನ್‌ಹಾಲ್ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಸೇರುವಂತೆ ಜನರಿಗೆ ಆಹ್ವಾನವನ್ನೂ ನೀಡಲಾಗಿದೆ. ಟೌನ್‌ಹಾಲ್ ಬಳಿ ಅಂತಹ ಕಾರ್ಯಕ್ರಮ ಹಮ್ಮಿಕೊಳ್ಳಲು ಯಾವುದೇ ವ್ಯಕ್ತಿ, ಸಂಘಟನೆ, ಪಕ್ಷದಿಂದ ಅನುಮತಿ ಕೋರಿದ ಅರ್ಜಿ ಬಂದಿಲ್ಲ. ಅಧಿಕೃತ ಅನುಮತಿಯನ್ನೂ ಪೊಲೀಸ್ ಇಲಾಖೆ ನೀಡಿಲ್ಲ. ಜಿಬಿಎ ಕಚೇರಿಯಿಂದಲೂ ಯಾವುದೇ ಅನುಮತಿ ಪಡೆದಿಲ್ಲ’ ಎಂದು ಅವರು ತಿಳಿಸಿದ್ದಾರೆ.

ಫ್ರೀಡಂಪಾರ್ಕ್ ಹೊರತುಪಡಿಸಿ ಬೇರೆ ಯಾವುದೇ ಸ್ಥಳಗಳಲ್ಲಿ ಧರಣಿ, ಪ್ರತಿಭಟನೆ ರ್‍ಯಾಲಿ ನಡೆಸುವುದಕ್ಕೆ ಹೈಕೋರ್ಟ್ ಆದೇಶದ ಅನ್ವಯ ಅವಕಾಶ ಇಲ್ಲ. ಟೌನ್‌ಹಾಲ್ ಬಳಿ ಜನರು ಬಂದು ಸೇರುವುದು ನ್ಯಾಯಾಲಯದ ಆದೇಶದ ಉಲ್ಲಂಘನೆ ಆಗಲಿದೆ ಎಂದು ಸೀಮಾಂತ್ ಕುಮಾರ್ ಸಿಂಗ್ ಎಚ್ಚರಿಸಿದ್ದಾರೆ.

ಸಾರ್ವಜನಿಕರು ಈ ಸಂದೇಶವನ್ನು ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಂ, ಟ್ವಿಟರ್‌ಗಳ ಮೂಲಕ ಮತ್ತೊಬ್ಬರಿಗೆ ಪೋಸ್ಟ್ ಮಾಡದಂತೆ ಹಾಗೂ ಟೌನ್‌ಹಾಲ್ ಬಳಿ ಬಂದು ಗುಂಪು ಸೇರದಂತೆ ಪೊಲೀಸರು ಸೂಚಿಸಿದ್ದಾರೆ.

ಪೋಸ್ಟ್‌ನಲ್ಲಿ ಏನಿದೆ?

ಎಲ್ಲ ಕಾಕ್ರೋಚ್‌ಗಳೇ ಮತ್ತು ಕಾಕ್ರೋಚ್ ಜನತಾ ಪಕ್ಷದ ಅಭಿಮಾನಿಗಳೇ... ಬನ್ನಿ ಅಂದು ಶಕ್ತಿ ಪ್ರದರ್ಶಿಸೋಣ. ಆತ್ಮವಂಚಕ ಆಡಳಿತಕ್ಕೆ ಸಂದೇಶ ರವಾನಿಸೋಣ. ಯುವಕರಿಗೆ ಭವಿಷ್ಯವಿಲ್ಲ. ಬೆಲೆ ಏರಿಕೆಯಿಂದ ಬದುಕಿಲ್ಲ. ನಮ್ಮ ಮತ ಕದಿಯುತ್ತಿದ್ದಾರೆ. ಬನ್ನಿ ಕಾಕ್ರೋಚ್‌ಗಳ ಸಂದೇಶ ನೀಡೋಣ. ಇಲ್ಲಿ ನಾಯಕರಿಲ್ಲ; ನಮಗೆ ನಾವೇ ನಾಯಕರು. ಇಲ್ಲಿ ಸಂಘಟನೆ ಇಲ್ಲ; ಪ್ರಜೆಗಳು ಕೈಜೋಡಿಸುವುದೇ ಸಂಘಟನೆ ಎಂದು ಪೋಸ್ಟ್‌ನಲ್ಲಿ ಬರೆಯಲಾಗಿದೆ.

ಇದರ ಜತೆಗೆ, ಆ ಪಕ್ಷದ ಆಶಯವನ್ನು ಕನ್ನಡದಲ್ಲಿ ಪ್ರಚುರ ಪಡಿಸುವ ‘ಎಐ’ ಆಧರಿತ ವಿಡಿಯೊವನ್ನು ಹರಿಬಿಡಲಾಗಿದೆ. ನಿರುದ್ಯೋಗ, ಪೆಟ್ರೋಲ್ ಬೆಲೆ ಏರಿಕೆಯ ಸಮಸ್ಯೆಗಳನ್ನು ವಿಡಿಯೊ ಬಿಂಬಿಸಿದೆ.



ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಸಿಜೆಪಿ ಪೋಸ್ಟ್

ಪ್ರಧಾನ್ ರಾಜೀನಾಮೆಗಾಗಿ ಅಭಿಯಾನ

ನವದೆಹಲಿ (ಪಿಟಿಐ): ಭಾರತದಾದ್ಯಂತ ದಿಢೀರ್ ಜನಪ್ರಿಯವಾಗಿರುವ ವಿಡಂಬನಾತ್ಮಕ ಸಾಮಾಜಿಕ ಮಾಧ್ಯಮ ಖಾತೆಯಾದ ‘ಕಾಕ್ರೋಚ್ ಜನತಾ ಪಾರ್ಟಿ’ಯು (ಸಿಜೆಪಿ) ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ಶುಕ್ರವಾರ ಅಭಿಯಾನ ಆರಂಭಿಸಿದೆ.

ಸಿಜೆಪಿ ಮೂಲ ‘ಎಕ್ಸ್’ ಖಾತೆಯನ್ನು ನಿರ್ಬಂಧಿಸಿದ ಬಳಿಕ, ‘ಕಾಕ್ರೋಚ್‌ಗಳಿಗೆ ಸಾವಿಲ್ಲ’ ಎಂಬ ಟ್ಯಾಗ್‌ಲೈನ್ ಇರುವ ‘ಕಾಕ್ರೋಚ್ ಈಸ್ ಬ್ಯಾಕ್’ ಎಂಬ ಮತ್ತೊಂದು ‘ಎಕ್ಸ್’ ಖಾತೆ ಮತ್ತು ಇನ್‌ಸ್ಟಾಗ್ರಾಮ್ ಖಾತೆ ಮೂಲಕ ಅಭಿಯಾನವನ್ನು ಆರಂಭಿಸಿದೆ. ಈ ಮೂಲಕ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿವಾದ ಸೇರಿದಂತೆ ಶಿಕ್ಷಣ ಕ್ಷೇತ್ರದಲ್ಲಿನ ವ್ಯವಸ್ಥಿತ ವೈಫಲ್ಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ಆರಂಭಿಸಿದೆ.

ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರು, ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿರುವ ಆನ್‌ಲೈನ್ ಅರ್ಜಿಯನ್ನು ಬೆಂಬಲಿಸುವಂತೆ ಫಾಲೋವರ್‌ಗಳನ್ನು ಕೋರಿದ್ದಾರೆ.



‘ಶಿಕ್ಷಣ ವ್ಯವಸ್ಥೆಯಲ್ಲಿನ ವೈಫಲ್ಯಗಳು ವಿದ್ಯಾರ್ಥಿಗಳ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತವೆ. ವ್ಯವಸ್ಥೆಯನ್ನೇ ಹೊಣೆಯಾಗಿಸಲು ಇದು ಸಕಾಲ. ವ್ಯವಸ್ಥೆಯ ವೈಫಲ್ಯದಿಂದಾಗಿಯೇ ನೀಟ್ ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಧರ್ಮೇಂದ್ರ ಪ್ರಧಾನ್ ಅವರು ರಾಜೀನಾಮೆ ಸಲ್ಲಿಸಲೇಬೇಕು’ ಎಂದು ಒತ್ತಾಯಿಸಿದ್ದಾರೆ. ಈ ಅಭಿಯಾನದ ಫಲವಾಗಿ ಜೀವ ಬೆದರಿಕೆಯನ್ನು ಎದುರಿಸುತ್ತಿದ್ದೇನೆ ಎಂದೂ ಅವರು ಹೇಳಿದ್ದಾರೆ.

‘ಸಿಜೆಪಿ ‘ಎಕ್ಸ್’ ಖಾತೆಯನ್ನು ಹ್ಯಾಕ್ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಇದು ಸರ್ಕಾರದ ಉದ್ದೇಶವೂ ಆಗಿದೆ. ತಂಡವು ಕಾನೂನು ಮೂಲಕ ಹೋರಾಟ ನಡೆಸಲಿದೆ’ ಎಂದು ಹೇಳಿದ್ದಾರೆ.

‘ಎರಡು ರಾತ್ರಿಯಿಂದ ನಿದ್ದೆ ಇಲ್ಲ’

ಛತ್ರಪತಿ ಸಂಭಾಜಿನಗರ (ಪಿಟಿಐ): ‘ಕಾಕ್ರೋಚ್ ಜನತಾ ಪಾರ್ಟಿ’ (ಸಿಜೆಪಿ) ಸಾಮಾಜಿಕ ಮಾಧ್ಯಮ ಖಾತೆಯ ಖ್ಯಾತಿಯು ಅದರ ಸಂಸ್ಥಾಪಕ ಅಭಿಜಿತ್ ದೀಪ್ಕೆ ಅವರ ಪೋಷಕರು ಆತಂಕಕ್ಕೆ ಒಳಗಾಗಿದ್ದಾರೆ.

‘ಸಾಮಾಜಿಕ ಮಾಧ್ಯಮದಲ್ಲಿ ಸಿಜೆಪಿ ಖ್ಯಾತಿ ಗಳಿಸುತ್ತಿದ್ದಂತೆಯೇ ಎರಡು ದಿನಗಳಿಂದ ನಮಗೆ ನಿದ್ದೆಯೇ ಇಲ್ಲವಾಗಿದೆ’ ಎಂದು ಅಭಿಜಿತ್ ಅವರ ತಂದೆ ಭಗವಾನ್ ದೀಪ್ಕೆ, ತಾಯಿ ಅನಿತಾ ದೀಪ್ಕೆ ಮರಾಠಿ ಚಾನೆಲ್‌ವೊಂದಕ್ಕೆ ತಿಳಿಸಿದ್ದಾರೆ.

‘ಈಚೆಗಿನ ದಿನಗಳಲ್ಲಿನ ರಾಜಕೀಯ ನೋಡಿದರೆ, ಆತ ಎಷ್ಟೇ ಬೆಂಬಲಿಗರನ್ನು ಹೊಂದಿದ್ದರೂ ಭಯ ಸಹಜ. ಭಾರತಕ್ಕೆ ಮರಳಿದಾಗ ಬಂಧನಕ್ಕೆ ಒಳಗಾಗುವ ಭೀತಿಯನ್ನು ಆತನೇ ವ್ಯಕ್ತಪಡಿಸಿದ್ದಾನೆ. ಅಂತಹ ಘಟನೆಗಳನ್ನು ನಾವು ಪತ್ರಿಕೆಗಳಲ್ಲಿ ಓದುತ್ತೇವೆ’ ಎಂದು ಭಗವಾನ್ ದೀಪ್ಕೆ ಹೇಳಿದ್ದಾರೆ.

ಪಾಕ್‌ನಲ್ಲೂ ‘ಸಿಜೆಪಿ’ ಸದ್ದು



ಇಸ್ಲಾಮಾಬಾದ್: ಕಾಕ್ರೋಚ್ ಜನತಾ ಪಾರ್ಟಿಯ (ಸಿಜೆಪಿ) ಸದ್ದು ಇದೀಗ ಪಾಕಿಸ್ತಾನದ ರಾಜಕೀಯಕ್ಕೂ ವ್ಯಾಪಿಸಿದೆ. ಭಾರತದ ಸಿಜೆಪಿ ಅಭಿಯಾನದ ಮಾದರಿಯಲ್ಲಿ ಪಾಕಿಸ್ತಾನದ ಸಾಮಾಜಿಕ ಜಾಲತಾಣಗಳಲ್ಲಿಯೂ ಬಿರುಗಾಳಿ ಎಬ್ಬಿಸಿದೆ.

ಪಾಕಿಸ್ತಾನದ ಜಾಲತಾಣಗಳಲ್ಲಿ ಕಾಕ್ರೋಚ್ ಅವಾಮಿ ಪಕ್ಷ, ಕಾಕ್ರೋಚ್ ಅವಾಮಿ ಲೀಗ್ ಹಾಗೂ ಕಾಕ್ರೋಚ್ ಮುತ್ತಾಹಿತಾ ಅಭಿಯಾನ ಆರಂಭಗೊಂಡಿದೆ. ಕಾಕ್ರೋಚ್ ಅವಾಮಿ ಪಕ್ಷದ ಲೋಗೊದಲ್ಲಿ ಪಾಕಿಸ್ತಾನದ ಯುವಕರಿಂದ, ಯುವಕರಿಗಾಗಿ ರಾಜಕೀಯ ವೇದಿಕೆ ಎಂದು ಬರೆಯಲಾಗಿದೆ.

ಮತ್ತೊಂದು ಖಾತೆಯಲ್ಲಿ ‘ವ್ಯವಸ್ಥೆಯ ಜಿರಳೆಗಳೆಂದು ಪರಿಗಣಿಸಿದ ಜನರ ಧ್ವನಿ ನಾವು’ (ಜಿನ್‌ಹೊಂನೆ ಸಿಸ್ಟಂ ಕಾಕ್ರೋಚ್ ಸಂಜಾ, ಹಮ್ ಉನ್ಹಿ ಅವಾಮ್ ಕಿ ಅವಾಜ್ ಹೇ’ ಎಂದು ಬರೆಯಲಾಗಿದೆ.

ಸುದ್ದಿ 2 ನಿಮಿಷ

ಸಿಇಟಿ: 12ನೇ ತರಗತಿ ಅಂಕ ನಮೂದಿಸಲು ಅವಕಾಶ

ಬೆಂಗಳೂರು: ಸಿಬಿಎಸ್‌ಇ, ಸಿಐಎಸ್‌ಸಿಇ ಮತ್ತು ಇತರೆ ರಾಜ್ಯ ಪರೀಕ್ಷಾ ಮಂಡಳಿಗಳಿಂದ 12ನೇ ತರಗತಿ ಉತ್ತೀರ್ಣರಾದ ಅಭ್ಯರ್ಥಿಗಳು ತಮ್ಮ ಅಂಕಪಟ್ಟಿ ಅಪ್ ಲೋಡ್ ಮಾಡಲು, ದೃಢೀಕರಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವೆಬ್‌ಸೈಟ್ ಲಿಂಕ್ ಬಿಡುಗಡೆ ಮಾಡಿದೆ.

ನಿಗದಿತ ಲಿಂಕ್ ಮೂಲಕ ಲಾಗಿನ್ ಆದ ತಕ್ಷಣ ಅಭ್ಯರ್ಥಿಗಳಿಗೆ ತಮ್ಮ ಅಂಕಗಳು ಪ್ರದರ್ಶನವಾಗುತ್ತದೆ. ಸರಿ ಇದ್ದರೆ ದೃಢೀಕರಿಸಬೇಕು. ಅಂಕಗಳು ನಮೂದಾಗದಿದ್ದರೆ ಅಂಕಗಳನ್ನು ದಾಖಲಿಸಬಹುದು. ನಂತರ ಅಂಕಪಟ್ಟಿಯನ್ನು ಅಪ್‌ಲೋಡ್ ಮಾಡಬೇಕು. ಈ ಪ್ರಕ್ರಿಯೆ ಪೂರ್ಣಗೊಳಿಸಲು ಮೇ 24 ಕೊನೆಯ ದಿನ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಅಭ್ಯರ್ಥಿಗಳು ದೃಢೀಕರಿಸಿ ಸಲ್ಲಿಸುವ ಅಂಕಗಳನ್ನೇ ಅರ್ಹತಾ ಪಟ್ಟಿ ಸಿದ್ಧಪಡಿಸಲು ಬಳಸಲಾಗುವುದು ಹಾಗೂ ಸೀಟು ಹಂಚಿಕೆಯ ನಂತರ ಆಯಾ ಕಾಲೇಜಿನಲ್ಲಿ ಪ್ರವೇಶ ಪಡೆಯುವಾಗ ಅಂಕಗಳನ್ನು ಪರಿಶೀಲಿಸಲಾಗುವುದು. ಅಭ್ಯರ್ಥಿಗಳು ತಪ್ಪು ಮಾಹಿತಿ ನೀಡಿದರೆ ಸೀಟು ರದ್ದುಗೊಳ್ಳುತ್ತದೆ. 2026 ಹಾಗೂ ಅದಕ್ಕಿಂತ ಹಿಂದಿನ ವರ್ಷಗಳಲ್ಲಿ ಉತ್ತೀರ್ಣರಾದವರೂ ಅಂಕಗಳನ್ನು ದಾಖಲಿಸಬಹುದು.

ರಾಜ್ಯ ಪಠ್ಯಕ್ರಮದಲ್ಲಿ ಓದಿದ ಅಭ್ಯರ್ಥಿಗಳ ಅಂಕಗಳ ವಿವರವನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಆನ್‌ಲೈನ್ ಮೂಲಕ ಪಡೆಯಲಾಗುತ್ತದೆ. ಹಾಗಾಗಿ, ರಾಜ್ಯ ಮಂಡಳಿಯ ಅಭ್ಯರ್ಥಿಗಳು ಅಂಕ ದಾಖಲಿಸುವ ಅಗತ್ಯ ಇಲ್ಲ ಎಂದು ಹೇಳಿದ್ದಾರೆ.

ಎಬೋಲಾ: ಚಿಕಿತ್ಸಾ ಕೇಂದ್ರ ಗುರುತು

ಬೆಂಗಳೂರು: ಎಬೋಲಾ ಪ್ರಕರಣಗಳ ನಿರ್ವಹಣೆಗೆ ಕೇಂದ್ರ ಸರ್ಕಾರದ ಮಾರ್ಗಸೂಚಿ ಅನುಸಾರ ಚಿಕಿತ್ಸಾ ಕೇಂದ್ರಗಳನ್ನು ಗುರುತಿಸಿರುವ ಆರೋಗ್ಯ ಇಲಾಖೆ, ಶಂಕಿತ ಪ್ರಕರಣಗಳ ಪತ್ತೆಗೆ ವ್ಯವಸ್ಥೆ ಸೇರಿ ವಿವಿಧ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ.


ಬೆಂಗಳೂರಿನಲ್ಲಿ ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆಯನ್ನು ನಿಗಾ ಕೇಂದ್ರ (ಕ್ವಾರಂಟೈನ್) ಹಾಗೂ ಎಪಿಡೆಮಿಕ್ ಡಿಸೀಸ್ ಆಸ್ಪತ್ರೆಯನ್ನು ಚಿಕಿತ್ಸಾ ಕೇಂದ್ರವನ್ನಾಗಿ ಗುರುತಿಸಲಾಗಿದೆ. ಮಂಗಳೂರಿನಲ್ಲಿ ಶ್ರೀನಿವಾಸ್ ಪೋರ್ಟ್ ಆಸ್ಪತ್ರೆಯನ್ನು ನಿಗಾ ಕೇಂದ್ರವನ್ನಾಗಿ, ವೆನ್ಲಾಕ್ ಜಿಲ್ಲಾ ಆಸ್ಪತ್ರೆಯನ್ನು ಚಿಕಿತ್ಸಾ ಕೇಂದ್ರವನ್ನಾಗಿ ಗೊತ್ತುಪಡಿಸಲಾಗಿದೆ ಎಂದು ಇಲಾಖೆ ತಿಳಿಸಿದೆ. ಶಂಕಿತ ರೋಗಿಗಳನ್ನು ಆಸ್ಪತ್ರೆಗೆ ರವಾನಿಸಲು ನಿಗದಿತ ಆಂಬುಲೆನ್ಸ್ ಸೇವೆಯನ್ನೂ ಸಜ್ಜುಗೊಳಿಸಲಾಗಿದೆ. ಶಂಕಿತ ಎಬೋಲಾ ಪ್ರಕರಣಗಳ ಮಾದರಿಗಳನ್ನು ಸಂಗ್ರಹಿಸಿ, ರಾಷ್ಟ್ರೀಯ ವೈರಾಣು ಸಂಸ್ಥೆಯ (ಎನ್‌ಐವಿ) ಬೆಂಗಳೂರು ಘಟಕದ ಮೂಲಕ ಪುಣೆಯ ಎನ್‌ಐವಿಗೆ ಕಳುಹಿಸಲಾಗುತ್ತದೆ ಎಂದು ಹೇಳಿದೆ.

ಎಬೋಲಾ ಪೀಡಿತ ದೇಶಗಳಿಗೆ ಇತ್ತೀಚೆಗೆ ಪ್ರಯಾಣ ಮಾಡಿದವರು, ಭಾರತಕ್ಕೆ ಮರಳಿದ ನಂತರ 21 ದಿನಗಳ ಕಾಲ ಆರೋಗ್ಯ ಮೇಲ್ವಿಚಾರಣೆ ಹಾಗೂ ಪ್ರತ್ಯೇಕ ವೀಕ್ಷಣೆಯಲ್ಲಿ ಇರಬೇಕು. ಯಾವುದೇ ರೋಗ ಲಕ್ಷಣಗಳು ಕಂಡುಬಂದರೆ ಅವರು ತಕ್ಷಣ ಹತ್ತಿರದ ಆರೋಗ್ಯ ಕೇಂದ್ರಗಳಿಗೆ ವರದಿ ಮಾಡಬೇಕು ಎಂದು ತಿಳಿಸಿದೆ.

‘ಸಚಿವ ಸ್ಥಾನ: ಈಗ ಮಾಡು ಇಲ್ಲವೇ ಮಡಿ ಹೋರಾಟ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಸಚಿವ ಸ್ಥಾನ ವಿಚಾರದಲ್ಲಿ ಮಾಡು ಇಲ್ಲವೇ ಮಡಿ ನಿರ್ಧಾರಕ್ಕೆ ಬಂದಿದ್ದೇವೆ. 15 ದಿನಗಳಲ್ಲಿ ಪಕ್ಷ ಸ್ಪಷ್ಟ ನಿರ್ಧಾರ ಕೈಗೊಳ್ಳಬೇಕು. ಇಲ್ಲದಿದ್ದರೆ ನಮ್ಮ ವಿಚಾರ ಬೇರೆ ಇದೆ. ಉಗ್ರ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಕಾಂಗ್ರೆಸ್ ಶಾಸಕ ಬೇಳೂರು ಗೋಪಾಲಕೃಷ್ಣ ಹೇಳಿದರು.



ಬೇಳೂರು ಗೋಪಾಲಕೃಷ್ಣ

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಚಿವ ಸ್ಥಾನ ಕೋರಿ ಹೈಕಮಾಂಡ್ ಭೇಟಿಗೆ 25 ಶಾಸಕರು ದೆಹಲಿಗೆ ಹೋಗಿದ್ದೆವು. ಈಗ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿದೆ. ಮೇ 28 ಇಲ್ಲವೇ 29ಕ್ಕೆ 35 ಶಾಸಕರು ಮತ್ತೊಮ್ಮೆ ದೆಹಲಿಗೆ ತೆರಳಲಿದ್ದೇವೆ’ ಎಂದು ಹೇಳಿದರು.

ಸರ್ಕಾರಕ್ಕೆ ಎರಡೂವರೆ ವರ್ಷ ತುಂಬಿದಾಗಲೇ ಸಂಪುಟ ಪುನಾರಚನೆ ಆಗಬೇಕಿತ್ತು. ಈಗ ಇರುವ ಸಚಿವರು ಹೆಚ್ಚುವರಿಯಾಗಿ ಆರು ತಿಂಗಳು ಕಾಲ ಅಧಿಕಾರ ಅನುಭವಿಸಿದ್ದಾರೆ. ಈಗ ನಮಗೆ ಅವಕಾಶ ಕೊಡಿ ಎಂದು ಕೇಳುತ್ತಿದ್ದೇವೆ’ ಎಂದು ಪ್ರತಿಪಾದಿಸಿದರು.

ಇಲ್ಲಿಯವರೆಗೆ ಸಂಪುಟ ಪುನಾರಚನೆ ಬಗ್ಗೆ ಯಾರೂ ಚಕಾರ ಎತ್ತುತ್ತಿರಲಿಲ್ಲ. ಈಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆ ಬಗ್ಗೆ ಮಾತನಾಡಿದ್ದಾರೆ ಎಂದ ಅವರು, ಸಿಎಂ ಬದಲಾವಣೆ ವಿಚಾರ ಹೈಕಮಾಂಡ್‌ಗೆ ಸಂಬಂಧಿಸಿದ್ದು, ಅದು ನಮ್ಮ ಪರಿಧಿಯಲ್ಲಿ ಇಲ್ಲ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಸದಾ ಎಚ್ಚರಿಕೆಯಿಂದ ಇರಲು ಸೂಚಿಸಲಾಗಿದೆ: ಡಿ.ಕೆ.ಶಿವಕುಮಾರ್

‘ಬಡವರ ಮತಕ್ಕೆ ಎಸ್‌ಐಆರ್ ಕತ್ತರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡವರ ಮತಗಳನ್ನು ತೆಗೆದು ಹಾಕಲು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮೂಲಕ ಸಂಚು ನಡೆದಿದೆ. ಅದಕ್ಕಾಗಿ ಪ್ರಕ್ರಿಯೆ ಮುಗಿಯುವವರೆಗೂ ಸದಾ ಎಚ್ಚರಿಕೆಯಿಂದ ಇರಲು ಪಕ್ಷದ ಶಾಸಕರು, ಕಾರ್ಯಕರ್ತರು, ಬೂತ್‌ಮಟ್ಟದ ಏಜೆಂಟರಿಗೆ ಸೂಚಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.



ಡಿ.ಕೆ. ಶಿವಕುಮಾರ್

ಸುದ್ದಿಗಾರರ ಜತೆ ಮಾತನಾಡಿದ ಅವರು, ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ಪ್ರತಿಯೊಬ್ಬರೂ ತಮ್ಮ ವಿವರ ಸಲ್ಲಿಸಬೇಕು. ಇಲ್ಲದಿದ್ದರೆ ಮತದಾನದ ಹಕ್ಕು ಕಳೆದುಕೊಳ್ಳಬೇಕಾಗುತ್ತದೆ. ಬಡವರ ಮತದಾನದ ಹಕ್ಕು ಕಳೆದುಕೊಂಡರೆ ಪಿಂಚಣಿ, ಗೃಹಲಕ್ಷ್ಮಿ ಸೇರಿದಂತೆ ಹಲವು ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಅದಕ್ಕಾಗಿಯೇ ಪಕ್ಷದ ಜನಪ್ರತಿನಿಧಿಗಳು, ಕಾರ್ಯಕರ್ತರಿಗೆ ಜಾಗೃತಿ ಮೂಡಿಸಲಾಗುತ್ತಿದೆ. ನಿರಂತರವಾಗಿ ಸಭೆಗಳನ್ನು ನಡೆಸಲಾಗುತ್ತಿದೆ ಎಂದರು.

‘ಬೇರೆ ಬೇರೆ ರಾಜ್ಯಗಳಲ್ಲಿ ಈಗಾಗಲೇ ಕೇಂದ್ರ ಸರ್ಕಾರ ತನಗೆ ಅನುಕೂಲವಾಗುವ ರೀತಿ ಮತದಾರರ ಪಟ್ಟಿ ಪರಿಷ್ಕರಣೆ ಮಾಡಿದೆ ಎಂಬ ಆರೋಪಗಳು ಇವೆ. ಮತದಾರರನ್ನು ಹೊರನೂಕುವ, ಪ್ರಜಾಸತ್ತಾತ್ಮಕವಲ್ಲದ, ಅವೈಜ್ಞಾನಿಕ ಪ್ರಕ್ರಿಯೆಯಿಂದ ರಾಜ್ಯದ ಮತದಾರರ ಹಕ್ಕುಗಳನ್ನು ಕಾಂಗ್ರೆಸ್ ರಕ್ಷಿಸಬೇಕಿದೆ. ಈಗಾಗಲೇ ಎಸ್‌ಐಆರ್ ಹಾಗೂ ಅದರ ಪರಿಣಾಮಗಳ ಕುರಿತು ಚರ್ಚಿಸಲಾಗಿದೆ. ವಿವಿಧ ಸಂಘಟನೆಗಳ ಜತೆ ನಡೆದ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳನ್ನು ಆಧರಿಸಿ ಎಸ್‌ಐಆರ್ ಬಗ್ಗೆ ರಾಜ್ಯ ಸರ್ಕಾರ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಿದೆ’ ಎಂದು ಮಾಹಿತಿ ನೀಡಿದರು.

ಕಾಂಗ್ರೆಸ್ ವಿಶೇಷ ಸಭೆ ನಾಳೆ

ಎಸ್‌ಐಆರ್ ಪ್ರಕ್ರಿಯೆ, ಸ್ಥಳೀಯ ಸಂಸ್ಥೆಗಳ ಚುನಾವಣೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಐದು ನಗರ ಪಾಲಿಕೆಗಳ ಚುನಾವಣೆ ಕುರಿತು ಚರ್ಚಿಸಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಇದೇ 24ರಂದು ಸಂಜೆ 4ಕ್ಕೆ ದೇವನಹಳ್ಳಿ ಬಳಿಯ ಹೋಟೆಲ್‌ನಲ್ಲಿ ವಿಶೇಷ ಸಭೆ ಕರೆದಿದ್ದಾರೆ.

ಸಚಿವರು, ಪಕ್ಷದ ಶಾಸಕರು, ವಿಧಾನಪರಿಷತ್ ಸದಸ್ಯರು, 2023 ಹಾಗೂ 2024ರ ವಿಧಾನಸಭೆ, ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದವರು, ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಸಭೆಯಲ್ಲಿ ಭಾಗವಹಿಸುವರು. ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ, ಎಐಸಿಸಿ ಕಾರ್ಯದರ್ಶಿಗಳು ಉಪಸ್ಥಿತರಿರುವರು.

ಭೂಕುಸಿತವು ‘ದೇವರ ಕೃತ್ಯ’ ಪರಿಹಾರ ಇಲ್ಲ– ಎನ್‌ಎಚ್‌ಎಐ

ನವದೆಹಲಿ (ಪಿಟಿಐ): ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ 2025ರ ಮೇ ತಿಂಗಳಲ್ಲಿ ಸಂಭವಿಸಿದ ಭೂಕುಸಿತವು ‘ದೇವರ ಕೃತ್ಯ’ ಆಗಿರುವುದರಿಂದ ಅಲ್ಲಿನ ಕೃಷಿ ಭೂಮಿ ಮಾಲೀಕರಿಗೆ ಪರಿಹಾರ ಪಾವತಿಸಲು ತಾನು ಬಾಧ್ಯಸ್ಥನಲ್ಲ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ರಾಷ್ಟ್ರೀಯ ಹಸಿರು ನ್ಯಾಯಪೀಠಕ್ಕೆ (ಎನ್‌ಜಿಟಿ) ತಿಳಿಸಿದೆ.


ಶಕ್ರಾಲ ಗ್ರಾಮದಿಂದ ಢಲ್ಲಿವರೆಗೆ ನಾಲ್ಕು ಪಥದ ರಸ್ತೆ ವಿಸ್ತರಣಾ ಯೋಜನೆಯಲ್ಲಿ ತೊಡಗಿರುವ ಎನ್‌ಎಚ್‌ಎಐ ಮತ್ತು ಅದರ ಏಜೆನ್ಸಿಗಳ ವಿರುದ್ಧ ಕೆಲ ಭೂ ಮಾಲೀಕರು ಈ ವರ್ಷದ ಜನವರಿಯಲ್ಲಿ ಸಲ್ಲಿಸಿದ್ದ ಅರ್ಜಿಗೆ ಪ್ರಾಧಿಕಾರ ಈ ಉತ್ತರ ಸಲ್ಲಿಸಿದೆ.

‘ಪ್ರಾಧಿಕಾರ ಮತ್ತು ಅದರ ಏಜೆನ್ಸಿಗಳು ಇಳಿಜಾರಿನ ಪ್ರದೇಶವನ್ನು ಸರಿಯಾಗಿ ಬಲಪಡಿಸದೆ, ಭಾರಿ ಪ್ರಮಾಣದ ನಿರ್ಮಾಣ ಕಾರ್ಯಗಳನ್ನು ಕೈಗೊಂಡಿದ್ದವು. ಇದರಿಂದ ಶಿಮ್ಲಾದ ಗ್ರಾಮೀಣ ಭಾಗದಲ್ಲಿ ಕೃಷಿ ಭೂಮಿಗೆ ಹಾನಿ ಉಂಟಾಗಿ, ಭೂ ಕುಸಿತ ಸಂಭವಿಸಿದೆ’ ಎಂದು ಭೂ ಮಾಲೀಕರು ಅರ್ಜಿಯಲ್ಲಿ ದೂರಿದ್ದರು. ಇದಕ್ಕೆ ಪ್ರತಿಕ್ರಿಯೆ ಸಲ್ಲಿಸುವಂತೆ ಎನ್‌ಜಿಟಿ ಪ್ರಾಧಿಕಾರಕ್ಕೆ ಸೂಚಿಸಿತ್ತು.

ಮೇ 18ರಂದು ಪ್ರಮಾಣಪತ್ರ ಸಲ್ಲಿಸಿರುವ ಪ್ರಾಧಿಕಾರವು, ‘ತನ್ನ ಏಜೆನ್ಸಿಯಿಂದ ನಿರ್ಮಿಸಲಾದ ತಡೆಗೋಡೆಗೆ 2025ರ ಮೇ 25ರಂದು ಹಾನಿಯಾದಾಗ ಸಂಭವಿಸಿದ ಘಟನೆಯನ್ನು ಅರ್ಜಿದಾರರು ಉಲ್ಲೇಖಿಸಿದ್ದಾರೆ’ ಎಂದು ಹೇಳಿದೆ.

ಪ್ರಾಧಿಕಾರದ ಪ್ರತಿಪಾದನೆ ಏನು?

- ಈ ಘಟನೆಯು ‘ದೇವರ ಕೃತ್ಯ’ದಿಂದ (ನೈಸರ್ಗಿಕ ವಿಕೋಪ) ಸಂಭವಿಸಿದೆ. ಹಿಮಾಚಲ ಪ್ರದೇಶದಲ್ಲಿ 2025ರ ಮೇ ಅಂತ್ಯದಲ್ಲಿ ಭಾರಿ ಮಳೆಯಾಗಿದ್ದು, ದೊಡ್ಡ ಪ್ರಮಾಣದಲ್ಲಿ ಭೂಕುಸಿತಗಳು ಸಂಭವಿಸಿದ್ದವು. ಯಾವುದೇ ನಿರ್ಮಾಣ ಕೈಗೊಳ್ಳದ ಸಾಕಷ್ಟು ಪ್ರದೇಶಗಳಲ್ಲೂ ವ್ಯಾಪಕವಾಗಿ ಭೂಕುಸಿತಗಳು ಘಟಿಸಿದ್ದವು
- ಭಾರತೀಯ ಹವಾಮಾನ ಇಲಾಖೆಯ (ಐಎಂಡಿ) ವರದಿ ಮತ್ತು ರಾಜ್ಯ ಸರ್ಕಾರ ಹೊರಡಿಸಿದ್ದ ವಿಪತ್ತು ಘೋಷಣೆಯು ತನ್ನ ಪ್ರತಿಪಾದನೆಯನ್ನು ಬೆಂಬಲಿಸುತ್ತದೆ
- ಯಾವುದೇ ವ್ಯಕ್ತಿ ಕಾರಣದಿಂದ ಅಥವಾ ಲೋಪದಿಂದ ಈ ಘಟನೆ ಸಂಭವಿಸಿಲ್ಲ. ‘ದೇವರ ಕೃತ್ಯ’ ಅಥವಾ ನೈಸರ್ಗಿಕ ವಿಕೋಪದಿಂದ ಹಾನಿ ಉಂಟಾದಾಗ, ಪ್ರಾಧಿಕಾರದ ಮೇಲೆ ಹೊಣೆಗಾರಿಕೆ ಹೇರಲು ಆಗುವುದಿಲ್ಲ
- ಜಮೀನೊಂದರಲ್ಲಿ 440 ಮರಗಳಿಗೆ ಹಾನಿಯಾಗಿದ್ದು, ₹32.3 ಲಕ್ಷಕ್ಕೂ ಹೆಚ್ಚು ನಷ್ಟವಾಗಿದೆ ಎಂದು ಅರ್ಜಿದಾರರು ಆರೋಪಿಸಿದ್ದಾರೆ. ಆದರೆ, ಯೋಜನೆ ಕಾರ್ಯಗತಗೊಳಿಸುತ್ತಿರುವ ‘ಮೆಸರ್ಸ್ ಗವರ್ ಶಿಮ್ಲಾ ಹೈವೇ ಪ್ರೈವೇಟ್ ಲಿಮಿಟೆಡ್’ ಕೂಡ ನಷ್ಟದ ಮೌಲ್ಯಮಾಪನ ಮಾಡಿದ್ದು, ಅಲ್ಲಿ ಸೇಬಿನ 40 ಮರಗಳು ಮಾತ್ರ ಇದ್ದವು ಎಂದು ಮಾಹಿತಿ ನೀಡಿದೆ
- ಹೆದ್ದಾರಿ ಯೋಜನೆಗಾಗಿ ಭೂಮಿಯನ್ನು ರಾಷ್ಟ್ರೀಯ ಹೆದ್ದಾರಿ ಕಾಯ್ದೆಯಡಿ ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ ಎಂಬ ಅರ್ಜಿದಾರರ ವಾದದಲ್ಲಿ ತಿರುಳಿಲ್ಲ. ಭೂ ಸ್ವಾಧೀನ ಸಂಬಂಧ ಈ ವರ್ಷದ ಜನವರಿಯಲ್ಲಿಯೇ ಅಧಿಸೂಚನೆ ಹೊರಡಿಸಲಾಗಿದೆ
- ಪ್ರಾಧಿಕಾರ ಅಥವಾ ತನ್ನ ಏಜೆನ್ಸಿಯಿಂದ ಪರಿಸರ ಅಥವಾ ಅರಣ್ಯ ತೆರವಿನ ಷರತ್ತುಗಳ ಉಲ್ಲಂಘನೆ ಆಗಿಲ್ಲ. ಅರ್ಜಿದಾರರು ಭೂಕುಸಿತಕ್ಕೆ ಕಾರಣವಾದ ನಿರ್ದಿಷ್ಟ ಕೃತ್ಯ ಅಥವಾ ಲೋಪವನ್ನು ತೋರಿಸದೆ ಪರಿಹಾರ ಕೋರಿದ್ದಾರೆ



ಸರ್ಕಾರಿ ನೌಕರರ ಕ್ರೀಡಾಕೂಟ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ಕಂಠೀರವ ಕ್ರೀಡಾಂಗಣದಲ್ಲಿ ಮೇ 23ರಿಂದ 25ರವರೆಗೆ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 23ರ ಸಂಜೆ 5.30ಕ್ಕೆ ಚಾಲನೆ ನೀಡಲಿದ್ದಾರೆ.

ರಾಜ್ಯಮಟ್ಟಕ್ಕೆ ಆಯ್ಕೆಯಾಗಿ ಆನ್‌ಲೈನ್‌ನಲ್ಲಿ ಹೆಸರು ನೋಂದಾಯಿಸಿಕೊಂಡ ಕ್ರೀಡಾಪಟುಗಳಿಗೆ ಟ್ರ್ಯಾಕ್‌ಸೂಟ್, ಕ್ಯಾಪ್ ವಿತರಿಸಲಾಗುತ್ತದೆ. ಭಾಗವಹಿಸುವವರಿಗೆ ಮೂರು ದಿನಗಳ ಒಒಡಿ ಸೌಲಭ್ಯವಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಹೇಳಿದ್ದಾರೆ.



ಒಟ್ಟು 175 ಕ್ರೀಡೆಗಳು ನಡೆಯಲಿವೆ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ 13 ಸಾವಿರಕ್ಕೂ ಹೆಚ್ಚು ಅಧಿಕಾರಿಗಳು, ಸಿಬ್ಬಂದಿ ಸ್ಪರ್ಧೆಗಳಲ್ಲಿ ಭಾಗವಹಿಸುವರು

ಸಿ.ಎಸ್. ಷಡಾಕ್ಷರಿ, ಅಧ್ಯಕ್ಷ, ಸರ್ಕಾರಿ ನೌಕರರ ಸಂಘ

ಮೇ 23ರಂದು ಸಂಜೆ 7ಕ್ಕೆ ಗಾಯಕಿ ಸಮಿತಾ ಮಲ್ನಾಡ್ ಮತ್ತು ತಂಡದವರಿಂದ ಸಂಗೀತ ರಸಸಂಜೆ, 24ರಂದು ಸಂಜೆ 6.30ಕ್ಕೆ ಜಾನಪದ ಕಲಾವಿದೆ ಸವಿತಕ್ಕ, ಕಡಬಗೆರೆ ಮುನಿರಾಜು ತಂಡದವರಿಂದ ಜಾನಪದ ಸಂಭ್ರಮ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕ್ರೀಡಾ ಧ್ವಜಾರೋಹಣ ನೆರವೇರಿಸುವರು, ಗೃಹ ಸಚಿವ ಜಿ.ಪರಮೇಶ್ವರ, ಸಾರಿಗೆ ಸಚಿವ ರಾಮಾಲಿಂಗಾರೆಡ್ಡಿ, ಸಮಾಜಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ವಸತಿ ಸಚಿವ ಜಮೀರ್ ಅಹಮದ್ ಖಾನ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಸೇರಿದಂತೆ ಹಲವು ಸಚಿವರು, ಶಾಸಕರು, ನೌಕರರ ಸಂಘಟನೆಯ ಎಲ್ಲ ಪದಾಧಿಕಾರಿಗಳು ಭಾಗವಹಿಸುವರು ಎಂದು ಹೇಳಿದ್ದಾರೆ.

ಹಿರಿಯ ಶಾಸಕರ ದೆಹಲಿ ಭೇಟಿ ಮುಂದಕ್ಕೆ

ಬೆಂಗಳೂರು: ಸಂಪುಟ ಪುನರ್‌ರಚನೆಗಾಗಿ ಹೈಕಮಾಂಡ್ ನಾಯಕರನ್ನು ಎರಡನೇ ಬಾರಿ ಭೇಟಿ ಮಾಡಲು ದೆಹಲಿಗೆ ಹೊರಟಿದ್ದ ಕಾಂಗ್ರೆಸ್‌ನ 40ಕ್ಕೂ ಹೆಚ್ಚು ಹಿರಿಯ ಶಾಸಕರು ತಮ್ಮ ಪ್ರವಾಸವನ್ನು ಸದ್ಯಕ್ಕೆ ಮುಂದೂಡಿದ್ದಾರೆ.

ಎರಡು ಅಥವಾ ಎರಡಕ್ಕಿಂತ ಹೆಚ್ಚು ಬಾರಿ ವಿಧಾನಸಭೆಗೆ ಆಯ್ಕೆಯಾಗಿರುವ ಕಾಂಗ್ರೆಸ್‌ನ ಹಿರಿಯ ಶಾಸಕರ ತಂಡ ದೆಹಲಿಗೆ ತೆರಳಿ, ಸಚಿವ ಸ್ಥಾನಕ್ಕೆ ಬೇಡಿಕೆ ಸಲ್ಲಿಸಲು ಮುಂದಾಗಿದ್ದರು. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿ ಅವರು ಕೆಲ ದಿನಗಳು ದೆಹಲಿಯಲ್ಲಿ ಇರುವುದಿಲ್ಲ ಎಂಬ ಮಾಹಿತಿ ಬಂದ ಕಾರಣ ಭೇಟಿಯನ್ನು ಮುಂದೂಡಲಾಗಿದೆ ಎಂದು ಮೂಲಗಳು ಹೇಳಿವೆ.

ವಿಧಾನಸಭೆಯ ಆಡಳಿತ ಪಕ್ಷದ ಮುಖ್ಯ ಸಚೇತಕ ಅಶೋಕ ಪಟ್ಟಣ ಮತ್ತು ಕರ್ನಾಟಕ ಸರ್ಕಾರದ ದೆಹಲಿ ಪ್ರತಿನಿಧಿ ಟಿ.ಬಿ. ಜಯಚಂದ್ರ ನೇತೃತ್ವದಲ್ಲಿ 23 ಶಾಸಕರ ದಂಡು ಈಗಾಗಲೇ ಒಂದು ಬಾರಿ ದೆಹಲಿಗೆ ತೆರಳಿತ್ತು. ಸಂಪುಟದಲ್ಲಿರುವ ಸುಮಾರು 20 ಹಿರಿಯ ಸಚಿವರನ್ನು ಕೈಬಿಟ್ಟು, ಹೊಸಬರಿಗೆ ಮತ್ತು ಸತತವಾಗಿ ಗೆಲ್ಲುತ್ತಾ ಬಂದಿರುವವರಿಗೆ ಅವಕಾಶ ನೀಡಬೇಕೆಂದು ಒತ್ತಡ ಹೇರಿದ್ದರು.

ಮೈಸೂರಿನ ಶತಮಾನ ಕಂಡ ಶಾಲೆ: ಸ್ಥಳೀಯರು, ಹಳೆಯ ವಿದ್ಯಾರ್ಥಿಗಳಿಂದ ನೆರವು

ಬೆಂಕಿ ಬಿದ್ದಿದ್ದ ಶಾಲೆಗೆ ‘ಪ್ರಗತಿಯ ಬೆಳಕು’

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ತಿಲಕ್‌ನಗರದಲ್ಲಿ ಶಿಥಿಲಾವಸ್ಥೆಗೆ ತಲುಪಿ, ಆಕಸ್ಮಿಕ ಬೆಂಕಿ ಅವಘಡದಲ್ಲಿ ಹಾನಿಗೊಂಡಿದ್ದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು ಈಗ ಸ್ಥಳೀಯರು ಮತ್ತು ಹಳೆ ವಿದ್ಯಾರ್ಥಿಗಳ ನೆರವಿನಿಂದ ‘ಅಭಿವೃದ್ಧಿಯ ಬೆಳಕು’ ಕಂಡಿದೆ.

ಉತ್ತರ ಶೈಕ್ಷಣಿಕ ವಲಯದಲ್ಲಿರುವ ಶತಮಾನ ಕಂಡಿರುವ ಈ ಶಾಲೆಯ ಕಟ್ಟಡಕ್ಕಾಗಿ ದಾನಿಗಳಿಂದ ದೇಣಿಗೆ ಸಂಗ್ರಹಿಸಿ ಹೊಸ ರೂಪ ನೀಡಲಾಗಿದೆ. ಕಟ್ಟಡ ಸುಣ್ಣ–ಬಣ್ಣದಿಂದ ಕಂಗೊಳಿಸುತ್ತಿದೆ. ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ ತರಗತಿಗಳು ಆರಂಭವಾಗಲಿವೆ.

ಅಭಿವೃದ್ಧಿಗಾಗಿ ರಚನೆಯಾದ ‘ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿತ ರಕ್ಷಣಾ ಸಮಿತಿ’ಯಲ್ಲಿರುವ 22 ಮಂದಿ ಸ್ವತಃ ದೇಣಿಗೆ ನೀಡಿ, ದಾನಿಗಳಿಂದಲೂ ಸಂಗ್ರಹಿಸಿದ್ದಾರೆ.

ಮುಖ್ಯಾಂಶಗಳು

- 2019ರ ಫೆಬ್ರುವರಿಯಲ್ಲಿ ಶಿಥಿಲ
- 2021ರಲ್ಲಿ ಬೆಂಕಿ ಅವಘಡ
- ಈಗಾಗಲೇ 61 ಮಕ್ಕಳ ಪ್ರವೇಶಾತಿ ನಡೆದಿದೆ

ನಗರಪಾಲಿಕೆ ಮಾಜಿ ಸದಸ್ಯ, ಬಿಇಒ ಎಸ್.ರೇವಣ್ಣ ಅವರೂ ಆರ್ಥಿಕ ಸಹಾಯ ಮಾಡಿದವರಲ್ಲಿ ಸೇರಿದ್ದಾರೆ.

60 ಮಕ್ಕಳಿದ್ದರು: ಮೈಸೂರು ಅರಸು ಸಂಸ್ಥಾನದವರು ಪ್ರಾರಂಭಿಸಿದ್ದ ಶಾಲೆಯನ್ನು ಸ್ವಾತಂತ್ರ್ಯದ ನಂತರ ಬಾಲಕಿಯರ ಶಾಲೆಯಾಗಿ ಮಾಡಲಾಗಿತ್ತು. ಸದ್ಯ ಬಾಲಕರು ಹಾಗೂ ಬಾಲಕಿಯರಿಬ್ಬರಿಗೂ ಪ್ರವೇಶಾವಕಾಶವಿದೆ.



ಮೈಸೂರಿನ ತಿಲಕ್‌ನಗರದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ನವೀಕರಿಸಲಾಗಿದೆ

ಶಾಲೆಯನ್ನು 2019ರಲ್ಲಿ ಸಮೀಪದ ಶ್ರವಣದೋಷವುಳ್ಳ ಮಕ್ಕಳ ಶಾಲೆಗೆ ಸ್ಥಳಾಂತರಿಸಲಾಗಿತ್ತು. 60 ಮಕ್ಕಳು ಅಲ್ಲಿಗೆ ಹೋಗಿದ್ದರು. ಆಗಿನ ಬಿಇಒ, ಅಲ್ಲಿ 5 ಕೊಠಡಿಗಳನ್ನು ಕೊಡಿಸಿದ್ದರು. ಕಟ್ಟಡ 2021ರಲ್ಲಿ ಆಕಸ್ಮಿಕ ಬೆಂಕಿ ಅವಘಡಕ್ಕೂ ತುತ್ತಾಗಿ ಚಾವಣಿ, ಗೋಡೆಗಳಿಗೆ ಹಾನಿಯಾಗಿತ್ತು.

ಏಪ್ರಿಲ್‌ನಿಂದ ನವೀಕರಣ ಕಾರ್ಯ ನಡೆದಿದ್ದು, ಐದು ಕೊಠಡಿ ಸಜ್ಜಾಗಿದೆ. ಬೇಲಿ ಹಾಕಿ, ಗೇಟ್ ದುರಸ್ತಿಪಡಿಸಿ, ಅಡುಗೆ ಕೋಣೆಯನ್ನೂ ನಿರ್ಮಿಸಲಾಗಿದೆ. ಶೌಚಾಲಯದ ನಿರ್ಮಾಣ ನಡೆಯುತ್ತಿದೆ.

ಸಹಕಾರ–ಔದಾರ್ಯ: ‘ಸ್ಥಳೀಯರು ಉದಾರವಾಗಿ ಸಹಕರಿಸಿದರು. ಕಬ್ಬಿಣ, ಸಿಮೆಂಟ್ ಕೊಡಿಸಿದರು, ನವೀಕರಣಕ್ಕಾಗಿ ₹ 13ಲಕ್ಷದಿಂದ ₹ 14 ಲಕ್ಷ ವೆಚ್ಚವಾಗಿದೆ’ ಎಂದು ಬಿಇಒ ಎಸ್.ರೇವಣ್ಣ ‘ಪ್ರಜಾವಾಣಿ’ಗೆ ತಿಳಿಸಿದರು.

ಈ ಸಾಲಿನಿಂದ ಅಲ್ಲಿ ತರಗತಿಗಳು ಶುರುವಾಗಲಿವೆ. ಆರ್ಥಿಕವಾಗಿ ಹಿಂದುಳಿದ ಮಕ್ಕಳೇ ಜಾಸ್ತಿ ಇರುವ ಪ್ರದೇಶವದು. ಪ್ರವೇಶಾತಿ ಹೆಚ್ಚುವ ನಿರೀಕ್ಷೆ ಇದೆ

ಎಸ್.ರೇವಣ್ಣ, ಬಿಇಒ ಉತ್ತರ ವಲಯ ಮೈಸೂರು

‘ಶಾಲೆಗೆ ಸದ್ಯ 62 ಮಕ್ಕಳು ಪ್ರವೇಶ ಪಡೆದಿದ್ದಾರೆ. 1ರಿಂದ 7ನೇ ತರಗತಿಯವರೆಗೆ ಇದೆ. ಎಲ್‌ಕೆಜಿ, ಯುಕೆಜಿ ಶಿಕ್ಷಣ ಪ್ರಾರಂಭಿಸಿದ್ದೇವೆ’ ಎಂದು ಮುಖ್ಯಶಿಕ್ಷಕಿ ಡಿ.ಮಂಜುಳಾಕುಮಾರಿ ತಿಳಿಸಿದರು.

prajavani.net prajavani

ಶನಿವಾರ, ಮೇ 23, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 142 | ಪುಟ 24

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 75,183 | ನಿಫ್ಟಿ 23,719 | $/₹ 95.60 | ಚಿನ್ನ (Std. 10g) ₹1,64,270 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,84,795 (ಬೆಂಗಳೂರು)



ಇಶಾನ್ ಕಿಶನ್ ಬೀಸಾಟ

ಸನ್‌ರೈಸರ್ಸ್ ಹೈದರಾಬಾದ್ ತಂಡದ ಇಶಾನ್ ಕಿಶನ್ (79; 46ಎ, 4X8, 6X3) ಅವರು ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಎದುರು ಭರ್ಜರಿ ಬ್ಯಾಟಿಂಗ್ ಮಾಡಿದರು

ಪ್ರಕರಣ ವಾಪಸ್: ಜಟಾಪಟಿ

ರಾಜಕೀಯ ಕಾರ್ಯಕರ್ತರು, ಕನ್ನಡ ಹೋರಾಟಗಾರರ ಮೇಲಿನ ದೂರುಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕೀಯ ಕಾರ್ಯಕರ್ತರು, ಕನ್ನಡ ಪರ ಹೋರಾಟಗಾರರು ಮತ್ತು ಸಾರ್ವಜನಿಕರ ವಿರುದ್ಧ ರಾಜ್ಯದ ವಿವಿಧೆಡೆ ದಾಖಲಾಗಿದ್ದ 52 ಅಪರಾಧ ಪ್ರಕರಣಗಳನ್ನು ವಾಪಸ್ ಪಡೆಯುವ ರಾಜ್ಯ ಸಚಿವ ಸಂಪುಟ ಸಭೆಯ ತೀರ್ಮಾನ ರಾಜಕೀಯ ಕಲಹಕ್ಕೆ ದಾರಿ ಮಾಡಿಕೊಟ್ಟಿದೆ.

ರಾಜ್ಯದ ವಿವಿಧೆಡೆ 2015ರಿಂದ 2025ರ ಮಧ್ಯೆ ದಾಖಲಾದ ಪ್ರಕರಣಗಳನ್ನು ರದ್ದುಪಡಿಸುವಂತೆ ಮುಖ್ಯಮಂತ್ರಿ, ಗೃಹಸಚಿವ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿಗಳು ಸಲ್ಲಿಕೆಯಾಗಿದ್ದವು. ಅವುಗಳನ್ನು ಪರಿಶೀಲಿಸುವಂತೆ ಸಚಿವ ಸಂಪುಟ ಉಪ ಸಮಿತಿಯ ಅವಗಾಹನೆಗೆ ಸಲ್ಲಿಸಲಾಗಿತ್ತು. ಉಪಸಮಿತಿಯ ಶಿಫಾರಸು ಆಧರಿಸಿ 52 ಪ್ರಕರಣಗಳನ್ನು ಹಿಂದಕ್ಕೆ ಪಡೆಯುವ ತೀರ್ಮಾನವನ್ನು ಗುರುವಾರ ನಡೆದ ಸಚಿವ ಸಂಪುಟ ಸಭೆ ತೆಗೆದುಕೊಂಡಿದೆ.

ಕಾವೇರಿ ನೀರಿನ ಹಂಚಿಕೆ ವಿವಾದದ ಭಾಗವಾಗಿ ರಾಜ್ಯದ ವಿವಿಧೆಡೆ ಜರುಗಿದ್ದ ಪ್ರತಿಭಟನೆ, ಹಲ್ಲೆ, ಅನ್ಯಭಾಷೆಯ ನಾಮಫಲಕಗಳ ವಿರುದ್ಧದ ಪ್ರತಿಭಟನೆ, ನಿಷೇದಾಜ್ಞೆಯಿದ್ದರೂ ಪ್ರತಿಭಟನೆ ನಡೆಸಿದರ ವಿರುದ್ಧ ದಾಖಲಾಗಿದ್ದ ಪ್ರಕರಣಗಳನ್ನು ಕೈಬಿಡಲಾಗಿದೆ. 2022ರಲ್ಲಿ ಕಲಬುರಗಿಯ ಆಳಂದದ ಲಾಡ್ಲೇ ಮಶಾಕ ದರ್ಗಾ ಆವರಣದಲ್ಲಿ ನಡೆದ ಗಲಭೆ ಸಂಬಂಧ ದಾಖಲಾಗಿದ್ದ ಹಲವು ಪ್ರಕರಣಗಳನ್ನು ಕೈಬಿಡಲಾಗಿದೆ.

ಸಚಿವ ಸಂಪುಟ ಸಭೆಯ ಈ ನಿರ್ಧಾರಕ್ಕೆ ರಾಜ್ಯ ಬಿಜೆಪಿ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರವು ಮುಸ್ಲಿಮರ ಓಲೈಕೆಗೆ ಮುಂದಾಗಿದೆ. ಪೊಲೀಸ್ ಮತ್ತು ಜಿಲ್ಲಾಧಿಕಾರಿ ವಾಹನದ ಮೇಲೆ ದಾಳಿ ನಡೆಸಿದ ಗಲಭೆಕೋರರ ವಿರುದ್ಧದ ಪ್ರಕರಣ ಕೈಬಿಟ್ಟಿರುವುದು ಓಲೈಕೆ ರಾಜಕಾರಣವಲ್ಲದೆ ಮತ್ತೇನಲ್ಲ ಎಂದಿದ್ದಾರೆ.

ಬಿಜೆಪಿ ನಾಯಕರ ಆಕ್ಷೇಪವನ್ನು ಕಾಂಗ್ರೆಸ್ ಖಂಡಿಸಿದೆ. ಒಂದೇ ಘಟನೆಯಲ್ಲಿ ಹಿಂದೂ ಮತ್ತು ಮುಸ್ಲಿಂ ಸಮುದಾಯದವರ ವಿರುದ್ಧ ದಾಖಲಾಗಿದ್ದ ಪ್ರಕರಣಗಳನ್ನು ವಾಪಸ್ ಪಡೆಯಲಾಗಿದೆ ಎಂದಿದೆ.

▶8

ಮುತಾಲಿಕ್, ಚೈತ್ರಾ ವಿರುದ್ಧದ ಎಫ್‌ಐಆರ್ ರದ್ದು

2022ರಲ್ಲಿ ಕಲಬುರಗಿಯ ಆಳಂದದ ಲಾಡ್ಲೇ ಮಶಾಕ ದರ್ಗಾ ಆವರಣದಲ್ಲಿರುವ ರಾಘವ ಶಿವಲಿಂಗದ ಬಳಿ ಮಲಮೂತ್ರ ಮಾಡಿ, ಹೇಸಿಗೆ ಮಾಡಿದ್ದ ಘಟನೆಯನ್ನು ಖಂಡಿಸಿ ಜೇವರ್ಗಿಯ ಆಂದೋಲ ಮಠದ ಸಿದ್ದಲಿಂಗ ಸ್ವಾಮೀಜಿ ಅವರು ಶಿವಲಿಂಗ ಶುದ್ಧೀಕರಣಕ್ಕೆ ಕರೆ ನೀಡಿದ್ದರು. ದರ್ಗಾದಲ್ಲಿ ಅದೇ ದಿನ ಸಂದಲ ಕಾರ್ಯಕ್ರಮ ಇದ್ದ ಕಾರಣ ಮುಸ್ಲಿಮರು ಶುದ್ಧೀಕರಣಕ್ಕೆ ವಿರೋಧ ವ್ಯಕ್ತಪಡಿಸಿದ್ದರು. ಜಾರಿ ಮಾಡಲಾಗಿದ್ದ ನಿಷೇದಾಜ್ಞೆ ಮತ್ತು ಜಿಲ್ಲೆ ಪ್ರವೇಶ ನಿರ್ಬಂಧಿಸಿದ್ದ ಆದೇಶ ಉಲ್ಲಂಘಿಸಿದ್ದ ಕಾರಣಕ್ಕೆ ಶ್ರೀರಾಮ ಸೇನೆಯ ಪ್ರಮೋದ್ ಮುತಾಲಿಕ್ ಹಾಗೂ ಚೈತ್ರಾ ಕುಂದಾಪುರ ವಿರುದ್ಧ ದಾಖಲಾಗಿದ್ದ ಪ್ರಕರಣಗಳು. ನಿಷೇದಾಜ್ಞೆ ಮಧ್ಯೆ ಗುಂಪುಗೂಡಿದ, ಕಲ್ಲು ತೂರಾಟ ನಡೆಸಿದ ಮತ್ತು ಸರ್ಕಾರಿ ವಾಹನಗಳಿಗೆ ಜಖಂ ಮಾಡಿದ್ದಕ್ಕೆ ಮುಸ್ಲಿಂ ಬಾಲಕರು, ಹಲವು ಯುವಕರ ವಿರುದ್ಧ ದಾಖಲಾಗಿದ್ದ ಒಟ್ಟು ಎಂಟು ಪ್ರಕರಣಗಳು

ವಾಟಾಳ್, ನಾರಾಯಣಗೌಡ ವಿರುದ್ಧ ಪ್ರಕರಣ:

ಕನ್ನಡ ಪರ ಹೋರಾಟಗಳು, ಮೇಕೆದಾಟು ಯೋಜನೆ ಸಂಬಂಧ ನಡೆಸಿದ ಹೋರಾಟ, ತಮಿಳುನಾಡಿಗೆ ಕಾವೇರಿ ನೀರು ಹರಿಸಿದ್ದರ ವಿರುದ್ಧ ನಡೆದ ಹೋರಾಟ ದಲ್ಲಿ ವಾಟಾಳ್ ನಾಗರಾಜ್ ಹಾಗೂ ಅವರ ಬೆಂಬಲಿಗರ ವಿರುದ್ಧ ದಾಖಲಾಗಿದ್ದ 10 ಪ್ರಕರಣಗಳು

▶8

‘ಆರೋಪದಲ್ಲಿ ಹುರುಳಿಲ್ಲ’



ರಾಜ್ಯ ಸರ್ಕಾರ ಮುಸ್ಲಿಮರ ಮೇಲಿನ ಮೊಕದ್ದಮೆಗಳನ್ನು ಮಾತ್ರ ಹಿಂಪಡೆದಿದೆ. ಓಲೈಕೆ ರಾಜಕಾರಣ ಮಾಡುತ್ತಿದೆ ಎಂಬ ಬಿಜೆಪಿ ಆರೋಪದಲ್ಲಿ ಸತ್ಯವಿಲ್ಲ. ಮುಸ್ಲಿಮರ ಜತೆಗೆ ರೈತರು, ಕನ್ನಡ ಚಳವಳಿಗಾರರ ಮೇಲಿನ ಪ್ರಕರಣಗಳನ್ನು ಹಿಂಪಡೆಯಲಾಗಿದೆ. ರಾಜಕೀಯ ಪ್ರೇರಿತ ಪ್ರಕರಣಗಳನ್ನು ಹಿಂಪಡೆಯಲಾಗಿದೆ. ಇಂತಹ ಪ್ರಕರಣಗಳನ್ನು ವಾಪಸ್ ಪಡೆಯುವುದರಲ್ಲಿ ತಪ್ಪೇನಿದೆ?

ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

‘ಮತಬ್ಯಾಂಕ್ ರಾಜಕಾರಣ’



ತುಷ್ಟೀಕರಣದ ಎಲ್ಲ ಮಿತಿಗಳನ್ನೂ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ದಾಟಿದೆ. ಕಲಬುರಗಿಯ ಆಳಂದದ ಲಾಡ್ಲೆ ಮಶಾಕ್ ದರ್ಗಾದಲ್ಲಿ ಪವಿತ್ರ ರಾಘವ ಚೈತನ್ಯ ಶಿವಲಿಂಗದ ಮೇಲೆ ಮಲಮೂತ್ರ ವಿಸರ್ಜನೆ ಮಾಡಿ ವಿಕೃತಿ ಮೆರೆದಿದ್ದ, ಕೇಂದ್ರ ಸಚಿವರು, ಜಿಲ್ಲಾಧಿಕಾರಿ ಹಾಗೂ ಎಸ್‌ಪಿ ಅವರ ವಾಹನಗಳ ಮೇಲೆ ಕಲ್ಲು ತೂರಾಟ ಮುಂತಾದ 13 ಪ್ರಕರಣಗಳನ್ನು ವಾಪಸ್ ಪಡೆದಿರುವುದು ಖಂಡನೀಯ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಸವಾರರ ಪರದಾಟ

ಪ್ರಜಾವಾಣಿ ಚಿತ್ರ



ಹೊಸಪೇಟೆ ತಾಲ್ಲೂಕಿನ ಮರಿಯಮ್ಮನಹಳ್ಳಿ ಹೋಬಳಿಯ114-ಡಣಾಪುರ ಗ್ರಾಮದ ಬಳಿ ಭಾರಿ ಮಳೆಯಿಂದ ರಾಷ್ಟ್ರೀಯ ಹೆದ್ದಾರಿ-50ರ ಏಕಪಥ ರಸ್ತೆಯಲ್ಲಿ ಶುಕ್ರವಾರ ನೀರು ನಿಂತಿತ್ತು

ಖರ್ಗೆ, ಎಚ್‌ಡಿಡಿ ಪುನರಾಯ್ಕೆ?

ಜೂನ್ 1	ಜೂನ್ 8	ಜೂನ್ 9	ಜೂನ್ 11	ಜೂನ್ 18	
ಅಧಿಸೂಚನೆ ಪ್ರಕಟ	ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ	ನಾಮಪತ್ರ ಪರಿಶೀಲನೆ	ನಾಮಪತ್ರ ವಾಪಸ್‌ಗೆ ಕಡೆಯ ದಿನ	ಮತದಾನ (ಬೆಳಿಗ್ಗೆ 9ರಿಂದ ಸಂಜೆ 4)	ಮತ ಎಣಿಕೆ (ಸಂಜೆ 5ರಿಂದ)

ಪ್ರಜಾವಾಣಿ ವಾರ್ತೆ

ನವದೆಹಲಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಪ್ರತಿನಿಧಿಸುತ್ತಿರುವ ಸ್ಥಾನಗಳು ಸೇರಿ ರಾಜ್ಯಸಭೆಯ ಒಟ್ಟು 24 ಸ್ಥಾನಗಳಿಗೆ ಜೂನ್ 18ರಂದು ಚುನಾವಣೆ ನಿಗದಿಯಾಗಿದೆ.

ಕರ್ನಾಟಕ ವಿಧಾನಸಭೆಯಿಂದ ಆಯ್ಕೆಯಾಗಿರುವ ಖರ್ಗೆ, ದೇವೇಗೌಡ, ಬಿಜೆಪಿಯ ನಾರಾಯಣ ಕೊರಗಪ್ಪ ಮತ್ತು ಈರಣ್ಣ ಕಡಾಡಿ ಅವರ ಅವಧಿ ಜೂನ್ 25ಕ್ಕೆ ಮುಗಿಯಲಿದೆ. ಈ ಸ್ಥಾನಗಳ ಜತೆಗೆ, ಒಟ್ಟು 10 ರಾಜ್ಯಗಳ ವಿಧಾನಸಭೆ ಸದಸ್ಯರು ಮತದಾನ ಮಾಡಲಿದ್ದಾರೆ.

ವಿಧಾನಸಭೆಯಲ್ಲಿನ ಶಾಸಕರ ಸಂಖ್ಯಾಬಲದ ಪ್ರಕಾರ, ತೆರವಾಗುವ ನಾಲ್ಕು ಸ್ಥಾನಗಳಲ್ಲಿ 3 ಸ್ಥಾನಗಳು ಕಾಂಗ್ರೆಸ್‌ಗೆ ಸಿಗಲಿವೆ. ಮತ್ತೊಂದು ಸ್ಥಾನ ಬಿಜೆಪಿಗೆ ಸಿಗುವ ಸಾಧ್ಯತೆ ಇದೆ.

ಯಾವ ರಾಜ್ಯದಲ್ಲಿ ಎಷ್ಟು ಸ್ಥಾನಗಳಿಗೆ ಚುನಾವಣೆ

- ಕರ್ನಾಟಕ, ಆಂಧ್ರ ಪ್ರದೇಶ, ಗುಜರಾತ್ (ತಲಾ **4**)
- ರಾಜಸ್ಥಾನ, ಮಧ್ಯ ಪ್ರದೇಶ (ತಲಾ **3**)
- ಜಾರ್ಖಂಡ್ (**2**)
- ಮೇಘಾಲಯ, ಮಣಿಪುರ, ಅರುಣಾಚಲ ಪ್ರದೇಶ ಹಾಗೂ ಮಿಜೊರಾಂ (ತಲಾ **1**)

ಆದರೆ, ಬಿಜೆಪಿ ಬೆಂಬಲದೊಂದಿಗೆ ಮತ್ತೊಂದು ಅವಧಿಗೆ ರಾಜ್ಯಸಭೆಗೆ ಆಯ್ಕೆಯಾಗಲು ದೇವೇಗೌಡ ಉತ್ಸುಕರಾಗಿದ್ದಾರೆ. ಈ ಸಂಬಂಧ ಜೆಡಿಎಸ್ ನಾಯಕರು ಬಿಜೆಪಿ ವರಿಷ್ಠರೊಂದಿಗೆ ಮಾತುಕತೆ ನಡೆಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಒಪ್ಪಿಗೆಯೇ ದೇವೇಗೌಡರಿಗೆ ಮತ್ತೊಂದು ಅವಕಾಶ ನೀಡಲು ಬಿಜೆಪಿಯಲ್ಲಿ ಅಂತಿಮವಾಗುತ್ತದೆ. ಮೋದಿ ಕಾರ್ಯಶೈಲಿಯನ್ನು ದೇವೇಗೌಡರು ಹಲವು ಬಾರಿ ಮುಕ್ತಕಂಠದಿಂದ ಹೊಗಳಿದ್ದಾರೆ. 94ರ ಇಳಿ ವಯಸ್ಸಿನಲ್ಲೂ ರಾಜ್ಯದ ಸಮಸ್ಯೆಗಳ ಬಗ್ಗೆ ರಾಜ್ಯಸಭೆಯಲ್ಲಿ ಅನೇಕ ಬಾರಿ ಧ್ವನಿ ಎತ್ತಿದ್ದಾರೆ. ಮೋದಿ ಮನ ಗೆದ್ದಿರುವ ಗೌಡರು ಮತ್ತೊಂದು ಅವಧಿಗೆ ಪುನರಾಯ್ಕೆಯಾಗಬಹುದು ಎಂಬ ಚರ್ಚೆಗಳು ಆರಂಭವಾಗಿವೆ.

ಇನ್ನೊಂದೆಡೆ, ಒಂದು ಸ್ಥಾನವನ್ನು ಜೆಡಿಎಸ್‌ಗೆ ಬಿಟ್ಟುಕೊಡುವುದಕ್ಕೆ ಬಿಜೆಪಿ ರಾಜ್ಯ ಘಟಕ ಒಲವು ಹೊಂದಿಲ್ಲ. ಅದರ ಬದಲು ಪಕ್ಷದ ನಾಯಕರಿಗೆ ಅವಕಾಶ ನೀಡಬೇಕು ಎಂಬುದು ರಾಜ್ಯದ ನಾಯಕರ ಅಭಿಪ್ರಾಯ. ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ, ಮಾಜಿ ಶಾಸಕ ನಿರ್ಮಲ್ ಕುಮಾರ್ ಸುರಾನಾ ಸೇರಿದಂತೆ ಮೂರು ಹೆಸರುಗಳನ್ನು ವರಿಷ್ಠರಿಗೆ ಶಿಫಾರಸು ಮಾಡುವ ಬಗ್ಗೆ ಬಿಜೆಪಿ ರಾಜ್ಯ ಪ್ರಮುಖರ ಸಭೆಯಲ್ಲಿ ಚರ್ಚೆ ನಡೆದಿದೆ.

▶11

ಚಿನಕುರುಳಿ ಪ್ರಕಾಶ್ ಶೆಟ್ಟಿ



ಯುಎಪಿಎ: ವಿಸ್ತೃತ ಪೀಠಕ್ಕೆ ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾನೂನುಬಾಹಿರ ಚಟುವಟಿಕೆ ನಿಯಂತ್ರಣ ಕಾಯ್ದೆಯಡಿ (ಯುಎಪಿಎ) 2020ರ ದೆಹಲಿ ಗಲಭೆ ಪ್ರಕರಣದ ಆರೋಪಿಗಳಾದ ಉಮರ್ ಖಾಲಿದ್ ಮತ್ತು ಶಾರ್ಜೀಲ್ ಇಮಾಮ್ ಅವರಿಗೆ ಜಾಮೀನು ನಿರಾಕರಿಸಿದ ತೀರ್ಪನ್ನು ಪರಾಮರ್ಶಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ಅದನ್ನು ವಿಸ್ತೃತ ಪೀಠಕ್ಕೆ ಶಿಫಾರಸು ಮಾಡಿದೆ.

ಜಾಮೀನು ನೀಡುವ ವಿಷಯವನ್ನು ವಿಸ್ತೃತ ಪೀಠ ಪರಿಗಣಿಸಬೇಕು ಎಂದು ದೆಹಲಿ ಪೊಲೀಸರ ಪರ ವಕೀಲರು ಸುಪ್ರೀಂ ಕೋರ್ಟ್‌ನಲ್ಲಿ ವಾದಿಸಿದ್ದರು.

ದೆಹಲಿ ಗಲಭೆ ಪ್ರಕರಣದ ಇತರೆ ಇಬ್ಬರು ಆರೋಪಿಗಳಾದ ತಸ್ಲೀಂ ಅಹಮದ್ ಮತ್ತು ಖಾಲಿದ್ ಶಾಫಿ ಅವರಿಗೆ ಮಧ್ಯಂತರ ಜಾಮೀನು ಮಂಜೂರು ಮಾಡುವಾಗ ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಮತ್ತು ಪ್ರಸನ್ನ ಬಿ. ವರಾಲೆ ಅವರ ಪೀಠವು, ವಿಸ್ತೃತ ಪೀಠಕ್ಕೆ ಈ ಶಿಫಾರಸು ಮಾಡಿದೆ.

ಎನ್‌ಐಎ ದಾಖಲಿಸಿರುವ ಮಾದಕ ವಸ್ತು ಭಯೋತ್ಪಾದನೆ ಪ್ರಕರಣಕ್ಕೆ ಸಂಬಂಧಿಸಿ 2020ರಿಂದ ಬಂಧನದಲ್ಲಿರುವ ಜಮ್ಮು ಮತ್ತು ಕಾಶ್ಮೀರ ನಿವಾಸಿ ಸೈಯದ್ ಇಫ್ತಿಕರ್ ಅಂದ್ರಾಬಿಗೂ ಸುಪ್ರೀಂ ಕೋರ್ಟ್ ಜಾಮೀನು ಮಂಜೂರು ಮಾಡಿದೆ.

▶9

ಖಾಲಿದ್‌ಗೆ ಮಧ್ಯಂತರ ಜಾಮೀನು



ಉಮರ್ ಖಾಲಿದ್

ನವದೆಹಲಿ (ಪಿಟಿಐ): 2020ರ ದೆಹಲಿ ಗಲಭೆ ಪ್ರಕರಣದ ಆರೋಪಿಗಳಾದ ಉಮರ್ ಖಾಲಿದ್ ಮತ್ತು ಶಾರ್ಜೀಲ್ ಇಮಾಮ್ ಅವರಿಗೆ ಜಾಮೀನು ನಿರಾಕರಿಸಿರುವುದನ್ನು ಸುಪ್ರೀಂ ಕೋರ್ಟ್ ಸಮರ್ಥಿಸಿಕೊಂಡಿದೆ. ಆದರೆ, ಉಮರ್ ಖಾಲಿದ್‌ಗೆ ದೆಹಲಿ ಹೈಕೋರ್ಟ್ ಶುಕ್ರವಾರ ಮೂರು ದಿನಗಳ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ನ್ಯಾಯಮೂರ್ತಿಗಳಾದ ಎಂ.ಸಿಂಗ್ ಮತ್ತು ಮಧು ಜೈನ್ ಅವರ ಪೀಠವು ಖಾಲಿದ್‌ಗೆ ಜೂನ್ 1ರಿಂದ ಜೂನ್ 3ರವರೆಗೆ ಜಾಮೀನು ಅನುಮತಿಸಿದೆ. ಶಸ್ತ್ರಚಿಕಿತ್ಸೆಗೆ ಒಳಗಾಗಲಿರುವ ತಾಯಿಯನ್ನು ಭೇಟಿಯಾಗಲು ಜಾಮೀನು ನೀಡುವಂತೆ ಖಾಲಿದ್ ಮನವಿ ಮಾಡಿಕೊಂಡಿದ್ದರು.

▶9

ಸೂರ್ಯೋದಯ: 5:53 ಸೂರ್ಯಾಸ್ತ : 6:40 ಚಂದ್ರೋದಯ: ಬೆ. 11:19 ಚಂದ್ರಾಸ್ತ: ರಾ. 12:00 | ಶುಕ್ರವಾರದ ಉಷ್ಣಾಂಶ : ಗರಿಷ್ಠ 32° ಕನಿಷ್ಠ 20°

ಶನಿವಾರದ ಉಷ್ಣಾಂಶ 33° ಗರಿಷ್ಠ 21° ಕನಿಷ್ಠ | ಭಾನುವಾರ 33° : 22° | ಸೋಮವಾರ 34° : 22° | ಮಂಗಳವಾರ 34° : 22°

ಹವಾಮಾನ ಮುನ್ಸೂಚನೆ: ನಗರದಲ್ಲಿ ಗುಡುಗು, ಮಿಂಚು ಸಹಿತ ಮಳೆಯಾಗುವ ಸಾಧ್ಯತೆ ಇದೆ

ಗೊರುಚ ದತ್ತಿನಿಧಿ ಪ್ರಶಸ್ತಿಗೆ ಕೃತಿ ಆಹ್ವಾನ

ಬೆಂಗಳೂರು: 'ಗೊರುಚ ದತ್ತಿ ನಿಧಿ ಪ್ರಶಸ್ತಿ'ಗೆ 2025ನೇ ಸಾಲಿನಲ್ಲಿ ಪ್ರಕಟವಾದ ಶರಣ ಸಾಹಿತ್ಯ ಮತ್ತು ಜನಪದ ಸಾಹಿತ್ಯದ ಕೃತಿಗಳನ್ನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಆಹ್ವಾನಿಸಿದೆ. ಕೃತಿಗಳ ಲೇಖಕರಿಗೆ ತಲಾ ₹10 ಸಾವಿರ ನಗದು, ಪ್ರಶಸ್ತಿ ಫಲಕ ನೀಡಲಿದ್ದು, 3 ಪ್ರತಿಗಳನ್ನು ಮೇ 30ರೊಳಗೆ ಕಳುಹಿಸಬೇಕು ಎಂದು ಪರಿಷತ್ ಅಧ್ಯಕ್ಷ ಸಿ. ಸೋಮಶೇಖರ್ ತಿಳಿಸಿದ್ದಾರೆ.
ವಿಳಾಸ: ಅಧ್ಯಕ್ಷರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಶ್ರೀ ಶಿವರಾತ್ರೀಶ್ವರ ವೃತ್ತ, 1ನೇ ಮುಖ್ಯರಸ್ತೆ, ಜಯನಗರ 8ನೇ ಬ್ಲಾಕ್, ಬೆಂ- 560 079. ಸಂಪರ್ಕ: 080-22970125

ಮುಖ್ಯರಸ್ತೆ ಅಧ್ವಾನ, ಜನಸಂಚಾರ ದುಸ್ತರ

ಮೇಡಹಳ್ಳಿ– ಕುರುಡುಸೊಣ್ಣೆನಹಳ್ಳಿ ರಸ್ತೆ ಸರಿಪಡಿಸುವ ಮನವಿಗೆ ಸಿಗದ ಸ್ಪಂದನೆ

• ಶಿವರಾಜ್ ಮೌರ್ಯ



ಗುಂಡಿ ಬಿದ್ದ ರಸ್ತೆಯಲ್ಲಿ ವಾಹನ ಸಂಚಾರ

ಕೆ.ಆರ್.ಪುರ: ಮೇಡಹಳ್ಳಿಯಿಂದ ಕುರುಡುಸೊಣ್ಣೆನಹಳ್ಳಿಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಮೇಡಹಳ್ಳಿ ಬಳಿ ರಸ್ತೆಯಲ್ಲಿ ಅಲ್ಲಲ್ಲಿ ಹಳ್ಳ, ದಿಣ್ಣೆಗಳು, ಗುಂಡಿ ಬಿದ್ದು ಸಂಪೂರ್ಣ ಹಾಳಾಗಿದೆ. ಇಲ್ಲಿ ಸಂಚರಿಸುವವರು ಒಂದಿಲ್ಲೊಂದು ಅಪಘಾತಗಳಿಗೆ ಒಳಗಾಗುತ್ತಿದ್ದಾರೆ.

ಕೆ.ಆರ್.ಪುರ ಕ್ಷೇತ್ರದ ಬಸವನಪುರ ವಾರ್ಡ್ ವ್ಯಾಪ್ತಿಗೆ ಸೇರುವ ರಾಷ್ಟ್ರೀಯ ಹೆದ್ದಾರಿ 75ರ ಮೇಡಹಳ್ಳಿ ಮೂಲಕ ಹಾದುಹೋಗುವ ಮೇಲ್ಸೆತುವೆ ಕೆಳ ಭಾಗದ ಸರ್ವಿಸ್ ರಸ್ತೆಯಿಂದ ಎಲೆ ಮಲ್ಲಪ್ಪಶೆಟ್ಟಿ ಕೆರೆಯ ಕೊಳಚೆ ನೀರು ಸಂಸ್ಕರಣ ಘಟಕದವರೆಗಿನ ರಸ್ತೆ ಅಧ್ವಾನಗೊಂಡಿದೆ. ಮೇಡಹಳ್ಳಿಯಿಂದ ಕಾಡು ಗೋಡಿಗೆ ಪ್ರಮುಖ ಸಂಪರ್ಕ ಕೊಂಡಿಯಾಗಿರುವ ಮುಖ್ಯರಸ್ತೆ ಇದಾಗಿದೆ. ಕೆಲ ತಿಂಗಳ ಹಿಂದೆ ಮೇಡಹಳ್ಳಿಯಿಂದ ಕುರುಡು ಸೊಣ್ಣೆನಹಳ್ಳಿಗೆ ರಸ್ತೆ ಅಭಿವೃದ್ಧಿ ಪಡಿಸಿ ಡಾಂಬರೀಕರಣ ಮಾಡಲಾಗಿದೆ.ಆದರೆ, ಮೇಡಹಳ್ಳಿ ಸರ್ವಿಸ್ ರಸ್ತೆ ಯಿಂದ ಎಲೆಮಲ್ಲಪ್ಪಶೆಟ್ಟಿ ಕೆರೆಯ ಶುದ್ಧೀಕರಣ ಘಟಕದವರೆಗೆ ಟಿಡಿಆರ್ ಗೊಂದಲದಿಂದ ರಸ್ತೆಯನ್ನು ಹಾಗೇ ಬಿಡಲಾಗಿದೆ.

'ಟಿಡಿಆರ್ ಸಮಸ್ಯೆ ಬಗೆಹರಿಸಿ ರಸ್ತೆ ಅಭಿವೃದ್ಧಿ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಾಲ್ಕೈದು ವರ್ಷಗಳಿಂದ ಹಲವು ಮನವಿ ಸಲ್ಲಿಸಿದರೂ, ಸಮಸ್ಯೆ ಬಗೆಹರಿಸಲು ಮುಂದಾಗಿಲ್ಲ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಅಪಘಾತ ಹೆಚ್ಚಳ: ಪ್ರತಿದಿನ ಸಾವಿರಾರು ವಾಹನ ಸವಾರರು ದಿನನಿತ್ಯದ ಕೆಲಸಗಳಿಗಾಗಿ ಈ ರಸ್ತೆಯನ್ನು ಅವಲಂಬಿಸಿದ್ದಾರೆ. ರಸ್ತೆಯಲ್ಲಿ ಸಾಗುವಾಗ ಹಳ್ಳ, ದಿಣ್ಣೆ, ಗುಂಡಿಗಳಿಂದಾಗಿ ಅಪಘಾತಗಳು ಹೆಚ್ಚಾಗಿವೆ.

'ಸುತ್ತಮುತ್ತಲಿನ ಪ್ರದೇಶಗಳ ಜನರು ದೂಳಿನಿಂದಾಗಿ ಅಸ್ತಮಾ, ಕ್ಷಯರೋಗಕ್ಕೆ ತುತ್ತಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಸುತ್ತಮುತ್ತಲಿನ ಪ್ರದೇಶಗಳಲ್ಲಿ ಐಟಿ ಕಾರಿಡಾರ್, ಖಾಸಗಿ ಶಾಲೆಗಳು ಹೆಚ್ಚಾಗಿವೆ. ಹಾಳಾದ ರಸ್ತೆಯಿಂದ ಅಪಘಾತಗಳು ಸಂಭವಿಸುವುದು ಸಾಮಾನ್ಯವಾಗಿದೆ' ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದರು.

'ಹಾಳಾದ ರಸ್ತೆಯಿಂದ ಬಹಳಷ್ಟು ತೊಂದರೆ ಅನುಭವಿಸುತ್ತಿದ್ದೇವೆ. ಸ್ಥಳೀಯ ಶಾಸಕ ಬೈರತಿ ಬಸವರಾಜ ಹಾಗೂ ಪೂರ್ವ ನಗರ ಪಾಲಿಕೆ ಜಂಟಿ ಆಯುಕ್ತೆ ಸುಧಾ ಅವರಿಗೆ ಹಲವಾರು ಬಾರಿ ಮನವಿ ಮಾಡಿದರೂ ಸ್ಪಂದಿಸುತ್ತಿಲ್ಲ' ಎಂದರು.



ಬಸವನಪುರ ವಾರ್ಡ್‌ನ ಮೇಡಹಳ್ಳಿಯಿಂದ ಕುರುಡು ಸೊಣ್ಣೆನಹಳ್ಳಿ ಸಂಪರ್ಕ ರಸ್ತೆ ಗುಂಡಿ ಬಿದ್ದಿವೆ. ಸಂಚಾರ ದಟ್ಟಣೆ ಹೆಚ್ಚಿ ಅಪಘಾತ ಸಂಭವಿಸುತ್ತಿವೆ
ಕಿರಣ್ ಕುಮಾರ್ ಜೆ. ಮೇಡಹಳ್ಳಿ ನಿವಾಸಿ



2013ರಲ್ಲಿ ರಸ್ತೆ ನಿರ್ಮಾಣ ನಂತರ ದುರಸ್ತಿ, ಅಭಿವೃದ್ಧಿ ಮಾಡದೆ ಹಳ್ಳ ಗುಂಡಿಗಳಿಂದ ಕೂಡಿದೆ. ಟಿಡಿಆರ್ ನೆಪವೊಡ್ಡಿ ಜಿಬಿಎ ಅಧಿಕಾರಿಗಳು ರಸ್ತೆ ಅಭಿವೃದ್ಧಿ ಮಾಡುತ್ತಿಲ್ಲ
ರಮೇಶ್, ಸ್ಥಳೀಯ ನಿವಾಸಿ

'ಗೃಹಲಕ್ಷ್ಮಿ ಹಣದ ಲೆಕ್ಕ ಕೊಡಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೃಹಲಕ್ಷ್ಮಿ ಯೋಜನೆಯ ₹5,000 ಕೋಟಿ ಹಣ ಮಾಯವಾದುದರ ಬಗ್ಗೆ ಈವರೆಗೂ ಮಾಹಿತಿ ಇಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಗ್ಗೆ ರಾಜ್ಯದ ಜನರಿಗೆ ಲೆಕ್ಕ ಕೊಡಬೇಕು' ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಒತ್ತಾಯಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಫೆಬ್ರುವರಿ ಮತ್ತು ಮಾರ್ಚ್ ತಿಂಗಳ ಮೊತ್ತವು ಫಲಾನುಭವಿಗಳ ಖಾತೆಗೆ ಜಮೆಯಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ವಿಧಾನಸಭೆಗೆ ತಿಳಿಸಿದ್ದರು. ಅದು ತಪ್ಪು ಮಾಹಿತಿ ಎಂದು ಸದನದಲ್ಲೇ ಅವರು ಒಪ್ಪಿಕೊಂಡಿದ್ದರು. ಅದಾಗಿ ಒಂದು ವರ್ಷವಾದರೂ, ಆ ಹಣ ಎಲ್ಲಿ ಹೋಯಿತು ಎಂಬುದು ಯಾರಿಗೂ ಗೊತ್ತಿಲ್ಲ' ಎಂದು ಆರೋಪಿಸಿದರು.

'ಈ ವಿಚಾರವಾಗಿ ಮಹಿಳೆಯೊಬ್ಬರು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದಾರೆ. ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಚಾಟಿ ಬೀಸಿದೆ. ಸರ್ಕಾರದ ನಡೆ ವಿರುದ್ಧ ನಾವೂ ಹೋರಾಟ ರೂಪಿಸುತ್ತೇವೆ' ಎಂದು ಹೇಳಿದರು.

ಮಣ್ಣು ರಾಶಿಯಿಂದಲೇ ಕುಸಿದ ಕಾಂಪೌಂಡ್: 'ಲೋಕಾ' ವರದಿ

ಬೆಂಗಳೂರು: ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಅನ್ನು ಅವೈಜ್ಞಾನಿಕವಾಗಿ ನಿರ್ಮಿಸಿದ್ದ ಮತ್ತು ಸುರಕ್ಷತೆ ಕಡೆಗಣಿಸಿ ಆವರಣದಲ್ಲಿ ಮಣ್ಣು ರಾಶಿ ಹಾಕಿದ್ದರಿಂದಲೇ, ಆ ಕಾಂಪೌಂಡ್ ಕುಸಿದಿದೆ ಎಂದು ಲೋಕಾಯುಕ್ತ ತನಿಖಾ ತಂಡವು ಹೇಳಿದೆ.

ಇದೇ ಏಪ್ರಿಲ್ 29ರಂದು ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದು ಏಳು ಜನರು ಮೃತಪಟ್ಟಿದ್ದರು. ಮರುದಿನ ಸ್ಥಳಕ್ಕೆ ಭೇಟಿ ನೀಡಿದ್ದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದರು. ಜತೆಗೆ ಲೋಕಾಯುಕ್ತ ತಾಂತ್ರಿಕ ವಿಭಾಗದ ನೇತೃತ್ವದಲ್ಲಿ ತನಿಖಾ ತಂಡ ರಚಿಸಿದ್ದರು. ತನಿಖಾ ತಂಡವು ಶುಕ್ರವಾರ ಲೋಕಾಯುಕ್ತರಿಗೆ ವರದಿ ಸಲ್ಲಿಸಿದೆ.

ಭಾರತೀಯ ಕಟ್ಟಡ ಸಂಹಿತೆ ಪ್ರಕಾರ ಕಾಂಪೌಂಡ್ ಎತ್ತರ 1.5 ಮೀಟರ್‌ನಿಂದ 2.4 ಮೀಟರ್ ಇರಬೇಕು. ಆದರೆ ಅವಘಡಕ್ಕೆ ಕಾರಣವಾದ ಕಾಂಪೌಂಡ್ 2.8 ಮೀಟರ್‌ನಷ್ಟು ಎತ್ತರವಿತ್ತು. ಹೆಚ್ಚಿನ ಭದ್ರತೆ ಇಲ್ಲದೆ ವಿಪರೀತ ಎತ್ತರ ಇದ್ದ ಕಾರಣಕ್ಕೆ ಕಾಂಪೌಂಡ್ ಸಹಜವಾಗಿಯೇ ದುರ್ಬಲವಾಗಿತ್ತು ಎಂಬ ವಿವರ ತನಿಖಾ ವರದಿಯಲ್ಲಿದೆ.

2009ರಲ್ಲಿ ಟ್ರಕ್ ಒಂದು ಇದೇ ಕಾಂಪೌಂಡ್‌ಗೆ ಡಿಕ್ಕಿ ಹೊಡೆದಿದ್ದ ಪರಿಣಾಮವಾಗಿ, ಕಾಂಪೌಂಡ್ ದುರ್ಬಲವಾಗಿತ್ತು. ಜತೆಗೆ ಆಸ್ಪತ್ರೆ ಆವರಣದಲ್ಲಿ ಕಾಮಗಾರಿ ನಡೆದಾಗಲೆಲ್ಲಾ ತ್ಯಾಜ್ಯವನ್ನು ತಂದು ಕಾಂಪೌಂಡ್ ಹಿಂದೆ ಸುರಿಯಲಾಗಿತ್ತು. ಈ ಕಾಂಪೌಂಡ್ ತನ್ನ ಭಾರವನ್ನು ಮಾತ್ರ ಹೊರಬಲ್ಲಂತಹ ಸ್ವರೂಪದ್ದು. ಅದರ ಹಿಂದೆ ಸುರಿಯಲಾಗಿದ್ದ ಮಣ್ಣಿನ ಭಾರವನ್ನು ಹೊರುವ ಸಾಮರ್ಥ್ಯ ಅದಕ್ಕೆ ಇರಲಿಲ್ಲ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಜತೆಗೆ ಮಳೆಯ ನೀರು ಹರಿದುಹೋಗುವ ಕೊಳವೆ ಮತ್ತು ಕಿಂಡಿ ವ್ಯವಸ್ಥೆ ಕಾಂಪೌಂಡ್‌ನಲ್ಲಿ ಇರಲಿಲ್ಲ. ಮಣ್ಣಿನಲ್ಲಿ ಸಂಗ್ರಹವಾದ ನೀರು ಹೊರಗೆ ಹರಿದುಹೋಗದೆ ಕಾಂಪೌಂಡ್ ಮೇಲಿನ ಒತ್ತಡ ಹೆಚ್ಚಿಸಿತ್ತು. ಈ ಎಲ್ಲ ಕಾರಣದಿಂದಲೇ ಕಾಂಪೌಂಡ್ ದುರ್ಬಲಗೊಂಡು ಕುಸಿದಿದೆ ಎಂದು ವಿವರಿಸಿದೆ.

ವರದಿ ಆಧಾರದಲ್ಲಿ ವಿಚಾರಣೆ ನಡೆಸಿದ ಲೋಕಾಯುಕ್ತರು, 'ಬೌರಿಂಗ್ ಆಸ್ಪತ್ರೆಯಲ್ಲಿ ಸಿವಿಲ್ ಎಂಜಿನಿಯರ್ ಹುದ್ದೆ ಖಾಲಿ ಇರುವುದು, ಕಾಂಪೌಂಡ್‌ಗೆ ಹೊಂದಿಕೊಂಡಿರುವ ಪಾದಚಾರಿ ಮಾರ್ಗದಲ್ಲಿನ ಅಂಗಡಿಯನ್ನು ಪಾಲಿಕೆ ಅಧಿಕಾರಿಗಳು ಮತ್ತು ಸಂಚಾರ ಪೊಲೀಸರು ತೆರವು ಮಾಡದೇ ಇರುವುದನ್ನು ಗಂಭೀರವಾಗಿ ಪರಿಗಣಿಸುತ್ತೇವೆ' ಎಂದು ತಿಳಿಸಿದ್ದಾರೆ.

ತಪ್ಪಿತಸ್ಥ ಗುತ್ತಿಗೆದಾರರ ವಿರುದ್ಧ ಕ್ರಮ ತೆಗೆದುಕೊಳ್ಳುವುದಾಗಿ ಮುಖ್ಯ ಕಾರ್ಯದರ್ಶಿ ಕಚೇರಿಯು ಲೋಕಾಯಕ್ತರಿಗೆ ವಿವರಣೆ ನೀಡಿರುತ್ತದೆ. ಬೀದಿ ಬದಿ ವ್ಯಾಪಾರಿಗಳನ್ನು ಗುರುತಿಸಿ, ತಿಂಗಳೊಳಗೆ ಅವರಿಗೆ ಗುರುತಿನ ಚೀಟಿ ನೀಡುವುದಾಗಿ ನಗರಾಭಿವೃದ್ಧಿ ಇಲಾಖೆ ತಿಳಿಸಿರುತ್ತದೆ ಎಂದು ಲೋಕಾಯುಕ್ತ ಪ್ರಕಟಣೆ ತಿಳಿಸಿದೆ.

ಒಳ ಮೀಸಲಾತಿ ಜಾರಿಗಾಗಿ 27ಕ್ಕೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯ ಒಳ ಮೀಸಲಾತಿ ಜಾರಿಗೊಳಿಸುವುದು, ರೋಸ್ಟರ್ ಬಿಂದು ಸಮಸ್ಯೆ ಸರಿಪಡಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮೇ 27ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗುವುದು ಎಂದು ಮಾದಿಗ ಸಂಘಟನೆಗಳ ಒಕ್ಕೂಟ ತಿಳಿಸಿದೆ.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಮುಖಂಡರಾದ ಕೇಶವಮೂರ್ತಿ, ಭೀಮ್‌ರಾಜ್, ದೇವರಾಜ್ ಕೈವಾರ, ಕೆ. ಕೃಷ್ಣಪ್ಪ, ಹುಸೇನಪ್ಪ ಮಾದರ್, ಬಿ.ಆರ್. ಮುನಿರಾಜ್ ಮಾತನಾಡಿದರು.

'ಪರಿಶಿಷ್ಟ ಜಾತಿ ಒಳ ಮೀಸಲಾತಿಗೆ ಸಂಬಂಧಿಸಿದಂತೆ ಎಚ್.ಎನ್. ನಾಗಮೋಹನದಾಸ್ ಆಯೋಗ ಹಾಗೂ ಜೆ.ಸಿ. ಮಾಧುಸ್ವಾಮಿ ಸಮಿತಿ ವರದಿಗಳನ್ನು ರಾಜ್ಯ ಸರ್ಕಾರ ತಳ್ಳಿ ಹಾಕಿದೆ. ಒಳ ಮೀಸಲಾತಿ ವಿರೋಧಿಗಳ ಒತ್ತಡಕ್ಕೆ ಮಣಿದು ಮೇ 8ರಂದು ಹೊರಡಿಸಿರುವ ಆದೇಶವೂ ಕಾನೂನುಬಾಹಿರವಾಗಿದ್ದು, ಅವೈಜ್ಞಾನಿಕ ಹಾಗೂ ಗೊಂದಲದಿಂದ ಕೂಡಿದೆ' ಎಂದು ಆರೋಪಿಸಿದರು.

'ಪರಿಶಿಷ್ಟ ಜಾತಿಯ ಒಳ ಮೀಸಲಾತಿಯನ್ನು ಎಲ್ಲ ಕ್ಷೇತ್ರಗಳಲ್ಲಿ ಅನ್ವಯಿಸುವಂತೆ ಜಾರಿಗೊಳಿಸಬೇಕು. ಮಾದಿಗ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಶೇ 6ರಷ್ಟು ಒಳ ಮೀಸಲಾತಿ ಒದಗಿಸಬೇಕು. ವಿವಿಧ ಇಲಾಖೆಗಳ ನೌಕರರಿಗೆ ಬಡ್ತಿಯಲ್ಲಿ ಹಾಗೂ ಮುಂಬಡ್ತಿಯಲ್ಲೂ ಒಳ ಮೀಸಲಾತಿ ಜಾರಿಗೊಳಿಸಬೇಕು' ಎಂದು ಒತ್ತಾಯಿಸಿದರು.

'ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ಅನುದಾನವನ್ನು ಒಳ ಮೀಸಲಾತಿ ಅನ್ವಯಿಸಿ ಹಂಚಿಕೆ ಮಾಡಬೇಕು' ಎಂದು ಆಗ್ರಹಿಸಿದರು.

ಮರ–ಕೊಂಬೆಗಳ ಶೀಘ್ರ ತೆರವಿಗೆ ಸೂಚನೆ

ಮಳೆಯಿಂದಾಗಿ ಬಿದ್ದಿರುವ ಮರಗಳು ಕೆಲವೆಡೆ ನಡೆಯದ ತೆರವು ಕಾರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗದಲ್ಲಿ ಬಿದ್ದಿರುವ ಮರ, ರೆಂಬೆ-ಕೊಂಬೆಗಳನ್ನು ರಾಶಿ ಹಾಕಿದ್ದು, ಇವನ್ನು ವಿಲೇವಾರಿ ಮಾಡಲು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಆದೇಶಿಸಿದ್ದಾರೆ.

ಇತ್ತೀಚಿಗೆ ಬಿದ್ದ ಮಳೆಯಿಂದಾಗಿ ಬಹಳಷ್ಟು ಮರಗಳು ಧರೆಗುರುಳಿದ್ದು 'ಟ್ರೀ ಕೆನೊಪಿ ಮ್ಯಾನೇಜ್‌ಮೆಂಟ್' ತಂಡಗಳಿಂದ ವಿಲೇವಾರಿ ಆಗುತ್ತಿದೆ. ಆದರೆ, ಮರ ಮತ್ತು ಕೊಂಬೆಗಳನ್ನು ತೆರವುಗೊಳಿಸಿದ ನಂತರ, ಸಣ್ಣಪುಟ್ಟ ಕೊಂಬೆಗಳು ಮತ್ತು ಮರದ ಎಲೆಗಳು ಪಾದಚಾರಿ ಮಾರ್ಗದಲ್ಲಿ ಹಾಗೆಯೇ ರಾಶಿ ಹಾಕಿರುವುದು ಹಲವಾರು ಕಡೆ ಕಂಡುಬಂದಿದೆ.

ಸಾರ್ವಜನಿಕರ ಹಿತದೃಷ್ಟಿಯಿಂದ ನಗರ ಪಾಲಿಕೆಗಳು ತಮ್ಮ ವ್ಯಾಪ್ತಿಯ ಸಣ್ಣಪುಟ್ಟ ಮರದ ಕೊಂಬೆಗಳನ್ನು ಶ್ರೇಡಿಂಗ್ ಯಂತ್ರಗಳ ಮೂಲಕ ಪುಡಿ ಮಾಡಿ, ಆ ತ್ಯಾಜ್ಯವನ್ನು ಕಾಂಪೋಸ್ಟ್ ಘಟಕಕ್ಕೆ ಸಾಗಿಸಲು ಸೂಕ್ತ ಕ್ರಮ ವಹಿಸಬೇಕು ಎಂದು ಆದೇಶ ಹೊರಡಿಸಿದ್ದಾರೆ.

ಗುರುವಾರ ಬಿರುಗಾಳಿಯೊಂದಿಗೆ ಸುರಿದ ಮಳೆಯಿಂದ ನಗರದಾದ್ಯಂತ 157 ಮರಗಳು ಧರೆಗುರುಳಿವೆ. ಏಪ್ರಿಲ್ 29ರಂದು ಸುರಿದ ಭಾರೀ ಮಳೆಯಿಂದ 516 ಮರ ಹಾಗೂ 1,305 ರೆಂಬೆ–ಕೊಂಬೆಗಳು ಉರುಳಿದ್ದವು. ಕೆಲವು ಕಡೆ ತೆರವು ಕಾರ್ಯ ಇನ್ನೂ ಮುಗಿದಿಲ್ಲ.

ಮಾಹಿತಿಗೆ ಮನವಿ: ಮಳೆಗಾಲ ಪೂರ್ವ ಮುನ್ನೆಚ್ಚರಿಕಾ ಕ್ರಮಗಳ ಭಾಗವಾಗಿ ಸರ್ವಜ್ಞನಗರ, ಹೆಬ್ಬಾಳ ವಿಭಾಗ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳು ಹಾಗೂ ಅಪಾಯಕಾರಿ ಕಾಂಪೌಂಡ್ ಕುರಿತು ಸಾರ್ವಜನಿಕರಿಗೆ ಮುನ್ನೆಚ್ಚರಿಕೆಯ ಸೂಚನೆ ನೀಡಲಾಗಿದೆ ಎಂದು ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದರು.

ಸರ್ಕಾರಿ, ಖಾಸಗಿ ಶಾಲೆಗಳು, ಕಟ್ಟಡಗಳು, ಕಾಂಪೌಂಡ್ ಸೇರಿದಂತೆ ಅಪಾಯಕಾರಿ ಸ್ಥಿತಿಯಲ್ಲಿರುವ ಕಟ್ಟಡ ಮತ್ತು ಗೋಡೆಗಳನ್ನು ಗುರುತಿಸಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕರಿಗೆ ಅಪಾಯ ಉಂಟುಮಾಡಬಹುದಾದ ಶಿಥಿಲಾವಸ್ಥೆಯ ಕಟ್ಟಡಗಳು ಅಥವಾ ಗೋಡೆಗಳು ಕಂಡುಬಂದಲ್ಲಿ 9008869933, 9035024113, 9845262637, 9535563588, 9945640419ಕ್ಕೆ ವಾಟ್ಸ್‌ಆ್ಯಪ್ ಮೂಲಕ ಮಾಹಿತಿ ನೀಡಬಹುದು ಎಂದರು.

ಮರಗಳು ಧರೆಗೆ ಎಲ್ಲೆಲ್ಲಿ?

ಪಾಲಿಕೆ	ಮರ	ತೆರವು	ಕೊಂಬೆ	ತೆರವು
ಕೇಂದ್ರ	50	42	28	24
ಪೂರ್ವ	22	19	17	15
ಪಶ್ಚಿಮ	59	45	138	91
ದಕ್ಷಿಣ	13	13	33	29
ಉತ್ತರ	13	13	12	12
ಒಟ್ಟು	157	132	228	171



ವೈಯಾಲಿಕಾವಲ್‌ನಲ್ಲಿ ದ್ವಿಚಕ್ರ ವಾಹನ, ವಿದ್ಯುತ್ ಕಂಬದ ಮೇಲೆ ಬಿದ್ದಿರುವ ಮರ
ಪ್ರಜಾವಾಣಿ ಚಿತ್ರ/ ಬಿ.ಕೆ. ಜನಾರ್ದನ್

ಜಯನಗರ ವಾಣಿಜ್ಯ ಸಂಕೀರ್ಣ: ಸುಸಜ್ಜಿತ ವ್ಯವಸ್ಥೆ

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಜಯನಗರ ವಾಣಿಜ್ಯ ಸಂಕೀರ್ಣದ ಸಮಗ್ರ ನವೀಕರಣ, ಪಾರ್ಕಿಂಗ್ ವ್ಯವಸ್ಥೆ ಸುಧಾರಣೆ ಹಾಗೂ ಮೂಲಸೌಕರ್ಯಗಳ ವಿಸ್ತರಣೆಗೆ ಸಂಬಂಧಿಸಿದಂತೆ ಪಾಲಿಕೆಯ ಆಯುಕ್ತ ಕೆ.ಎನ್. ರಮೇಶ್ ಅವರು ಶುಕ್ರವಾರ ಪರಿಶೀಲನೆ ನಡೆಸಿದರು.

ವಾಣಿಜ್ಯ ಸಂಕೀರ್ಣದ ಆವರಣದಲ್ಲಿ ಪಾರ್ಕಿಂಗ್ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು. ನೆಲಮಹಡಿ ಜಾಗವನ್ನು ಸಂಪೂರ್ಣವಾಗಿ ಪಾರ್ಕಿಂಗ್ ಸ್ಥಳವನ್ನಾಗಿ ಪರಿವರ್ತಿಸಬೇಕು. ಮಾರುಕಟ್ಟೆ ಆವರಣದಲ್ಲಿ ಸುಸಜ್ಜಿತ ಪಾರ್ಕಿಂಗ್ ವ್ಯವಸ್ಥೆ ಅಭಿವೃದ್ಧಿಪಡಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜೂನ್ 28ರಿಂದ ಪಲ್ಸ್ ಪೋಲಿಯೊ

ಜಿಬಿಎ ವ್ಯಾಪ್ತಿಯಲ್ಲಿ ಪಲ್ಸ್ ಪೋಲಿಯೊ ಲಸಿಕಾ ಅಭಿಯಾನ ಕಾರ್ಯಕ್ರಮ ಜೂನ್ 28ರಿಂದ ಜುಲೈ 1ರವರೆಗೆ ನಡೆಯಲಿದೆ ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮದ ಅಂಗವಾಗಿ ಎಲ್ಲ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸಿ, ಶೇ 100 ಗುರಿ ಸಾಧಿಸಲು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಐದು ನಗರ ಪಾಲಿಕೆಗಳಲ್ಲಿ ಐದು ವರ್ಷದೊಳಗಿನ ಒಟ್ಟು 11,34,988 ಮಕ್ಕಳಿಗೆ ಪಲ್ಸ್ ಪೋಲಿಯೊ ಹನಿ ನೀಡುವ ಗುರಿ ಹೊಂದಲಾಗಿದೆ. ನಗರದಾದ್ಯಂತ 3,391 ಸ್ಥಿರ ಬೂತ್‌ಗಳು, 597 ಸಂಚಾರಿ ತಂಡಗಳು ಸೇರಿದಂತೆ ಒಟ್ಟು 4,452 ಲಸಿಕಾ ಕೇಂದ್ರಗಳ ಮೂಲಕ ಲಸಿಕೆ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಜೂನ್ 29ರಿಂದ ಜುಲೈ 1ರವರೆಗೆ ಮನೆ-ಮನೆಗೆ ಭೇಟಿ ನೀಡಿ ಮಕ್ಕಳಿಗೆ ಲಸಿಕೆ ನೀಡಲಾಗುವುದು. ಇದರ ಜೊತೆಗೆ ನಾಲ್ಕು ದಿನ ಹೆಚ್ಚಿನ ಜನ ಸಂದಣಿ ಪ್ರದೇಶಗಳು, ಕೊಳೆಗೇರಿ ಪ್ರದೇಶಗಳು, ವಲಸಿಗರ ವಸತಿ ಪ್ರದೇಶಗಳು ಸೇರಿದಂತೆ ವಿವಿಧ ಸ್ಥಳಗಳಲ್ಲಿ ಸಂಚಾರಿ ತಂಡಗಳ ಮೂಲಕ ಲಸಿಕೆ ನೀಡಲು ಯೋಜನೆ ರೂಪಿಸಲಾಗಿದೆ ಎಂದು ಮುಖ್ಯ ಆರೋಗ್ಯಾಧಿಕಾರಿ ಡಾ. ಎಸ್.ಎಸ್. ಮದನಿ ಹೇಳಿದರು.



ಚಿನ್ನ ಚಿನ್ನ ನನ್ನ ಚಿನ್ನಾ!

‘ಓ ನನ್ನ ಚಿನ್ನಾ’ ಎಂದು ಸಂಗಾತಿಯನ್ನು ಕರೆಯಲೂ ಯೋಚಿಸಬೇಕಾದ ಕಾಲ ಇದು! ಏಕೆಂದರೆ, ಆ ಮೋಹಕ ಕರೆಯನ್ನೇ ನೆಪವಾಗಿಸಿ, ಮನೆಯಲ್ಲಿನ ಈ ‘ಚಿನ್ನ’ವು ಅಂಗಡಿಯ ಆ ದುಬಾರಿ ‘ಚಿನ್ನ’ಕ್ಕೆ ಬೇಡಿಕೆ ಇಟ್ಟುಬಿಟ್ಟರೆ?! ಪ್ರಧಾನಿಯ ಕರೆಯನ್ನು ಮುಂದೊಡ್ಡಿ ವರ್ಷದವರೆಗೆ ಆ ಡಿಮ್ಯಾಂಡನ್ನು ಹೇಗೋ ‘ಅಮಾನತಿನಲ್ಲಿ’ ಇಡಬಹುದೇನೊ. ಆದರೆ, ಚಿನ್ನದ ಮೇಲಿನ ನಮ್ಮ ಹೆಣ್ಣುಮಕ್ಕಳ ಮೋಹವನ್ನು ಎಂದಾದರೂ ಶಾಶ್ವತವಾಗಿ ಕಡಿಮೆ ಮಾಡಲು ಸಾಧ್ಯವೇ?

• ಶುಭಶ್ರೀ ಪ್ರಸಾದ್

‘ರೀ ಸರೋಜಮ್ಮ, ನೀವು ಹಾಕ್ಕೊಂಡಿರೋ ಚಿನ್ನದ ನೆಕ್ಲೆಸ್ ಹೊಸದಾ? ಎಷ್ಟು ಗ್ರಾಂ ಇದೆ? ಎಷ್ಟ್ ದುಡ್ಡು ಕೊಟ್ರಿ? ಡಿಸೈನ್ ತುಂಬಾ ಚೆನ್ನಾಗಿದೆರೀ, ನಾನೂ ಮಾಡಿಸ್ಕೊಬೇಕು’.

‘ಅಯ್ಯೋ ಈಪಾಟಿ ರೇಟಿನಲ್ಲಿ ಚಿನ್ನ ಕೊಳ್ಳೋಕಾಗುತ್ಯೇ? ನಮ್ಮಂಥ ಮಧ್ಯಮ ವರ್ಗದವರಿಗೆ ಸುಮ್ಮನೆ ಇರಲೂ ಆಗದು, ಕೊಳ್ಳಲೂ ಆಗದು. ಶ್ರೀಮಂತರಾದರೆ ಎಷ್ಟಿದ್ದರೂ ಕೊಳ್ಳುತ್ತಾರೆ. ಬಡವರು ಮದುವೆಗೆ ತಾಳಿ ಮಾಡಿಸಿದರೆ ಸಾಕು ಅನ್ನುವಂತಾಗಿದೆ ಅಲ್ವಾ’ ಸರೋಜಮ್ಮನ ಅಳಲು.

ಹೆಣ್ಣುಮಕ್ಕಳಿಗೂ ಚಿನ್ನಕ್ಕೂ ಅವಿನಾಭಾವ ನಂಟು. ಮನೆಗೆ ಬಂದ ಯಾವುದೇ ಒಡವೆಯಾದರೂ ಅದು ಲಕ್ಷ್ಮಿಯ ಸಮಾನ ಎನ್ನುವುದರ ಜೊತೆಗೆ ಅದರೊಂದಿಗೆ ಒಂದು ಆತ್ಮೀಯ ಸಂಬಂಧ ಬೆಸೆದುಕೊಂಡು ಬಿಟ್ಟಿರುತ್ತದೆ. ಅದಕ್ಕೇ ಅದನ್ನು ಅಡವಿಡುವ ಪರಿಸ್ಥಿತಿ ಬಂದರಂತೂ ಕೆಲವು ಹೆಣ್ಣುಮಕ್ಕಳಿಗೆ ಕಣ್ಣೀರೇ ಬರುತ್ತದೆ. ಇನ್ನು ಕೆಲವರು, ಇದು ಕಷ್ಟಕಾಲದಲ್ಲಿ ಆಪದ್ಧನವಾಗಿ ಬಳಕೆಯಾಗುತ್ತಿದೆ ಎಂದು ಸಂತೋಷ ಕೂಡಾ ಪಡುತ್ತಾರೆ. ಆದರೆ ಹಾಗೆ ಅಡವಿಟ್ಟ ಚಿನ್ನವನ್ನು ಎಷ್ಟು ಬೇಗ ಬಿಡಿಸಿಕೊಂಡು ಮನೆಗೆ ವಾಪಸ್ ತರುತ್ತೇವೋ ಎಂಬ ಕಾತರ ಬಹುತೇಕ ಎಲ್ಲ ಹೆಣ್ಣುಮಕ್ಕಳಿಗೂ ಇದ್ದೇ ಇರುತ್ತದೆ.

‘ಚಿನ್ನಾ’ ಎಂದು ಗಂಡ ಕರೆದರೆ ಹೆಂಡತಿಯ ಮುಖ ಊರಗಲ ಆಗುತ್ತದೆ. ಪ್ರೇಯಸಿಯಾಗಿದ್ದಾಗ ಮತ್ತು ಮದುವೆಯಾದ ಹೊಸತರಲ್ಲಿ ಚಿನ್ನಾ, ರನ್ನಾ, ಮುದ್ದು, ಬಂಗಾರ ಎಂದೆಲ್ಲಾ ಕರೆಯುವುದು ಬಹಳ ಕಾಮನ್. ಮದುವೆಯಾಗಿ ಇಪ್ಪತ್ತೋ ಮೂವತ್ತೋ ವರ್ಷಗಳ ನಂತರ ಹೀಗೇನಾದರೂ ಕರೆದರೆ, ಕರೆಸಿಕೊಂಡವರಿಗೆ ಒಂದು ಕ್ಷಣ ದಿಗ್ಭ್ರಮೆ ಆಗುವುದೇನೋ ನಿಜ; ಗಾಬರಿಯೂ ಆಗಬಹುದು ಈಗಿನ ಚಿನ್ನದ ರೇಟಿನಲ್ಲಿ.

ಅಂದು ಒಂದು ಪುಟ್ಟ ಹೆಣ್ಣುಮಗುವಿನ ಬ್ರೇಸ್ಲೆಟ್ಟನ್ನು ತಾಯಿ ಅಡ ಇಡಲು ಬಂದಾಗ ‘ಅಮ್ಮ ಇದನ್ನ ಬ್ಯಾಂಕಲ್ಲೇ ಬಿಟ್ಟುಬಿಡ್ತೀಯಾ’ ಎಂದು ಆ ಮಗು ಕೇಳಿತು. ತಾಯಿ ‘ಹೌದು, ಆದಷ್ಟು ಬೇಗ ವಾಪಸ್ ತಗೊಳ್ಳೋಣ’ ಅಂದಾಗ ಮಗು ‘ಇದು ಡ್ಯಾಡಿ ನನಗೆ ಬರ್ತ್‌ಡೇಗೆ ಕೊಟ್ಟಿದ್ದು’ ಎಂದು ಹನಿಗಣ್ಣಾಯಿತು. ಮಗುವಿನ ದುಃಖ ನೋಡಿ ತಾಯಿ ತನ್ನ ಕೈಲಿದ್ದ ಬಳೆಯನ್ನೇ ಅಡವಿಡಲು ಕೊಟ್ಟು, ಆ ಬ್ರೇಸ್ಲೆಟ್ ಅನ್ನು ಮಗುವಿನ ಕೈಗೆ ಹಾಕಿಬಿಟ್ಟರು.

ಚಿನ್ನದ ಮೇಲೆ ಇಂತಹ ಮೋಹವನ್ನು ಇಟ್ಟುಕೊಂಡಿರುವ ಹೆಣ್ಣುಮಕ್ಕಳ ನಡುವೆ ನಮ್ಮ ಮೈಸೂರಿನ ಆಗಿನ ಮಹಾರಾಜರ ಪತ್ನಿ ತುಂಬಾ ಗ್ರೇಟ್ ಎನಿಸುತ್ತದೆ. ಕನ್ನಂಬಾಡಿ ಕಟ್ಟೆ ಕಟ್ಟಿಸುವ ಸಲುವಾಗಿ ತಮ್ಮ ಮೈ ಮೇಲಿದ್ದ ಆಭರಣಗಳನ್ನು ಅಡ ಇಟ್ಟಿದ್ದನ್ನು ಈ ನಾಡಿನ ಜನ ಎಂದೂ ಮರೆಯಲಾರರು.

ಚಿನ್ನದಂತಹ ಹುಡುಗ ಕಣ್ರೀ ಅವನು ಅಂತಾನೋ ಬಂಗಾರದಂತಹ ಹುಡುಗಿ ಅಂತಾನೋ ಹೊಗಳುವುದು ಸರ್ವೇಸಾಮಾನ್ಯ. ‘ನಮ್ ಹುಡುಗಿ/ಹುಡುಗ ಅಪರಂಜಿ ಕಣ್ರೀ’ ಅಂತ ಹೆಮ್ಮೆಯಿಂದ ಕಾಲರ್ ಎತ್ತಿಕೊಳ್ಳುವವರನ್ನೂ ನೋಡಿರುತ್ತೇವೆ. ಆದರೆ, ಆಭರಣ ಚಿನ್ನಕ್ಕೂ ಅಪರಂಜಿ ಚಿನ್ನಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಿದಾಗ, ಈ ಹೊಗಳಿಕೆ ಎಷ್ಟು ಸೂಕ್ತ ಎಂದು ನನಗೆ ಆಗಾಗ ಯೋಚನೆಗಿಟ್ಟುಕೊಳ್ಳುತ್ತದೆ ಅಂದರೆ ನೀವು ನಗಬಾರದು.

> ಹೂಡಿಕೆಗಾಗಿ ‘ಪೇಪರ್ ಗೋಲ್ಡ್’ ಇದ್ದರೂ ಸ್ವರ್ಣಾಭರಣ ಕೊಡುವ ಆನಂದವನ್ನು ಅದು ಕೊಡುತ್ತದೆಯೇ ಎಂಬುದು ಹೆಂಗಳೆಯರ ಪ್ರಶ್ನೆ.

ನಾವು ಬ್ಯಾಂಕರುಗಳು ಚಿನ್ನದ ಸಾಲ ಕೊಡುವಾಗ, ಆ ಆಭರಣವನ್ನು ಒರೆಗಲ್ಲಿನಲ್ಲಿ ತಿಕ್ಕಿ, ಕಲ್ಲಿನ ಮೇಲೆ ಆ್ಯಸಿಡ್ ಬೆರೆತ ಉಪ್ಪು ನೀರನ್ನು ಹಾಕಿ, ಆ ಗೆರೆ ಮಾಸಿ ಹೋಗುತ್ತದೆಯೋ ಇಲ್ಲವೋ ಎಂದು ಪರೀಕ್ಷೆ ಮಾಡಿ ನಂತರ ಸಾಲ ಕೊಡುತ್ತೇವೆ. ಆದರೆ ಅಪರಂಜಿ ಚಿನ್ನವನ್ನು ಒರೆಗೆ ಹಚ್ಚುವುದು ಹೇಗೆ? ಅದು ತೀರಾ ಮೆದುವಾಗಿರುತ್ತದೆ. ಅಪರಂಜಿಯಿಂದ ಆಭರಣ ಮಾಡುವುದು ಸುಲಭವೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ತಾಳಿಕೆಯ ವಿಷಯಕ್ಕೆ ಬಂದರೆ ಮಾತ್ರ ಅಪರಂಜಿ ಚಿನ್ನ ಬಹಳ ಕಾಲ ಬಾಳಿಕೆ ಬರುವುದಿಲ್ಲ. ಅದಕ್ಕೆ ಅಲ್ಪಸ್ವಲ್ಪ ತಾಮ್ರ ಬೆರೆಸಿದರೆ ಮಾತ್ರ ಅದು ಗಟ್ಟಿಯಾಗಿರುತ್ತದೆ ಹಾಗೂ ನಾವು ಹೇಳಿದ ರೂಪ ಪಡೆದುಕೊಳ್ಳುತ್ತದೆ. ಅಪರಂಜಿ ಚಿನ್ನದಲ್ಲಿ ಮಾಡಿಸಿದ ಆಭರಣವನ್ನು ಜೋರಾಗಿ ಅಮುಕಿದರೆ ಸಾಕು, ಅದು ತನ್ನ ರೂಪವನ್ನೇ ಬದಲಿಸಿಕೊಂಡು ಬಿಡುವಷ್ಟು ಮೆದು. ಅಷ್ಟೊಂದು ಮೆದುವಾದರೆ ಕೆಲಸಕ್ಕೆ ಬಾರದು. ಆದರೆ ಬೆಲೆ ಇದೆ ಅನ್ನುವುದೇನೋ ನಿಜ.

ಇದನ್ನು ನಾವು ಮನುಷ್ಯ ಜೀವನಕ್ಕೂ ಅಳವಡಿಸಿಕೊಂಡು ನೋಡಬಹುದು. ಮನುಷ್ಯ ಅಪರಂಜಿಯಷ್ಟು ಮೆದುವಾಗಿಬಿಟ್ಟರೆ ಎಲ್ಲರಿಂದ ಶೋಷಣೆಗೆ ಒಳಗಾಗಿಬಿಡುತ್ತಾನೆ. ಸಮಯ, ಸಂದರ್ಭಕ್ಕೆ ತಕ್ಕಂತೆ ಆತ ತುಸು ಗಡುಸು ಕೂಡ ಆಗಬೇಕು; ತಾಮ್ರ ಬೆರೆಸಿದ ಚಿನ್ನದ ಹಾಗೆ. ಹಾವು ಕಚ್ಚದಿದ್ದರೂ ಬುಸುಗುಡಬೇಕು. ಆಗಲೇ ಇತರರಿಗೆ ಸ್ವಲ್ಪವಾದರೂ ಭಯವಿರುತ್ತದೆ. ಇಲ್ಲದಿದ್ದರೆ ಹಾವನ್ನು ಕಂಡೊಡನೆ ಕೊಂದೇ ಬಿಡುತ್ತಾರೆ. ಅದೇ ಆಭರಣ ಚಿನ್ನಕ್ಕೂ ಅಪರಂಜಿ ಚಿನ್ನಕ್ಕೂ ಇರುವ ವ್ಯತ್ಯಾಸ.

ಹಿಂದೆಲ್ಲ ಕವಿ ಸಾರ್ವಭೌಮರಿಗೆ, ನರ್ತಕರಿಗೆ, ಹಾಡುಗಾರರಿಗೆ ರಾಜ ಮಹಾರಾಜರು ಮನಸ್ಸಿಗೆ ಮುದ ಬಂದಂತೆಲ್ಲ ಕೈ ಎತ್ತಿ ಚಿನ್ನ, ವಜ್ರದ ಆಭರಣಗಳನ್ನು ಉಡುಗೊರೆಯಾಗಿ ಕೊಡುತ್ತಿದ್ದರಂತೆ. ದಾಸಿಯರು ಒಳ್ಳೆಯ ಸುದ್ದಿಯನ್ನು ತಂದರೆ, ಕತ್ತಿನಲ್ಲಿದ್ದ ಚಿನ್ನದ ಸರವನ್ನೋ ಬಳೆಯನ್ನೋ ಎತ್ತಿ ಇನಾಮು ಕೊಟ್ಟುಬಿಡುತ್ತಿದ್ದರಂತೆ. ಈಗ ಅದೆಲ್ಲಾ ಕಥೆಯಲ್ಲಿನ ಓದು, ಸಿನಿಮಾದಲ್ಲಿಯ ಚಿತ್ರಣವಷ್ಟೇ. ಈಗೇನಾದರೂ ಹಾಗೆ ಎತ್ತಿ ಎತ್ತಿ ಕೊಡುವವರಿದ್ದರೆ, ಅಂತಹವರನ್ನು ಕೊಂದು ದೋಚಿಯೇ ಬಿಡುತ್ತಿದ್ದರೋ ಏನೊ; ಚಿನ್ನದ ಕೋಳಿಯು ಮೊಟ್ಟೆ ಇಟ್ಟ ಕಥೆಯ ಹಾಗೆ. ಮನುಷ್ಯನ ದುರಾಸೆ ಹಾಗೂ ಸ್ವಾರ್ಥ ಆ ಮಟ್ಟಕ್ಕೆ ಮೇರೆ ಮೀರಿದೆ.

ಹಿಂದೆಲ್ಲಾ ಚಿನ್ನ ಆಡಂಬರವಲ್ಲ, ಅದು ಸಂಸ್ಕೃತಿ, ಉಡುಗೆ–ತೊಡುಗೆಯ ಒಂದು ಭಾಗ ಎನಿಸಿತ್ತು. ಈಗ ಅದು ವೈಭವ, ದೊಡ್ಡಸ್ತಿಕೆ ಹಾಗೂ ಪ್ರದರ್ಶನದ ಭಾಗವಾಗಿದೆ.

ಚಿನ್ನ ಕೊಳ್ಳುವವರು ಮತ್ತು ಚಿನ್ನದ ಮೇಲೆ ಸಾಲ ತೆಗೆದುಕೊಳ್ಳುವವರ ಸಂಖ್ಯೆ ಇತ್ತೀಚೆಗೆ ಗಣನೀಯವಾಗಿ ಏರಿದೆ. ಇದಕ್ಕೆ ಕಾರಣ, ನಾಳೆ ಚಿನ್ನದ ಬೆಲೆ ಮತ್ತಷ್ಟು ಏರಿಕೆಯಾದರೆ ಎಂಬ ಹೆದರಿಕೆ. ಅದಕ್ಕೆ ಇಂದೇ ಕೊಂಡುಬಿಡೋಣ ಎನ್ನುವ ದೂರಾಲೋಚನೆ. ಕೊಳ್ಳಬೇಕೇನೋ ಸರಿ. ಆದರೆ ಕೈಯಲ್ಲಿ ಯಾವಾಗಲೂ ಹಣವಿರುತ್ತದೆ ಎಂದೇನಿಲ್ಲವಲ್ಲ. ಹಾಗಾಗಿ, ಹಳೆಯ ಚಿನ್ನವನ್ನು ಅಡ ಇಟ್ಟು, ಬರುವ ಹಣದಿಂದ ಮತ್ತೆ ಚಿನ್ನವನ್ನು ಕೊಳ್ಳುವವರೂ ಇದ್ದಾರೆ. ನಾಲ್ಕಾರು ವರ್ಷಗಳ ಹಿಂದೆ ಚಿನ್ನ ಕೊಂಡವರ ಮುಖವಂತೂ ಈಗ ಅದಕ್ಕಿರುವ ರೇಟು ಕೇಳಿ ಕೆಂದಾವರೆಯ ಹಾಗೆ ಅರಳಿಬಿಟ್ಟಿರುತ್ತದೆ.

ಚಿನ್ನ, ಬೆಳ್ಳಿ, ತಾಮ್ರ ಇವೆಲ್ಲ ಧನಾತ್ಮಕ ಲೋಹಗಳು. ಇವುಗಳ ಆಭರಣವನ್ನು ಮೈಮೇಲೆ ಧರಿಸಿದರೆ, ಅದರ ನೀರು ಮೈಮೇಲೆ ಬಿದ್ದರೆ ಅಥವಾ ಹೊಟ್ಟೆಗೆ ಸೇರಿದರೆ ಆರೋಗ್ಯಕ್ಕೆ ಒಳ್ಳೆಯದು ಎಂಬ ನಂಬಿಕೆಯೂ ಇದೆ.

ನಮ್ಮ ದೇಶದ ಮನೆಮನೆಗಳಲ್ಲಿ ಸರಿಸುಮಾರು ಇಪ್ಪತ್ತೈದು ಸಾವಿರ ಟನ್‌ಗಳಷ್ಟು ಚಿನ್ನ ಇದೆಯಂತೆ. ಇದು ಇಡೀ ಪ್ರಪಂಚದಲ್ಲೇ ಅತಿ ದೊಡ್ಡ ಖಾಸಗಿ ಸಂಗ್ರಹ ಎಂದು ಹೇಳಲಾಗುತ್ತದೆ.

ಇವೆಲ್ಲಾ ಒಂದು ಕಡೆ ಇರಲಿ, ಒಂದು ವರ್ಷ ಚಿನ್ನವನ್ನು ಕೊಳ್ಳಬೇಡಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಈಗ ಕರೆ ಕೊಟ್ಟಿರುವುದು, ನಮ್ಮ ಹೆಣ್ಣುಮಕ್ಕಳ ಚಿನ್ನದ ಪ್ರೇಮ, ಅದಕ್ಕಾಗಿ ದೇಶವು ಆಮದು ಮಾಡಿಕೊಳ್ಳುವ ಕ್ರಮ ಮತ್ತು ದೇಶದ ಆರ್ಥಿಕತೆಯ ಒಟ್ಟಾರೆ ಚಿತ್ರಣವನ್ನು ಕಟ್ಟಿಕೊಡುತ್ತದೆ.

ಅದು ಲೋಹದ ಚಿನ್ನವೋ ಕರೆಯ ಚಿನ್ನವೋ ಒಟ್ಟಿನಲ್ಲಿ ‘ಚಿನ್ನ’ ಎಂದರೆ ಮುಗಿಯಿತು, ಹೆಣ್ಣುಮಕ್ಕಳ ಹೃದಯ ಹಿಗ್ಗುವುದಂತೂ ನಿಜ.

ಅಬ್ಬಾ, ಆಪಾಟಿ ಭಾರ!

ನಮ್ಮ ಹೆಣ್ಣುಮಕ್ಕಳಿಗೆ ಚಿನ್ನದ ಮೇಲೆ ಇರುವ ಮೋಹ ಈಗಿನದಲ್ಲ. ಸಹಸ್ರಾರು ವರ್ಷಗಳಿಂದಲೂ ಅಂತಹದ್ದೊಂದು ನಂಟಿದೆ ಎನ್ನುವುದು ಉತ್ಪ್ರೇಕ್ಷೆ ಏನಲ್ಲ. ರಾಣಿ–ಮಹಾರಾಣಿಯರಂತೂ ತಲೆಯಿಂದ ಕಾಲ ಬುಡದ ತನಕ ಬೇಕಾದಷ್ಟು ಚಿನ್ನ, ಮುತ್ತು, ಹವಳ, ವಜ್ರವೈಢೂರ್ಯದ ಆಭರಣಗಳನ್ನು ಧರಿಸುತ್ತಿದ್ದರಂತೆ. ಅದು ಹೇಗೆ ಆ ಮಣಭಾರವನ್ನು ಸಹಿಸುತ್ತಿದ್ದರೋ ಕಾಣೆ!



ಕಾನ್‌ನಲ್ಲಿ ದಿಶಾ ಚಮಕ್

‘ಮತ್ತೊಮ್ಮೆ ನನ್ನದೇ ಕ್ಷಣ, 80 ವರ್ಷ ಹಳೆಯದಾದ, ಬಹು ಸಾಂಪ್ರದಾಯಿಕ ಎನಿಸುವ ಎರಡು ‘ವಿಂಟೇಜ್’ ಸೀರೆಗಳನ್ನು ಹೊಸ ವಿನ್ಯಾಸಕ್ಕೆ ಒಗ್ಗಿಸಿ ಧರಿಸಿದ್ದೇನೆ. ಅಪೂರ್ವ ಎನಿಸುವ ಇಂಥ ಸೀರೆಗಳನ್ನು ಜರಿ ಪಡೆಯುವ ಸಲುವಾಗಿ ಹಾಳುಗೆಡಹುವ ಬದಲು, ದೊಡ್ಡ ಪರಂಪರೆಯನ್ನು ಹೊಂದಿರುವ ಈ ವಸ್ತ್ರಗಳನ್ನು ಹೊಸ ರೂಪದಲ್ಲಿ ಉಳಿಸಿ ಗೌರವಿಸುವ ಕೆಲಸವಿದು. ಪ್ರತಿ ನೂಲಿನ ಹಿಂದೆ ನೆನಪಿದೆ, ಕುಸುರಿ ಕಲೆಯ ಇತಿಹಾಸವಿದೆ. ಅವುಗಳನ್ನು ಮತ್ತೊಮ್ಮೆ ಸೌಂದರ್ಯದ ನವಿರೆಳೆಯಲ್ಲಿ ನೇಯಲಾಗಿದೆ’–

ಹೀಗೊಂದು ಒಕ್ಕಣೆಯನ್ನು ಬರೆದುಕೊಂಡು, ಕನ್ನಡದ ಕಿರುತೆರೆ ನಟಿ ದಿಶಾ ಮದನ್ ತಮ್ಮ ಚಂದದ ಫೋಟೊವೊಂದನ್ನು ಇನ್‌ಸ್ಟಾಗ್ರಾಂನಲ್ಲಿ ಹರಿಯಬಿಟ್ಟಿದ್ದರು. ಬಹುವರ್ಣದ ಗೌನ್ ತೊಟ್ಟು, ಪ್ಯಾರಿಸ್‌ನಲ್ಲಿ ನಡೆದ ಪ್ರತಿಷ್ಠಿತ ‘ಕಾನ್ ಚಿತ್ರೋತ್ಸವ’ದ ಕೆಂಪುಹಾಸಿನ ಮೇಲೆ ಮಿಂಚಿದ ಚಿತ್ರವಾಗಿತ್ತು ಅದು.

ಫ್ಯಾಷನ್ ಎಂಬುದಕ್ಕೆ ನಿರ್ದಿಷ್ಟ ಚೌಕಟ್ಟುಗಳಿಲ್ಲ. ಉಡುಗೆ–ವಿನ್ಯಾಸದಲ್ಲಿನ ಅತೀವ ಪ್ರೀತಿಗೆ ಆತ್ಮವಿಶ್ವಾಸದ ನಿಲುವನ್ನು ಬೆರೆಸಿ ನಿಂತರೆ ಅದುವೇ ಫ್ಯಾಷನ್ನಿನ ಹೊಸ ಸ್ಟೇಟ್‌ಮೆಂಟ್ ಎಂಬುದನ್ನು ದಿಶಾ ತಮ್ಮ ವಿಶಿಷ್ಟ ವಿನ್ಯಾಸದ ಉಡುಗೆಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಅಲ್ಲದೆ, ಕಾನ್‌ನಂಥ ಪ್ರತಿಷ್ಠಿತ ಚಿತ್ರೋತ್ಸವದಲ್ಲಿ ನಟಿಯರ ಫ್ಯಾಷನ್ ಸ್ಟೇಟ್‌ಮೆಂಟ್ ಏನಿರಬಹುದು ಎಂಬ ಕುತೂಹಲಕ್ಕೆ ಅವರು ತೋರಿಸಿದ್ದು, ಅಪ್ಪಟ ದೇಸಿತನದ, ‘ಕನ್ನಡ ನೆಲ’ದ ಸಾಂಪ್ರದಾಯಿಕ ದಿರಿಸನ್ನು. ಇದನ್ನೇ ಹೊಸಕಾಲಕ್ಕೆ ಒಗ್ಗಿಸಿ ತೊಟ್ಟು, ಕನ್ನಡತಿಯೊಬ್ಬಳು ಸಂಭ್ರಮಪಟ್ಟಿದ್ದನ್ನು ಕ್ಯಾಮೆರಾ ಕಣ್ಣುಗಳು ಚಕಚಕನೆ ಸೆರೆಹಿಡಿದವು. ಹಣೆಯಲ್ಲಿ ಕೆಂಪು ಬೊಟ್ಟು, ಹೊಳೆಯುವ ಮೂಗುತಿ, ನಾಲ್ಕು ಹೆಣೆಯ ಜಡೆ, ಅದರ ತುಂಬಾ ಹೊಳೆಯುವ ಹರಳಿನ ಬಿಲ್ಲೆಗಳು, ಗೌನ್‌ಗೆ ಒಪ್ಪುವ ಕಿವಿಯೋಲೆ, ಉಗುರುಗಳ ಅಂದ ಹೆಚ್ಚಿಸುವ ಆಭರಣ... ಹೀಗೆ ಎಲ್ಲವನ್ನೂ ತೊಟ್ಟು ಲಕಲಕ ಮಿಂಚಿದರು ದಿಶಾ.



ಕರ್ನಾಟಕದ ದೇಸಿ ಪರಂಪರೆಯನ್ನು ಜಾಗತಿಕವಾಗಿ ಪರಿಚಯಿಸಲು ಇದೊಂದೇ ಅಲ್ಲ, ಬಂಜಾರ ಸಮುದಾಯದ ವಿಶಿಷ್ಟ ಕುಸುರಿ ಕಲೆ ಇರುವ ಕಪ್ಪು ಬಣ್ಣದ ಟಾಪ್ ಮತ್ತು ಸ್ಕರ್ಟ್ ಅನ್ನೂ ತೊಟ್ಟು ಸಂಭ್ರಮಿಸಿದರು.

‘ಬಂಜಾರ ಕಸೂತಿಯ ಈ ವಿನ್ಯಾಸ ರೂಪಿಸಲು ಆರು ತಿಂಗಳು ಸಂಶೋಧನೆ ಮಾಡಲಾಯಿತು. ಬಂಜಾರ ಸಮುದಾಯದ ಐವರು ಮಹಿಳೆಯರನ್ನು ಒಳಗೊಂಡ ತಂಡವು ಸುಮಾರು 2,500 ಗಂಟೆ ಕಸೂತಿಯನ್ನು ಮಾಡಿ ಮುಗಿಸಿದೆ. 80 ಗಂಟೆಗಳ ಅವಧಿಯಲ್ಲಿ ಈ ವಸ್ತ್ರದ ಕಟಿಂಗ್ ಮತ್ತು ಹೊಲಿಯುವ ಪ್ರಕ್ರಿಯೆ ನಡೆದಿದೆ’ ಎಂದು ಅವರು ಹೇಳಿದ್ದಾರೆ. ಶ್ಯಾಮಲ ವರ್ಣದ ಶುದ್ಧ ರೇಷ್ಮೆಯ 15 ಮೀಟರ್ ಬಟ್ಟೆಯ ಮೇಲೆ ಬಂಜಾರ ಸಮುದಾಯದ ಉಡುಗೆಯಲ್ಲಿ ಸಾಮಾನ್ಯವಾಗಿ ಇರುವ ಕನ್ನಡಿ ಹಾಗೂ ಕಸೂತಿಯನ್ನು ಸೇರಿಸಿ ನೇಯಲಾಗಿದೆ. ಹೈನೆಕ್ ಟಾಪ್‌ಗೆ ಸೇರಿಸಿ ಹೊಲಿದಿರುವ ಸ್ಕರ್ಟ್‌ಗೆ ಗೆಜ್ಜೆಗಳಿರುವ ಸೊಂಟದಪಟ್ಟಿಯೂ ಇದೆ. ಇದಕ್ಕೆ ಒಪ್ಪುವಂಥ ಉತ್ತರ ಕರ್ನಾಟಕ ಶೈಲಿಯ ಆಭರಣ ತೊಟ್ಟು ದಿಶಾ ಕ್ಯಾಮೆರಾಗೆ ಪೋಸ್ ನೀಡಿದ್ದರು. ಈ ಎರಡೂ ಉಡುಪುಗಳನ್ನು ವಸ್ತ್ರವಿನ್ಯಾಸಗಾರ್ತಿ ನಿಹಾರಿಕಾ ವಿವೇಕ್ ವಿನ್ಯಾಸಗೊಳಿಸಿರುವುದಾಗಿ ಅವರು ಮಾಹಿತಿ ನೀಡಿದ್ದಾರೆ.

ಕಳೆದ ಬಾರಿಯ ಕಾನ್‌ನಲ್ಲಿಯೂ ದಿಶಾ ಚೆಟ್ಟಿನಾಡಿನ ಕುಶಲಕರ್ಮಿಗಳು ನೇಯ್ದ ಹವಳದ ಬಣ್ಣದ ಶುದ್ಧ ಕಾಂಜೀವರಂ ಸೀರೆಯನ್ನು ಧರಿಸಿ ಎಲ್ಲರ ಗಮನ ಸೆಳೆದಿದ್ದರು. ಈ ಬಾರಿ ಅವರು ತೊಟ್ಟ ವಸ್ತ್ರಗಳಂತೂ ಎಷ್ಟು ಸೊಗಸಾಗಿ ಇದ್ದವೆಂದರೆ, ‘ಹಳೆಯ ಬಟ್ಟೆಗಳನ್ನು ಹೀಗೂ ಮರುವಿನ್ಯಾಸಗೊಳಿಸಬಹುದೇ’ ಎಂಬ ಪ್ರಶ್ನೆಯನ್ನು ಮೂಡಿಸಿದವು.

ಅವಳಿಲ್ಲದ ನಾನು...

• ಎಲ್.ಚಿನ್ನಪ್ಪ

ಭಾವಯಾನ


ಅಂದು ಸಂಜೆ ಅವಳನ್ನು ಪರೀಕ್ಷಿಸಿದ ವೈದ್ಯರು, ಶೀಘ್ರದಲ್ಲೇ ಸಾವು ಖಚಿತ ಎಂಬ ಸ್ಪಷ್ಟ ಸೂಚನೆ ಕೊಟ್ಟರು. ಆಗ, ಅವಳಿಗೆ ನೀಡಿದ್ದ ಆಕ್ಸಿಜನ್ ಸಂಪರ್ಕವನ್ನು ನರ್ಸ್‌ಗಳು ತೆಗೆದುಹಾಕಿದರು. ಉಸಿರಾಡಲು ತುಂಬಾ ಕಷ್ಟಪಡುತ್ತಿದ್ದಳು. ನಾನು ಅವಳ ಪಕ್ಕದಲ್ಲೇ ಕುಳಿತುಕೊಂಡು, ಅವಳು ಪಡುತ್ತಿದ್ದ ಸಂಕಟವನ್ನು ಅಸಹಾಯಕನಾಗಿ ನೋಡುತ್ತಿದ್ದೆ.

ಒಮ್ಮೆ ಅವಳು ಕಣ್ಣು ತೆರೆದು ನನ್ನತ್ತ ನೋಡಿ, ಮೆಲುದನಿಯಲ್ಲಿ ‘ನನ್ನನ್ನು ಬಿಟ್ಟು ಎಲ್ಲಿ ಹೋಗಿದ್ರಿ?’ ಎಂದಳು. ನಾನು ಉತ್ತರಿಸುವಷ್ಟರಲ್ಲಿ ಪುನಃ ಮಂಪರಿಗೆ ಜಾರಿದಳು. ಸ್ವಲ್ಪ ಸಮಯದ ಬಳಿಕ ಮತ್ತೊಮ್ಮೆ ಕಣ್ಣುಗಳನ್ನು ತೆರೆದು ಇನ್ನೂ ಹತ್ತಿರಕ್ಕೆ ಬರುವಂತೆ ಸಂಜ್ಞೆ ಮಾಡಿದಳು. ಅವಳು ಏನು ಹೇಳುತ್ತಾಳೋ ಎಂದು ಬಾಗಿ ಅವಳ ಮುಖದ ಹತ್ತಿರಕ್ಕೆ ಬಂದೆ. ಅವಳು ಅಂತರಂಗದಿಂದ ಏನೋ ಹೇಳಲು ಪ್ರಯತ್ನಿಸುತ್ತಿದ್ದಳು. ಆದರೆ ಮಾತುಗಳು ಮಾತ್ರ ಹೊರಗೆ ಬಾರದೆ ಅವಳ ಗಂಟಲಲ್ಲೇ ಉಳಿದವು.

ನಡುರಾತ್ರಿ ಸರಿದು ನಸುಕಿಗೆ ಜಾರುವ ಹೊತ್ತು. ಸಕಲ ಜೀವಜಂತುಗಳೂ ನಿರಾಳವಾಗಿ ನಿದ್ರಿಸುತ್ತಿರುವ ಸಮಯ. ಅವಳ ಪಕ್ಕದಲ್ಲೇ ಕುಳಿತಿದ್ದ ನನಗೆ ತೂಕಡಿಕೆಯಾಗಲಿ, ನಿದ್ರೆಯಾಗಲಿ ಸುಳಿಯಲಿಲ್ಲ. ಅವಳ ಅವಸಾನದ ದಯನೀಯ ಸ್ಥಿತಿಯನ್ನು ಕಂಡು ಕಣ್ಣೀರಾಗಿ ಅವಳನ್ನು ತಬ್ಬಿಕೊಂಡೆ. ಹಾಗೆಯೇ ಅವಳ ಕಾಲುಗಳನ್ನು ತಡವಿದೆ. ಅವು ಮಂಜುಗಡ್ಡೆಯಂತೆ ಮರಗಟ್ಟಿಹೋಗಿದ್ದವು. ಅವಳು ನಡೆದಾಡಿ, ಹೊಟ್ಟೆಗೆ ಸರಿಯಾಗಿ ಒಂದಿಷ್ಟು ತಿಂದು ಅದೆಷ್ಟು ದಿನಗಳಾಗಿದ್ದವೋ? ಆಹಾರವಿಲ್ಲದ ಅವಳ ದೇಹವು ಸೊರಗಿಹೋಗಿತ್ತು.

ಜೀವನ್ಮರಣದ ನಡುವೆ ಹೋರಾಡುತ್ತಿದ್ದವಳಿಗೆ ಸಾವಿನಲ್ಲಾದರೂ ಸದ್ಗತಿ ಸಿಗಲಿ ಎಂದು ನನ್ನ ಅಂತರಂಗವು ಭಗವಂತನಲ್ಲಿ ಮೊರೆಯಿಡುತ್ತಿತ್ತು. ‘ಹೇ ಭಗವಂತ, ನೀನು ಕೊಟ್ಟ ಜೀವಾತ್ಮವೊಂದು ನಿನ್ನಲ್ಲಿಗೇ ಮರುಳುತ್ತಿದೆ, ಸ್ವೀಕರಿಸು ದೇವಾ’ ಎಂದು ಬೇಡಿಕೊಂಡೆ. 50 ವರ್ಷ ಆ ದೇಹದಲ್ಲಿ ನೆಲೆಗೊಂಡಿದ್ದ ಜೀವವೊಂದು ಅದನ್ನು ಬಿಟ್ಟು ಅಗಲಿತ್ತು. 30 ವರ್ಷ ನನ್ನ ಜೊತೆ ಅನ್ಯೋನ್ಯ ಪತ್ನಿಯಾಗಿ ಬಾಳಿದವಳು ಇನ್ನಿಲ್ಲವಾದಳು.

ಅವಳು ಕಾಯಿಲೆ ಬಿದ್ದ ಪ್ರಾರಂಭದಲ್ಲಿ ನಾನು ಅವಳಿಗೆ ಮುತುವರ್ಜಿಯಿಂದ ಮಾಡಿದ ಉಪಚಾರಕ್ಕೆ ಮನಸೋತು ‘ರೀ, ನೀವು ನನ್ನನ್ನು ಇಷ್ಟೊಂದು ಪ್ರೀತಿಸುತ್ತೀರಲ್ಲ, ಒಂದು ವೇಳೆ ನಾನೇ ಮೊದಲು ಸತ್ತು ಹೋದರೆ, ಆಗ ನೀವೇನು ಮಾಡುತ್ತೀರಿ? ಏನೇ ಹೇಳಿ ಬದುಕಿನಲ್ಲೂ ಸಾವಿನಲ್ಲೂ ನನ್ನ ಪ್ರೀತಿ ನಿಮಗೆ ಶಾಶ್ವತ’ ಎಂದಿದ್ದಳು. ಅವಳ ಮುದ್ದಾದ ಕೆನ್ನೆಗೆ ನನ್ನ ಅಧರ ತಾಗಿಸಿ ಹನಿಗಣ್ಣಾಗಿದ್ದೆ. ಕೆಲವು ಗಂಟೆಗಳ ಹಿಂದೆ ‘ನನ್ನನ್ನು ಬಿಟ್ಟು ಎಲ್ಲಿ ಹೋಗಿದ್ದಿರಿ?’ ಎಂದು ಕೇಳಿದ್ದವಳೇ ನನ್ನನ್ನು ಬಿಟ್ಟು ಹೊರಟುಹೋಗಿದ್ದಳು.



***

ಈಗ ಅವಳು ಸತ್ತು ಎರಡು ದಶಕಗಳೇ ಕಳೆದಿವೆಯಾದರೂ ಅವಳ ನೆನಪು ಮಾತ್ರ ಮಾಸುವುದಿರಲಿ; ಅದೇ ನನ್ನ ಜೊತೆಗಾತಿಯಂತೆ ಆಗಿಬಿಟ್ಟಿದೆ. ಸತ್ತವರ ನೆನಪುಗಳು ಬಾರದಂತೆ ನೆನಪುಗಳ ನಡುವೆ ಭಗವಂತ ಭದ್ರವಾದ ಅಡ್ಡಗೋಡೆಯನ್ನು ನಿರ್ಮಿಸಿ ಬಿಡುತ್ತಾನಂತೆ. ಆದರೆ ನನ್ನ ಪಾಲಿಗೆ ಸಮಯ, ಸಂದರ್ಭಗಳ ಪರಿಗಣನೆಯಿಲ್ಲದೆ ಅವಳ ನೆನಪುಗಳು ಆಗಾಗ ಅಲೆಗಳೋಪಾದಿಯಲ್ಲಿ ತೇಲಿ ಬರುತ್ತಲೇ ಇರುತ್ತವೆ.

ನೈಜ ಪ್ರೀತಿ ಸಿಗುವುದೇ?



ಅಂತರಂಗ

ಅಕ್ಷರ ದಾಮ್ಲೆ, ಮನಃಶಾಸ್ತ್ರಜ್ಞ

• **ನಾನು ಡಿಗ್ರಿ ಅಂತಿಮ ವರ್ಷದಲ್ಲಿ ಇದ್ದೇನೆ. ನನಗೆ ಸಾಲು ಸಾಲು ಬ್ರೇಕ್‌ಅಪ್‌ಗಳು ಆಗಿವೆ. ಬಹುತೇಕ ಸಂಬಂಧಗಳಲ್ಲಿ ನನಗೆ ಮೋಸವೇ ಆಗಿದೆ. ಇದು ನನ್ನ ಆತ್ಮವಿಶ್ವಾಸವನ್ನೇ ಕುಗ್ಗಿಸಿದೆ. ಇದಕ್ಕೆಲ್ಲ ನನ್ನ ಮುಗ್ಧತೆಯೇ ಕಾರಣವಿರಬಹುದೇ? ನನಗೆ ಅಪ್ಪ, ಅಮ್ಮ ಇಲ್ಲ. ಪ್ರೀತಿ ಸಿಗದ ಕಾರಣಕ್ಕೆ ನಾನು ಹೀಗೆಲ್ಲ ಪ್ರೀತಿಯಲ್ಲಿ ಬೀಳುತ್ತಾ ಹೋದೆನೇ? ನಿಜದ ಪ್ರೀತಿಯನ್ನು ಕಂಡುಕೊಳ್ಳುವುದು ಹೇಗೆ?**

ರಮ್ಯಾ, ಹನೇಹಳ್ಳಿ

ನಮ್ಮ ಜೀವನದಲ್ಲಿ ಆಗುವ ಬಹುತೇಕ ಘಟನೆಗಳಿಗೆ ನಾವೇ ಕಾರಣರಾಗಿರುತ್ತೇವೆ. ಆದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ನಮಗೆ ಕಷ್ಟವಾಗುತ್ತದೆ. ಯಾಕೆಂದರೆ, ಇತರರ ಮೇಲೆ ಗೂಬೆ ಕೂರಿಸಿದಷ್ಟು ಸುಲಭವಾಗಿ ನಮ್ಮ ಮೇಲೆ ನಾವು ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಸಾಧ್ಯವಾಗುವುದಿಲ್ಲ. ಯಾವಾಗ ನಾವು ಆತ್ಮಾವಲೋಕನ ಮಾಡಿಕೊಳ್ಳುತ್ತೇವೋ ಆಗ ನಮಗೆ ಇಂತಹ ಸಮಸ್ಯೆಗಳಿಂದ ಹೊರಗೆ ಬರುವುದಕ್ಕೆ ಸಾಧ್ಯವಾಗುತ್ತದೆ.

ನಮ್ಮ ವರ್ತಮಾನದ ಪರಿಸ್ಥಿತಿಯು ನಮ್ಮ ಭೂತಕಾಲದೊಂದಿಗೆ ತಳುಕು ಹಾಕಿಕೊಂಡಿರುತ್ತದೆ. ಬಾಲ್ಯದಲ್ಲಿಯೇ ತಂದೆ-ತಾಯಿಯನ್ನು ಕಳೆದುಕೊಂಡ ನಿಮಗೆ, ಆಗ ಸಿಗಬೇಕಾದ ಪ್ರೀತಿ, ವಾತ್ಸಲ್ಯ, ಮಮತೆ, ಕರುಣೆ, ಬೆಂಬಲ ಇವೆಲ್ಲವೂ ಕಳೆದುಹೋಗಿರುತ್ತವೆ. ಈ ಕಾರಣದಿಂದಾಗಿ ನೀವು ನಿರಂತರವಾಗಿ ಪ್ರೀತಿಯ ಹುಡುಕಾಟದಲ್ಲಿ ಇದ್ದೀರಿ ಮತ್ತು ಯಾರೇ ಒಂದು ಹಿಡಿ ಪ್ರೀತಿ ತೋರಿಸಿದರೂ ಸಾಕು, ನೀವು ಅವರ ಬುಟ್ಟಿಗೆ ಜಾರಿ ಹೋಗುತ್ತೀರಿ. ಆದರೆ, ನಿಮ್ಮ ಬಾಯ್‌ಫ್ರೆಂಡ್‌ಗಳ ಜೊತೆ ಸಂಬಂಧ ಗಾಢವಾದಂತೆ, ನಿಮಗೆ ಅಲ್ಲಿ ಸಿಗುವ ಸಮಾಧಾನ ಮತ್ತು ಸುರಕ್ಷತೆಯ ಭಾವದಿಂದ, ಸಂಗಾತಿಯ ಪ್ರೀತಿಗಿಂತ ಹೆಚ್ಚು ತಂದೆಯ ಪ್ರೀತಿಯನ್ನೂ ನೀವು ಅವರಿಂದ ಬಯಸುತ್ತಿರಬಹುದು. ಅದು ನಿಮ್ಮ ಸಂಗಾತಿಗೆ ಹೊರೆ ಅಂತ ಅನ್ನಿಸಬಹುದು. ಆಗ ಅವರು ನಿಮ್ಮಿಂದ ದೂರವಾದಾಗ ನಿಮಗೆ ಮೋಸ ಹೋದ ಭಾವವೇ ಉಂಟಾಗಬಹುದು. ಒಂದು ರೀತಿಯಲ್ಲಿ ಅದು ಮೋಸವೇ ಇರಬಹುದು ಕೂಡ ಅಥವಾ ಅವರಿಗೆ ಆ ತಂದೆಯ ಪಾತ್ರವನ್ನು ವಹಿಸಲಾಗದಂತಹ ಪರಿಸ್ಥಿತಿಯ ಇಬ್ಬಂದಿತನವೂ ಇರಬಹುದು. ಯಾಕೆಂದರೆ, ಅವರು ನಿಮ್ಮಲ್ಲಿ ಸಂಗಾತಿಯನ್ನು ಬಯಸಿ ಬಂದಿರಬಹುದೇ ವಿನಾ ಮಗಳನ್ನಲ್ಲ.

ಹಾಗಾಗಿ, ಮೊದಲು ನಿಮ್ಮಲ್ಲಿ ಇರುವ ಚೈಲ್ಡ್‌ಹುಡ್ ಟ್ರಾಮಾಗಳನ್ನು ಗುಣಪಡಿಸಿಕೊಳ್ಳಿ. ಅದಕ್ಕೆ, ಇನ್ನರ್ ಚೈಲ್ಡ್ ಹೀಲಿಂಗ್ ಅನ್ನುವ ಥೆರಪಿ ಬಹಳ ಸಹಾಯಕವಾಗಿದೆ. ಆಮೇಲೆ, ನಿಮ್ಮನ್ನು ನೀವು ಪ್ರೀತಿಸುವುದಕ್ಕೆ ಶುರು ಮಾಡಿ. ಯಾವಾಗ ನೀವು ಪ್ರೀತಿಯ ಬರಡುತನವನ್ನು ಹೊಂದಿರುತ್ತೀರೋ ಆಗ, ನಿಮಗೆ ಅದನ್ನು ತುಂಬಿಸಬಲ್ಲ ವ್ಯಕ್ತಿಯನ್ನೇ ಹುಡುಕಿಕೊಳ್ಳುವ ಅನಿವಾರ್ಯ ಇರುತ್ತದೆ. ಆದರೆ ನಿಮ್ಮ ಬರಡುತನಕ್ಕೆ ಎಷ್ಟು ದಿನ ನೀರು ಹಾಕಬಲ್ಲರೋ ಅಷ್ಟು ದಿನ ಅವರು ನಿಮ್ಮ ಜೊತೆಗಿರಬಹುದು. ಆಮೇಲೆ ಅದು ಕೂಡಾ ಭಾರವೆನಿಸಿ ಅವರು ನಿಮ್ಮಿಂದ ದೂರ ಹೋಗಬಹುದು ಅಥವಾ ನಿಮ್ಮ ಜೊತೆಗಿದ್ದರೂ, ನೀವು ಅವರಿಂದ ಏನನ್ನು ಅಪೇಕ್ಷಿಸುತ್ತೀರೋ ಅದು ಸಿಗದೆ ನಿಮ್ಮ ಸಂಬಂಧ ಶುಷ್ಕ ಎನಿಸಬಹುದು.

ಆದರೆ ಯಾವಾಗ ನಿಮ್ಮನ್ನು ನೀವು ಮೊದಲು ಪ್ರೀತಿಸುತ್ತೀರೋ, ಆಗ ಇತರರಿಗೆ ನಿಮ್ಮನ್ನು ಪ್ರೀತಿಸುವುದು ಸುಲಭವಾಗುತ್ತದೆ. ಯಾಕೆಂದರೆ, ಅಲ್ಲಿ ನಿಮ್ಮಲ್ಲಿರುವ ನಿರ್ವಾತವನ್ನು (ವ್ಯಾಕ್ಯೂಮ್) ತುಂಬಿಸುವ ಹೊರೆ ಅವರ ಮೇಲಿರುವುದಿಲ್ಲ. ಮಾತ್ರವಲ್ಲ, ನೀವು ನಿಮ್ಮನ್ನು ಹೆಚ್ಚು ಪ್ರೀತಿಸಿಕೊಂಡಾಗ ಸಂಪದ್ಭರಿತರಾಗುತ್ತೀರಿ. ಆಗ ನೀವು ಆಕರ್ಷಿಸುವಂತಹ ವ್ಯಕ್ತಿಯ ವ್ಯಕ್ತಿತ್ವವೇ ಬೇರೆ ಇರುತ್ತದೆ. ಈ ದೃಷ್ಟಿಯಲ್ಲಿ ನಿಮ್ಮ ಪ್ರಯತ್ನವನ್ನು ಮುಂದುವರಿಸಿ. ನಿಮ್ಮ ಬಾಲ್ಯದ ನೋವಿನ ಹಂದರದಿಂದ ಹೊರಗೆ ಬರಲು ಚಿಕಿತ್ಸೆ ಪಡೆದುಕೊಳ್ಳಿ.

ರುಚಿರುಚಿ ಖುಷಿಖುಷಿ ಬಾಳೆಹಣ್ಣಿನ ಬನ್ಸ್

• ಪದ್ಮಿನಿ ವಿಶ್ವನಾಥ್

ರಸಾಸ್ವಾದ

ದೇಹಕ್ಕೆ ಶಕ್ತಿ ಮತ್ತು ಚೈತನ್ಯ ನೀಡುವ ಬಾಳೆಹಣ್ಣು, ನೈಸರ್ಗಿಕ ಸಕ್ಕರೆ ಹಾಗೂ ಕಾರ್ಬೊಹೈಡ್ರೇಟ್ ಅನ್ನು ಹೊಂದಿದೆ. ಇದರಲ್ಲಿರುವ ವಿಟಮಿನ್ ಸಿ, ಬಿ6 ಮತ್ತು ಸತುವು ದೇಹದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತವೆ. ಮಿದುಳಿನ ಆರೋಗ್ಯಕ್ಕೆ ಮತ್ತು ಒತ್ತಡ ಕಡಿಮೆ ಮಾಡಲು ಸಹಾಯ ಮಾಡುತ್ತವೆ. ಮಲಬದ್ಧತೆ ನಿವಾರಿಸುತ್ತವೆ, ಒಳ್ಳೆಯ ನಿದ್ರೆಗೂ ಸಹಕಾರಿ. ಪೊಟ್ಯಾಷಿಯಂ ಮತ್ತು ವಿಟಮಿನ್ 6ನಿಂದಾಗಿ ಕೆಳಹೊಟ್ಟೆಯ ಸೆಳೆತ ಕಡಿಮೆಯಾಗುತ್ತದೆ. ಹೀಗಾಗಿ, ಋತುಸ್ರಾವದ ನೋವು ನಿವಾರಣೆಗೆ ಬಾಳೆಹಣ್ಣು ಸಹಕಾರಿ.

ಹೀಗೆ, ದೇಹಾರೋಗ್ಯಕ್ಕೆ ಸಹಕಾರಿಯಾದ ಬಾಳೆಹಣ್ಣಿನಲ್ಲಿ ರಸಾಯನ, ಮುಳಕ, ಚಪಾತಿ ಮಾಡುವುದು ಸಾಮಾನ್ಯ. ಮಂಗಳೂರು ಸಿಹಿ ಬನ್ಸ್ ಮಾಡಬಹುದಾದರೂ ಬಹುತೇಕರು ಅದನ್ನು ಹೋಟೆಲ್‌ನಲ್ಲೇ ಹೆಚ್ಚು ಸವಿಯುತ್ತಾರೆ. ಸಿಹಿ ಬನ್ಸ್ ಅಷ್ಟೇ ಅಲ್ಲ ಖಾರ ಬನ್ಸ್ ಅನ್ನೂ ಸುಲಭವಾಗಿ ಮನೆಯಲ್ಲೇ ಮಾಡಿಕೊಳ್ಳಬಹುದು. ಮಕ್ಕಳಿಗೆ, ಮಧುಮೇಹ ಇಲ್ಲದವರಿಗೆ ಸಿಹಿ ಬನ್ಸ್ ಪ್ರಿಯವಾದರೆ, ಮಧುಮೇಹಿಗಳು ಖಾರ ಬನ್ಸ್ ಮಾಡಿಕೊಂಡು ಹಿತಮಿತವಾಗಿ ತಿಂದರೆ ಯಾವ ಸಮಸ್ಯೆಯೂ ಇರದು.

ಸಿಹಿ ಬನ್ಸ್ ಅನ್ನು ಸಾಮಾನ್ಯವಾಗಿ ಪಚ್ಚಬಾಳೆ ಹಣ್ಣಿನಲ್ಲಿ ಮಾತ್ರ ಮಾಡಲಾಗುತ್ತದೆ. ಆದರೆ, ರುಚಿಕರವಾದ ಖಾರ ಬನ್ಸ್ ಅನ್ನು ಯಾವುದೇ ಬಗೆಯ ಬಾಳೆಹಣ್ಣಿನಿಂದಲೂ ಮಾಡಬಹುದು. ಬನ್ನಿ, ಈ ಎರಡೂ ಬಗೆಯ ಬನ್ಸ್‌ಗಳನ್ನು ಹೇಗೆ ಮಾಡುವುದು ಎಂದು ಕಲಿಯೋಣ.



ಬಾಳೆಹಣ್ಣಿನ ಸಿಹಿ ಹಾಗೂ ಖಾರ ಬನ್ಸ್ ಹಿಟ್ಟು



ಖಾರ ಬನ್ಸ್

ಮಾಡುವ ವಿಧಾನ: ಚೆನ್ನಾಗಿ ಹಣ್ಣಾದ ಯಾವುದಾದರೂ ಬಗೆಯ 4 ಬಾಳೆಹಣ್ಣು ಮತ್ತು 6 ಹಸಿಮೆಣಸಿನಕಾಯಿ, 1 ಸ್ಪೂನ್ ಜೀರಿಗೆ, ಸ್ವಲ್ಪ ಅಜ್ವಾನ, ಉಪ್ಪು ಎಲ್ಲವನ್ನೂ ಮಿಕ್ಸಿ ಜಾರಿಗೆ ಹಾಕಿ ನುಣ್ಣಗೆ ರುಬ್ಬಿಕೊಳ್ಳಿ (ಬೇಕಿದ್ದಲ್ಲಿ ಕೊತ್ತಂಬರಿ ಸೊಪ್ಪು ಅಥವಾ ಕರಿಬೇವಿನ ಸೊಪ್ಪನ್ನೂ ಇದಕ್ಕೆ ಹಾಕಬಹುದು ಅಥವಾ ಸಣ್ಣದಾಗಿ ಹೆಚ್ಚಿ ಹಿಟ್ಟಿಗೆ ಹಾಕಬಹುದು).

ರುಬ್ಬಿದ ಮಿಶ್ರಣವನ್ನು ಒಂದು ಪಾತ್ರೆಗೆ ಹಾಕಿ ಅದಕ್ಕೆ 1 ಕಪ್ ಗಟ್ಟಿಯಾದ ಸಿಹಿ ಮೊಸರು, 4 ಕಪ್ ಗೋಧಿಹಿಟ್ಟನ್ನು ಸ್ವಲ್ಪ ಸ್ವಲ್ಪವೇ ಹಾಕುತ್ತ ಚಪಾತಿ ಹಿಟ್ಟಿಗಿಂತ ಮೆತ್ತಗೆ ಕಲಸಬೇಕು. ಹೆಚ್ಚು ಗರಿಗರಿ ಬೇಕಿದ್ದಲ್ಲಿ ಸ್ವಲ್ಪ ಅಕ್ಕಿಹಿಟ್ಟು ಸೇರಿಸಿ. ಬೇಕಾದವರು ಒಂದು ಚಿಟಿಕೆ ಸೋಡ ಬಳಸಬಹುದು. ಇದಕ್ಕೆ ನೀರು ಸೇರಿಸುವ ಅಗತ್ಯ ಇಲ್ಲ. ಅಂಟುತ್ತಿದ್ದರೆ ಸ್ವಲ್ಪ ಎಣ್ಣೆ, ತುಪ್ಪ ಅಥವಾ ಬೆಣ್ಣೆಯನ್ನು ಕೈಗೆ ಸವರಿಕೊಂಡು ಕಲಸಿ. ಈ ಹಿಟ್ಟನ್ನು 20 ನಿಮಿಷ ಮುಚ್ಚಿಡಿ. ನಂತರ ಬಾಣಲೆಗೆ ಎಣ್ಣೆ ಹಾಕಿ ಕಾಯಲು ಇಡಬೇಕು. ಹಿಟ್ಟನ್ನು ಉಂಡೆಗಳನ್ನಾಗಿ ಮಾಡಿ, ಒಂದೊಂದಾಗಿ ಪೂರಿಗಿಂತ ಸ್ವಲ್ಪ ದಪ್ಪಗೆ ಲಟ್ಟಿಸಿ, ಕಾದ ಎಣ್ಣೆಯಲ್ಲಿ ಹಾಕಿ ಮಧ್ಯಮ ಉರಿಯಲ್ಲಿ ಕೆಂಪಗಾಗುವಂತೆ ಕರಿಯಿರಿ. ನಂತರ ಇವುಗಳನ್ನು ಒಂದರ ಮೇಲೊಂದರಂತೆ ಹಾಕಿಡಬೇಡಿ. ಹಾಗೆ ಮಾಡಿದರೆ, ಎಣ್ಣೆಯಲ್ಲಿ ಉಬ್ಬುವ ಇವು ಬೇಗ ಮೆತ್ತಗಾಗಿ ಬಿಡುತ್ತವೆ. ಅದರ ಪರಿಮಳ ಸವಿಯುತ್ತಾ ಕಾಯಿಚಟ್ನಿ ಅಥವಾ ಸಾಸ್ ಜೊತೆ ಬಿಸಿಬಿಸಿಯಾಗಿ ಸವಿಯಿರಿ.

ಸಿಹಿ ಬನ್ಸ್

ಮಾಡುವ ವಿಧಾನ: ನಾಲ್ಕು ಕಳಿತ ಪಚ್ಚಬಾಳೆಹಣ್ಣು, ಒಂದು ದೊಡ್ಡ ಕಪ್ ಮೈದಾ ಅಥವಾ ಗೋಧಿಹಿಟ್ಟು, ಮುಕ್ಕಾಲು ಕಪ್ ಸಕ್ಕರೆ, ಎರಡು ಏಲಕ್ಕಿ (ಬಾಳೆಹಣ್ಣನ್ನು ಹೆಚ್ಚಿ ಸಕ್ಕರೆ ಮತ್ತು ಏಲಕ್ಕಿಯೊಟ್ಟಿಗೆ ನುಣ್ಣಗೆ ಪೇಸ್ಟ್ ಮಾಡಿಕೊಳ್ಳಬೇಕು).

ನಂತರ ಅದನ್ನು ಬಟ್ಟಲಿಗೆ ಹಾಕಿಕೊಂಡು ಚಿಟಿಕೆ ಉಪ್ಪು ಸೇರಿಸಿ, ಹಿಟ್ಟನ್ನು ಸ್ವಲ್ಪ ಸ್ವಲ್ಪವೇ ಸೇರಿಸುತ್ತ ಮೆತ್ತಗೆ ಕಲಸಬೇಕು. ಬೇಕಿದ್ದರೆ ಸ್ವಲ್ಪ ಸಿಹಿ ಮೊಸರು ಬಳಸಬಹುದು. ಬನ್ಸ್ ತುಂಬಾ ಮೃದುವಾಗಿ ಬರಬೇಕೆಂದರೆ, ಮೈದಾ ಬಳಸಿ ರಾತ್ರಿ ಕಲಸಿಟ್ಟು ಬೆಳಿಗ್ಗೆ ಮಾಡಬಹುದು. ಇಲ್ಲವಾದಲ್ಲಿ ಹಿಟ್ಟು ಕಲಸಿ ಎರಡು ಗಂಟೆ ಬಿಟ್ಟು ಉಂಡೆಗಳನ್ನಾಗಿ ಮಾಡಿ, ದಪ್ಪಗೆ ಲಟ್ಟಿಸಿ ಎಣ್ಣೆಯಲ್ಲಿ ಮಧ್ಯಮ ಉರಿಯಲ್ಲಿ ಕೆಂಪಗಾಗುವವರೆಗೆ ಎರಡೂ ಬದಿ ಕರಿದು ತೆಗೆಯಬೇಕು. ಆಗ ಬಿಸಿಬಿಸಿಯಾದ ಮಂಗಳೂರು ಸಿಹಿ ಬನ್ಸ್ ರೆಡಿ. ಕಾಯಿ ಚಟ್ನಿ ಅಥವಾ ಟೊಮ್ಯಾಟೊ ಸಾಸ್‌ನೊಂದಿಗೆ ಕೊಟ್ಟರೆ ಮಕ್ಕಳಷ್ಟೇ ಏನು ದೊಡ್ಡವರೂ ಫುಲ್ ಖುಷ್.



ದುಬಾರೆ ಘಟನೆ: ಲೋಕಾಯುಕ್ತದಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲು

ಮಡಿಕೇರಿ: ದುಬಾರೆಯಲ್ಲಿ ಎರಡು ಸಾಕಾನೆಗಳ ನಡುವಿನ ಕಾದಾಟದ ಮಧ್ಯೆ ಸಿಲುಕಿ ತಮಿಳುನಾಡಿನ ಮಹಿಳೆ ಹಾಗೂ ಸಾಕಾನೆ ಮೃತಪಟ್ಟ ಘಟನೆಗೆ ಸಂಬಂಧಿಸಿ ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

ಸೋಮವಾರಪೇಟೆ ಉಪವಿಭಾಗದ ಎಸಿಫ್ ಎ.ಎ.ಗೋಪಾಲ್ ಹಾಗೂ ಕುಶಾಲನಗರದ ವಲಯ ಅರಣ್ಯಾಧಿಕಾರಿ ರಕ್ಷಿತ್ ಅವರಿಗೆ ಖುದ್ದು ವಿಚಾರಣೆಗೆ ಹಾಜರಾಗಲು ಸೂಚಿಸಿದ್ದಾರೆ. ಜೂನ್ 24ರಂದು ವಿಚಾರಣೆ ನಿಗದಿಪಡಿಸಿದ್ದಾರೆ.

'ಎಲ್ಲ ಲೋಪಗಳನ್ನು ಸರಿಪಡಿಸಲು ಕೈಗೊಂಡ ಕ್ರಮಗಳ ವರದಿಯನ್ನೂ ನೋಟಿಸ್ ತಲುಪಿದ 4 ವಾರಗಳ ಒಳಗೆ ಸಲ್ಲಿಸಬೇಕು' ಎಂದು ಸೂಚಿಸಿದ್ದಾರೆ.

'ಈ ಘಟನೆ ಅಧಿಕಾರಿಗಳ ನಿಷ್ಕ್ರಿಯತೆ ಮತ್ತು ವೈಫಲ್ಯಕ್ಕೆ ಸಾಕ್ಷಿಯಾಗಿದೆ. ಸಾಕಾನೆ ಶಿಬಿರದಲ್ಲಿ ಯಾವುದೇ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಇಲ್ಲದೇ, ಸುರಕ್ಷಿತ ಕ್ರಮ ಅನುಸರಿಸದೇ ಸಾರ್ವಜನಿಕರನ್ನು ಆನೆಗಳ ಹತ್ತಿರ ಹೋಗಲು ಬಿಡಲಾಗುತ್ತಿದೆ. ಹೀಗಾಗಿ, ಆನೆ ದಾಳಿ ನಡೆಸಿದಾಗ ಮಹಿಳೆ ಮೃತಪಟ್ಟಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ನಿಜವೇ ಆಗಿದ್ದರೆ, ಸಂವಿಧಾನದಲ್ಲಿನ ಹಕ್ಕಿನ ಉಲ್ಲಂಘನೆ ಆಗುತ್ತದೆ' ಎಂದು ಅವರು ಹೇಳಿದ್ದಾರೆ.

ಜಾನಪದ ವಿವಿ: 11 ತಿಂಗಳಿಂದ ವೇತನವಿಲ್ಲ

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): 'ತಾಲ್ಲೂಕಿನ ಗೊಟಗೋಡಿ ಜಾನಪದ ವಿಶ್ವ ವಿದ್ಯಾಲಯದಲ್ಲಿ ಕೆಲಸ ಮಾಡುತ್ತಿರುವ ನಮಗೆ 11 ತಿಂಗಳಿನಿಂದ ವೇತನ ಬರುತ್ತಿಲ್ಲ' ಎಂದು ವಿಶ್ವವಿದ್ಯಾಲಯದ ಹೊರ ಗುತ್ತಿಗೆದಾರ ನೌಕರರು ಮತ್ತು ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಹೊರಗುತ್ತಿಗೆ ನೌಕರರಾದ ನಿಂಗವ್ವ ಹರಿಜನ, '15 ವರ್ಷದಿಂದ ಕೆಲಸ ಮಾಡುತ್ತಿದ್ದೇವೆ. 11 ತಿಂಗಳಿನಿಂದ ವೇತನ ಸಿಕ್ಕಿಲ್ಲ. ಹುಬ್ಬಳ್ಳಿಯ ಬಿ.ಕೆ. ಸರ್ವೀಸ್ ಟೆಂಡರ್ ಮೂಲಕ 20 ಜನರು ಕೆಲಸ ಮಾಡುತ್ತಿದ್ದಾರೆ. ವೇತನ ಸಿಗದೇ ಬದುಕು ನಡೆಸುವುದು ಕಷ್ಟಕರವಾಗಿದೆ' ಎಂದರು.

'ವೇತನ ಬಾರದೆ ತೊಂದರೆ ಆಗಿದೆ. ಅಧಿಕಾರಿಗಳು ಸುಳ್ಳು ಭರವಸೆ ನೀಡುತ್ತಾ ಕಾಲಹರಣ ಮಾಡುತ್ತಿದ್ದಾರೆ. ನಮಗೆ ವೇತನ ಕೊಡಿಸಲು ಯಾವುದೇ ಪ್ರಯತ್ನ ಮಾಡುತ್ತಿಲ್ಲ' ಎಂದು ದೂರಿದರು.

ಸಹಾಯಕ ಪ್ರಾಧ್ಯಾಪಕ ಉತ್ತಮ ಮೋದಿ, 'ಒಂದೂವರೆ ವರ್ಷ ದಿಂದ ವೇತನ ನೀಡಿಲ್ಲ. ಪ್ರತಿ ಸಿಂಡಿಕೇಟ್ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯುತ್ತದೆ. ಪರಿಹಾರ ಸಿಕ್ಕಿಲ್ಲ' ಎಂದರು.

'ಅನುದಾನ ಬಂದ ಕೂಡಲೇ ಪಾವತಿ'

'ಜಾನಪದ ವಿಶ್ವವಿದ್ಯಾಲಯ ಅನುದಾನದ ಕೊರತೆ ಅನುಭವಿಸುತ್ತಿದೆ. ಹಿಂದೆ 55 ಹೊರಗುತ್ತಿಗೆ ನೌಕರರಿದ್ದರು. ಈಗ 25 ಜನ ಇದ್ದಾರೆ. ಅವರಿಗೆ ಕಾಯ್ದೆ ಪ್ರಕಾರ ₹ 6 ಸಾವಿರ ಬದಲಾಗಿ ₹ 20 ಸಾವಿರ ವೇತನ ನೀಡಲಾಗುತ್ತಿದೆ' ಎಂದು ಕುಲಪತಿ ಪ್ರೊ. ಟಿ.ಎಂ.ಭಾಸ್ಕರ ತಿಳಿಸಿದರು.

ಪ್ರತಿಭಟನೆ ಕುರಿತು ಅವರು, 'ವಿವಿಯಲ್ಲಿ ಕೇವಲ 350 ವಿದ್ಯಾರ್ಥಿಗಳಿದ್ದಾರೆ. ಹೀಗಾಗಿ, ವಿಶ್ವವಿದ್ಯಾಲಯ ಸಂಪನ್ಮೂಲದ ಕೊರತೆ ಕಾಡುತ್ತಿದೆ. ₹ 2 ಕೋಟಿ ಅನುದಾನ ನೀಡುವಂತೆ ಸರ್ಕಾರಕ್ಕೆ ಕೋರಿದ್ದೇವೆ' ಎಂದರು.

'ಹಲವು ಬಾರಿ ಲಿಖಿತ ದೂರು ನೀಡಿದ್ದೇವೆ. ಪ್ರಯೋಜನವಾಗಿಲ್ಲ. ಸಾಕಾಗಿ ಪ್ರತಿಭಟನೆ ಮಾಡುತ್ತಿದ್ದೇವೆ' ಎಂದರು.

ಸಹಾಯಕ ಪ್ರಾಧ್ಯಾಪಕರಾದ ಎಚ್.ಎಚ್. ನದಾಫ್, ಶಿವಾನಂದ ದೊಡ್ಡಮನಿ, ಸುವರ್ಣ ಜೆ.ಎಸ್., ಸೈಯಿದಾ ಖಾದ್ರಿ, ಆನಂದಪ್ರೊ ಜೋಗಿ, ಪ್ರವೀಣ ಕರೆಪ್ಪನವರ ಮತ್ತು ಹೊರಗುತ್ತಿಗೆದಾರರಾದ ಬಸವರಾಜ ಬಳಿಗಾರ, ರಾಜು ಕುರಗೋಡಿ, ಮಹೇಶ ಯಮೋಜಿಮ, ಮಂಜುಳಾ ಇಂಗಳಗಿ, ರತ್ನವ್ವ ವಾಲಿಕಾರ, ಶಿಲ್ಪ ಹರಿಜನ, ರಾಜೇಶ್ವಿ ಸಿಂಧೆ, ಸುರೇಶ ಲಮಾಣಿ, ಸುರೇಶ ಬಂಡಿವಡ್ಡರ ಇದ್ದರು. ಕುಲಪತಿ ಪ್ರೊ. ಟಿ.ಎಂ. ಭಾಸ್ಕರ್ ಮತ್ತು ಸಿಂಡಿಕೇಟ್ ಸದಸ್ಯರಿಗೆ ಮನವಿ ಸಲ್ಲಿಸಿದರು.



ಶಿಗ್ಗಾವಿ ತಾಲ್ಲೂಕಿನ ಗೊಟಗೋಡಿ ಜಾನಪದ ವಿಶ್ವವಿದ್ಯಾಲಯದ ಹೊರಗುತ್ತಿಗೆ ನೌಕರರು ಹಾಗೂ ಸಹಾಯಕ ಪ್ರಾಧ್ಯಾಪಕರು, ಅಧಿಕಾರಿಗಳ ಮೂಲಕ ಕುಲಪತಿ ಪ್ರೊ. ಟಿ.ಎಂ. ಭಾಸ್ಕರ್ ಅವರಿಗೆ ಮನವಿ ಸಲ್ಲಿಸಿದರು

ಫಣಸೋಲಿ ಶಿಬಿರ ಪ್ರವೇಶ ನಿಷೇಧ


ಜೊಯಿಡಾ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಫಣಸೋಲಿ ಆನೆ ಶಿಬಿರಕ್ಕೆ ಸಾರ್ವಜನಿಕರ ಪ್ರವೇಶವನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ. ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಫಣಸೋಲಿ ವನ್ಯ ಜೀವಿ ವಲಯದ ಈ ಶಿಬಿರದಲ್ಲಿ ಐದು ಆನೆಗಳು ಇವೆ.

'ದುಬಾರೆಯಲ್ಲಿ ಆನೆಗಳ ಕಾಳಗದಲ್ಲಿ ಪ್ರವಾಸಿಗರಿಗೆ ಹಾನಿ ಮತ್ತು ಅಪಾಯವಾದ ಹಿನ್ನೆಲೆಯಲ್ಲಿ ಪ್ರವಾಸಿಗರ ರಕ್ಷಣೆ ಮತ್ತು ಸುರಕ್ಷತೆ ಉದ್ದೇಶದಿಂದ ನೂತನ ಕ್ರಮ ಕೈಗೊಳ್ಳಲಾಗುತ್ತಿದೆ. ರಾಜ್ಯ ಸರ್ಕಾರ ಸೂಚನೆ ನೀಡಿದ ಬಳಿಕ ಆನೆ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗುವುದು' ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎಂ.ಎಸ್.ಕಳ್ಳಿಮಠ ತಿಳಿಸಿದ್ದಾರೆ.

ಗುಂಡು ಹಾರಿಸಿಕೊಂಡು ವೈದ್ಯ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೆಎಲ್‌ಇ ಸಂಸ್ಥೆಯಲ್ಲಿ 40 ವರ್ಷಗಳಿಂದ ವೈದ್ಯರಾಗಿದ್ದ ಡಾ.ದಿನೇಶ್ ಭಟ್ಕಳ ಅವರು, ಇಲ್ಲಿನ ಮಂಡೋಳಿ ರಸ್ತೆಯಲ್ಲಿ ತಮ್ಮ ಮನೆಯಲ್ಲಿ ಶುಕ್ರವಾರ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡರು.



ಡಾ.ದಿನೇಶ್ ಭಟ್ಕಳ

'ಅಂಕೋಲಾದಲ್ಲಿ, ಕೆಎಲ್‌ಇ ಸಂಸ್ಥೆಯ ಆಸ್ಪತ್ರೆಯ ಆಡಳಿತಾಧಿಕಾರಿ ಆಗಿದ್ದರು. ಕೆಲ ದಿನಗಳಿಂದ ಬೆಳಗಾವಿಯ ಮನೆಯಲ್ಲಿ ವಾಸವಿದ್ದರು. ಶ್ವಾಸಕೋಶ ಕ್ಯಾನ್ಸರ್‌ನಿಂದ ಬಳಲು ತ್ತಿದ್ದ ಅವರಿಗೆ ಕೆಎಲ್‌ಇ ಆಸ್ಪತ್ರೆ ವೈದ್ಯರೇ ಚಿಕಿತ್ಸೆ ನೀಡುತ್ತಿದ್ದರು. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ' ಎಂದು ಟಿಳಕವಾಡಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಆತ್ಮಹತ್ಯೆಗೂ ಮುನ್ನ ಕೆಎಲ್‌ಇ ಸಂಸ್ಥೆಯ ಗೌರವ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಅವರ ವಾಟ್ಸ್‌ಆ್ಯಪ್‌ಗೆ ಸಂದೇಶ ಕಳುಹಿಸಿರುವ ಅವರು, 'ನಾನು ತೀವ್ರ ಎದೆ ನೋವಿನಿಂದ ಬಳಲುತ್ತಿರುವ ಕಾರಣ ಕಠಿಣ ನಿರ್ಧಾರ ತೆಗೆದುಕೊಳ್ಳುತ್ತಿದ್ದೇನೆ. ಇದು ನನ್ನ ಸ್ವಂತ ನಿರ್ಧಾರ. ದಯವಿಟ್ಟು ನೀವು ನನ್ನ ಕುಟುಂಬಕ್ಕೆ ನೆರವಾಗಿ. ನಗರ ಪೊಲೀಸ್ ಆಯುಕ್ತರಿಗೂ ಮಾಹಿತಿ ನೀಡಿ' ಎಂದು ಕೋರಿದ್ದಾರೆ.

ವೈದ್ಯನ ಮೇಲೆ ಹಲ್ಲೆ 7 ಯುವಕರ ಬಂಧನ


ಬೀದರ್: ನಗರದ ಬ್ರಿಮ್ಸ್‌ನಲ್ಲಿ ಗುರುವಾರ ರಾತ್ರಿ ಕರ್ತವ್ಯನಿರತ ವೈದ್ಯ ಡಾ.ತುಕಾರಾಮ ಮಚಿಂದರ್ ಅವರ ಮೇಲೆ ಯುವಕರ ಗುಂಪು ತೀವ್ರವಾಗಿ ಹಲ್ಲೆ ನಡೆಸಿದೆ. ಪ್ರಕರಣಕ್ಕೆ ಸಂಬಂಧಿಸಿ ಏಳು ಯುವಕರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಮಹಾರಾಷ್ಟ್ರದ ಲಾತೂರ್ ಜಿಲ್ಲೆ ಅಹಮ್ಮದಪುರದ ಒಬ್ಬ ಹಾಗೂ ಬೀದರ್ ತಾಲ್ಲೂಕಿನ ಆರು ಯುವಕರನ್ನು ಬಂಧಿಸಲಾಗಿದೆ. ಘಟನೆ ಸಂಬಂಧ ನ್ಯೂಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ತಿಳಿಸಿದ್ದಾರೆ.

ಬೈಕ್‌ನಿಂದ ಬಿದ್ದು ಗಾಯಗೊಂಡಿದ್ದ ಸ್ನೇಹಿತನನ್ನು ಬ್ರಿಮ್ಸ್‌ಗೆ ಕರೆತಂದು ಚಿಕಿತ್ಸೆ ಕೊಡಿಸುವ ವೇಳೆ ವೈದ್ಯರಿಗೆ ನಿಂದಿಸಿ ಹಲ್ಲೆ ಮಾಡಿದ್ದರು. ಯುವಕರೆಲ್ಲರೂ ಕುಡಿದ ಮತ್ತಿನಲ್ಲಿದ್ದರು ಎಂದು ಗೊತ್ತಾಗಿದೆ. ಘಟನೆ ಖಂಡಿಸಿ ವೈದ್ಯರು ಬ್ರಿಮ್ಸ್ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು. ಕರ್ತವ್ಯನಿರತ ವೈದ್ಯರಿಗೆ ಸೂಕ್ತ ಭದ್ರತೆ ಒದಗಿಸಬೇಕು ಎಂದು ಒತ್ತಾಯಿಸಿದರು.

ಕುಸಿದುಬಿದ್ದು ಕಾರ್ಮಿಕ ಸಾವು

ನ್ಯಾಮತಿ (ದಾವಣಗೆರೆ ಜಿಲ್ಲೆ): ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿ ತಾಲ್ಲೂಕಿನ ಸುರಹೊನ್ನೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎರೆಹಳ್ಳದ ಹೂಳು ತೆಗೆಯುವ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕ ಶುಕ್ರವಾರ ಬೆಳಿಗ್ಗೆ ಕುಸಿದುಬಿದ್ದು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.



ನರಸಿಂಹಪ್ಪ

ನರಸಿಂಹಪ್ಪ (60) ಮೃತ ಕಾರ್ಮಿಕ. ಉದ್ಯೋಗ ಖಾತ್ರಿ ಯೋಜನೆಯಡಿ ಹಳ್ಳದ ಹೂಳೆತ್ತುವ ಕಾಮಗಾರಿಯಲ್ಲಿ 54 ಜನ ಕೂಲಿಕಾರರು ಬೆಳಿಗ್ಗೆ 7ರಿಂದಲೇ ಕೆಲಸ ಮಾಡುತ್ತಿದ್ದರು. ನರಸಿಂಹಪ್ಪ ದಂಪತಿ ಕೆಲಸ ನಿರ್ವಹಿಸುತ್ತಿದ್ದರು.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ,
ಕಾರ್ಯನಿರ್ವಾಹಕ ಇಂಜಿನೀಯರವರ ಕಚೇರಿ,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.
ದೂರವಾಣಿ : 0836– 2747749(ಕ) Fax No.: 0836-2747749 E-mail: eepwddha@gmail.com

ಕ್ರಸಂ : ಕಾನಿಇಂಧಾ/ಗುತ್ತಿಗೆ/ಪಿ.ಬಿ.1/2026–27/888 ದಿನಾಂಕ: 21–05–2026

ಟೆಂಡರ್ ಪ್ರಕಟಣೆ I.F.T – KW – 3, & 4
ಇ–ಪ್ರೋಕ್ಯೂರಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ ಡಾಕ್ಯುಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ ಡಬ್ಲ್ಯೂ–,3, & 4, ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. **(kppp.karnataka.gov.in)** ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕನಿಷ್ಠ **ರೂ.125.00 ಲಕ್ಷಗಳಿಂದ** ಗರಿಷ್ಠ **ರೂ.495.00 ಲಕ್ಷಗಳ** ವರೆಗೆ, 4059–80–051–0–29–386 ಇಲಾಖಾ ಕಟ್ಟಡಗಳ ನಿರ್ಮಾಣ, 2026–2027ನೇ ಸಾಲಿನ H/A 5054–04–337–0–01–154 – MDR & 2025–26ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ (CMIDP-4059 Building) ಲೆಕ್ಕ ಶೀರ್ಷಿಕೆ ಅಡಿ ಬರುವ ಕಾಮಗಾರಿಗಳಿಗೆ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಈ ಕೆಳಗಿನಂತಿದೆ.

1. Calander of Events:

ಸಾಮಾನ್ಯ 1). **PWD/2026-27/RD/WORK_INDENT35989, 2). PWD/2026-27/RD/WORK_INDENT36097, & 3). PWD/2025-26/BD/WORK_INDENT34409/CALL-2.**

1) ಪ್ರೀ ಬಿಡ್/ಆಕ್ಷೇಪಣೆ–ಸಂದೇಹ **ದಿನಾಂಕ: 10.06.2026 (ಬೆಳಿಗ್ಗೆ 12:30 ಗಂಟೆಯವರೆಗೆ)** 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 11.06.2026 (ಸಾಯಂಕಾಲ 16:00 ಗಂಟೆಯವರೆಗೆ)** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 12.06.2026 (ಸಾಯಂಕಾಲ 16:30 ಗಂಟೆಯ ನಂತರ)** 4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 15.06.2026 (ಸಾಯಂಕಾಲ 16:30 ಗಂಟೆಯ ನಂತರ)**

ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ **http://www.kppp.karnataka.gov.in** ದಲ್ಲಿ ಹಾಗೂ ಲೋಕೋಪಯೋಗಿ ಇಲಾಖೆ ಧಾರವಾಡ ವಿಭಾಗ ಕಚೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಒಂದು ವೇಳೆ ಟೆಂಡರ್ ತೆರೆಯುವ ದಿನಾಂಕದಂದು ರಜಾ ದಿನಗಳು ಬಂದಲ್ಲಿ ಕಚೇರಿಯ ಕೆಲಸದ ದಿನದಂದು ಟೆಂಡರ್ ತೆರೆಯಲಾಗುವುದು.

ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ವಾ.ಸಾ.ಇ./ಧಾರವಾಡ/223/2026–27/ದೇಶಪಾಂಡೆಪಬ್ಲಿಸಿಟಿ

ನಗರಸಭಾ ಕಾರ್ಯಾಲಯ, ಅರಸೀಕೆರೆ.
ದೂ ಸಂ: 08174–232201 ಫ್ಯಾಕ್ಸ್ ನಂ: 08174–233274 ಈ ಮೇಲ್ ವಿಳಾಸ: **itstaff_ulb_arasikere@yahoo.com** ವೆಬ್‌ಸೈಟ್ ವಿಳಾಸ: **www.arasikeretown.mrc.gov.in**
ನಂ:ನ.ಸ.ಅ /ಘ.ವ.ನಿ/15ನೇ ಹ.ಕಾಸು/01/2026–27 ದಿನಾಂಕ : 22–05–2026.

-: Expression of Interest:-

ಅರಸೀಕೆರೆ ನಗರಸಭೆಗೆ 2023–24 ಮತ್ತು 2024–25 ನೇ ಸಾಲಿನ 15ನೇ ಹಣಕಾಸು ಯೋಜನೆಯ Non-million Plus ಅನುದಾನದಡಿ ಘನತ್ಯಾಜ್ಯ ಸಂಸ್ಕರಣ ಘಟಕದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಮಾಡಲು ನೊಂದಾಯಿತ ಸಂಸ್ಥೆಗಳಿಂದ/ಅಧಿಕೃತ ಸರಬರಾಜುದಾರರಿಂದ ಚಾಲ್ತಿಯಲ್ಲಿರುವ ನವೀನ/ಆಧುನಿಕ ಇತೀಚಿನ ತಾಂತ್ರಿಕ ವಿಶಿಷ್ಟ ವಿವರಣೆಗಳೂಂದಿಗೆ ತಗುಲುವ ಸಂಪೂರ್ಣ ವೆಚ್ಚಗಳ ಸಹಿತ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿರುತ್ತದೆ. ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಸರಬರಾಜುದಾರರು ಪೋರ್ಟಲ್:– http://kppp.karnataka.gov.in ಮುಖಾಂತರ ಅಥವಾ ದಿನಾಂಕ : 30–05–2026 ರ ಸಂಜೆ 5.30 ಘಂಟೆಯೊಳಗಾಗಿ EOI ಯನ್ನು "ಪೌರಾಯುಕ್ತರು, ನಗರಸಭೆ, ಅರಸೀಕೆರೆ" ಇವರಿಗೆ ಸಲ್ಲಿಸಬಹುಹಾಗಿರುತ್ತದೆ. ಅನುದಾನ 15ನೇ ಹಣಕಾಸು Non-million Plus ಕ್ರ.ಸಂ.ವಿವರ: 1)ಅರಸೀಕೆರೆ ನಗರಸಭೆಯ ಘನತ್ಯಾಜ್ಯ ಸಂಸ್ಕರಣ ಘಟಕದಲ್ಲಿ ಕೆಲಸಗಳಿಗೆ ಮಿನಿ ಹಿಟಾಚಿ (Hydraulic Excavator)ಖರೀದಿ ಮಾಡುವುದು. DMA/2026-27/PREQUAL_TENDER_NUMBER_274 ಮೀಸಲಿಟ್ಟ ಅನುದಾನ (ಲಕ್ಷಗಳಲ್ಲಿ)35.00 2)ಅರಸೀಕೆರೆ ನಗರಸಭೆ ವ್ಯಾಪ್ತಿಯಲ್ಲಿ ಮನೆ–ಮನೆ ಕಸ ಸಂಗ್ರಹಣಾ ವ್ಯವಸ್ಥೆಯ ಡಿಜಿಟಲ್ ಮೇಲ್ವಿಚಾರಣೆ ಅವಶ್ಯಕ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್‌ಗಳೂಂದಿಗೆ 02 ವರ್ಷಗಳ ನಿರ್ವಹಣೆ ಸೇವೆ ಒದಗಿಸುವುದು. DMA/2026-27/ PREQUAL _TENDER_NUMBER_275 ಮೀಸಲಿಟ್ಟ ಅನುದಾನ (ಲಕ್ಷಗಳಲ್ಲಿ)25.00 3)ಅರಸೀಕೆರೆ ನಗರಸಭೆ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಬಟ್ಟೆ ಬ್ಯಾಗ್‌ಗಳನ್ನು ನೀಡುವ ಸಂಬಂಧ ಬಟ್ಟೆ ಬ್ಯಾಗ್ನ ವೆಂಡಿಂಗ್ ಯಂತ್ರ ಖರೀದಿಸುವ ಕಾಮಗಾರಿ. DMA/2026-27/PREQUAL _TENDER_NUMBER_276 ಮೀಸಲಿಟ್ಟ ಅನುದಾನ (ಲಕ್ಷಗಳಲ್ಲಿ)02.00 4)ಅರಸೀಕೆರೆ ನಗರಸಭೆಯ ಘನತ್ಯಾಜ್ಯ ಸಂಸ್ಕರಣ ಘಟಕದಲ್ಲಿ ಎಂ.ಆರ್.ಎಫ್/ಒಣ ತ್ಯಾಜ್ಯ ಸಂಸ್ಕರಣಾ ಘಟಕ ಮತ್ತು ಹಸಿ ಕಸ ನಿರ್ವಹಣಾ ಘಟಕಗಳಿಗೆ ಬೆಂಕಿ ಅವಘಡ ಮುಂಜಾಗ್ರತಾ ಕ್ರಮಗಳ ಅಳವಡಿಸುವ ಕಾಮಗಾರಿ. DMA/2026-27/ PREQUAL_TENDER_NUMBER_277 ಮೀಸಲಿಟ್ಟ ಅನುದಾನ (ಲಕ್ಷಗಳಲ್ಲಿ)25.00 5)ಅರಸೀಕೆರೆ ನಗರಸಭೆ ವ್ಯಾಪ್ತಿಯ ವಾಣಿಜ್ಯ ರಸ್ತೆಗಳಲ್ಲಿ MOHUA ಮಾರ್ಗಸೂಚಿಗಳನ್ವಯ ಸ್ಟಾರ್‌ರೇಟಿಂಗ್‌ಗಾಗಿ ಲಿಟರ್ ಬಿನ್ಸ್ (Twin Bin) ಪೂರೈಕೆ & ಅಳವಡಿಸುವ ಕಾಮಗಾರಿ. DMA/2026-27/PREQUAL_TENDER_NUMBER_278 ಮೀಸಲಿಟ್ಟ ಅನುದಾನ (ಲಕ್ಷಗಳಲ್ಲಿ)05.00 ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಪೌರಾಯುಕ್ತರು, ನಗರಸಭೆ ಅರಸೀಕೆರೆ/ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಅರಸೀಕೆರೆ ಈ ಕಛೇರಿಯಲ್ಲಿ ಪಡೆಯಬಹುದು.

ಸಹಿ/– ಪೌರಾಯುಕ್ತರು
ನಗರಸಭೆ, ಅರಸೀಕೆರೆ.

ವಾಸಾಸಂಇ/ಹಿಸನಿ/ಹಾಸನ/163/ಕೆಎಸ್‌ಎಂಸಿಎ/2026–27

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029
ಫೋನ್: 080–26096839/26096855 ಇಮೇಲ್: purchase@kmf.coop

IFT No. KMF/PUR/CFRM-678/2026-27 ದಿನಾಂಕ: 21–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (KPPP GOK Indent No.KMF/2026-27/IND2239)

ಕರ್ನಾಟಕ ಹಾಲು ಮಹಾಮಂಡಳವು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಘಟಕವಾರು ವಿವಿಧ ಪಶು ಆಹಾರ ಕಚ್ಚಾಮಾಲುಗಳನ್ನು ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ಭಾಗವಹಿಸಬಹುದಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಹಾಗೂ ಐಟಂವಾರು ಇ.ಎಂ.ಡಿ ವಿವರಗಳನ್ನು KPP Portal https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ತಿದ್ದುಪಡಿ/ ಟಿಪ್ಪಣಿಗಳೇನಾದರು ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿಯೇ ಪ್ರಕಟಿಸಲಾಗುವುದು.

ಕ್ರ. ಸಂ.	ಕಚ್ಚಾಮಾಲುಗಳು	ಘಟಕವಾರು ಪರಿಮಾಣ ಮೆಟ್ರಿಕ್ ಟನ್‌ಗಳಲ್ಲಿ				
		ರಾಜಾನುಕುಂಟೆ	ಗುಬ್ಬಿ	ಧಾರವಾಡ	ಹಾಸನ	ಶಿಕಾರಿಪುರ
1	ಡಿ.ಒ.ಆರ್.ಬಿ	1500	2000	1000	4500	1500
2	ಅಕ್ಕಿ ತೌಡು	500	1000	800	2500	1000
3	ಎಣ್ಣೆರಹಿತ ಹತ್ತಿಬೀಜದ ಹಿಂಡಿ (ಪ್ರೋಟೀನ್–50%)	50	0	0	500	0
4	ಎಣ್ಣೆರಹಿತ ಹತ್ತಿಬೀಜದ ಹಿಂಡಿ (ಪ್ರೋಟೀನ್–37%)	50	0	0	500	100
5	ಎಣ್ಣೆರಹಿತ ಸಾಸಿವೆ ಹಿಂಡಿ	225	400	175	500	600
6	ಎಣ್ಣೆರಹಿತ ಸೋಯಾ ಹಿಂಡಿ	75	150	0	100	0
7	ಮೈಜ್ ಡಿ.ಡಿ.ಜಿ.ಎಸ್	100	150	50	150	250
8	ಎಣ್ಣೆರಹಿತ ಮೈಜ್ ಡಿ.ಡಿ.ಜಿ.ಎಸ್	100	150	50	150	100
9	ಸಾಮಾನ್ಯ ಉಪ್ಪು	100	200	50	300	200
10	ಸುಣ್ಣದ ಪುಡಿ	100	250	100	400	100
11	ಎಣ್ಣೆರಹಿತ ಕೊಬ್ಬರಿ ಹಿಂಡಿ	100	0	0	150	150
12	ಎಣ್ಣೆರಹಿತ ಶೇಂಗಾ ಹಿಂಡಿ	75	250	50	100	150
13	ಅಫ್ಲಾಟಾಕ್ಸಿನ್ ಬೈಂಡರ್	15	25	0	0	20
14	ವಿಟಮಿನ್ ಎಡಿ–3 & ಇ ಬ್ಲೆಂಡ್	10	0	0	0	10

ಟೆಂಡರ್ ವೇಳಾಪಟ್ಟಿ: ಟೆಂಡರ್ ಪ್ರಾರಂಭವಾಗುವ ದಿನಾಂಕ: 21–05–2026; ಪೂರ್ವಭಾವಿ ಸಭೆಯ ದಿನಾಂಕ: 27-05-2026 at 11.00AM; ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 29-05-2026 at 05:15PM; ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 30-05-2026 at 05.15PM; ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ: 01-06-2026 at 10.30AM.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ
ಕ್ರಸಂ: ಪಿಬಿ/NDRF/SDRF/KRDCL/ಅಧಿಸೂಚನೆ: 2026–27/00552 ದಿನಾಂಕ: 16.05.2026

ಇ–ಟೆಂಡರ್ ಅಧಿಸೂಚನೆ IFT-KW-3/4
ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)(ಅಲ್ಪಾವಧಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. ಒಟ್ಟು 3 ಕಾಮಗಾರಿಗಳು
(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 25–05–2026 (16.00 ಗಂಟೆವರೆಗೆ) (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 26–05–2026 (16.00 ಗಂಟೆವರೆಗೆ) (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27–05–2026 (16.30 ಗಂಟೆಗೆ) (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 29–05–2026 (16.00 ಗಂಟೆಗೆ)

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ
ಶಿರಸಿ (ಉತ್ತರ ಕನ್ನಡ ಜಿಲ್ಲೆ)

DIPR/KWR/KSMCA/157/26-27 dt. 22.05.2026

ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಬೆಂಗಳೂರು–560 009, ದೂರವಾಣಿ ಸಂ: 080–22876553,
ಫ್ಯಾಕ್ಸ್: 080–22340139, ಇ–ಮೇಲ್: directorayush.eproc@gmail.com

ಸಂಖ್ಯೆ: AYUSH/13/PROC/2026 ದಿನಾಂಕ: 22.05.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಮಾತ್ರ)

2026–27ನೇ ಸಾಲಿನ ಆಯುಷ್ ನಿರ್ದೇಶನಾಲಯ ಹಾಗೂ ಅಧೀನ ಕಛೇರಿಗಳಿಗೆ ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ಟೆಂಡರ್ ಮೂಲಕ ಪಡೆಯುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–2000 ನಿಯಮಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಾಗಿ, ಇ.ಎಂ.ಡಿ ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್ ಸೈಟ್ **https://kppp.karnataka.gov.in** ನಲ್ಲಿ ನೋಡಬಹುದಾಗಿದೆ ಹಾಗೂ ಮೇಲ್ಕಂಡ ವಿಳಾಸದ ಕಛೇರಿ ವೇಳೆಯಲ್ಲಿ (ರಜಾದಿನಗಳನ್ನು ಹೊರತುಪಡಿಸಿ) ನೋಡಬಹುದಾಗಿದೆ.

ಇ–ಟೆಂಡರ್ ಪ್ರಕ್ರಿಯೆ

1.	ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭ ದಿನಾಂಕ	22.05.2026
2.	ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	03.06.2026 ಸಂಜೆ 4:30 ಗಂಟೆಗೆ
3.	ಟೆಂಡರ್ ತೆರೆಯುವ (ತಾಂತ್ರಿಕ ಬಿಡ್) ದಿನಾಂಕ	04.06.2026ರ ಸಂಜೆ 5:00 ಗಂಟೆಗೆ
4.	ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ	08.06.2026ರ ಬೆಳಿಗ್ಗೆ 11:30 ಗಂಟೆಗೆ

ಸಹಿ/– ಲೆಕ್ಕಾಧಿಕಾರಿ/ಅಧ್ಯಕ್ಷರು

DIPR/CP/RO792/AAPL/2026-27

ಕರ್ನಾಟಕ ಸರ್ಕಾರ
ಗದಗ ಜಿಲ್ಲಾ ಪಂಚಾಯತ
ಇ–ಮೇಲ್ : ceozp.gdg@gmail.com
ದೂರವಾಣಿ: 08372–234375 ಫ್ಯಾಕ್ಸ್: 08372–230211
ಕ್ರ.ಸಂ:ಗಜಿಪಂ:ಅಭಿವೃದ್ಧಿ:ಡಿ–1:2026–27 ದಿನಾಂಕ: 21–05–2026

ಇ–ಟೆಂಡರ್ ಪ್ರಕಟಣೆ

2026–27ನೇ ಸಾಲಿನಲ್ಲಿ (ಒಂದು ವರ್ಷದ ಅವಧಿಗೆ) ಜಿಲ್ಲೆಯಲ್ಲಿ ಎಮ್.ಜಿ.ಎನ್. ಆರ್.ಇ.ಜಿ.ಎ ಯೋಜನೆಯಡಿ ಹೊರ ಸಂಪನ್ಮೂಲ ಆಧಾರದ ಮೇಲೆ ಮಾನವ ಸಂಪನ್ಮೂಲ ಸಂಸ್ಥೆಯಿಂದ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಇ–ಟೆಂಡರ್ ಆಹ್ವಾನಿಸುವ ಕುರಿತು.

1	ಟೆಂಡರ್ ಕರೆದ ಪತ್ರ ಸಂ & ದಿನಾಂಕ	ಕ್ರ.ಸಂ:ಗಜಿಪಂ:ಅಭಿವೃದ್ಧಿ:ಡಿ–1:2026–27 ದಿ–22/05/2026
2	ತಾಂತ್ರಿಕ ಅಂದಾಜು ಮೊತ್ತ	ರೂ.500.00 ಲಕ್ಷ
3	ಇ.ಎಂ.ಡಿ ಮೊಬಲಗು (ವಿದ್ಯುನ್ಮಾನ ಪ್ರಕ್ರಿಯೆ ಮೂಲಕ ಮಾತ್ರ)	ರೂ.7,50,000/–
4	ಟೆಂಡರ್ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ವೆಬ್‌ಸೈಟ್ ಮೂಲಕ)	05-06-2026 04:00 pm
5	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ & ಅವಧಿ	08-06-2026 05:00 pm
6	ಆರ್ಥಿಕ ಬಿಡ್‌ಗಳನ್ನು ತೆರೆಯಬಹುದಾದ ದಿನಾಂಕ & ಅವಧಿ	10-06-2026 03:00 pm

https://kppp.karnataka.gov.in/#/portal/portal-home ಸದರಿ ವೆಬ್‌ಸೈಟ್‌ನಲ್ಲಿ ಟೆಂಡರ್ ಅನ್ನು ನಿಯಮಾನುಸಾರ ಹಾಕುವುದು
Indent No:- RDPR/2026-27/SE3932

ಸಹಿ/–
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ, ಗದಗ

ವಾ.ಸಾ.ಸಂ.ಇ/ಗದಗ/85/ ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ಸರ್ಕಾರ
(ನಗರಾಭಿವೃದ್ಧಿ ಇಲಾಖೆ)
ವಿಜಯಪುರ ಮಹಾನಗರಪಾಲಿಕೆ, ವಿಜಯಪುರ
ಬಾಗಲಕೋಟೆ ರಸ್ತೆ, ಜಲನಗರ–586109
ದೂರವಾಣಿ : 08352–278536, ಸಹಾಯವಾಣಿ: 08352–222474
ವೆಬ್‌ಸೈಟ್: www.bijapurcity.mrc.gov.in
ಸಂ.ಮನಪಾವಿ/ಕಂ.ವಿ/ಮಳಿಗೆ/ಜಾ.ಲಿ.ಪ್ರ/2026–27/620 ದಿನಾಂಕ:20.05.2026

ಮಳಿಗೆಗಳ ಬಹಿರಂಗ ಹರಾಜು ಪ್ರಕಟಣೆ–4

ಸಾರ್ವಜನಿಕರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ, ಮಹಾನಗರ ಪಾಲಿಕೆ ಒಡೆತನದಲ್ಲಿ ಬರುವ ಬಬಲೇಶ್ವರ ನಾಕಾ ಹತ್ತಿರ SCSP ಅನುದಾನದ ಅಡಿಯಲ್ಲಿ ನಿರ್ಮಿಸಿದ ಸರ್ದಾರ ವಲ್ಲಭಭಾಯಿ ಪಟೇಲ ವಾಣಿಜ್ಯ ಸಂಕೀರ್ಣದ ಶಿಷ್ಟ ಒಟ್ಟು 45 ಮಳಿಗೆಗಳು ಪ.ಜಾತಿ (SC) ಜನರಿಗೆ ಮಾತ್ರ ಲಿಲಾವಿನಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ. ಪರಿಶಿಷ್ಟ ಜಾತಿ (SC) ಯ ವಿಕಲಚೇತನರಿಗೆ ಮೀಸಲಿರಿಸಲಾಗಿರುತ್ತದೆ. ಸದರಿ ಹರಾಜಿನಲ್ಲಿ ಭಾಗವಹಿಸಲು ವಿಕಲಚೇತನರು **50,000/–**ಗಳನ್ನು ಮತ್ತು ಪರಿಶಿಷ್ಟ ಜಾತಿ (SC) ಅಡಿ ಅರ್ಜಿ ಸಲ್ಲಿಸುವವರು **1,00,000/–** ಗಳನ್ನು ಆಯುಕ್ತರು ಮಹಾನಗರ ಪಾಲಿಕೆ ವಿಜಯಪುರ ರವರ ಹೆಸರಿಗೆ ದಿನಾಂಕ: **29–05–2026** ರ ಮಧ್ಯಾಹ್ನ **01:30** ಘಂಟೆ ಒಳಗಡೆ ಸರ್ಕಾರಿ ಬ್ಯಾಂಕಿನ ಪ್ರತಿ ಮಳಿಗೆಗೆ ಪ್ರತ್ಯೇಕ ಠೇವಣಿ ಡಿ.ಡಿ, ಜಾತಿ ಪ್ರಮಾಣ ಪತ್ರ ಮತ್ತು ಅರ್ಜಿಯೊಂದಿಗೆ ಸಲ್ಲಿಸಿದವರಿಗೆ ಮಾತ್ರ ಲಿಲಾವಿನಲ್ಲಿ ಭಾಗವಹಿಸಲು ಅವಕಾಶವಿರುವುದು. ಸದರಿ ಜಾಹೀರ ಲಿಲಾವು ದಿನಾಂಕ: **30–05–2026** ರಂದು ಬೆಳಿಗ್ಗೆ 10.00 ಘಂಟೆಗೆ ಜಲನಗರದಲ್ಲಿರುವ ಮಹಾನಗರ ಪಾಲಿಕೆಯ ಸಭಾಭವನದಲ್ಲಿ ಜಾಹೀರಲಿಲಾವು ಜರುಗಿಸಲಾಗುವುದು. ಮಳಿಗೆಗಳ ಜಾಹೀರ ಲಿಲಾವಿನ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಪಾಲಿಕೆಯ ಮುಖ್ಯ ಕಛೇರಿ ನೋಟಿಸ್ ಬೋರ್ಡಿಗೆ ಪ್ರಚೂರಪಡಿಸಲಾಗಿದೆ. ಹಾಗೂ ಪಾಲಿಕೆ ಅಂತರ್ಜಾಲ (website)www.vijayapuracity.mrc.gov.in ಮತ್ತು ಮಳಿಗೆ ವಿಭಾಗದಲ್ಲಿ ವಿಷಯ ನಿರ್ವಾಹಕರಿಂದ ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಆಯುಕ್ತರು, ಮಹಾನಗರ ಪಾಲಿಕೆ, ವಿಜಯಪುರ
ಸಹಿ/– ಮಹಾಪೌರರು, ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/110/ಕೆಎಸ್‌ಎಂಸಿಎ/2026–27

ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿ
1ನೇ ಮಹಡಿ, ಲೈಬ್ರರಿ ಬ್ಲಾಕ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಆವರಣ,
ಬೆಂಗಳೂರು–560002. Ph No: 080–26700074, 26700075.
Email: ksdneb@gmail.com ವೆಬ್‌ಸೈಟ್: **www.ksdneb.org**
ಸಂಖ್ಯೆ: ಕ.ರಾ.ಶು.ಪ.ಮಂ./ಸಿಬ್ಬಂದಿ/07/2026–27 ದಿನಾಂಕ: 22.05.2026

2026–27ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕಟಣೆ

2026–27 ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಡಿಪ್ಲೋಮಾ ಇನ್ ನರ್ಸಿಂಗ್ ಕೋರ್ಸ್‌ಗೆ ಸರ್ಕಾರಿ ಸೀಟುಗಳು ಮತ್ತು ಖಾಸಗಿ ಶುಶ್ರೂಷ ಶಾಲೆಗಳಲ್ಲಿನ ಶೇಕಡ 10 ರಷ್ಟು ಸರ್ಕಾರಿ ಕೋಟಾದ ಸೀಟುಗಳಿಗೆ ದ್ವಿತೀಯ ಪಿಯುಸಿಯ ಶೇಕಡ 40% ರಷ್ಟು ಅಂಕ ಪಡೆದು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಕನಿಷ್ಠ ಶೇಕಡ 35% ಅಂಕ ಪಡೆದಿರಬೇಕು) ಉತ್ತೀರ್ಣರಾಗಿರುವ ಅಭ್ಯರ್ಥಿಗಳಿಗೆ ಹಾಗೂ ಸೇವಾನಿರತ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳ (PHCO) ಅಭ್ಯರ್ಥಿಗಳಿಗೆ **ಜಿ.ಎನ್.ಎಮ್. ಅರ್ಜಿಗೆ ಆನ್‌ಲೈನ್ ಮೂಲಕ ಸಲ್ಲಿಸುವ ದಿನಾಂಕವನ್ನು 06.06.2026 ರವರೆಗೆ ವಿಸ್ತರಿಸಲಾಗಿದೆ.** ಹೆಚ್ಚಿನ ವಿವರಗಳನ್ನು ಈ ಕೆಳಕಂಡ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. **www.ksdneb.org**

ಸಹಿ/– ಕಾರ್ಯದರ್ಶಿಗಳು, ಕ.ರಾ.ಶು.ಪ.ಮಂ. ಬೆಂಗಳೂರು

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ವಿಜಯನಗರ
E-mail:dhovijayanagara21@gmail.com. Telephone: 08394-227040
ಸಂಖ್ಯೆ:ಜಿಆಕುಕ/ಟೆಂಡರ್ ಪ್ರಕಟಣೆ/ಜಿ.ಆ/02/2025–26 ದಿನಾಂಕ:21.05.2026

ಮರು ಇ–ಟೆಂಡರ್ ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ವಿಜಯನಗರ ಇದರ ಅಧೀನದ ನೂತನ 250 ಹಾಸಿಗೆ ಸಾಮರ್ಥ್ಯದ ಜಿಲ್ಲಾ ಆಸ್ಪತ್ರೆ, ಹೊಸಪೇಟೆಗೆ 2024–25 ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಅನುದಾನದಡಿಯಲ್ಲಿ ಅರವಳಿಕೆ ಶಾಸ್ತ್ರ ವಿಭಾಗಕ್ಕೆ ಮತ್ತು ಶಸ್ತ್ರ ಚಿಕಿತ್ಸಾ ಕೊಠಡಿಗೆ ಅವಶ್ಯ ವಿರುವ ವಿವಿಧ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲು ಇ–ಸಂಗ್ರಹಣ ಕೋಶದ ವೆಬ್ ಸೈಟ್ **(https://kppp.karnataka.gov.in)** ಮೂಲಕ ಮರು ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಟೆಂಡರ್‌ದಾರರು **ದಿನಾಂಕ:22.05.2026**ರಿಂದ **ದಿನಾಂಕ:30.05.2026** ರ ಸಮಯ ಸಾಯಂಕಾಲ 05:00 ವರೆಗೆ ಅರ್ಜಿಗಳನ್ನು ಅಪ್‌ಲೋಡ್ ಮಾಡಬಹುದಾಗಿದೆ. (ಟೆಂಡರ್ ಮೊತ್ತ ರೂ.170.90ಲಕ್ಷ) **(INDENT NUMBER:DHFWS/2025-26/IND2111/CALL-2)**

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 08394–227040 ಕಛೇರಿ ಅವಧಿಯಲ್ಲಿ ಸಂಪರ್ಕಿಸ ಬಹುದಾಗಿದೆ ಅಥವಾ ಮುದ್ದಾಂ ಪಡೆಯಬಹುದಾಗಿದೆ.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ವಿಜಯನಗರ

ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/92

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ವಿಶೇಷ ವಿಭಾಗ,
ಅಮೃತಹಳ್ಳಿ ಮುಖ್ಯ ರಸ್ತೆ, ಬ್ಯಾಟರಾಯನಪುರ, ಬೆಂಗಳೂರು–560 092.
ಸಂಖ್ಯೆ: ಬೆಂಉನಪಾ/ಕಾಪಾಅ/ವಿವಿ/ಟೆಂಡರ್/04/2026–27 ದಿನಾಂಕ: 22–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ)
ದ್ವಿ ಲಕೋಟೆ ಪದ್ಧತಿ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್: https://kppp.karnataka.gov.in

ಕಾರ್ಯಪಾಲಕ ಅಭಿಯಂತರರು, ವಿಶೇಷ ವಿಭಾಗ, ಬೆಂಉನಪಾ, ಬೆಂಗಳೂರು ರವರು ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಯೋಜನೆಯ ಹೆಸರು
1)	**ಬೆಂಉನಪಾ ವಲಯ–1 ರಲ್ಲಿ ಪ್ರಾಣಿಗಳ ಜನನ ನಿಯಂತ್ರಣ (ABC), ರೇಬೀಸ್ ವಿರೋಧಿ ಲಸಿಕೆ (ARV ಮತ್ತು ಸಂಯೋಜಿತ) ಮತ್ತು ಬೀದಿ ನಾಯಿಗಳಿಗೆ ಜಂತುಹುಳು ನಿವಾರಣಾ ಕ್ರಮಗಳನ್ನು ಅನುಷ್ಠಾನಗೊಳಿಸುವುದು. (ಕರೆ–3)** ಟೆಂಡರ್‌ಗೆ ಇಟ್ಟ ಮೊತ್ತ (ರೂ. ಲಕ್ಷಗಳಲ್ಲಿ): **180.00.** ಇಎಂಡಿ ಮೊತ್ತ (ರೂ. ಲಕ್ಷಗಳಲ್ಲಿ): **2.70.**

ಟೆಂಡರ್‌ನ ಕಾರ್ಯಸೂಚಿ: 1) ವಿಚಾರಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ (ಆನ್‌ಲೈನ್ ಮೂಲಕ ಮಾತ್ರ): **29–05–2026 ರ ಸಂಜೆ 4.00 ರವರೆಗೆ. 2)** ಪೂರ್ವ ಬಿಡ್ ಸಭೆಯ **ದಿನಾಂಕ ಮತ್ತು ಸಮಯ: 29–05–2026 ರಂದು ಮಧ್ಯಾಹ್ನ 3.00 ಗಂಟೆಗೆ.** 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ಸಮಯ: 03–06–2026 ರಂದು ಸಂಜೆ 4:00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 04–06–2026 ರ ಸಂಜೆ 4:30 ಗಂಟೆಗೆ** ಸಾಧ್ಯವಾದರೆ ಮುಂದಿನ ಕೆಲಸದ ದಿನದಂದು. 5) ಆರ್ಥಿಕ ಬಿಡ್ ತೆರೆಯುವಿಕೆ : **ತಾಂತ್ರಿಕ ಬಿಡ್ ಅನುಮೋದನೆಯ ನಂತರ (ಸಾಧ್ಯವಾದರೆ).**

ಸಹಿ/– ಕಾರ್ಯಪಾಲಕ ಅಭಿಯಂತರರು, ವಿಶೇಷ ವಿಭಾಗ, ಬೆಂಉನಪಾ.

KARNATAKA GOVERNMENT SECRETARIAT
M.S.Building, Dr. B.R. Ambedkar Veedhi,
Bengaluru- 560001.

No. RD/383/RME/2025 Date:22.05.2026

Notification regarding engagement of Urban Town Planner and Urban Designer under the KWSRP

Subject: Recruitment of Chief/Lead Urban Town Planner/Environment Planner and Chief/Lead Urban Designer - Urban Flood Modelling team for Karnataka State Natural Disaster Monitoring Centre (KSNDMC) under the Karnataka Water Security and Resilience Program (KWSRP).

The World Bank-funded Karnataka Water Security and Resilience Program (KWSRP) is being implemented across the State. The overarching objective of the Program is to enhance disaster resilience through a combination of structural and non-structural measures. The initiative seeks to develop climate-resilient infrastructure to mitigate the impacts of floods and droughts, while also strengthening disaster risk governance and resilience mechanisms.

The Revenue Department (Disaster Management) Government of Karnataka, invites applications from qualified and experienced professionals for the following positions:

i. Chief/ Lead Urban Town Planner Environmental Planner (1 position)
ii. Chief/ Lead Urban Designer (1 position)

The detailed terms of reference, eligibility criteria, and other conditions for engagement of the above positions are available in the Terms of Reference (ToR) and may be seen on the KSNDMC website: **https://www.ksndmc.org/default.aspx**

Note:

a. Applications, along with the relevant supporting documents, should be submitted by email to jsrdssp@gmail.com, **latest by 06.06.2026.**
b. Incomplete applications will not be considered. The Revenue Department (Disaster Management) reserves the right to reject any application without assigning a reason.
c. The qualified candidates will he shortlisted and called for interview for final selection.

For any queries contact - The Joint Secretary, Revenue Department (KAT, SSP & PP). Ph: 080-2203 2010.

Sd/-
(G Venkalesh)
Joint Secretary to the Government
Revenue Department
(KAT, SSP and PP)

DIPR/CP/JA/782/2026-27

ಚಿಟಿಕೆ ಸುದ್ದಿ

ಬಿ.ಟೆಕ್, ಎಂ.ಟೆಕ್ ಅರ್ಜಿ ಆಹ್ವಾನ

ಬೆಂಗಳೂರು: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫಾರ್ಮೇಷನ್ ಟೆಕ್ನಾಲಜಿ ಬೆಂಗಳೂರು (ಐಐಐಟಿ–ಬಿ) 2026–27ನೇ ಸಾಲಿನಲ್ಲಿ ಬಿಟೆಕ್ ಹಾಗೂ ಐದು ವರ್ಷದ ಇಂಟಿಗ್ರೇಟೆಡ್ ಎಂ.ಟೆಕ್ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ. ಬಿ.ಟೆಕ್ ಇನ್ ಕಂಪ್ಯೂಟರ್ ಸೈನ್ಸ್ ಅಂಡ್ ಎಂಜಿನಿಯರಿಂಗ್ (ಸಿಎಸ್‌ಇ), ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ ಎಂಜಿನಿಯರಿಂಗ್ (ಇಸಿಇ), ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಆ್ಯಂಡ್ ಡೇಟಾ ಸೈನ್ಸ್ (ಎಐ ಅಂಡ್‌ಡಿಎಸ್) ಸೇರಿವೆ. ಎಂ.ಟೆಕ್ ಇನ್ ಸಿಎಸ್‌ಇ ಹಾಗೂ ಇಸಿಇ ಒಳಗೊಂಡಿದೆ. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮೊದಲು ಅಧಿಕೃತ ಪ್ರವೇಶ ಪೋರ್ಟಲ್‌ನಲ್ಲಿ ಲಭ್ಯವಿರುವ ಪ್ರವೇಶ ಮಾರ್ಗಸೂಚಿಗಳು, ಅರ್ಹತಾ ಮಾನದಂಡಗಳು ಹಾಗೂ ಆಯ್ಕೆ ಪ್ರಕ್ರಿಯೆಯ ವಿವರಗಳನ್ನು ಗಮನಿಸಬೇಕು. ಮಾಹಿತಿಗೆ ಐಐಐಟಿ–ಬಿ ಕೋರ್ಸ್ ಪೇಜ್‌ಗೆ ಭೇಟಿ ನೀಡಬಹುದು. ಅರ್ಜಿಗಳನ್ನು ಪ್ರವೇಶ ಪೋರ್ಟಲ್ ಐಐಐಟಿ–ಬಿ ಅಡ್ಮಿಷನ್ಸ್ ಪೋರ್ಟಲ್ ಮೂಲಕ ಸಲ್ಲಿಸಬಹುದು.

ಆಹಾರ ಮೇಳ

ಬೆಂಗಳೂರು: ಫಿನಿಕ್ಸ್ ಮಾಲ್ ಆಫ್ ಏಷ್ಯಾದಲ್ಲಿ ಪ್ರಸಿದ್ಧ ಇಟಾಲಿಯನ್ ಡೈನಿಂಗ್ ಪರಿಕಲ್ಪನೆಯ ಆಹಾರ ಮೇಳವನ್ನು ಆಯೋಜಿಸಲಾಗಿದೆ. ನಗರದ ಆಹಾರ ಪ್ರಿಯರಿಗೆ ರುಚಿಕರವಾದ ವಿಶೇಷ ಖಾದ್ಯಗಳನ್ನು ಪರಿಚಯಿಸಲಾಗಿದೆ. ಸಿಸಿಲಿಯ ಪಿಜ್ಜಾ, ಪಾಸ್ತಾ, ಕರಾವಳಿ ಶೈಲಿಯ ಆಹಾರ ತಿನಿಸುಗಳು, ರುಚಿಕರವಾದ ಚೀಸ್, ಪಿಸ್ತಾ ಕ್ಯಾನೋಲಿ ಇತ್ಯಾದಿ ಇವೆ. ಬೆಳಿಗ್ಗೆ 11ರಿಂದ ರಾತ್ರಿ 11ರವರೆಗೆ ರೆಸ್ಟೊರೆಂಟ್ ತೆರೆದಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

25ರಂದು ಉದ್ಯೋಗ ಮಹಾಮೇಳ

ಬೆಂಗಳೂರು: ಮನಮೋಹನ ಸಿಂಗ್ ಬೆಂಗಳೂರು ವಿಶ್ವವಿದ್ಯಾಲಯದ ತರಬೇತಿ ಮತ್ತು ನಿಯೋಜನೆ ಕೇಂದ್ರದ ವತಿಯಿಂದ ಮೇ 25ರಂದು ಬೆಳಿಗ್ಗೆ 10 ರಿಂದ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ವಿವಿಧ ಉದ್ಯಮ ವಲಯದ 150ಕ್ಕೂ ಹೆಚ್ಚು ಕಂಪನಿಗಳು ಈ ಮೇಳದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದ್ದು ನೇರ ಸಂದರ್ಶನದ ಮೂಲಕ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರಗಳನ್ನು ವಿತರಿಸಲಾಗುತ್ತದೆ. ಬೆಂಗಳೂರು ನಗರ ವಿಶ್ವವಿದ್ಯಾಲಯ ಮಾತ್ರವಲ್ಲದೆ ಆಸಕ್ತ ಪದವೀಧರರು, ಸ್ನಾತಕೋತ್ತರ ಪದವೀಧರರು ಹಾಗೂ ವಿವಿಧ ಕೋರ್ಸ್ ಗಳ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳೂ ಪಾಲ್ಗೊಳ್ಳಬಹುದು ಮಾಹಿತಿಗೆ ಮೊಬೈಲ್ ಸಂಖ್ಯೆ 8197060311 ಅಥವಾ 9035992785 ಸಂಪರ್ಕಿಸಲು ಕೋರಲಾಗಿದೆ. ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ನೂತನ ಶೈಕ್ಷಣಿಕ ವಿಭಾಗದ ಕಟ್ಟಡದಲ್ಲಿ ಏರ್ಪಡಿಸಲಾಗಿರುವ ಉದ್ಯೋಗ ಮಹಾಮೇಳವನ್ನು ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಎಸ್. ಆರ್. ನಿರಂಜನ ಉದ್ಘಾಟಿಸುವರು. ಕುಲಪತಿ ರಮೇಶ್ ಬಿ., ಕುಲಸಚಿವ ಎ. ನವೀನ್ ಜೋಸೆಫ್, ಕುಲಸಚಿವ (ಮೌಲ್ಯಮಾಪನ) ರಮೇಶ. ಬಿ. ಕುಡೇನಟ್ಟಿ ಮತ್ತು ವಿತ್ತಾಧಿಕಾರಿ ಎಂ.ವಿ. ವಿಜಯಲಕ್ಷ್ಮಿ ಭಾಗವಹಿಸುವರು.

‘ಮಹಾರಾಣಿ-ಇಂದಿರಾಗಾಂಧಿ ವಿ.ವಿ. ಹೆಸರಿಡಿ’

ಬೆಂಗಳೂರು: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವನ್ನು ‘ಮಹಾರಾಣಿ–ಇಂದಿರಾಗಾಂಧಿ ವಿಶ್ವವಿದ್ಯಾಲಯ’ ಎಂದು ಮರುನಾಮಕರಣ ಮಾಡುವಂತೆ ನಾಡಿನ ವಿದ್ವಾಂಸರು ಮನವಿ ಮಾಡಿದ್ದಾರೆ ಎಂದು ವಿಶ್ವವಿದ್ಯಾಲಯ ಕುಲಪತಿ ಕೆ. ವೈ.ನಾರಾಯಣಸ್ವಾಮಿ ತಿಳಿಸಿದ್ದಾರೆ.

‘ಉತ್ಪನ್ನಗಳ ಮೇಲೆ ಕನ್ನಡ ಕಡೆಗಣನೆ’

ಬೆಂಗಳೂರು: ‘ಸರ್ಕಾರಿ ಉದ್ದಿಮೆಗಳು ಹಾಗೂ ನಿಗಮಗಳು ತಮ್ಮ ಉತ್ಪನ್ನಗಳ ಮೇಲೆ ಕನ್ನಡ ಕಡೆಗಣಿಸುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಬೇಕು’ ಎಂದು ರಾಜ್ಯ ಸರ್ಕಾರಕ್ಕೆ ಕನ್ನಡ ಗೆಳೆಯರ ಬಳಗ ಆಗ್ರಹಿಸಿದೆ.

‘ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವು (ಕೆ.ಎಸ್. ಡಿ.ಎಲ್) ತನ್ನ ಉತ್ಪನ್ನಗಳ ಮೇಲೆ ಕನ್ನಡ ಅಕ್ಷರ ಕಂಡೂ ಕಾಣದಂತೆ ಸಣ್ಣದಾಗಿ ಮುದ್ರಿಸುತ್ತಿದೆ. ಇದು ಕನ್ನಡಕ್ಕೆ ಮಾಡುತ್ತಿರುವ ಅವಮಾನವಾಗಿದೆ. ರಾಜ್ಯ ಸರ್ಕಾರದ ಅಂಗ ಸಂಸ್ಥೆಯಾದ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ತನ್ನ ನೋಟ್ ಬುಕ್ ಹೊರತುಪಡಿಸಿ ಬೇರೆ ಉತ್ಪನ್ನಗಳ ಮೇಲೆ ವಿವರವನ್ನು ಕನ್ನಡದಲ್ಲಿ ಮುದ್ರಿಸುತ್ತಿಲ್ಲ’ ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಬೇಸರ ವ್ಯಕ್ತಪಡಿಸಿದ್ದಾರೆ. ‘ಇಲ್ಲಿರುವ ಕೇಂದ್ರ ಸರ್ಕಾರದ ಕಚೇರಿಗಳಲ್ಲಿ ಕನ್ನಡ ಬಳಕೆ ಆಗುತ್ತಿದೆಯೇ ಎನ್ನುವುದನ್ನು ಯಾರೂ ಪರಿಶೀಲಿಸುತ್ತಿಲ್ಲ. ರಾಜ್ಯ ಸರ್ಕಾರದ ಕೆಲವು ಫಲಕಗಳಲ್ಲೂ ಕನ್ನಡ ಸರಿಯಾಗಿ ಬಳಕೆಯಾಗಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

2,600 ಬೀದಿ ನಾಯಿಗಳಿಗೆ ಆಶ್ರಯ

ಪ್ರತಿ ಶ್ವಾನಕ್ಕೆ ತಿಂಗಳಿಗೆ ₹3,035 ವೆಚ್ಚ; ಐದೂ ನಗರ ಪಾಲಿಕೆಗಳಲ್ಲಿ ಕಾಮಗಾರಿಗೆ ವೇಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದೂ ನಗರ ಪಾಲಿಕೆಗಳಲ್ಲಿ ಬೀದಿ ನಾಯಿಗಳ ಆಶ್ರಯ ಕೇಂದ್ರಗಳನ್ನು ನಿರ್ಮಿಸಲಾಗುತ್ತಿದ್ದು, ಒಟ್ಟಾರೆ 2,600 ಶ್ವಾನಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ.

ಸುಪ್ರೀಂ ಕೋರ್ಟ್ ಆದೇಶದಂತೆ ಬೀದಿ ನಾಯಿಗಳನ್ನು ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸಲು 2025ರ ಡಿಸೆಂಬರ್‌ನಿಂದಲೇ ಆಶ್ರಯ ಕೇಂದ್ರಗಳನ್ನು ನಿರ್ಮಿಸುತ್ತಿರುವ ನಗರ ಪಾಲಿಕೆಗಳು, ಈ ಕಾಮಗಾರಿಗಳಿಗೆ ವೇಗ ನೀಡಲು ನಿರ್ಧರಿಸಿವೆ.

ಐದೂ ನಗರ ಪಾಲಿಕೆಗಳಲ್ಲಿ ತಲಾ 500 ಬೀದಿ ನಾಯಿಗಳಿಗೆ ಅವಕಾಶ ಇರುವ ಆಶ್ರಯ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದ್ದು, ದಕ್ಷಿಣ ನಗರ ಪಾಲಿಕೆ ಬಿಂಗಿಪುರದಲ್ಲಿ ಈಗಾಗಲೇ 100 ನಾಯಿಗಳಿಗೆ ಆಶ್ರಯ ಕಲ್ಪಿಸಿದೆ.

ಆಶ್ರಯ ಕೇಂದ್ರಗಳಲ್ಲಿ ಎನ್‌ಜಿಒಗಳು ನಾಯಿಗಳ ಆರೈಕೆ ಮಾಡಲಿವೆ. ಆಹಾರ ನೀಡುವ ಜೊತೆಗೆ ವೈದ್ಯರನ್ನೂ ಒದಗಿಸಲಾಗುತ್ತದೆ. ಪ್ರತಿಯೊಂದು ಬೀದಿ ನಾಯಿಗೆ ಪ್ರತಿ ತಿಂಗಳಿಗೆ ₹3,035 ವೆಚ್ಚವಾಗಲಿದ್ದು, ನಗರ ಪಾಲಿಕೆಗಳು ಇದನ್ನು ಭರಿಸಲಿವೆ. ಇದಲ್ಲದೆ, ಸಾರ್ವಜನಿಕ ಸ್ಥಳಗಳಿಂದ ಹಿಡಿದು ಆಶ್ರಯ ಕೇಂದ್ರಕ್ಕೆ ಬೀದಿ ನಾಯಿಯೊಂದನ್ನು ತಲುಪಿಸಲು ಸಿಬ್ಬಂದಿಗೆ ₹300 ನೀಡಲಾಗುತ್ತದೆ. ನಗರದಲ್ಲಿ 2.79 ಲಕ್ಷ ಬೀದಿ ನಾಯಿಗಳಿವೆ.

‘ಗುರುತಿಸಲಾಗಿರುವ ನಾಯಿಗಳನ್ನು ನಾವು ಕೇಂದ್ರಗಳಿಗೆ ಸಾಗಿಸಲು ಕ್ರಮ ಕೈಗೊಳ್ಳುತ್ತಿದ್ದೇವೆ. ಕೇಂದ್ರಗಳಲ್ಲಿ ನಾಯಿಗಳ ಆರೈಕೆಗೆ ಸಂಸ್ಥೆಗಳನ್ನು ಗುರುತಿಸಲಾಗಿದ್ದು, ಅವುಗಳಿಗೆ ಜವಾಬ್ದಾರಿ ವಹಿಸಲಾಗುತ್ತದೆ. ಬೆಂಗಳೂರು ದಕ್ಷಿಣ ನಗರ ಪಾಲಿಕೆ ಹಾಗೂ ಉತ್ತರ ನಗರ ಪಾಲಿಕೆಗಳಲ್ಲಿ ನಿರ್ಮಿಸುತ್ತಿರುವ ಆಶ್ರಯ ತಾಣಗಳು ಮೇ ಅಂತ್ಯಕ್ಕೆ ಸಿದ್ಧವಾಗಲಿವೆ. ಕೇಂದ್ರ, ಪೂರ್ವ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಜೂನ್ ಅಂತ್ಯಕ್ಕೆ ಕೇಂದ್ರಗಳು ನಿರ್ಮಾಣವಾಗಲಿವೆ. ಪಶ್ಚಿಮ ನಗರ ಪಾಲಿಕೆಯಲ್ಲಿ ಇನ್ನೂ ಮೂರು ತಿಂಗಳಲ್ಲಿ ಕಾಮಗಾರಿ ಮುಗಿಯಲಿದೆ’ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಎಬಿಸಿ: ‘ಬೆಂಗಳೂರಿನಲ್ಲಿ ಪ್ರಾಣಿಗಳ ಸಂತಾನಶಕ್ತಿಹರಣ (ಎಬಿಸಿ) ಕಾರ್ಯಕ್ರಮ ಎಲ್ಲ ರೀತಿಯ ಕಾನೂನುಗಳನ್ನು ಮೀರಿ ನಡೆಯುತ್ತಿದೆ. ಕೆಲವು ಕೇಂದ್ರಗಳಲ್ಲಿ ಅಗತ್ಯ ಸಮ್ಮತಿಗಳನ್ನು ಪಡೆಯದೆ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ’ ಎಂದು ಪ್ರಾಣಿಪ್ರಿಯ ಕಾರ್ಯಕರ್ತ ಅರುಣ್ ಪ್ರಸಾದ್ ಹೇಳಿದರು.

ಎಬಿಸಿ ನಿಯಮ 2023ರಂತೆ ಎಬಿಸಿ ಕೇಂದ್ರಗಳು ಯೋಜನಾ ಅನುಷ್ಠಾನದ ಪ್ರಮಾಣಪತ್ರವನ್ನು ಪಡೆಯಬೇಕು. ಆದರೆ ಇಂತಹ ಪ್ರಮಾಣ ಪತ್ರ ಇಲ್ಲದೆ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ. ನಾಯಿಗಳ ಸಂತಾನ ನಿಯಂತ್ರಣಕ್ಕಾಗಿ ನಡೆಸಲಾಗುತ್ತಿರುವ ‘ಸ್ಟೆರ್ಲೈಸೇಷನ್’, ‘ವ್ಯಾಕ್ಸಿನೇಷನ್’ ಸೂಕ್ತವಾಗಿ ನಡೆಸುತ್ತಿಲ್ಲ, ಅದು ಹಳತಾಗಿದೆ ಎಂಬುದು ನಾಯಿ ಗಣತಿಯ ಅಂಕಿ–ಅಂಶವೇ ಹೇಳುತ್ತದೆ’ ಎಂದರು.

ಬೀದಿ ನಾಯಿ ಕಡಿತ ಪ್ರಕರಣಗಳು	
2025 ಜನವರಿ	2,071
ಫೆಬ್ರುವರಿ	1,327
ಮಾರ್ಚ್	1,320
ಏಪ್ರಿಲ್	2,159
ಮೇ	1,987
ಜೂನ್	1,495
ಜುಲೈ	2,321
ಆಗಸ್ಟ್	3,892
ಸೆಪ್ಟೆಂಬರ್	1,921
ಅಕ್ಟೋಬರ್	1,971
ನವೆಂಬರ್	1,893
ಡಿಸೆಂಬರ್	2,135
2026 ಜನವರಿ	2,398
ಫೆಬ್ರುವರಿ	1,727
ಮಾರ್ಚ್	2,129

ಆಶ್ರಯ ಕೇಂದ್ರ ಎಲ್ಲೆಲ್ಲಿ?

ಪಾಲಿಕೆ	ಸ್ಥಳ	ಸಾಮರ್ಥ್ಯ
ಉತ್ತರ	ಮೇದಿ ಅಗ್ರಹಾರ	500
ದಕ್ಷಿಣ	ಬಿಂಗಿಪುರ	500+100
ಕೇಂದ್ರ	ಬಿಂಗಿಪುರ	500
ಪೂರ್ವ	ಬಸವನಪುರ	500
ಪಶ್ಚಿಮ	ಸುಮನಹಳ್ಳಿ	500

ಕಾನೂನು ಪ್ರಕಾರ ದಯಾಮರಣ: ಮಹೇಶ್ವರ್ ರಾವ್



ಸುಪ್ರೀಂ ಕೋರ್ಟ್ ಮೇ 19ರಂದು ನೀಡಿರುವ ಆದೇಶ ಪಾಲಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಬದ್ಧವಾಗಿದ್ದು, ಅದರ ಪ್ರಕ್ರಿಯೆಗಳು ಆರಂಭವಾಗಿವೆ ಎಂದು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಶಿಕ್ಷಣ ಸಂಸ್ಥೆ, ಆಸ್ಪತ್ರೆ, ಕ್ರೀಡಾ ಸಂಕೀರ್ಣ, ಬಸ್ ನಿಲ್ದಾಣಗಳು ಮತ್ತು ರೈಲು ನಿಲ್ದಾಣದಲ್ಲಿರುವ ಬೀದಿ ನಾಯಿಗಳ ಸ್ಥಳಾಂತರ ಸೇರಿದಂತೆ ಭಾರತೀಯ ಕಲ್ಯಾಣ ಮಂಡಳಿಯ ಪ್ರಮಾಣಿತ ಕಾರ್ಯವಿಧಾನವನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಬೀದಿ ನಾಯಿಗಳ ಆಶ್ರಯತಾಣ ನಿರ್ಮಾಣ ಪ್ರಗತಿಯಲ್ಲಿದೆ ಮತ್ತು ಆಶ್ರಯ ತಾಣ ನಿರ್ವಹಣೆ ಮಾಡಲು ಸೇವಾದಾರರ ಆಯ್ಕೆ ಪ್ರಗತಿಯಲ್ಲಿದೆ ಎಂದರು.

ಬೀದಿ ನಾಯಿಗಳ ಸಂಖ್ಯೆ ಹೆಚ್ಚಿರುವ ಸ್ಥಳಗಳಲ್ಲಿ ಅಥವಾ ಪದೇ ಪದೇ ನಾಯಿ ಕಡಿತ ಹಾಗೂ ಆಕ್ರಮಣಕಾರಿ ವರ್ತನೆಯಿಂದ ಸಾರ್ವಜನಿಕರ ಸುರಕ್ಷತೆಗೆ ತೊಂದರೆ ಇರುವ ಸ್ಥಳಗಳಲ್ಲಿ, ತಜ್ಞ ಪಶುವೈದ್ಯರಿಂದ ದೃಢೀಕರಣಕ್ಕೊಳಪಟ್ಟು, ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ 1960, ಪ್ರಾಣಿಜನನ ನಿಯಮಗಳು 2023 ಮತ್ತು ಇತರೆ ಶಾಸನಬದ್ಧ ನಿಬಂಧನೆಗಳಿಗೆ ಅನುಸಾರವಾಗಿ ಕ್ರಮ ಕೈಗೊಳ್ಳಲಾಗುವುದು. ಗುಣಪಡಿಸಲಾಗದಷ್ಟು ಅನಾರೋಗ್ಯಕ್ಕೊಳಪಟ್ಟ ನಾಯಿ, ರೇಬೀಸ್ ನಾಯಿ, ಆಕ್ರಮಣಕಾರಿ/ಅಪಾಯಕಾರಿ ನಾಯಿಗಳ ಪ್ರಕರಣಗಳಲ್ಲಿ ದಯಾಮರಣ ಸೇರಿದಂತೆ ಇತರೆ ಕ್ರಮಗಳನ್ನು ಕಾನೂನು ಪ್ರಕಾರವೇ ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಪಶುವೈದ್ಯ ಸಿಬ್ಬಂದಿ ಕೊರತೆ

ಜಿಬಿಎ ವ್ಯಾಪ್ತಿಯಲ್ಲಿ ಹಲವು ವರ್ಷಗಳಿಂದ ಪಶುವೈದ್ಯರು ಹಾಗೂ ಅರೆಪಶುವೈದ್ಯ ಸಿಬ್ಬಂದಿ ಕೊರತೆ ಇದೆ. 19 ಪಶುವೈದ್ಯರು ಹಾಗೂ 16 ಅರೆ ಪಶುವೈದ್ಯ ಸಿಬ್ಬಂದಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನೂ ಕನಿಷ್ಠ 36 ಅರೆಪಶುವೈದ್ಯ ಸಿಬ್ಬಂದಿಯ ಅಗತ್ಯವಿದೆ ಎನ್ನಲಾಗಿದೆ.

ಪ್ರಾಣಿಗಳ ಸಂತಾನಶಕ್ತಿ ಹರಣ (ಎಬಿಸಿ) ಕಾರ್ಯಕ್ರಮಗಳಲ್ಲಿ ಕಾರ್ಯನಿರ್ವಹಿಸುವ ತಜ್ಞರು ಹಾಗೂ ವೈದ್ಯರೊಂದಿಗೆ ಅರೆ ಪಶುವೈದ್ಯ ಸಿಬ್ಬಂದಿ ಕಾರ್ಯನಿರ್ವಹಿಸುತ್ತಾರೆ. ಈ ಸಿಬ್ಬಂದಿಗೆ ಪ್ರಮುಖವಾದ ಪಾತ್ರವಿದೆ. ‘ನಾಯಿಗಳ ಕಡಿತ ಅಥವಾ ಹಾವಳಿ ಬಗ್ಗೆ ದೂರು ಬಂದಾಗ ಈ ಸಿಬ್ಬಂದಿಯೇ ಮೊದಲು ಸ್ಥಳಕ್ಕೆ ಹೋಗುವುದು’ ಎಂದು ಅರೆ ಪಶುವೈದ್ಯ ಸಿಬ್ಬಂದಿಯೊಬ್ಬರು ಹೇಳಿದರು.

ಜಿಬಿಎ ವ್ಯಾಪ್ತಿಯಲ್ಲಿರುವ ಪಶುವೈದ್ಯ ವಿಭಾಗದಲ್ಲಿ ಇವರು ಕಾರ್ಯನಿರ್ವಹಿಸುತ್ತಿದ್ದು, ಪ್ರತಿಯೊಂದು ಪಾಲಿಕೆಗೆ ಪ್ರತ್ಯೇಕ ಸಿಬ್ಬಂದಿ ಕಲ್ಪಿಸುವ ಅಗತ್ಯವಿದೆ ಎಂದು ಅಧಿಕಾರಿಗಳು ತಿಳಿಸಿದರು.

‘ಪಶುವೈದ್ಯ ಸಿಬ್ಬಂದಿ ಕೊರತೆ ಇರುವುದು ನಿಜ. ಪಶುವೈದ್ಯರು ಅಥವಾ ನಿವೃತ್ತ ವೈದ್ಯರನ್ನು ನೇಮಿಸಿಕೊಳ್ಳಲು ಚಿಂತಿಸಲಾಗುತ್ತಿದೆ. ಶೀಘ್ರವೇ ಕ್ರಮಕೈಗೊಳ್ಳುತ್ತೇವೆ’ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಹೇಳಿದರು.

ಸುದ್ದಿ 2 ನಿಮಿಷ

ಜಾಹೀರಾತು ಫಲಕಕ್ಕೆ ಡಿಕ್ಕಿ ಬೈಕ್ ಸವಾರ ಸಾವು

ಬೆಂಗಳೂರು: ಬೈಕ್ ನಿಯಂತ್ರಣ ತಪ್ಪಿ ರಸ್ತೆಬದಿಯಲ್ಲಿದ್ದ ಜಾಹೀರಾತು ಫಲಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಮೃತಪಟ್ಟಿರುವ ಘಟನೆ ದೇವನಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ಸಂಜೆ ನಡೆದಿದೆ.

ಸಾವಕನಹಳ್ಳಿಯ ಡೇವಿಡ್ (25) ಮೃತ ಬೈಕ್ ಸವಾರ.

ಸಾವಕನಹಳ್ಳಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ಪತ್ನಿಯ ಜತೆಗೆ ಡೇವಿಡ್ ವಾಸವಿದ್ದರು. ಗುರುವಾರ ಸಂಜೆ 4.30ರ ಸುಮಾರಿಗೆ ಮನೆ ಮಾಲೀಕರ ಪುತ್ರ ಚರಣ್ ಅವರನ್ನು ಬೈಕ್‌ನಲ್ಲಿ ಕರೆದುಕೊಂಡು ಹೋಟೆಲ್‌ಗೆ ಹೋಗಿದ್ದರು. ದೇವನಹಳ್ಳಿಯಲ್ಲಿ ಇರುವ ಹೋಟೆಲ್‌ವೊಂದಕ್ಕೆ ಹೋಗಿ ಊಟ ಮುಗಿಸಿಕೊಂಡು ಸಾವಕನಹಳ್ಳಿ ಪಾರ್ಕ್ ಬಳಿ ಬರುವಾಗ, ಬೈಕ್ ನಿಯಂತ್ರಣ ತಪ್ಪಿ ರಸ್ತೆಬದಿಯಲ್ಲಿದ್ದ ಜಾಹೀರಾತು ಫಲಕಕ್ಕೆ ಡಿಕ್ಕಿ ಹೊಡೆದಿತ್ತು. ಇಬ್ಬರೂ ಕೆಳಗೆ ಬಿದ್ದಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಡೇವಿಡ್ ಅವರನ್ನು ಸಿ.ವಿ ರಾಮನ್‌ನಗರದ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಅಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.



ದೇವನಹಳ್ಳಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹತ್ತನೇ ಮಹಡಿಯಿಂದ ಜಿಗಿದು ಯುವತಿ ಆತ್ಮಹತ್ಯೆ

ಬೆಂಗಳೂರು: ಎಚ್‌ಎಎಲ್‌ನ ಅಪಾರ್ಟ್‌ಮೆಂಟ್‌ವೊಂದರ 10ನೇ ಮಹಡಿಯಿಂದ ಜಿಗಿದು ಯುವತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಎಚ್‌ಎಎಲ್ ನಿವಾಸಿ ವರ್ಷಾ (18) ಆತ್ಮಹತ್ಯೆ ಮಾಡಿಕೊಂಡವರು.

ಎಚ್‌ಎಎಲ್‌ನ ಕುಂದಲಹಳ್ಳಿ ಕಾಲೊನಿಯ ಅಪಾರ್ಟ್‌ಮೆಂಟ್‌ವೊಂದರ ಮೊದಲ ಮಹಡಿಯಲ್ಲಿ ಪೋಷಕರ ಜೊತೆಗೆ ವರ್ಷಾ ವಾಸವಿದ್ದರು. ತಂದೆ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದರೆ, ತಾಯಿ ದಂತ ವೈದ್ಯೆಯಾಗಿ ಕೆಲಸ ಮಾಡುತ್ತಿದ್ದಾರೆ. ವರ್ಷಾ, ಪಿಯು ಮುಗಿಸಿ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಶಿಕ್ಷಣ ಪಡೆಯಲು ಮುಂದಾಗಿದ್ದರು. ಗುರುವಾರ ತಡರಾತ್ರಿ ಅಪಾರ್ಟ್‌ಮೆಂಟ್‌ನ ಮೊದಲ ಮಹಡಿಯಿಂದ 10ನೇ ಮಹಡಿಗೆ ನಡೆದು ತೆರಳಿದ್ದರು. ಅಲ್ಲಿಂದ ಕೆಳಕ್ಕೆ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ಎಚ್‌ಎಎಲ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹವನ್ನು ಪೋಷಕರಿಗೆ ಹಸ್ತಾಂತರ ಮಾಡಲಾಗಿದೆ. ಎಚ್‌ಎಎಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವರ್ಷಾ ಆತ್ಮಹತ್ಯೆ ಮಾಡಿಕೊಳ್ಳಲು ನಿಖರ ಕಾರಣವೇನು ಎಂಬುದು ತಿಳಿದು ಬಂದಿಲ್ಲ.

ಯಾರ ಮೇಲೂ ಪೋಷಕರು ಅನುಮಾನ ವ್ಯಕ್ತಪಡಿಸಿಲ್ಲ. ಜೊತೆಗೆ, ಮನೆಯಲ್ಲೂ ಯಾವುದೇ ಜಗಳ, ವಾಗ್ವಾದ ನಡೆದಿರಲಿಲ್ಲ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಕಟ್ಟಡ ಕಾಮಗಾರಿ ವೇಳೆ ಗಲಾಟೆ ● ದರೋಡೆಗೆ ಸಂಚು ರೂಪಿಸಿದ ಮೇಸ್ತ್ರಿ

ಸೇಡಿಗಾಗಿ ಸ್ನೇಹಿತನ ಮನೆಯಲ್ಲಿ ದರೋಡೆ

ಪ್ರಜಾವಾಣಿ ವಾರ್ತೆ



ಗುರುಪ್ರಸಾದ್



ಅರ್ಬಾಜ್



ಜಿಬ್ರಾನ್

ಬೆಂಗಳೂರು: ಸ್ನೇಹಿತನ ಮನೆಯಲ್ಲೇ ದರೋಡೆ ಮಾಡಿಸಿದ್ದ ಮೇಸ್ತ್ರಿ ಸೇರಿ ಮೂವರನ್ನು ಚಿಕ್ಕಜಾಲ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗುರುಪ್ರಸಾದ್, ಅರ್ಬಾಜ್, ಜಿಬ್ರಾನ್ ಬಂಧಿತರು. ಬಂಧಿತರಿಂದ ₹12 ಲಕ್ಷ ನಗದು, ₹24 ಲಕ್ಷ ಮೌಲ್ಯದ ಆಭರಣ, ಒಂದು ದ್ವಿಚಕ್ರ ವಾಹನ, ಒಂದು ಕಾರು ಹಾಗೂ ಎರಡು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಚಿಕ್ಕಜಾಲದ ಹುಣಸಮಾರನಹಳ್ಳಿಯ ಕೃಷ್ಣಾಚಾರಿ ಅವರ ಮನೆಗೆ ಏಪ್ರಿಲ್ 18ರಂದು ರಾತ್ರಿ ನುಗ್ಗಿದ್ದ ಅರ್ಬಾಜ್ ಹಾಗೂ ಜಿಬ್ರಾನ್, ಮನೆಯವರಿಗೆ ಚಾಕು ತೋರಿಸಿ 79 ಗ್ರಾಂ ಚಿನ್ನ, 64 ಗ್ರಾಂ ಬೆಳ್ಳಿ ಹಾಗೂ ₹12 ಲಕ್ಷ ನಗದು ದೋಚಿ ಪರಾರಿ ಆಗಿದ್ದರು. ಕೃಷ್ಣಾಚಾರಿ ಅವರು ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಕೃತ್ಯ ನಡೆಸಿದ ಬಳಿಕ ಆರೋಪಿಗಳು ತಲೆಮರೆಸಿಕೊಂಡಿದ್ದರು. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ತಂಡವು ವಿವಿಧೆಡೆ ಹುಡುಕಾಟ ನಡೆಸಿ ಮೂವರನ್ನು ಬಂಧಿಸಿದೆ.

ಕೃಷ್ಣಾಚಾರಿ ಅವರ ಪುತ್ರ ಸುದರ್ಶನ್ ಹಾಗೂ ಆರೋಪಿ ಗುರುಪ್ರಸಾದ್ ಸ್ನೇಹಿತರು. ತಂದೆ ಹೊಸದಾಗಿ ನಿರ್ಮಿಸುತ್ತಿದ್ದ ಮನೆಯ ಕಾಮಗಾರಿ ಕೆಲಸವನ್ನು ಸುದರ್ಶನ್ ಅವರು ಸ್ನೇಹಿತನೇ ಆದ ಗುರುಪ್ರಸಾದ್‌ಗೆ ಕೊಡಿಸಿದ್ದರು. ಸ್ನೇಹಿತನ ಮನೆಯೆಂದು ಕಡಿಮೆ ಹಣಕ್ಕೆ ಕೆಲಸ ಮಾಡಿಕೊಡುವುದಾಗಿ ಗುರುಪ್ರಸಾದ್ ಒಪ್ಪಿಕೊಂಡಿದ್ದರು. ಆದರೆ, ಮನೆ ನಿರ್ಮಾಣ ಸ್ಥಳದ ಬಳಿ ಬರುತ್ತಿದ್ದ ಸುದರ್ಶನ್ ಹಾಗೂ ಅವರ ತಂದೆ ಕಾಮಗಾರಿ ಕೆಲಸಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಅಲ್ಲದೇ ಪೂರ್ತಿ ಹಣ ಕೊಡುವುದಿಲ್ಲ ಎಂದೂ ಹೇಳಿದ್ದರು. ಇದರಿಂದ ಬೇಸತ್ತಿದ್ದ ಗುರುಪ್ರಸಾದ್ ಅವರು ಸೇಡು ತೀರಿಸಿಕೊಳ್ಳಲು ಸಂಚು ರೂಪಿಸಿ ದರೋಡೆ ಮಾಡಿಸಿದ್ದರು’ ಎಂದು ಮೂಲಗಳು ಹೇಳಿವೆ.

ಕೆಲಸಗಾರರಿಗೆ ತರಬೇತಿ: ಕೆಲಸ ಮಾಡುತ್ತಿದ್ದ ಅರ್ಬಾಜ್ ಹಾಗೂ ಜಿಬ್ರಾನ್‌ಗೆ ಕಳ್ಳತನ ಮಾಡುವುದು ಹೇಗೆಂದು ಗುರುಪ್ರಸಾದ್ ತರಬೇತಿ ನೀಡಿದ್ದರು. ಅದರಂತೆ ಏಪ್ರಿಲ್ 18ರಂದು ರಾತ್ರಿ ಕೃಷ್ಣಾಚಾರಿ ಅವರ ಮನೆಗೆ ಇಬ್ಬರು ನುಗ್ಗಿ, ಚಾಕು ತೋರಿಸಿ ಚಿನ್ನಾಭರಣ, ನಗದು ದೋಚಿ ಪರಾರಿ ಆಗಿದ್ದರು ಎಂದು ಪೊಲೀಸರು ತಿಳಿಸಿದರು.

‘ಮನೆಗೆ ನುಗ್ಗಿದ ಬಳಿಕ ಆರೋಪಿಗಳು ಚಾಕು ತೋರಿಸಿ ಕಬೋರ್ಡ್ ಕೀ ಕೇಳಿದ್ದರು. ಕೀ ಪಡೆದು ಚಿನ್ನ, ಬೆಳ್ಳಿ ಹಾಗೂ ಹಣವನ್ನು ಚೀಲದಲ್ಲಿ ತುಂಬಿಕೊಂಡಿದ್ದರು. ಈ ವೇಳೆ ‘ನಮ್ಮ ಜೀವನಕ್ಕೆ ಏನು ಮಾಡುವುದು’ ಎಂಬುದಾಗಿ ಮನೆಯ ಮಾಲೀಕರು ಕಣ್ಣೀರು ಹಾಕಿದರು. ಆಗ ₹50 ಸಾವಿರ ವಾಪಸ್ ನೀಡಿದ್ದ ಆರೋಪಿಗಳು ಅಲ್ಲಿಂದ ಪರಾರಿ ಆಗಿದ್ದರು’ ಎಂದು ಮೂಲಗಳು ಹೇಳಿವೆ.

‘ಮದುವೆ ಆಗುವುದಾಗಿ ನಂಬಿಸಿ ವಂಚನೆ’

ವಿವಾಹಕ್ಕೆ ಸಂಬಂಧಿಸಿದ ವೆಬ್‌ಸೈಟ್‌ನಲ್ಲಿ ಪರಿಚಯವಾಗಿದ್ದ ಯುವತಿಯನ್ನು ಮದುವೆ ಆಗುವುದಾಗಿ ನಂಬಿಸಿ, ಹಣಕ್ಕೆ ಬೇಡಿಕೆಯೊಡ್ಡಿ ವಂಚಿಸಿದ ಆರೋಪದ ಅಡಿ ಯುವಕನ ವಿರುದ್ಧ ಆಡುಗೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಪ್ರದೀಪ್ ಸೋಲೊಮನ್ ಹಾಗೂ ಅವರ ತಾಯಿ ಕಲಾವತಿ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಆಡುಗೋಡಿಯ ಪ್ಯಾಟ್ರಿಕ್ ರಾಜು ಎಂಬುವರು ದೂರು ನೀಡಿದ್ದಾರೆ.

‘ಪ್ಯಾಟ್ರಿಕ್ ರಾಜುಗೆ 25 ವರ್ಷದ ಪುತ್ರಿ ಇದ್ದಾರೆ. ವಿವಾಹಕ್ಕೆ ಸಂಬಂಧಿಸಿದ ವೆಬ್‌ಸೈಟ್‌ನಲ್ಲಿ ವರನನ್ನು ಹುಡುಕುತ್ತಿದ್ದರು. ಆ ವೇಳೆ ಪ್ರದೀಪ್ ಸೋಲೊಮನ್ ಹಾಗೂ ಅವರ ತಾಯಿ ಕಲಾವತಿ ಅವರು ಪ್ಯಾಟ್ರಿಕ್ ರಾಜು ಅವರನ್ನು ಸಂಪರ್ಕಿಸಿದ್ದರು’ ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ನ್ಯಾಯಾಧೀಶ ಹುದ್ದೆಗೆ ಪರೀಕ್ಷೆ ಬರೆದಿದ್ದು, ಈ ಬಾರಿ ನ್ಯಾಯಾಧೀಶ ಆಗುತ್ತೇನೆ’ ಎಂಬುದಾಗಿ ಪ್ರದೀಪ್ ಸುಳ್ಳು ಹೇಳಿದ್ದರು. ಮೈಸೂರಿನಲ್ಲಿ ಇರುವ ಆರೋಪಿಯ ಮನೆಗೆ ಪ್ಯಾಟ್ರಿಕ್ ರಾಜು ಕುಟುಂಬಸ್ಥರೊಂದಿಗೆ ಹೋಗಿದ್ದರು. ಆಗ ಮೈಸೂರಿನಲ್ಲಿ ಮೂರು ಎಕರೆ ಜಾಗ, ಒಂದು ಕಾಂಪ್ಲೆಕ್ಸ್ ಇರುವುದಾಗಿ ಪ್ರದೀಪ್ ನಂಬಿಸಿದ್ದರು. ಜೊತೆಗೆ, ಪಿಎಚ್.ಡಿ ಪದವೀಧರ ಎಂಬುದಾಗಿ ಸುಳ್ಳು ಮಾಹಿತಿ ನೀಡಿದ್ದರು’ ಎಂದು ದೂರಲಾಗಿದೆ.

‘ಪ್ಯಾಟ್ರಿಕ್ ರಾಜು ಮನೆಗೆ ಬಂದಿದ್ದ ಪ್ರದೀಪ್ ಹಾಗೂ ವರನ ತಾಯಿ, ವರದಕ್ಷಿಣೆಯಾಗಿ ಒಂದು ಕಾರು, 1 ಕೆ.ಜಿ ಚಿನ್ನ, ಬೆಂಗಳೂರಿನಲ್ಲಿ 1 ಮನೆ ಮತ್ತು ಹುಡುಗನಿಗೆ ಚಿನ್ನದ ಚೈನು, ಉಂಗುರ ಹಾಗೂ ಕೈಗಡಿಯಾರ ನೀಡಬೇಕೆಂದು ಬೇಡಿಕೆ ಇಟ್ಟಿದ್ದರು. ನಿಶ್ಚಿತಾರ್ಥ ಮುಗಿದ ಬಳಿಕ ವರದಕ್ಷಿಣೆ ಹಣ ಮತ್ತು ಚಿನ್ನದ ಒಡವೆಯೊಂದಿಗೆ ಮನೆಯನ್ನು ತಮ್ಮ ಹೆಸರಿಗೆ ಮಾಡಿಕೊಟ್ಟರೆ ಮದುವೆ ಮಾಡಿಕೊಳ್ಳುತ್ತೇನೆ. ಇಲ್ಲವಾದಲ್ಲಿ ಮದುವೆ ನಿಲ್ಲಿಸುವುದಾಗಿ ಆರೋಪಿ ಪ್ರದೀಪ್ ತಿಳಿಸಿದ್ದರು’ ಎಂದು ದೂರು ನೀಡಲಾಗಿದೆ.

‘ವರದಕ್ಷಿಣೆಯಾಗಿ ₹20 ಲಕ್ಷ ಪಡೆಯಲಾಗಿದೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಆರೋಪ ನಿರಾಕರಣೆ

‘ಒಬ್ಬಳೇ ಮಗಳಿದ್ದಾಳೆ. ನೀವು ನಮ್ಮ ಮನೆಯ ಅಳಿಯ ಆಗಬೇಕು ಎಂದು ಪ್ಯಾಟ್ರಿಕ್ ರಾಜು ಕೇಳಿಕೊಂಡಿದ್ದರು’ ಎಂಬುದಾಗಿ ವಿಡಿಯೊದಲ್ಲಿ ಹೇಳಿಕೊಂಡಿರುವ ಪ್ರದೀಪ್, ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿದ್ದಾರೆ. ಅಲ್ಲದೇ ಎರಡು ಮನೆಗಳನ್ನು ಬಾಡಿಗೆಗೆ ನೀಡಿರುವುದಾಗಿ ಹೇಳಿ ದಾಖಲೆಗಳನ್ನು ಪ್ರದರ್ಶಿಸಿದ್ದಾರೆ.



ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರಿಗೆ ಇ.ವಿ ಆಟೊರಿಕ್ಷಾ ವಿತರಿಸಿದರು

ಮಹಿಳೆಯರಿಗೆ ಇ.ವಿ ಆಟೊ ವಿತರಿಸಿದ ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಆರ್ಥಿಕ ಸ್ವಾವಲಂಬನೆ, ಹಸಿರು ನಗರ ಸಾರಿಗೆ ವ್ಯವಸ್ಥೆಗೆ ಉತ್ತೇಜನ ನೀಡಲೆಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಸ್ವಂತ ಖರ್ಚಿಯಲ್ಲಿ ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರಿಗೆ 10 ಎಲೆಕ್ಟ್ರಿಕ್ ಆಟೊರಿಕ್ಷಾ (ಇವಿ) ವಿತರಿಸಿದರು.

ಕೋರಮಂಗಲ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಸ್ವಾವಲಂಬಿ, ಗೌರವಯುತ ಹಾಗೂ ಆರ್ಥಿಕವಾಗಿ ಸ್ವತಂತ್ರ ಜೀವನ ನಡೆಸಲು ಆಶಿಸುವ ಮಹಿಳೆಯರಿಗೆ ನನ್ನ ಸ್ವಂತ ವೆಚ್ಚದಲ್ಲಿ ಇ.ವಿ ಆಟೊಗಳನ್ನು ಉಚಿತವಾಗಿ ನೀಡಿರುವುದು ಸಂತೃಪ್ತಿ ತಂದಿದೆ’ ಎಂದು ಹೇಳಿದರು.

‘ಯೋಜನೆಯಲ್ಲಿ ವಿಧವೆಯರು, ಏಕಪೋಷಕ, ಕುಟುಂಬದ ಬೆಂಬಲವಿಲ್ಲದ ಮಹಿಳೆಯರಿಗೆ ಆದ್ಯತೆ ನೀಡಲಾಗಿದ್ದು, ಇದರಿಂದ ಅವರು ಬದುಕು ಕಟ್ಟಿಕೊಳ್ಳಲು ಸಹಕಾರಿಯಾಗಲಿದೆ’ ಎಂದರು.

‘ಈ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಸಿ.ಜಿ.ಐ, ಬಿ.ಪ್ಯಾಕ್, ಪೀಸ್ ಆಟೊ ಯೂನಿಯನ್ ವತಿಯಿಂದ ವಿಶೇಷ ತರಬೇತಿ ನೀಡಲಾಗಿದೆ. ಎಲ್ಲರೂ ಚಾಲನಾ ಪರವಾನಗಿ ಹೊಂದಿದ್ದು, ಎಲೆಕ್ಟ್ರಿಕ್ ಆಟೊಗಳನ್ನು ಸುರಕ್ಷಿತ, ವೃತ್ತಿಪರ ರೀತಿಯಲ್ಲಿ ಚಾಲನೆ ಮಾಡಲು ಅಗತ್ಯ ಕೌಶಲ ಹೊಂದಿದ್ದಾರೆ’ ಎಂದು ತಿಳಿಸಿದರು.

ಆಟೊರಿಕ್ಷಾ ವಿತರಣಾ ಕಾರ್ಯಕ್ರಮದಲ್ಲಿ ಪೀಸ್ ಆಟೊ ರಾಜ್ಯಾಧ್ಯಕ್ಷ ರಘು ನಾರಾಯಣಗೌಡ, ಬಿ.ಪ್ಯಾಕ್ ಕಾರ್ಯಕ್ರಮ ಮುಖ್ಯಸ್ಥ ರಾಘವೇಂದ್ರ ಪೂಜಾರಿ ಹೆಚ್.ಎಸ್. ಉಪಸ್ಥಿತರಿದ್ದರು.

ಚಿತ್ರಾವಳಿ



ಕೆ.ಆರ್.ಪುರದ ಶ್ರೀವೆಂಕಟೇಶ್ವರ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಅಚಿವರ್ಸ್ ಡೇ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಶೇ 85ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷ ಕೆ.ವಿ.ಮುನಿಸ್ವಾಮಿ ಅವರು ಸ್ಮರಣಿಕೆ, ಪ್ರಮಾಣಪತ್ರ ನೀಡಿದರು. ಆಡಳಿತಾಧಿಕಾರಿ ಪುಟ್ಟರಾಜು, ನಿರ್ದೇಶಕ ವಿ.ಎಂ. ರವಿ, ಜೆ.ಇ. ಪ್ರಕಾಶ್, ಗೀತಾಂಜಲಿ ಭಾಗವಹಿಸಿದ್ದರು



ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ (ಡೀಮ್ಡ್ ವಿಶ್ವವಿದ್ಯಾಲಯ) ಘಟಿಕೋತ್ಸವದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಎಸ್.ಎನ್. ಜಯರಾಮ್ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಯಿತು

ಲೈಂಗಿಕ ಕಿರುಕುಳ: ಎಫ್‌ಐಆರ್

ಬೆಂಗಳೂರು: ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದ ಅಡಿ ಬಾಕ್ಸಿಂಗ್ ತರಬೇತಿದಾರನ ವಿರುದ್ಧ ಸಂಪಂಗಿರಾಮನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಮಚಂದ್ರ (50) ಆರೋಪಿ. 17 ವರ್ಷದ ಬಾಲಕಿಯ ತಾಯಿ ನೀಡಿದ ದೂರಿನ ಮೇಲೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ನಾಲ್ಕು ತಿಂಗಳಿಂದ ನನ್ನ ಮಗಳು ರಾಮಚಂದ್ರನಿಂದ ಕಿರುಕುಳ ಅನುಭವಿಸುತ್ತಿದ್ದಾಳೆ. ರಾಮಚಂದ್ರ ವಿರುದ್ಧ ಕಮಿಟಿಗೂ ದೂರು ನೀಡಲಾಗಿದೆ. ಮೇ 17ರಂದು ಬಾಕ್ಸಿಂಗ್ ಸ್ಪರ್ಧೆಗೆ ಚೆನ್ನೈಗೆ ತೆರಳಿದ್ದ ವೇಳೆ ರಾಮಚಂದ್ರ ಅವರಿದ್ದ ಕೊಠಡಿಗೆ ಮಗಳನ್ನು ಕರೆಸಿಕೊಂಡು ಕಿರುಕುಳ ನೀಡಿದ್ದಾರೆ. ಆಕೆ ವಿರೋಧಿಸಿದ್ದರಿಂದ ನಿಂದಿಸಿದ್ದಾರೆ. ಕ್ರೀಡಾಂಗಣದಲ್ಲಿಯೂ ಇದೇ ರೀತಿ ವರ್ತಿಸಿದ್ದಾರೆ. ಪೋಷಕರಿಗೆ ವಿಷಯ ತಿಳಿಸಿದರೆ, ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಸಿದ್ದಾರೆ’ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘಟನೆ ಪ್ರತಿಭಟನೆ

‘ಸೇವಾ ಭದ್ರತೆ ಒದಗಿಸಿ, ಗೌರವಧನ ಹೆಚ್ಚಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನಲ್ಲೂ (2026–27) ಅತಿಥಿ ಉಪನ್ಯಾಸಕರ ಸೇವೆಯನ್ನು ಮುಂದುವರಿಸಬೇಕು, ₹30 ಸಾವಿರ ಕನಿಷ್ಠ ಗೌರವಧನ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘಟನೆ ಪ್ರತಿಭಟನೆ ನಡೆಸಿತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದ ಅತಿಥಿ ಉಪನ್ಯಾಸಕರು, ಶೀಘ್ರ ಬೇಡಿಕೆ ಈಡೇರಿಸುವಂತೆ ಸರ್ಕಾರವನ್ನು ಆಗ್ರಹಿಸಿದರು.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರನ್ನು ಈ ವರ್ಷವೂ ಸೇವೆಯಲ್ಲಿ ಮುಂದುವರಿಸಿ, ಸೇವಾ ಭದ್ರತೆ ನೀಡಬೇಕು. ಕೇವಲ ಹೆಚ್ಚು ಮೆರಿಟ್ ಇರುವ ಅಭ್ಯರ್ಥಿಗಳನ್ನು ಪ್ರತಿ ವರ್ಷವೂ ನೇಮಕ ಮಾಡಿಕೊಳ್ಳಲು ಆದೇಶ ನೀಡುತ್ತಿರುವುದು, ಸೇವಾ ಹಿರಿತನವುಳ್ಳ ಅತಿಥಿ ಉಪನ್ಯಾಸಕರಿಗೆ ಮಾಡುವ ಅನ್ಯಾಯವಾಗಿದೆ. ಈ ನಿಯಮದಿಂದ ಪ್ರತಿ ವರ್ಷವೂ ಹಲವರು ಕೆಲಸ ಕಳೆದುಕೊಂಡು ಬೀದಿ ಪಾಲಾಗುತ್ತಿದ್ದಾರೆ ಎಂದು ಪ್ರತಿಭಟನಕಾರರು ಆರೋಪಿಸಿದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರು ಪ್ರತಿಭಟನೆ ನಡೆಸಿದರು.

‘ವಾರಕ್ಕೆ ಕೇವಲ 10ರಿಂದ 12 ಗಂಟೆ ಕಾರ್ಯಭಾರ ನೀಡಬೇಕೆಂದು ನಿಯಮವಿದ್ದರೂ 20 ಗಂಟೆಗಳಿಗಿಂತ ಹೆಚ್ಚು ಕಾರ್ಯಭಾರ ನೀಡಲಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯದಲ್ಲಿ 5 ಸಾವಿರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಕೆಲಸ ಮಾಡುತ್ತಿದ್ದಾರೆ. ಪಿ.ಎಫ್, ಇಡುಗಂಟು ವ್ಯವಸ್ಥೆ ಇಲ್ಲ. ಎರಡು ತಿಂಗಳಲ್ಲಿ ಇಬ್ಬರು ಅಕಾಲಿಕ ಮರಣ ಹೊಂದಿದ್ದಾರೆ. ಮೃತರ ಕುಟುಂಬಗಳಿಗೆ ಸರ್ಕಾರ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಸಹಾಯ ದೊರಕಿಲ್ಲ. 10ರಿಂದ 15 ವರ್ಷ ಕೆಲಸ ಮಾಡಿರುವ ಅತಿಥಿ ಉಪನ್ಯಾಸಕರನ್ನು ಕಾಯಂ ಮಾಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಸರ್ಕಾರ ₹14 ಸಾವಿರ ಗೌರವ ಧನ ನೀಡುತ್ತಿದ್ದು, ಇದರಿಂದ ಜೀವನ ನಿರ್ವಹಣೆ ಕಷ್ಟ. ಹಾಗಾಗಿ ₹30 ಸಾವಿರ ನೀಡಬೇಕು. ಸೇವಾ ಪ್ರಮಾಣ ಪತ್ರ, ಗುರುತಿನ ಚೀಟಿ ಮತ್ತು ಕೃಪಾಂಕ ನೀಡುವುದರ ಮುಖಾಂತರ ಸೇವಾ ಭದ್ರತೆ ನೀಡಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಹಂಪಿ ಕನ್ನಡ ವಿ.ವಿ ವಿಶ್ರಾಂತ ಕುಲಪತಿ ಎ. ಮುರಿಗೆಪ್ಪ , ಸಂಘಟನೆಯ ಕಾರ್ಯದರ್ಶಿ ರಾಜೇಶ್ ಭಟ್, ಜಂಟಿ ಕಾರ್ಯದರ್ಶಿ ನಾಗರತ್ನ ಎಸ್.ಜಿ, ಸಂಘಟನೆಯ ಸಲಹೆಗಾರ ವಿ.ಎನ್ ರಾಜಶೇಖರ್, ಶಿಕ್ಷಣ ಉಳಿಸಿ ಸಮಿತಿಯ ಐಶ್ವರ್ಯ ಸಿ.ಎಂ ಭಾಗವಹಿಸಿದ್ದರು.

ತ್ವರಿತ ಪರೀಕ್ಷೆಗೆ ಪ್ರತ್ಯೇಕ ಪ್ರಯೋಗಾಲಯ

ಖಾಸಗಿ ಸಂಸ್ಥೆಯ ಸಹಭಾಗಿತ್ವದಲ್ಲಿ ಆರೋಗ್ಯ ಇಲಾಖೆ ಕ್ರಮ
ಸಿಜಿಎಚ್‌ಎಸ್ ದರಗಳಡಿ ಪರೀಕ್ಷಾ ಶುಲ್ಕ ನಿಗದಿ

• ವರುಣ ಹೆಗಡೆ

ಬೆಂಗಳೂರು: ಸರ್ಕಾರಿ ಪ್ರಯೋಗಾಲಯಗಳ ಮೇಲಿನ ಭಾರ ಇಳಿಸಲು ಹಾಗೂ ತ್ವರಿತವಾಗಿ ಪರೀಕ್ಷಾ ವರದಿಗಳನ್ನು ಒದಗಿಸಲು ನಗರದ ಆಯ್ದ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಸಗಿ ಸಹಭಾಗಿತ್ವದಡಿ ಪ್ರತ್ಯೇಕ ಪ್ರಯೋಗಾಲಯಗಳು ಸ್ಥಾಪನೆಯಾಗಲಿವೆ.

ನಗರದ ಪ್ರಮುಖ ಸರ್ಕಾರಿ ಆಸ್ಪತ್ರೆಗಳು ಸದ್ಯ ತಮ್ಮ ವ್ಯಾಪ್ತಿಯಲ್ಲಿ ಪ್ರತ್ಯೇಕ ಪ್ರಯೋಗಾಲಯಗಳನ್ನು ಹೊಂದಿದ್ದು, ಬಿಪಿಎಲ್ ಕುಟುಂಬದ ಸದಸ್ಯರಿಗೆ ಉಚಿತವಾಗಿ ಪರೀಕ್ಷೆಗಳನ್ನು ನಡೆಸುತ್ತಿವೆ. ಇನ್ನುಳಿದವರಿಗೆ ರಿಯಾಯಿತಿ ದರದಲ್ಲಿ ಪರೀಕ್ಷೆಗಳನ್ನು ಮಾಡಲಾಗುತ್ತಿದೆ. ಆದರೆ, ರೋಗಿಗಳ ದಟ್ಟಣೆ ಹೆಚ್ಚಿರುವ ಕಾರಣ ವರದಿಗೆ ಕಾಯಬೇಕಾಗಿದೆ. ಇನ್ನೊಂದೆಡೆ ಖಾಸಗಿ ಪ್ರಯೋಗಾಲಯಗಳಲ್ಲಿ ಪರೀಕ್ಷಾ ಶುಲ್ಕ ದುಬಾರಿಯಾಗಿದ್ದು, ಸಾವಿರಾರು ರೂಪಾಯಿ ಭರಿಸಬೇಕಾದ ಸ್ಥಿತಿ ಇದೆ. ಆದ್ದರಿಂದ ಎಚ್‌ಎಲ್‌ಎಲ್ ಲೈಫ್‌ಕೇರ್ ಲಿಮಿಟೆಡ್ (ಹಿಂದ್ ಲ್ಯಾಬ್ಸ್) ಸಹಯೋಗದಲ್ಲಿ ಪ್ರತ್ಯೇಕ ಪ್ರಯೋಗಾಲಯಗಳನ್ನು ನಗರದಲ್ಲಿ ಸ್ಥಾಪಿಸಲು ಆರೋಗ್ಯ ಇಲಾಖೆ ಕ್ರಮ ಕೈಗೊಂಡಿದೆ.

ಈಗಾಗಲೇ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಎಚ್‌ಎಲ್‌ಎಲ್ ಲೈಫ್‌ಕೇರ್‌ನ ಪ್ರಯೋಗಾಲಯ ಕಾರ್ಯನಿರ್ವಹಿಸುತ್ತಿದ್ದು, ಆ ಪ್ರಯೋಗಾಲಯಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಆದ್ದರಿಂದ ಸರ್.ಸಿ.ವಿ. ರಾಮನ್ ಆಸ್ಪತ್ರೆ ಹಾಗೂ ಜಯನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ಎಚ್‌ಎಲ್‌ಎಲ್ ಲೈಫ್‌ಕೇರ್ ಪ್ರಯೋಗಾಲಯ ಪ್ರಾರಂಭಿಸಲಾಗುತ್ತಿದೆ. ಸಂಸ್ಥೆಯ ಪ್ರತಿನಿಧಿಗಳು ಸ್ಥಳಗಳನ್ನು ಪರಿಶೀಲಿಸಿದ್ದಾರೆ. ಈ ಘಟಕಗಳಲ್ಲಿ ನಡೆಸುವ ಪರೀಕ್ಷೆಗಳಿಗೆ ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ (ಸಿಜಿಎಚ್‌ಎಸ್) ದರಗಳಡಿ ಪರೀಕ್ಷಾ ಶುಲ್ಕ ನಿಗದಿಯಾಗುತ್ತದೆ.

ಪ್ರಯೋಗಾಲಯ ಸ್ಥಾಪನೆಗಾಗಿ ಎಚ್‌ಎಲ್‌ಎಲ್ ಲೈಫ್‌ಕೇರ್ ಸಂಸ್ಥೆಯ ಪ್ರತಿನಿಧಿಗಳು ಭೇಟಿ ನೀಡಿ, ಸ್ಥಳಪರಿಶೀಲಿಸಿದ್ದಾರೆ. ಶೀಘ್ರದಲ್ಲಿಯೇ ಪ್ರಾರಂಭವಾಗಲಿದೆ
ಡಾ. ರಾಜೇಶ್ ಕೆ.ಎಸ್., ಸರ್.ಸಿ.ವಿ. ರಾಮನ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ



ನೇರ ಭೇಟಿಗೆ ಅವಕಾಶ: ಆಸ್ಪತ್ರೆಗಳಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಪ್ರಯೋಗಾಲಯಗಳಲ್ಲಿ ಅಲ್ಲಿನ ವೈದ್ಯರು ಶಿಫಾರಸು ಮಾಡಿದ ಪರೀಕ್ಷೆಗಳನ್ನು ಮಾತ್ರ ಮಾಡಲಾಗುತ್ತದೆ. ಪರೀಕ್ಷೆ ಲಭ್ಯವಿಲ್ಲದಿದ್ದರೆ ಅಥವಾ ನಿಗದಿತ ಪರೀಕ್ಷೆಗೆ ಅಗತ್ಯ ವ್ಯವಸ್ಥೆ ಇಲ್ಲದಿದ್ದರೆ ಹೊರಗಡೆಯಿಂದ ಪರೀಕ್ಷೆ ಮಾಡಿಸಿಕೊಂಡು ಬರಲು ವೈದ್ಯರು ಸೂಚಿಸುತ್ತಿದ್ದಾರೆ. ಹಾಲಿ ವ್ಯವಸ್ಥೆಯಡಿ ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಬಂಧಪಟ್ಟ ಆಸ್ಪತ್ರೆಯ ವೈದ್ಯರು ಸೂಚಿಸಿದ ಪರೀಕ್ಷೆಗಳನ್ನು ಮಾತ್ರ ಮಾಡಲಾಗುತ್ತದೆ. ಎಚ್‌ಎಲ್‌ಎಲ್ ಲೈಫ್‌ಕೇರ್ ಸ್ಥಾಪಿಸುವ ಪ್ರಯೋಗಾಲಯಗಳಲ್ಲಿ ಈ ನಿರ್ಬಂಧವಿಲ್ಲ. ವಿವಿಧ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆ ವೈದ್ಯರು ಸೂಚಿಸಿದ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬಹುದಾಗಿದೆ.

‘ಖಾಸಗಿ ವ್ಯವಸ್ಥೆಯಲ್ಲಿ ಅಧಿಕ ಪರೀಕ್ಷಾ ಶುಲ್ಕ ಪಾವತಿಸಲು ಸಾಧ್ಯವಾಗದವರು, ಈ ಪ್ರಯೋಗಾಲಯದ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ. ವಿವಿಧ ಆಸ್ಪತ್ರೆ ಮತ್ತು ಕ್ಲಿನಿಕ್‌ಗಳಲ್ಲಿ ವೈದ್ಯರನ್ನು ಸಂಪರ್ಕಿಸಿ, ಪರೀಕ್ಷೆಯ ಚೀಟಿ ಹೊಂದಿರುವವರು ನೇರವಾಗಿ ಪ್ರಯೋಗಾಲಯಕ್ಕೆ ಭೇಟಿ ನೀಡಬಹುದು. ಬಡ-ಮಧ್ಯಮ ವರ್ಗದವರಿಗೆ ಈ ಪ್ರಯೋಗಾಲಯ ಸಹಕಾರಿಯಾಗಲಿದೆ’ ಎಂದು ಸರ್.ಸಿ.ವಿ. ರಾಮನ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ರಾಜೇಶ್ ಕೆ.ಎಸ್. ತಿಳಿಸಿದರು.

ಮನೆಯಿಂದಲೂ ಮಾದರಿ ಸಂಗ್ರಹ

ಎಚ್‌ಎಲ್‌ಎಲ್ ಲೈಫ್‌ಕೇರ್ ಲಿಮಿಟೆಡ್ ಕೇಂದ್ರ ಸರ್ಕಾರದ ಸಂಸ್ಥೆಯಾಗಿದ್ದು, ಇದು ನಡೆಸುತ್ತಿರುವ ಹಿಂದ್ ಲ್ಯಾಬ್ಸ್ ಡಯಾಗ್ನಾಸ್ಟಿಕ್ ಕೇಂದ್ರಗಳು ಕರ್ನಾಟಕ ಸೇರಿ 13 ರಾಜ್ಯಗಳಲ್ಲಿ ಇವೆ. 286 ಕೇಂದ್ರಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿವೆ. ಸರ್.ಸಿ.ವಿ. ರಾಮನ್ ಆಸ್ಪತ್ರೆ ಹಾಗೂ ಜಯನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ಸ್ಥಾಪನೆಯಾಗುವ ಪ್ರಯೋಗಾಲಯಗಳು, ರೋಗ ನಿರ್ಣಯ ಮಾದರಿಗಳನ್ನು ಮನೆಗಳಿಂದ ಸಂಗ್ರಹಿಸುವ ವ್ಯವಸ್ಥೆಯನ್ನೂ ರೂಪಿಸಲಿವೆ.

ವೃದ್ಧರು, ತೀವ್ರ ಅನಾರೋಗ್ಯ ಸಮಸ್ಯೆ ಹೊಂದಿರುವವರು, ದೀರ್ಘಕಾಲೀನ ಹಾಗೂ ಗಂಭೀರ ಸಮಸ್ಯೆ ಎದುರಿಸುತ್ತಿರುವವರಿಗೆ ನಿಯಮಿತವಾಗಿ ಆಸ್ಪತ್ರೆಗೆ ಭೇಟಿ ನೀಡಿ, ಪರೀಕ್ಷೆಗೆ ಒಳಪಡಲು ಸಾಧ್ಯವಾಗುವುದಿಲ್ಲ. ಅಂತಹವರಿಗಾಗಿ ರೋಗಿಯ ಮನೆಗೆ ತೆರಳಿ, ಪರೀಕ್ಷೆಗೆ ರಕ್ತದ ಮಾದರಿಯನ್ನು ವ್ಯವಸ್ಥಿತವಾಗಿ ಸಂಗ್ರಹಿಸುವ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಈ ರೀತಿ ಮಾದರಿ ಸಂಗ್ರಹಿಸಿ ನಡೆಸುವ ಪರೀಕ್ಷೆಗೆ ಸಿಜಿಎಚ್‌ಎಸ್ ದರ ಹಾಗೂ ಸಾರಿಗೆ ವೆಚ್ಚ ಪಡೆಯಲಾಗುತ್ತದೆ.

ಪ್ರಜಾವಾಣಿ ಫೋನ್-ಇನ್ ಕಾರ್ಯಕ್ರಮ

ಪ್ರಶ್ನೆ ಕೇಳಿ, ಸಮಸ್ಯೆ ಬಗೆಹರಿಸಿಕೊಳ್ಳಿ

- ಜಲಮೂಲಗಳಾದ ಕೆರೆ, ನೀರು ಹರಿಯುವ ರಾಜಕಾಲುವೆಗಳನ್ನು ಕಬಳಿಸಲಾಗಿದೆಯೇ?
- ನಿಮ್ಮ ಜಮೀನಿನ ಖಾತೆ, ಪೋಡಿ ಬದಲಾವಣೆ ಆಗಿಲ್ಲವೇ?
- ಆರ್‌ಟಿಸಿ (ಪಹಣಿ), ಪೌತಿ ಖಾತೆ ಸಮಸ್ಯೆಗಳು ಇನ್ನೂ ಜೀವಂತವಾಗಿವೆಯೇ?
- ಸಾಮಾಜಿಕ ಭದ್ರತಾ ಯೋಜನೆಗಳು ತಲುಪುತ್ತಿಲ್ಲವೇ?
- ನಿಮ್ಮ ಸುತ್ತಮುತ್ತಲ ಸಾರ್ವಜನಿಕ ಆಸ್ತಿ ಒತ್ತುವರಿಯಾಗಿದೆಯೇ?

ಭಾಗವಹಿಸುವವರು



ಜಿ.ಜಗದೀಶ್,
ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ

ದಿನಾಂಕ **25.05.2026** ಸೋಮವಾರ
ಸಮಯ: ಬೆಳಗ್ಗೆ **11.00** ರಿಂದ **12.00** ಗಂಟೆಯವರೆಗೆ
ಕರೆ ಮಾಡಿ ದೂರವಾಣಿ ಸಂಖ್ಯೆ: **080 45557230**

‘ಅಧ್ಯಯನ ಸಹಭಾಗಿತ್ವ ಹೆಚ್ಚಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹವಾಮಾನ ವೈಪರಿತ್ಯದ ಅಪಾಯಗಳ ಜತೆಗೆ ಆರ್ಥಿಕತೆ ಮೇಲೆ ಆಗಲಿರುವ ಪರಿಣಾಮಗಳ ಅಧ್ಯಯನಕ್ಕೆ ಭಾರತವು ಸಹಭಾಗಿತ್ವ ಕಾರ್ಯಕ್ರಮ ರೂಪಿಸಿ ಪರಿಹಾರೋಪಾಯ ಕಂಡುಕೊಳ್ಳಬೇಕಿದೆ’ ಎಂದು ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿಯ ಕುಲಪತಿ ಕೆ.ವಿಶ್ವನಾಥ ಸಲಹೆ ನೀಡಿದರು.



ವಿಶ್ವನಾಥ್

ವಿಶ್ವವಿದ್ಯಾಲಯಲ್ಲಿ ಈಚೆಗೆ ಆಯೋಜಿಸಿದ್ದ ಹವಾಮಾನ ವೈಪರಿತ್ಯದ ಅಪಾಯ, ವಹಿವಾಟು ಸ್ಥಿತಿ ಸ್ಥಾಪಕತ್ವ ಹಾಗೂ ಸುಸ್ಥಿರ ಪ್ರಾದೇಶಿಕ ಅಭಿವೃದ್ಧಿ ಕುರಿತ ಶೈಕ್ಷಣಿಕ ಉದ್ಯಮ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

‘ಭಾರತದಲ್ಲಿ ಮಳೆ ವ್ಯತ್ಯಾಸಗಳನ್ನು ನೋಡುತ್ತಿದ್ದೇವೆ. ಒಂದು ಪ್ರದೇಶದಲ್ಲಿ ವ್ಯಾಪಕ ಮಳೆಯಾದರೆ, ಇನ್ನೊಂದು ಕಡೆ ಬರ ಇರಲಿದೆ. ಇದು ಕೃಷಿ ಆರ್ಥಿಕತೆ ಮೇಲೂ ಹೊಡೆತ ಬೀಳುತ್ತಿದೆ’ ಎಂದು ತಿಳಿಸಿದರು.

ಬ್ರಿಟನ್‌ನ ಡೆಪ್ಯುಟಿ ಹೈಕಮಿಷನರ್ ಚಂದ್ರು ಅಯ್ಯರ್ ಮಾತನಾಡಿ, ‘ಭಾರತ ಹಾಗೂ ಬ್ರಿಟನ್‌ನ ಪ್ರಧಾನಮಂತ್ರಿಗಳು ಕಳೆದ ವರ್ಷ ಭೇಟಿಯಾದಾಗ ಉಭಯ ದೇಶಗಳ ಹತ್ತು ವರ್ಷದ ಸಹಭಾಗಿತ್ವ ಚಟುವಟಿಕೆಗಳ ಕುರಿತು ಒತ್ತು ನೀಡಿದ್ದಾರೆ. ಹವಾಮಾನ ವೈಪರಿತ್ಯವೂ ಪ್ರಮುಖ ವಿಚಾರವಾಗಿದ್ದು, ಇದರ ಮೇಲೂ ಶೈಕ್ಷಣಿಕ ಹಾಗೂ ಉದ್ಯಮ ವಲಯ ಗಮನ ಹರಿಸಬೇಕಾಗಿದೆ. ಶುದ್ಧ ಇಂಧನ ಕ್ಲಸ್ಟರ್ ಕೂಡ ಪ್ರಮುಖ ಆದ್ಯತೆ ಆಗಬೇಕು’ ಎಂದು ಹೇಳಿದರು.

ಬ್ರಿಟನ್‌ನ ಅಬೆರಿಸ್ಟ್ವೈತ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹೋಮಾಗ್ನಿ ಚೌಧರಿ ಮಾತನಾಡಿ, ‘ಕರ್ನಾಟಕದ ಜನತೆ ಕೆಲವು ದಿನಗಳಿಂದ ಹವಾಮಾನ ಬದಲಾವಣೆಯ ಪರಿಣಾಮ ಅನುಭವಿಸುವಂತಾಗಿದೆ. ನಗರೀಕರಣದ ಪ್ರಭಾವವೂ ಇದರ ಹಿಂದೆ ಇದೆ. ಭವಿಷ್ಯದಲ್ಲಿ ಇದನ್ನು ಎದುರಿಸಲು ನೀತಿ ನಿರೂಪಕರು, ಶೈಕ್ಷಣಿಕ ತಜ್ಞರು, ಸಂಶೋಧನೆ ಕ್ಷೇತ್ರದಲ್ಲಿ ನಿರತರಾದವರು, ಉದ್ಯಮ ವಲಯದವರನ್ನು ಒಟ್ಟುಗೂಡಿಸಿ ಬೆಳಕು ಚೆಲ್ಲುವ ಅಗತ್ಯವಿದೆ’ ಎಂದರು.

ವಿಶ್ವವಿದ್ಯಾಲಯ ಕುಲಸಚಿವೆ ಜಿ.ಎಸ್. ಮಮತಾ ದೇವಿ, ಹಣಕಾಸು ಅಧಿಕಾರಿ ಎಂ.ವಿ. ಪ್ರಶಾಂತ ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.





ನಮ್ಮ ಮೆಟ್ರೊ ನೀಲಿ ಮಾರ್ಗದ ವಿಜಯ ಬ್ಯಾಂಕ್ ಕಾಲೊನಿ ಬಾಣಸವಾಡಿ ರಸ್ತೆ ಬದಿ ಕೆಸರುಮಯ ಆಗಿರುವುದು (ಎಡ ಚಿತ್ರ) ರಾಶಿ ಹಾಕಲಾಗಿರುವ ನಿರ್ಮಾಣ ತ್ಯಾಜ್ಯ – ಪ್ರಜಾವಾಣಿ ಚಿತ್ರ

ಮೆಟ್ರೊ: ವಿಲೇವಾರಿ ಆಗದ ತ್ಯಾಜ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ನೀಲಿ ಮಾರ್ಗದಲ್ಲಿ ನಡೆಯುತ್ತಿರುವ ಕಾಮಗಾರಿಯ ತ್ಯಾಜ್ಯವನ್ನು ವಿಲೇವಾರಿ ಮಾಡದೇ ಹೊರವರ್ತುಲ ರಸ್ತೆ ಬದಿಯಲ್ಲೇ ರಾಶಿ ಹಾಕಲಾಗಿದೆ.

ಕೇಂದ್ರ ರೇಷ್ಮೆ ಮಂಡಳಿಯಿಂದ ಕೆ.ಆರ್.ಪುರವರೆಗೆ ಹಾಗೂ ಅಲ್ಲಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ ಎರಡು ಹಂತದಲ್ಲಿ ನೀಲಿ ಮಾರ್ಗದ ಕಾಮಗಾರಿಗಳು ನಡೆಯುತ್ತಿವೆ. ಹೊರವರ್ತುಲ ರಸ್ತೆಯಲ್ಲಿ ಬಾಣಸವಾಡಿಯ ವಿಜಯ ಬ್ಯಾಂಕ್ ಕಾಲೊನಿ, ಎಚ್‌ಬಿಆರ್ ಲೇಔಟ್, ನಾಗವಾರ ರಸ್ತೆ ಸಹಿತ ವಿವಿಧೆಡೆ ನಿರ್ಮಾಣ ತ್ಯಾಜ್ಯ ರಾಶಿ ಬಿದ್ದಿದೆ.

‘ತ್ಯಾಜ್ಯವನ್ನು ಆಗಾಗ ತೆರವು ಮಾಡಬೇಕು. ಕೆಲಸ ಮುಗಿಯುತ್ತಿದ್ದಂತೆ ಸ್ವಚ್ಛಗೊಳಿಸಬೇಕು ಎಂದು ನಿಯಮ ಇದೆ. ಆದರೆ ಗುತ್ತಿಗೆದಾರರು ನಿಯಮ ಪಾಲಿಸಿಲ್ಲ. ಅಲ್ಲಲ್ಲೇ ಸುರಿದಿಡಲಾಗಿದೆ. ಇದರಿಂದಾಗಿ ಬಿಸಿಲು ಬಂದಾಗ ರಸ್ತೆ ತುಂಬಾ ದೂಳು ತುಂಬಿರುತ್ತದೆ. ಮಳೆ ಬಂದಾಗ ಕೆಸರು ಉಂಟಾಗುತ್ತಿದೆ’ ಎಂದು ಬಾಣಸವಾಡಿಯ ಮಹೇಶ್ ದೂರಿದರು.

ಸಿಲ್ಕ್ ಬೋರ್ಡ್, ಮಾರತ್‌ಹಳ್ಳಿ, ಮಹದೇವಪುರದಂಥ ಐಟಿ ಕಾರಿಡಾರ್‌ಗಳಲ್ಲಿ ಈ ತ್ಯಾಜ್ಯದಿಂದಾಗಿ ರಸ್ತೆಗಳು ಕಿರಿದಾಗಿವೆ ಎಂದು ದೂರಿದರು.

‘ಕೆಲಸ ಮುಗಿದಿರುವಲ್ಲಿ ತಾತ್ಕಾಲಿಕ ತಡೆಗೋಡೆಗಳನ್ನು ತೆರವುಗೊಳಿಸಬೇಕು. ತ್ಯಾಜ್ಯವನ್ನು ಅಲ್ಲಿಂದ ಸಾಗಿಸಬೇಕು ಎಂದು ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಇನ್ನೂ ಕಾಮಗಾರಿ ಮುಗಿದಿಲ್ಲ. ಕಾಮಗಾರಿ ಪೂರ್ಣಗೊಂಡ ನಂತರವೇ ರಸ್ತೆಗಳು ಸಂಪೂರ್ಣವಾಗಿ ಸ್ವಚ್ಛಗೊಳ್ಳಲಿವೆ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ತುಳಸಿ ಗಬಾರ್ಡ್ ರಾಜೀನಾಮೆ

ವಾಷಿಂಗ್ಟನ್ (ಎಪಿ): ಅಮೆರಿಕದ ರಾಷ್ಟ್ರೀಯ ಗುಪ್ತಚರ ವಿಭಾಗದ ನಿರ್ದೇಶಕಿ ತುಳಸಿ ಗಬಾರ್ಡ್ ಅವರು ಶುಕ್ರವಾರ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.



ತುಳಸಿ ಗಬಾರ್ಡ್

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ರಾಜೀನಾಮೆ ಪತ್ರ ಬರೆದಿದ್ದು, ಕ್ಯಾನ್ಸರ್‌ನಿಂದ ಬಳಲುತ್ತಿರುವ ಪತಿಯ ಆರೈಕೆಗೆ ಹೆಚ್ಚಿನ ಸಮಯ ಮೀಸಲಿಡಲು ಈ ನಿರ್ಧಾರ ತೆಗೆದುಕೊಂಡಿರುವುದಾಗಿ ತಿಳಿಸಿದ್ದಾರೆ. ಜೂನ್ 30ರ ವರೆಗೆ ಹುದ್ದೆಯಲ್ಲಿ ಮುಂದುವರಿಯುವುದಾಗಿ ಹೇಳಿದ್ದಾರೆ.

‘ನನ್ನ ಪತಿ ಅಬ್ರಹಾಂ ಅವರಿಗೆ ಅತ್ಯಂತ ಅಪರೂಪದ ಮೂಳೆ ಕ್ಯಾನ್ಸರ್ ಇರುವುದು ಪತ್ತೆಯಾಗಿದೆ. ಮುಂಬರುವ ದಿನಗಳಲ್ಲಿ ಅವರು ಸಾಕಷ್ಟು ಸವಾಲುಗಳನ್ನು ಎದುರಿಸಲಿದ್ದಾರೆ. ಈ ಸಂಕಷ್ಟದ ಸಮಯದಲ್ಲಿ, ಅವರ ಬಳಿಯಿರಲು ಮತ್ತು ಎಲ್ಲ ರೀತಿಯ ಬೆಂಬಲ ನೀಡಲು ನಾನು ಸಾರ್ವಜನಿಕ ಸೇವೆಯಿಂದ ದೂರ ಸರಿಯುತ್ತಿದ್ದೇನೆ’ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ರಾಜೀನಾಮೆ ಪತ್ರವನ್ನು ಗಬಾರ್ಡ್ ಅವರ ಕಚೇರಿ ಬಿಡುಗಡೆ ಮಾಡಿದೆ.

ಡೊನಾಲ್ಡ್ ಟ್ರಂಪ್ ಅವರು ಇರಾನ್ ಮೇಲೆ ದಾಳಿ ನಡೆಸುವ ನಿರ್ಧಾರ ತೆಗೆದುಕೊಂಡ ಸಂದರ್ಭದಲ್ಲೇ ಗಬಾರ್ಡ್ ಅವರು ಟ್ರಂಪ್ ಆಡಳಿತದಿಂದ ದೂರ ಸರಿಯುವರು ಎಂಬ ವದಂತಿಗಳು ಹಬ್ಬಿದ್ದವು.



ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆ.ವಿ.ಪ್ರಭಾಕರ್ ಅವರನ್ನು ಸನ್ಮಾನಿಸಲಾಯಿತು. ಶಿವಾನಂದ ತಗಡೂರು, ಸೋಮಶೇಖರ್ ಕೆರಗೋಡು, ವಾಸುದೇವ ಹೊಳ್ಳ, ಆಯಿಷಾ ಖಾನುಂ ಇದ್ದಾರೆ

ಮಾಧ್ಯಮ ಸಲಹೆಗಾರ ಹುದ್ದೆ ಸವಾಲಿನದ್ದು: ಪ್ರಭಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಧ್ಯಮ ಸಲಹೆಗಾರ ಹೊಣೆಗಾರಿಕೆ ಹೂವಿನ ಹಾದಿ ಅಲ್ಲ, ಮುಳ್ಳಿನ ಹಾಸಿಗೆ ಇದ್ದ ಹಾಗೆ’ ಎಂದು ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅಭಿಪ್ರಾಯಪಟ್ಟರು.

ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರರಾಗಿ ಮೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿದ ಬಳಿಕ ಮಾಧ್ಯಮ ಸಂವಾದದಲ್ಲಿ ಮಾತನಾಡಿದರು.

‘ಮಾಧ್ಯಮ ಸಲಹೆಗಾರ ಹುದ್ದೆ ಪ್ರತಿ ದಿನ ಸವಾಲಿನದ್ದು. ಬೆಳಿಗ್ಗೆ ಎದ್ದು ಪತ್ರಿಕೆಗಳನ್ನು ತಿರುವಿ ಹಾಕುವವರೆಗೂ ದುಗುಡ ಇದ್ದೇ ಇರುತ್ತದೆ. ಈ ಸವಾಲುಗಳನ್ನು ಪ್ರತಿದಿನ ನಿರ್ವಹಿಸುತ್ತಿದ್ದೇನೆ. ನನ್ನ ಹೊಣೆಗಾರಿಕೆ ಬಗ್ಗೆ ಯಾವತ್ತೂ ಭ್ರಮನಿರಸನ ಆಗಿಲ್ಲ’ ಎಂದು ಹೇಳಿದರು.

ಮಾಧ್ಯಮ ಸ್ವಾತಂತ್ರ್ಯಕ್ಕೆ ಮುಖ್ಯಮಂತ್ರಿ ಅವರು ಯಾವತ್ತೂ ಧಕ್ಕೆ ಆಗದಂತೆ ನೋಡಿಕೊಂಡಿದ್ದಾರೆ ಎಂದರು.

ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡಲು ವಿಧಿಸಿರುವ ಕಠಿಣವಾದ ಎರಡು ಷರತ್ತುಗಳನ್ನು ಸಡಿಲಗೊಳಿಸಲು ಸಭೆ ಮಾಡಿ, ತೀರ್ಮಾನಿಸಲಾಗಿದೆ. ಇದರಿಂದ ಆರು ಸಾವಿರಕ್ಕೂ ಹೆಚ್ಚಿನ ಪತ್ರಕರ್ತರಿಗೆ ಸವಲತ್ತು ಸಿಗುವ ಸಾಧ್ಯತೆಗಳಿವೆ. ಜಾಹೀರಾತು ದರ ಪರಿಷ್ಕರಣೆ ಕೂಡ ಚರ್ಚೆಯಲ್ಲಿದೆ ಎಂದು ತಿಳಿಸಿದರು. ‘ನಾನು ಓದಿದ ಶಾಲೆಗೆ ಸರ್ಕಾರದ ನೆರವು ಒದಗಿಸಲು ಸಾಧ್ಯವಾಗಿದ್ದು, ಈ ಸರ್ಕಾರಿ ಶಾಲೆಗೆ ಮರುಜೀವ ಬಂದು ವಿದ್ಯಾರ್ಥಿಗಳ ಸಂಖ್ಯೆ 100ರ ಗಡಿ ದಾಟಿರುವುದು ಸಮಾಧಾನ ತಂದಿದೆ’ ಎಂದರು.

ಕೆಯುಡಬ್ಲ್ಯುಜೆ ಅಧ್ಯಕ್ಷ ಶಿವಾನಂದ ತಗಡೂರು, ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೆಷಾ ಖಾನುಂ, ಪದಾಧಿಕಾರಿಗಳಾದ ಸೋಮಶೇಖರ್ ಕೆರಗೋಡು, ವಾಸುದೇವ ಹೊಳ್ಳ ಭಾಗವಹಿಸಿದ್ದರು.

‘ಮಕ್ಕಳಿಗೆ ಎ.ಐ ಬಳಸಿ ಶಿಕ್ಷಣ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬುಡಕಟ್ಟು ಸಮುದಾಯದ ಮಕ್ಕಳಿಗೆ ಕೃತಕ ಬುದ್ಧಿಮತ್ತೆ(ಎ.ಐ) ತಂತ್ರಜ್ಞಾನ ಬಳಸಿಕೊಂಡು ಗುಣಮಟ್ಟದ ಶಿಕ್ಷಣವನ್ನು ನೀಡಲು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು’ ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಎಂ. ಕನಗವಲ್ಲಿ ತಿಳಿಸಿದರು.

ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯು ನಗರದಲ್ಲಿ ಆಯೋಜಿಸಿದ್ದ ‘ಬುಡಕಟ್ಟು ಜನರ ಅಭಿವೃದ್ಧಿಯಲ್ಲಿ ಕೃತಕ ಬುದ್ಧಿಮತ್ತೆ ಬಳಕೆ’ಯ ಬಗ್ಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಎಸ್‌ಎಸ್‌ಎಲ್‌ಸಿ, ಪಿಯುಸಿ ಓದಿದ ಬುಡಕಟ್ಟು ಸಮುದಾಯದ ಯುವಕರಿಗೆ ಕೌಶಲ ತರಬೇತಿ ನೀಡಿ ಉದ್ಯೋಗ ಕೊಡಿಸಬೇಕು, ವಿವಿಧ ತರಬೇತಿ ನೀಡಿ ಅವರನ್ನು ಸ್ವಾವಲಂಬಿಗಳನ್ನಾಗಿಸಿ ಸಮಾಜದ ಮುಖ್ಯವಾಹಿನಿಗೆ ತರಬಹುದು ಎಂಬುದರ ಬಗ್ಗೆ ಚಿಂತನೆ ಮಾಡಬೇಕು. ಬುಡಕಟ್ಟು ಜನರು ತಯಾರಿಸುವ ಜೇನು, ಬಿದಿರಿನ ಉತ್ಪನ್ನ, ಗಿಡಮೂಲಿಕೆಗಳಿಗೆ ಮಾರುಕಟ್ಟೆ ರೂಪಿಸಿ’ ಎಂದು ಹೇಳಿದರು.



ನಗರದಲ್ಲಿ ಆಯೋಜಿಸಿದ್ದ ಬುಡಕಟ್ಟು ಜನರ ಅಭಿವೃದ್ಧಿಯಲ್ಲಿ ಕೃತಕ ಬುದ್ಧಿಮತ್ತೆ ಬಳಕೆಯ ಬಗ್ಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳ ಕಾರ್ಯಾಗಾರವನ್ನು ಎಂ.ಕನಗವಲ್ಲಿ ಉದ್ಘಾಟಿಸಿದರು

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ನಿರ್ದೇಶಕ ಡಾ.ಡಿ.ಆರ್. ಅಶೋಕ್ ಮಾತನಾಡಿ, ಎ.ಐ ತಂತ್ರಜ್ಞಾನ ಈಗ ಜೀವನದ ಎಲ್ಲಾ ರಂಗಗಳಲ್ಲೂ ವಿಸ್ತಾರವಾಗಿ ಬೆಳೆಯುತ್ತಿದೆ. ಇಲಾಖೆಯ ಕಾರ್ಯಕ್ಷಮತೆ ಹೆಚ್ಚಿಸಲು ಎ.ಐ ಅನ್ನು ಬಳಸಿಕೊಳ್ಳಬೇಕು. ಏಕಲವ್ಯ ಶಾಲೆಗಳಲ್ಲಿ ಎಐ ಬಳಸಿ ಎಸ್‌ಎಸ್‌ಎಲ್‌ಸಿ, ಪಿಯುಸಿ ತರಗತಿಗಳಲ್ಲಿ ಪಾಠ ಮಾಡಲು ಹಾಗೂ ನೀಟ್, ಸಿ.ಇ.ಟಿ ತರಬೇತಿ ಕೊಡಿಸಲು ಅನುಕೂಲವಾಗಿದೆ. ಇದನ್ನು ಇನ್ನಷ್ಟು ಪರಿಣಾಮಕಾರಿಯನ್ನಾಗಿ ಮಾಡಬೇಕು ಎಂದರು.

ಕಾರ್ಯಾಗಾರದಲ್ಲಿ ಉಪ ಕಾರ್ಯದರ್ಶಿ ಜ್ಯೋತಿ, ಜಂಟಿ ನಿರ್ದೇಶಕ ರಾಜ್‌ಕುಮಾರ್, ಉಪ ನಿರ್ದೇಶಕ ಪ್ರಕಾಶ್, ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಎಚ್.ಎಸ್. ಗಿರಿಜಾಂಬ, ಇಲಾಖೆ ಜಿಲ್ಲಾ ಅಧಿಕಾರಿಗಳಾದ ಎಂ.ಕೆ. ಮಲ್ಲೇಶ್, ಎಚ್.ಎಸ್. ಬಿಂದ್ಯಾ, ಬಸವರಾಜು, ನಾರಾಯಣಸ್ವಾಮಿ ಉಪಸ್ಥಿತರಿದ್ದರು.

‘ಅರ್ಜಿ ಹಾಕದ ಸಂಸ್ಥೆಗೂ ನೆರವು ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅರ್ಜಿ ಹಾಕದ ಸಾಂಸ್ಕೃತಿಕ ಸಂಸ್ಥೆಗಳನ್ನು ಗುರುತಿಸಿ ಆರ್ಥಿಕ ನೆರವು ನೀಡಬೇಕು’ ಎಂದು ವಿಧಾನ ಪರಿಷತ್‌ನ ಮಾಜಿ ಸಭಾಪತಿ ವಿ.ಆರ್. ಸುದರ್ಶನ್ ಸಲಹೆ ನೀಡಿದರು.


ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಶುಕ್ರವಾರ ಆಯೋಜಿಸಿದ್ದ ಭಾಗವತರು ಸಂಸ್ಥೆಯ ಬೆಳ್ಳಿ ಹಬ್ಬದ ಸಮಾರೋಪ ಸಮಾರಂಭದಲ್ಲಿ ಭಾಗವತರು ಬೆಳ್ಳಿ ಪಯಣ ಪುಸ್ತಕ ಜನಾರ್ಪಣೆಗೊಳಿಸಿ ಅವರು ಮಾತನಾಡಿದರು.

‘ಭಾಗವತರು ರೀತಿಯ ಕೆಲವು ಸಂಸ್ಥೆಗಳು ಸರ್ಕಾರದ ನೆರವು ನಿರೀಕ್ಷಿಸದೇ ಕೆಲಸ ಮಾಡುತ್ತಾ ಬಂದಿವೆ. ಇಂತಹ ಸಂಸ್ಥೆಗಳಿಗೆ ಇಲಾಖೆಯೇ ನೆರವು ನೀಡಿದಾಗ ಒಳ್ಳೆಯ ಕೆಲಸ ಮಾಡಲು ಪ್ರೇರಣೆ ನೀಡಿದಂತಾಗುತ್ತದೆ’ ಎಂದರು.

22 ಮಂದಿಗೆ ರಂಗಬಾಗಿನ ಗೌರವ ಸಲ್ಲಿಸಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ‘ಸಮಾಜ ಸಾಂಸ್ಕೃತಿಕವಾಗಿ ಪ್ರಬಲವಾಗಿದ್ದಾಗ ನಾಗರಿಕತೆಯೂ ಗಟ್ಟಿಯಾಗಿರುತ್ತದೆ. ಸಂಸ್ಕೃತಿಯ ಅಮೃತವು ಹೃದಯಗಳನ್ನು ಬೆಸೆಯಬೇಕು’ ಎಂದರು.

ಯಕ್ಷಗಾನ ವೀಕ್ಷಿಸಲು ಹೆಚ್ಚಿನ ಪ್ರೇಕ್ಷಕರು ಬರುತ್ತಾರೆ. ಜನ ಬಾರದೇ ಇದ್ದರೆ ಅದು ಸಂಘಟಕರ ಕೊರತೆಯೇ ಹೊರತು ಕಲಾವಿದರದ್ದಲ್ಲ. ಭಾಗವತರು ಸಂಸ್ಥೆ ಸರ್ಕಾರದ ನೆರವು ಪಡೆಯದೇ 25 ವರ್ಷದಿಂದ ಒಳ್ಳೆಯ ಕೆಲಸ ಮಾಡುತ್ತಾ ಬರುತ್ತಿದೆ. ಸಮರ್ಪಣೆಯಿಂದ ತೊಡಗಿಸಿಕೊಂಡಾಗ ಮಾತ್ರ ಇದು ಸಾಧ್ಯವಾಗಲಿದೆ’ ಎಂದರು.

ವಿವಿಧ ಕ್ಷೇತ್ರದ ಸಾಧಕರಾದ ವಿಜಯಾ, ಕಾಳೇಗೌಡ ನಾಗವಾರ, ಜಾಣಗೆರೆ ವೆಂಕಟರಾಮಯ್ಯ, ಜಯಪ್ರಕಾಶಗೌಡ, ಮಲ್ಲಿಕಾರ್ಜುನ ಕಡಕೊಳ, ಎಲ್.ಬಿ. ಶೇಖ ಮಾಸ್ತರ, ಬಿ.ಎಂ. ರಾಮಚಂದ್ರ, ರಾಜಪ್ಪ ದಳವಾಯಿ, ಬಿ.ಸುರೇಶ, ಲಹರಿ ವೇಲು, ಬಿ.ವಿ. ಶ್ರೀನಿವಾಸ, ಮಾಲತಿ ಶ್ರೀಧರ್, ಕೆ.ಷರೀಫಾ, ಪದ್ಮಿನಿ ನಾಗರಾಜು, ಹೆಲನ್, ರೂಪಶ್ರೀ ಮಧುಸೂಧನ್, ಎಂ.ಆರ್.ವೆಂಕಟೇಶ್, ಕೆ.ರಾಮಕೃಷ್ಣಯ್ಯ, ಕೆ.ಬಿ.ಕಿರಣಸಿಂಗ್, ಶಿವಲಿಂಗ ಪ್ರಸಾದ್, ಎಂ.ಕೃಷ್ಣ, ಬಿ.ಎಸ್.ವಿದ್ಯಾರಣ್ಯ ಅವರನ್ನು ಸನ್ಮಾನಿಸಲಾಯಿತು.



ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಶುಕ್ರವಾರ ಭಾಗವತರು ಸಂಸ್ಥೆಯ ಬೆಳ್ಳಿ ಹಬ್ಬದ ಸಮಾರೋಪ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು. ರಂಗ ನಿರ್ದೇಶಕ ಶಶಿಧರ ಭಾರಿಘಾಟ್, ಭಾಗವತರು ಅಧ್ಯಕ್ಷ ಕೆ. ರೇವಣ್ಣ,ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ, ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ, ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪಮೊಯಿಲಿ, ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಹಿ.ಚಿ. ಬೋರಲಿಂಗಯ್ಯ, ಪತ್ರಕರ್ತ ರಾಜು ಮಳವಳ್ಳಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ



ಯಶವಂತಪುರ ಕ್ಷೇತ್ರದ ಬಿಜೆಪಿ ಪ್ರಶಿಕ್ಷಣ ತರಬೇತಿ ಶಿಬಿರದಲ್ಲಿ ಎಸ್.ಎನ್.ರಾಜಣ್ಣ, ಆರ್.ಪಿ. ಪ್ರಕಾಶ್, ಜಯರಾಮೇ ಗೌಡ, ಪಟ್ಟಣಗೆರೆ ಮಹೇಶ್, ಶಿವನಪಾಳ್ಯ ಸತ್ಯನಾರಾಯಣ ಭಾಗವಹಿಸಿದ್ದರು

‘ಬಿಜೆಪಿಯಲ್ಲಿ ವ್ಯಕ್ತಿ ಮುಖ್ಯವಲ್ಲ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ಕಾರ್ಯಕರ್ತರು ಬಲಿಷ್ಠರಾಗಿದ್ದರೆ ನಾಯಕರು ನಿಮ್ಮ ಜೊತೆಯಲ್ಲಿರುತ್ತಾರೆ. ಕಾರ್ಯಕರ್ತರಿಂದ ಮಾತ್ರ ಪಕ್ಷ ಅಧಿಕಾರಕ್ಕೆ ಬರಲು ಸಾಧ್ಯ. ವ್ಯಕ್ತಿ ಮುಖ್ಯವಲ್ಲ’ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಹೇಳಿದರು.

ಯಶವಂತಪುರ ಕ್ಷೇತ್ರದ ಬಿಜೆಪಿ ಪ್ರಶಿಕ್ಷಣ ವರ್ಗ-2026 ಅಪೇಕ್ಷಿತರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯಶವಂತಪುರ ಕ್ಷೇತ್ರದಲ್ಲಿ ಎಂತಹ ಬಲಶಾಲಿ ಎದುರಾಳಿ ಬಂದರೂ ಕಮಲದ ಬಾವುಟ ಹಾರಿಸುವ ಶಕ್ತಿ ಕಾರ್ಯಕರ್ತರಲ್ಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.


ಬಿಜೆಪಿಯ ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಹರೀಶ್, ಬೆಂಗಳೂರು ವಿಭಾಗದ ಪ್ರಭಾರಿ ಎಸ್. ಎನ್. ರಾಜಣ್ಣ, ಯಶವಂತಪುರ ಗ್ರಾಮೀಣ ಮಂಡಲದ ಅಧ್ಯಕ್ಷ ಆರ್. ಪಿ. ಪ್ರಕಾಶ್, ನಗರ ಮಂಡಲ ಅಧ್ಯಕ್ಷ ಜಯರಾಮೇಗೌಡ, ಎಂಎಲ್‌ಸಿ ಗೋಪಿನಾಥರೆಡ್ಡಿ, ಬಿಎಲ್‌ಎ-1 ಪ್ರಭಾರಿ ದೀಪಕ್ ಶೆಟ್ಟಿ, ನಗರ ಜಿಲ್ಲೆ ಬಿಜೆಪಿ ಯುವ ಮೋರ್ಚಾ ಮಾಜಿ ಅಧ್ಯಕ್ಷ ವಾಜರಹಳ್ಳಿ ಎಸ್. ಶಶಿಕುಮಾರ್, ಮುಖಂಡ ನಾಗದೇವನಹಳ್ಳಿ ಎನ್. ಸಿ. ಕುಮಾರ್, ವಿವಿಧ ವಾರ್ಡ್ ಅಧ್ಯಕ್ಷರಾದ ಪಟ್ಟಣಗೆರೆ ಮಹೇಶ್, ಶಿವನಪಾಳ್ಯ ಸತ್ಯನಾರಾಯಣ, ಬಾಲಾಜಿ, ನಗರಮಂಡಲ ಬಿಜೆಪಿ ಮಾಜಿ ಅಧ್ಯಕ್ಷ ಅನಿಲ್ ಚಳಗೇರಿ ಮಾತನಾಡಿದರು.

ನಗರದಲ್ಲಿ ಇಂದು

ಉದ್ಯೋಗ ಮೇಳ: ಅತಿಥಿ: ಬಿ.ಕೆ.ರವಿ, ಜೋಸ್ ಕೊಯಿಕ್ಕಲ್, ಆಯೋಜನೆ ಹಾಗೂ ಸ್ಥಳ: ಡಾನ್ ಬಾಸ್ಕೊ ಕಾಲೇಜು, ಕೆ.ಆರ್. ಪುರ, ಬೆಳಿಗ್ಗೆ 8

‘ಸಮರ್ಪಣ’ ನೃತ್ಯ ಪ್ರದರ್ಶನ: ಅನಿಕಾ ನಟ್ಟಮಾಯಿ, ಐಶಾನಿ ಕಾಮತ್, ಅತಿಥಿಗಳು: ಸ್ನೇಹಾ ದೇವಾನಂದನ್, ಜೆ.ಬಿ. ಸರವಣನ್ ಪಿಳ್ಳೈ, ಸಂಗೀತ ಕಛೇರಿ, ಗಾಯನ: ನಂದಕುಮಾರ್, ಉನ್ನಿಕೃಷ್ಣನ್, ನಟುವಾಂಗಂ: ಸಂಧ್ಯಾ ಉಡುಪ, ಕೊಳಲು: ಶ್ರೀಕೃಷ್ಣ ಭಟ್, ಮೃದಂಗ: ಕಾರ್ತಿಕ್ ವೈಧಾತ್ರಿ, ಆಯೋಜನೆ: ಉಡುಪ ಫೌಂಡೇಷನ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ಗಣಿತ ಸಂಪನ್ಮೂಲ ಪುಸ್ತಕ ಬಿಡುಗಡೆ: ತೇಜಸ್ವಿನಿ ಅನಂತಕುಮಾರ್, ಸಾನ್ನಿಧ್ಯ: ಸ್ವಾಮಿ ವೀರೇಶಾನಂದ ಸರಸ್ವತಿ, ಕೃತಿ ಪರಿಚಯ: ಎಚ್.ಎಸ್. ನಾಗರಾಜ್, ಆಯೋಜನೆ: ಎಂ. ಶಂಕರ ಮತ್ತು ಸಹೋದರರು, ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ 8ನೇ ಬ್ಲಾಕ್, ಬೆಳಿಗ್ಗೆ 10.35



ಸ್ವಾಮಿ ವೀರೇಶಾನಂದ ಸರಸ್ವತಿ

ಶಶಿ ರಂಜನ್ ಕುಮಾರ್ ಅವರ ‘ದಿ ಡಿಕ್ಲೈನ್ ಆಫ್ ದಿ ಹಿಂದೂ ಸಿವಿಲೈಸೇಷನ್: ಲೆಸನ್ಸ್ ಫ್ರಮ್ ದಿ ಪಾಸ್ಟ್’ ಕೃತಿಯ ಬಗ್ಗೆ ಚರ್ಚೆ: ಅತಿಥಿಗಳು: ಬಿ.ಕೆ. ರವಿ, ಜಯಕರ ಎಸ್. ಎಂ., ಅಧ್ಯಕ್ಷತೆ: ರಮೇಶ್ ಬಿ., ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಕ್ಯಾಂಪಸ್, ಬೆಳಿಗ್ಗೆ 11

ಮಹಿಳಾ ಭಜನಾ ಸ್ಪರ್ಧೆ: ಉದ್ಘಾಟನೆ: ನಾಗಲಕ್ಷ್ಮಿ ಚೌಧರಿ, ಅತಿಥಿಗಳು: ಶೋಭಾ ಕರಂದ್ಲಾಜೆ, ಪ್ರಮೋದಾದೇವಿ ಒಡೆಯರ್, ಶಾಲಿನಿ ನಲ್ವಾಡ್, ಛಾಯಾ ನಂಜಪ್ಪ, ರಾಧಾ, ಸರಸ್ವತಿ ಹೆಗಡೆ, ಆಯೋಜನೆ: ಭಾರತ-ಭಾರತಿ, ಸ್ಥಳ: ಕೆಇಬಿ ಎಂಜಿನಿಯರ್ಸ್ ಅಸೋಸಿಯೇಷನ್, ಸಿಲ್ವರ್ ಜುಬ್ಲಿ ಬಿಲ್ಡಿಂಗ್, ರೇಸ್‌ಕೋರ್ಸ್ ರಸ್ತೆ, ಮಧ್ಯಾಹ್ನ 3

ಘಟ ವಿದ್ವಾನ್ ಕೆ.ಎಸ್. ಕೃಷ್ಣಮೂರ್ತಿ ಅವರ ಜನ್ಮಶತಮಾನೋತ್ಸವ: ಉದ್ಘಾಟನೆ: ಮಂಜುಳಾ ಚೆಲ್ಲೂರು, ಅತಿಥಿ: ಟಿ.ಎಸ್. ಸತ್ಯವತಿ, ನಾದಸ್ವರ: ಮೈಸೂರು ವಿಜಯಸೂರ್ಯ, ಚಂದ್ರಶೇಖರ ಜಿ., ತವಿಲ್ ವಾದನ: ಬಿಕ್ಕಂಬಟ್ಟಿ ಬಿ.ಆರ್. ವೆಂಕಟೇಶ್, ಬೆಂಗಳೂರು ಎಂ. ಮುರುಗೇಶ್, ಸಂಗೀತ ಕಛೇರಿ, ಗಾಯನ: ಎಂ.ಎಸ್. ಶೀಲಾ, ಅಪೇಕ್ಷಾ ಅಪ್ಪಲಾ, ಪಿಟೀಲು: ಎಚ್.ಎಂ. ಸ್ಮಿತಾ, ಮೃದಂಗ: ಕೆ.ಯು. ಜಯಚಂದ್ರ, ಘಟ: ಯು. ಗಿರಿಧರ ಉಡುಪ, ಆಯೋಜನೆ: ವಿದ್ವಾನ್ ಶ್ರೀ ಕೆ.ಎಸ್.ಕೃಷ್ಣಮೂರ್ತಿ ಗುರುವಂದನಾ ಸಮಿತಿ ಟ್ರಸ್ಟ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 4


ಬಿ. ಸುಜ್ಞಾನಮೂರ್ತಿ ಅವರು ಅನುವಾದಿಸಿರುವ ‘ಬೌದ್ಧಧರ್ಮದ ತಿರುಳು’ ಹಾಗೂ ‘ಇಂದಿನ ಜಗತ್ತಿಗೆ ಬೌದ್ಧಧರ್ಮ’ ಪುಸ್ತಕ ಬಿಡುಗಡೆ: ಬಂಜಗೆರೆ ಜಯಪ್ರಕಾಶ್, ಪುಸ್ತಕದ ಬಗ್ಗೆ ಮಾತು: ಎಂ.ಎಸ್. ಆಶಾದೇವಿ, ಮಂಗ್ಳೂರ ವಿಜಯ, ಆಯೋಜನೆ: ಕೌದಿ ಪ್ರಕಾಶನ, ಸಾವಿತ್ರಿಬಾಯಿ ಫುಲೆ ಟ್ರಸ್ಟ್, ಸ್ಥಳ: ಡಿ. ದೇವರಾಜ ಅರಸು ಗ್ಯಾಲರಿ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5



‘ಸೀತಾ ಸ್ವಯಂವರಂ’ ನಾಟಕ ಪ್ರದರ್ಶನ: ನಿರ್ದೇಶನ: ಮಂಜುನಾಥ್ ಎಲ್. ಬಡಿಗೇರ್, ತಂಡ: ಅಭಿಜ್ಞಾ, ಸ್ಥಳ: ರಂಗಶಂಕರ, ಜೆ.ಪಿ.ನಗರ, ಮಧ್ಯಾಹ್ನ 3.30 ಹಾಗೂ ಸಂಜೆ 7.30

ಗಮಕ ವಾಚನ ಹಾಗೂ ವ್ಯಾಖ್ಯಾನ: ‘ಕುಮಾರವ್ಯಾಸ ಭಾರತದ ವಿರಾಟಪರ್ವದ ಉತ್ತರನ ಪೌರುಷ’ ಕೃತಿ ಬಗ್ಗೆ ವಾಚನ: ಎನ್. ಶ್ರೀಮತಿ ಜಯರಾಂ, ವ್ಯಾಖ್ಯಾನ: ವಿ. ಭಾಗ್ಯಲಕ್ಷ್ಮಿ ಸುಬ್ರಹ್ಮಣ್ಯ, ಆಯೋಜನೆ: ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಬೆಂಗಳೂರು ಉತ್ತರ ಜಿಲ್ಲಾ ಸಮಿತಿ, ಎಂಇಎಸ್ ಕಲಾವೇದಿ, ಸ್ಥಳ: ಎಂಇಎಸ್ ಪ್ರೊ.ಬಿ.ಆರ್. ಸುಬ್ಬಾರಾವ್ ಪದವಿಪೂರ್ವ ಕಾಲೇಜು, ಬಿಇಎಲ್ ಲೇಔಟ್, ವಿದ್ಯಾರಣ್ಯಪುರ, ಸಂಜೆ 5

ಹಂಪ ನಾಗರಾಜಯ್ಯ ಅವರ ‘ಚಾರುವಸಂತ’ ಕಾವ್ಯ ಪ್ರಸ್ತುತಿ: ಶ್ಯಾಮಲಾ ಪ್ರಕಾಶ್, ಉಪಸ್ಥಿತಿ: ಹಂಪ ನಾಗರಾಜಯ್ಯ, ಬೈರಮಂಗಲ ರಾಮೇಗೌಡ, ಆಯೋಜನೆ: ಬಿಎಂಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 4.30



‘ಶಿವಪದಂ–ನೃತ್ಯ ವೈಭವಂ’: ನಿರೂಪಣೆ: ಸಾಮವೇದಂ ಷಣ್ಮುಖ ಶರ್ಮ, ಅತಿಥಿಗಳು: ಮೋಹನ್ ಮಂಗ್ನಾನಿ, ತೇಜಸ್ವಿ ಸೂರ್ಯ, ಆರ್. ಗಣೇಶ್, ಆಯೋಜನೆ: ಪ್ರವಚನ ರಜತೋತ್ಸವಂ, ಸ್ಥಳ: ನ್ಯೂ ಹಾರಿಜನ್ ಕಾಲೇಜ್ ಆಫ್ ಎಂಜಿನಿಯರಿಂಗ್, ಹೊರವರ್ತುಲ ರಸ್ತೆ, ಮಾರತಹಳ್ಳಿ, ಸಂಜೆ 5

‘ಕಲಾ ಸ್ಪಂದನ’ ಸಂಗೀತ–ನೃತ್ಯ: ಅತಿಥಿಗಳು: ಶೇಷಾದ್ರಿ ಅಯ್ಯಂಗಾರ್, ಸಂಜೀವ್ ಕೊರ್ತಿ, ಭರತನಾಟ್ಯ: ಪಾರ್ಥ ಪಿ. ಕೆರೂರ, ಸಂಗೀತ ಕಛೇರಿ: ಗಾಯನ: ವಸುಧಾ ಬಾಲಕೃಷ್ಣ, ಮೃದಂಗ: ಬಾಲಕೃಷ್ಣ , ಕೊಳಲು: ಕಾರ್ತಿಕ್ ಸಾಥವಳ್ಳಿ, ನಟುವಾಂಗಂ: ನಿಖಿತಾ ಮಂಜುನಾಥ್, ಸಿತಾರ್ ವಾದನ: ಚಕ್ಷಶ್ರವ ಕಶ್ಯಪ್, ಚೈತ್ರ ಅರ್ಚಕ್, ದ್ವೈತ ಜೋಶಿ, ದರ್ಶನ್ ಹೆಗ್ಡೆ, ಅನೀಷ್ ರಾವ್, ರೋಹನ್ ಕುಮಾರ್, ಆಯೋಜನೆ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್, ಅಲಂಕೃತ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಸನಾತನ ಕಲಾಕ್ಷೇತ್ರ, ಜಯನಗರದ 4ನೇ ಬ್ಲಾಕ್, ಸಂಜೆ 6

‘ಮಿಶ್ರ ಮಾಧುರ್ಯ’ ಭಾವಗೀತೆ, ಜಾನಪದ ಗೀತೆ ಮತ್ತು ಭಕ್ತಿಗೀತೆಗಳ ಗಾಯನ: ರಶ್ಮಿ ನಟರಾಜ್, ರಕ್ಷಾ ನಟರಾಜ್, ಪಿಟೀಲು: ನವ್ಯಶ್ರೀ, ತಬಲಾ: ಆರ್.ಕೆ. ಗಂಗಾಧರ್, ಆಯೋಜನೆ ಹಾಗೂ ಸ್ಥಳ: ರಾಗಿಗುಡ್ಡ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನ, ಜಯನಗರ, ಸಂಜೆ 6.30


ಊಂಜಲ್ ಸಂಗೀತೋತ್ಸವ: ಗಾಯನ: ಅವನಿ ಭಟ್, ಪಿಟೀಲು: ಎಸ್. ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6.30

‘ಅಯೋಮಯ’ ನಾಟಕ ಪ್ರದರ್ಶನ: ನಿರ್ದೇಶನ: ಗೌರೀಶ್ ಜೋಶಿ, ಆಯೋಜನೆ: ಯುವಕ ಸಂಘದ ‘ಫ್ರೀ ಸ್ಪೇಸ್’ ವೇದಿಕೆ, ಸ್ಥಳ: ಸಿ. ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ..
nagaradalli_indu@prajavani.co.in

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನಮ್ಮ ಅಜ್ಞಾನದ ಮಿತಿಯನ್ನು ತಿಳಿದುಕೊಳ್ಳುವುದೇ ನಿಜವಾದ ಜ್ಞಾನ.

-ಕನ್‌ಫ್ಯೂಷಿಯಸ್

ಸಂಪಾದಕೀಯ

ಬಿತ್ತನೆ ಬೀಜ ವಿತರಣೆ ಅವ್ಯವಸ್ಥೆ ಮಾತಿನಲ್ಲೇ ಉಳಿದ ರೈತಕಾಳಜಿ

ಬಿತ್ತನೆ ಬೀಜಗಳಿಗಾಗಿ ರೈತರು ಪರದಾಡುವ ಸ್ಥಿತಿ ಹಾವೇರಿ ಜಿಲ್ಲೆಯಲ್ಲಿ ಉಂಟಾಗಿದೆ. ಇದು, ಹಳೆಯ ತಪ್ಪುಗಳಿಂದ ಪಾಠ ಕಲಿಯದ ಸರ್ಕಾರಿ ವ್ಯವಸ್ಥೆಯ ಸಂವೇದನಾಶೂನ್ಯ ಮನಃಸ್ಥಿತಿಯ ಹಾಗೂ ಕೃಷಿಯನ್ನು ಆದ್ಯತೆಯ ವಿಷಯವನ್ನಾಗಿ ಸರ್ಕಾರ ಪರಿಗಣಿಸದೆ ಇರುವುದರ ಸಂಕೇತದಂತಿದೆ. ಜಿಲ್ಲೆಯಲ್ಲಿ ಮುಂಗಾರುಪೂರ್ವ ಮಳೆ ಉತ್ತಮವಾಗಿ ಆಗಿರುವುದರಿಂದ ಬಿತ್ತನೆ ಬೀಜ ಖರೀದಿಗೆ ಬೇಡಿಕೆ ಉಂಟಾಗಿದೆ. ಅದು ಸಹಜವಾದ ಬೆಳವಣಿಗೆಯೇ. ಆದರೆ, ಮುಂಗಾರು ಆಸುಪಾಸಿನಲ್ಲಿ ಬಿತ್ತನೆ ಬೀಜಕ್ಕೆ ಬೇಡಿಕೆ ಎದುರಾಗುವ ನಿರೀಕ್ಷೆಯಿದ್ದರೂ, ಆ ಬೇಡಿಕೆಯನ್ನು ನಿರ್ವಹಿಸಲು ಕೃಷಿ ಇಲಾಖೆ ತಕ್ಕ ಸಿದ್ಧತೆ ನಡೆಸದಿರುವುದಕ್ಕೆ ಯಾವುದೇ ಸಮರ್ಥನೆಯಿಲ್ಲ. ಕಳೆದ ಮೂರು ವರ್ಷಗಳಿಂದಲೂ ಬಿತ್ತನೆ ಬೀಜ ಮತ್ತು ರಸಗೊಬ್ಬರ ಪೂರೈಕೆಯ ಕೊರತೆ ಬಗ್ಗೆ ರಾಜ್ಯದ ವಿವಿಧ ಭಾಗಗಳಲ್ಲಿ ದೂರುಗಳು ವ್ಯಕ್ತವಾಗಿದ್ದವು. ಆ ಸಮಸ್ಯೆ ಈ ವರ್ಷವೂ ಮುಂದುವರಿದಿರುವುದನ್ನು ಹಾವೇರಿಯಲ್ಲಿನ ರೈತರ ಸಂಕಷ್ಟ ಸೂಚಿಸುವಂತಿದೆ. ಬೀಜ ಖರೀದಿಗಾಗಿ 'ರೈತ ಸಂಪರ್ಕ ಕೇಂದ್ರ'ದ (ಆರ್‌ಎಸ್‌ಕೆ) ಎದುರು ರೈತರು ಹಗಲು–ಇರುಳು ಸರದಿಯಲ್ಲಿ ನಿಲ್ಲಬೇಕಾದ ಸ್ಥಿತಿ ರೂಪುಗೊಂಡಿರುವುದು ಇಲಾಖೆಯ ಅದಕ್ಷತೆಗೆ ನಿದರ್ಶನದಂತಿದೆ. ಮಹಿಳೆಯರು, ಹಿರಿಯ ನಾಗರಿಕರು ಕೂಡ ಸರದಿಯಲ್ಲಿ ನಿಂತು ತೊಂದರೆ ಅನುಭವಿಸಿದ್ದಾರೆ. ಪೊಲೀಸ್ ಭದ್ರತೆಯಲ್ಲಿ ಬೀಜ ವಿತರಣೆ ನಡೆದಿರುವ ಘಟನೆಗಳೂ ವರದಿಯಾಗಿವೆ. ಬೀಜ ವಿತರಣಾ ಕೇಂದ್ರಗಳ ಎದುರೇ ರೈತರು ಮಲಗುವ ಸ್ಥಿತಿ ಕೆಲವೆಡೆ ತಲೆದೋರಿದೆ. ನಿತ್ಯಕರ್ಮಗಳನ್ನು ಬಯಲಿನಲ್ಲಿ ಮುಗಿಸಿ, ಆರ್‌ಎಸ್‌ಕೆ ಎದುರು ರೈತರು ಬಿಸಿಲಿನಲ್ಲಿ ನಿಲ್ಲುವಂತಾಗಿರುವುದು ಶೋಚನೀಯ. ರೈತರನ್ನು ಅನ್ನದಾತರೆಂದು ಹೇಳುತ್ತಲೇ, ಅವರ ಶ್ರಮ, ಸಮಯ ಹಾಗೂ ಆತ್ಮಗೌರವವನ್ನು ಲಘುವಾಗಿ ಕಾಣುವ ಘಟನೆಗಳು ಮತ್ತೆ ಮತ್ತೆ ನಡೆಯುವುದು ದುರದೃಷ್ಟಕರ.



ಬಿತ್ತನೆ ಬೀಜ ಪಡೆಯಲು ರೈತರು ಹಗಲು–ರಾತ್ರಿ ಸರದಿಯಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಉಂಟಾಗಿರುವುದು, ಸರ್ಕಾರದ ರೈತಕಾಳಜಿಯ ಟೊಳ್ಳುತನವನ್ನು ಸೂಚಿಸುವಂತಿದೆ.

ಜಿಲ್ಲೆಯಲ್ಲಿ ಅಗತ್ಯವಿದ್ದಷ್ಟು ಬೀಜ ದಾಸ್ತಾನು ಇರುವುದರಿಂದ ರೈತರು ಆತಂಕ ಪಡಬೇಕಿಲ್ಲ; ಹೆಚ್ಚಿನ ಸಂಖ್ಯೆಯಲ್ಲಿ ಕೃಷಿಕರು ಬರುತ್ತಿರುವುದರಿಂದ ಆನ್‌ಲೈನ್ ನೋಂದಣಿ ವಿಳಂಬವಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಸಂದರ್ಭದಲ್ಲಿ 'ಆರ್‌ಎಸ್‌ಕೆ'ಗಳ ಸಂಖ್ಯೆಯನ್ನು ಹೆಚ್ಚಿಸುವುದು ಹಾಗೂ ಕೇಂದ್ರಗಳಿಗೆ ಬರುವ ರೈತರಿಗೆ ಮೂಲ ಸೌಲಭ್ಯಗಳನ್ನು ಒದಗಿಸುವುದು ಕೃಷಿ ಇಲಾಖೆಯ ಕರ್ತವ್ಯ. ಆನ್‌ಲೈನ್‌ನಲ್ಲಿ ರೈತರ 'ಆರ್‌ಟಿಸಿ' ಪರಿಶೀಲಿಸಿ, ರಶೀದಿಯೊಂದಿಗೆ ಬೀಜ ನೀಡಬೇಕಾದುದರಿಂದ ವಿತರಣೆಯ ಪ್ರಕ್ರಿಯೆ ವಿಳಂಬವಾಗುತ್ತಿದೆ ಎಂದೂ ಹೇಳಲಾಗುತ್ತಿದೆ. ತಂತ್ರಜ್ಞಾನ ಎಷ್ಟೇ ಆಧುನಿಕವಾದರೂ ಅದು ಸರ್ಕಾರಿ ವ್ಯವಸ್ಥೆಯಲ್ಲಿ ತನ್ನ ವೇಗ ಮತ್ತು ದಕ್ಷತೆಯನ್ನು ಕಳೆದುಕೊಳ್ಳುತ್ತದೆ ಎನ್ನುವುದಕ್ಕೆ ಇದು ಇನ್ನೊಂದು ಉದಾಹರಣೆಯಷ್ಟೇ. ಮಳೆ–ಬೆಳೆಗೆ ಸಂಬಂಧಿಸಿದಂತೆ ಪ್ರತಿ ಜಿಲ್ಲೆಯ ಮುನ್ನೋಟ ಕೃಷಿ ಇಲಾಖೆಯ ಬಳಿಯಿರುತ್ತದೆ, ಇರಬೇಕು. ಎಲ್ಲ ಮಾಹಿತಿಯನ್ನು ಹೊಂದಿದ್ದೂ, ರೈತರ ಅಗತ್ಯಗಳನ್ನು ಪೂರೈಸುವುದಕ್ಕೆ ಸಂಬಂಧಿಸಿದಂತೆ ನೆಪಗಳನ್ನು ಹೇಳುವುದು ಯೋಜನಾಶೂನ್ಯತೆಯ ಸ್ಪಷ್ಟ ಸೂಚನೆಯಾಗಿದೆ. ಕೃಷಿಚಕ್ರದ ಆರಂಭದ ಬಿಂದುವಾದ ಬಿತ್ತನೆ ಬೀಜಗಳ ವಿತರಣೆಯಲ್ಲೇ ಸಮಸ್ಯೆಯಾದರೆ, ಅದರ ಪರಿಣಾಮ ಇಡೀ ಕೃಷಿಋತುವಿನ ಮೇಲಾಗುತ್ತದೆ. ಕೃಷಿ ಇಲಾಖೆಯ ವೈಫಲ್ಯವೇ ರೈತರು ಖಾಸಗಿ ಸಂಸ್ಥೆಗಳ ಬಳಿಗೆ ಹೋಗುವ, ಕಳಪೆ ಗುಣಮಟ್ಟದ ಬೀಜಗಳನ್ನು ಕೊಂಡು ಸಂಕಷ್ಟ ಎದುರಿಸುವ ಸ್ಥಿತಿ ಉಂಟುಮಾಡುತ್ತದೆ.

ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನ ಪರಿಣಾಮದಿಂದಾಗಿ ಕೇಂದ್ರ ಸರ್ಕಾರದಿಂದ ರಾಜ್ಯದ ಬೇಡಿಕೆಗೆ ಅನುಗುಣವಾಗಿ ರಸಗೊಬ್ಬರ ಪೂರೈಕೆಯಾಗುತ್ತಿಲ್ಲ; ಹಾಗಾಗಿ, ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯ ಎದುರಾಗಬಹುದು ಎಂದು ಕೃಷಿ ಸಚಿವರು ಇತ್ತೀಚೆಗಷ್ಟೇ ಹೇಳಿದ್ದಾರೆ. ಜನಸಾಮಾನ್ಯರಿಗೆ ಮಿತವ್ಯಯದ ಪಾಠ ಹೇಳಿರುವ ಪ್ರಧಾನಿ, ಸಾವಯವ ಕೃಷಿ ಅನುಸರಿಸುವಂತೆ ರೈತರಿಗೆ ಕಿವಿಮಾತು ಹೇಳಿದ್ದಾರೆ. ಈ ಮೂಲಕ, ರಸಗೊಬ್ಬರ ಪೂರೈಕೆಯಲ್ಲಿ ಎದುರಾಗಬಹುದಾದ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಸೂಚನೆ ನೀಡಿವೆ. ಎಲ್ ನಿನೊ ಪರಿಣಾಮದಿಂದಾಗಿ ಮುಂಗಾರು ದುರ್ಬಲವಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ. ಎಲ್ಲ ಕಡೆಗಳಿಂದಲೂ ರೈತರು ಸಂಕಷ್ಟ ಎದುರಿಸಬೇಕಾಗಿದೆ. ಸರ್ಕಾರದ ಕಾಳಜಿ ಮಾತುಗಳಿಗಷ್ಟೇ ಸೀಮಿತವಾಗದೆ, ಕ್ರಿಯೆಯಲ್ಲಿ ಕಾಣಿಸಿಕೊಳ್ಳಬೇಕು. ರಾಜ್ಯದ ಯಾವುದೇ ಭಾಗದಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ಕೊರತೆ ಎದುರಾಗದಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆಗಾರಿಕೆ ಹಾಗೂ ನೈತಿಕತೆ.

ಕೃಷ್ಣೆ ಮಡಿಲಲ್ಲಿ 'ಸೈಕ್ಲಿಂಗ್ ಕ್ರಾಂತಿ'



ವಿಶ್ಲೇಷಣೆ

ಗಿರೀಶ ದೊಡ್ಡಮನಿ

> 'ಸೈಕ್ಲಿಂಗ್ ಕಾಶಿ' ಎಂದು ಪ್ರಸಿದ್ಧವಾದ 'ವಿಜಯಪುರ, ಬಾಗಲಕೋಟೆ ಜಿಲ್ಲೆಗಳಿಗೆ ಸಂಬಂಧಿಸಿದ 'ಸೈಕ್ಲಿಂಗ್' ಬೆಳವಣಿಗೆಗೆ ಅರ್ಧ ಶತಮಾನದ ಇತಿಹಾಸವಿದೆ. ಈ ಜಿಲ್ಲೆಗಳ ಬಡ ಕುಟುಂಬಗಳ ಯುವಜನರು ಸೈಕ್ಲಿಂಗ್ ಮೂಲಕವೇ ತಮ್ಮ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ; ಕೆಲವರು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಯಶಸ್ಸು ಗಳಿಸಿರುವುದೂ ಇದೆ.

ಜೀವನದಿ ಕೃಷ್ಣಾ ತಟದ ಕುಂಬಾರಹಳ್ಳ ಗ್ರಾಮದ ಮಲ್ಲಪ್ಪ ಕುರಣಿಯವರಿಗೆ ಆರು ಮಂದಿ ಗಂಡುಮಕ್ಕಳು. ಲೋಕೋಪಯೋಗಿ ಇಲಾಖೆಯ ರಸ್ತೆ ಕಾಮಗಾರಿಗಳಲ್ಲಿ ಮಲ್ಲಪ್ಪ ಕೂಲಿ ಕೆಲಸ ಮಾಡುತ್ತಿದ್ದರು. ಒಂದಷ್ಟು ಭೂಮಿಯಿತ್ತು, ಆ ಬರಡು ಜಮೀನಿನಲ್ಲಿ ಬರುತ್ತಿದ್ದ ಆದಾಯ ಅರೆಕಾಸಿನಷ್ಟಿತ್ತು. ಮಲ್ಲಪ್ಪನವರ ಮಕ್ಕಳೂ ಅಪ್ಪನ ಹಾದಿಯನ್ನೇ ತುಳಿದಿದ್ದರು. ಅವರಲ್ಲಿ ಕಟ್ಟುಮಸ್ತಾಗಿದ್ದ ಮೂರನೇ ಪುತ್ರ ಚಂದ್ರು, ರಸ್ತೆಗೆ ಡಾಂಬರು ಹಾಕುವ 'ಮೈಲ್ ಕೂಲಿ'ಯಾಗಿ ದುಡಿಯುತ್ತಿದ್ದರು. ಸೈಕಲ್ ಎಂದರೆ ಚಂದ್ರು ಅವರಿಗೆ ಜೀವ. ಎಂತಹುದೇ ದುರ್ಗಮ ರಸ್ತೆಗಳಿದ್ದರೂ ವೇಗವಾಗಿ ಸೈಕಲ್ ಓಡಿಸುತ್ತಿದ್ದರು. ಅದನ್ನು ಗಮನಿಸಿದ ಮೇಸ್ತ್ರಿಯೊಬ್ಬರು ಚಂದ್ರು ಅವರನ್ನು ರಸ್ತೆ ಪರಿವೀಕ್ಷಣೆಗೆ ಸೈಕಲ್ ಮೇಲೆ ತೆರಳುವ ಕೆಲಸಕ್ಕೆ ನೇಮಕ ಮಾಡಿಕೊಂಡರು. ಪ್ರತಿದಿನ 20 ಕಿ.ಮೀ.ಗೂ ಹೆಚ್ಚು ದೂರ ಚಂದ್ರು ಅವರು ಮೇಸ್ತ್ರಿಯನ್ನು ತಮ್ಮ ಸೈಕಲ್‌ನಲ್ಲಿ ಕೂರಿಸಿಕೊಂಡು ಕ್ರಮಿಸುತ್ತಿದ್ದರು.

ಅದೇ ಹೊತ್ತಿನಲ್ಲಿ ಊರಿನ ಸೈಕಲ್ ರಿಪೇರಿ ಅಂಗಡಿಯ ನಬೀಸಾಬ್ ನದಾಫರು, ಯುಗಾದಿ ಜಾತ್ರೆಯಲ್ಲಿ ನಡೆಯುವ ಸೈಕಲ್ ರೇಸ್‌ನಲ್ಲಿ ಸ್ಪರ್ಧಿಸುವಂತೆ ಹುರಿದುಂಬಿಸಿದರು. ರೇಸ್‌ನಲ್ಲಿ ಸ್ಪರ್ಧಿಸಿದ ಚಂದ್ರು, ಬೇರೆ ರಾಜ್ಯಗಳ ವೃತ್ತಿಪರ ಸೈಕ್ಲಿಸ್ಟ್‌ಗಳನ್ನು ತಮ್ಮ ಸಾದಾಸೀದಾ ಸೈಕಲ್‌ನಲ್ಲಿ ಹಿಂದಿಕ್ಕಿ ಪ್ರಶಸ್ತಿ ಗೆದ್ದುಬಿಟ್ಟರು. ಅದು ಅವರ ಜೀವನಕ್ಕೆ ತಿರುವು ಲಭಿಸಿದ ದಿನ. ಅಲ್ಲಿಂದ ರಾಜ್ಯ, ರಾಷ್ಟ್ರಮಟ್ಟದ ರಸ್ತೆ ಸೈಕ್ಲಿಂಗ್ ರೇಸ್‌ಗಳಲ್ಲಿ ಭಾಗವಹಿಸತೊಡಗಿದರು. ಪ್ರಶಸ್ತಿಗಳು ಹಿಂಬಾಲಿಸತೊಡಗಿದವು. ಪಂಜಾಬ್, ಹರಿಯಾಣದ ಪ್ರಬಲ ಸೈಕ್ಲಿಸ್ಟ್‌ಗಳನ್ನು ಹಿಂದಿಕ್ಕಿದರು. ದೆಹಲಿ ಏಷ್ಯನ್ ಗೇಮ್ಸ್‌ನಲ್ಲಿ ಐದನೇ ಸ್ಥಾನ ಪಡೆದರು. ಇಟಲಿಯಲ್ಲಿ ಅಂತರರಾಷ್ಟ್ರೀಯ ಸೈಕ್ಲಿಂಗ್‌ನಲ್ಲಿ ಸ್ಪರ್ಧಿಸಿದ ಅನುಭವ ಪಡೆದುಕೊಂಡರು. ಮೈಲ್ ಕೂಲಿಯಾಗಿದ್ದ ಚಂದ್ರು, ವಿಭಜನಾಪೂರ್ವ ವಿಜಯಪುರ ಜಿಲ್ಲೆಯ 'ರಸ್ತೆ ಸೈಕ್ಲಿಂಗ್ ಕ್ರೀಡಾ ಕ್ರಾಂತಿ'ಗೆ ಮೈಲಿಗಲ್ಲಾದರು! ಈ ಭಾಗದ ಯುವಜನರಿಗೆ ಪ್ರೇರಣೆಯಾದರು. ಉದ್ಯೋಗ, ಶಿಕ್ಷಣ ಹಾಗೂ ಅಂತರರಾಷ್ಟ್ರೀಯ ಮಟ್ಟದ ಸಾಧನೆಗಳ ಬಾಗಿಲು ತೆರೆಯಿತು.

ಚಂದ್ರು ಅವರು ಆ ಯುಗಾದಿ ರೇಸ್ ಜಯಿಸಿದ್ದು 1977ರಲ್ಲಿ. ಅಲ್ಲಿಂದ ಇಲ್ಲಿಯವರೆಗೆ ಕೃಷ್ಣಾ ನದಿಯಲ್ಲಿ ಬಹಳಷ್ಟು ನೀರು ಹರಿದುಹೋಗಿದೆ. ಐದು ದಶಕಗಳ ಈ ಅವಧಿಯಲ್ಲಿ ವಿಜಯಪುರ–ಬಾಗಲಕೋಟೆ ಜಿಲ್ಲೆಗಳು 'ಸೈಕಲ್ ಕಾಶಿ'ಯಾಗಿ ಬೆಳೆದಿವೆ. ಈ ಜಿಲ್ಲೆಗಳ ಬಡಕುಟುಂಬದ ಯುವಕ–ಯುವತಿಯರಿಗೆ 'ರಸ್ತೆ ಸೈಕ್ಲಿಂಗ್' ಅಚ್ಚುಮೆಚ್ಚು. ಇಲ್ಲಿ ಪ್ರತಿಭೆಗಳಿಗೆ ಕೊರತೆ ಇಲ್ಲ, ಸಿರಿವಂತಿಕೆಗೆ ಕೊರತೆ ಇದೆಯಷ್ಟೇ. ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರ್ತಿಸಿಕೊಂಡಿದ್ದರೂ, ಇಲ್ಲಿಯ ಬಡ ಕುಟುಂಬಗಳ ಸೈಕ್ಲಿಸ್ಟ್‌ಗಳ ಬಳಿ ಆಧುನಿಕ ಸೈಕಲ್ ಇಲ್ಲ. ಸಹಸ್ಪರ್ಧಿಗಳು, ಕೋಚ್‌ಗಳಿಂದ ಕೈಗಡ ಪಡೆದ ಸೈಕಲ್‌ನಲ್ಲಿ ಸ್ಪರ್ಧಿಸುತ್ತಾರೆ. ಪದಕ ಜಯಿಸುತ್ತಾರೆ.

ಬಾಗಲಕೋಟೆ ಜಿಲ್ಲೆಯ ತುಳಸಿಗೇರಿಯ ಗಂಗಾ ದಂಡಿನ್ ಅವರನ್ನು ನೋಡಿ. ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಎರಡು ಚಿನ್ನ ಗೆದ್ದಿದ್ದಾರೆ. ಸೌದಿ ಅರೇಬಿಯಾದಲ್ಲಿ ನಡೆದಿದ್ದ ಏಷ್ಯಾಮಟ್ಟದ ಸೈಕ್ಲಿಂಗ್‌ನಲ್ಲಿ ಭಾಗವಹಿಸಿದ್ದರು. ಆದರೂ, ಅವರ ಬಳಿ ರೇಸಿಂಗ್ ಸೈಕಲ್ ಇಲ್ಲಿಯವರೆಗೂ ಇರಲಿಲ್ಲ.

'ನಾನು ಬಿ.ಎ. ಪದವಿ ಪಡೆದಿದ್ದೇನೆ. ಹಾಸ್ಟೆಲ್ ಅವಧಿ ಮುಗಿದೇತಿ. ವಿಜಾಪುರದಲ್ಲಿ ಬಾಡಗಿ ಮನಿ ಮಾಡ್ಕೊಂಡು ಅದೇನ್ರಿ. ಕಾಂಪಿಟೇಷನ್ ಹೋಗಬೇಕಂದ್ರ ಒಳ್ಳೆಯ ಸೈಕಲ್ ಇಲ್ಲ. ನ್ಯಾಷನಲ್ಸ್‌ನಲ್ಲಿ ಭಾಗವಹಿಸುವಾಗ ಬೇರೆಯವರಿಂದ ಇಸ್ಕೊಂಡ ಸೈಕಲ್‌ನಲ್ಲಿ ಚಿನ್ನ ಗೆದ್ದೆ. ಕೋಚ್ ಶ್ರೀಧರ್ ಸವಣೂರು ಅವರ ಸಹಾಯದಿಂದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದೆ. ಊಟ, ಔಷಧಿ, ವಸತಿ ಸೇರಿ ಪ್ರತಿ ತಿಂಗಳು 20 ಸಾವಿರ ರೂಪಾಯಿ ಖರ್ಚು ಇದೆ. ಸುತ್ತಮುತ್ತ ಹಳ್ಳಿಗಳಲ್ಲಿ ನಡೆಯುವ ಜಾತ್ರಿ ರೇಸ್‌ಗಳಲ್ಲಿ ಗೆದ್ದಾಗ ಸಿಗುವ ಹಣ ಕೂಡ ಇದಕ್ಕೆ ಹಾಕ್ತೇವಿ' ಎಂದು ಗಂಗಾ ವಿವರಿಸುತ್ತಾರೆ.

'ಶನಿವಾರಕ್ಕೊಮ್ಮೆ ತುಳಸಿಗೇರಿ ಹನುಮಪ್ಪನ ಗುಡಿ ಮುಂದೆ ಅಪ್ಪ–ಅವ್ವ ಚಾ ಅಂಗಡಿ ಇಡುತ್ತಿದ್ದರು. ಇಡೀ ದಿನ ನಮ್ಮವ್ವ ಒಲೀ ಮುಂದ ಕುಂತು ಭಜಿ ಕರಿತೀದ್ಲು. ಎಣ್ಣಿ ಕಮರು, ಹೊಗಿ ಘಾಟಿಗೆ ಅಕೀನ ಕಣ್ಣೀಗ್ ಭಾಳ ತ್ರಾಸ್ ಆಗ್ತಿತ್ತು. ಕಣ್ಣು ಕೆಂಪಾಗಿ ಉರೀತಿದ್ದವು. ನೀರು ಸುರೀತಿತ್ತು. ಎಷ್ಟ ತ್ರಾಸ್ ಆದ್ರೂ ಕೆಲಸ ಮಾಡ್ತಿದ್ಲು. ಅಲ್ಲಿ ಬಂದ ಒಂದಿಷ್ಟು ರೊಕ್ಕದಾಗ ಇಡೀ ವಾರ ಮನಿ ನಡೀತಿತ್ತು. ನಂದು ಮತ್ತು ನಮ್ಮಕ್ಕನ ಸೈಕ್ಲಿಂಗ್ ಖರ್ಚೂ ಅದರಾಗ ಪೂರೈಸ್‌ಬೇಕಿತ್ತು. ಅವ್ವನ ಕಣ್ ಆಪರೇಷನ್ ಆದ ಮ್ಯಾಲ ಚಾ ಅಂಗಡಿ ಬಿಟ್ಟೆವಿ. ಅಪ್ಪ ಕೂಲಿ ಮಾಡಿದರು. ಅಕ್ಕ ರೇಣುಕಾ ರಾಷ್ಟ್ರೀಯ ಸೈಕ್ಲಿಂಗ್‌ನಲ್ಲಿ ಬಂಗಾರ ಗೆದ್ದು, ಸೈಕ್ಲಿಂಗ್ ಕೋಟಾದಾಗ ಪೊಲೀಸ್ ನೌಕರಿ ಸೇರಿದ ಮ್ಯಾಗ ಸ್ವಲ್ಪ ಸುಧಾರಣೆ ಆಗಾಕತ್ತೇವಿ. ಆದ್ರ ಸೈಕ್ಲಿಂಗ್ ಭಾಳ ದುಬಾರಿ' ಎನ್ನುವ ಗಂಗಾ ಅವರು, ಲಕ್ಷ್ಮೀ ಮತ್ತು ಪ್ರಹ್ಲಾದ ದಂಡೀನ್ ದಂಪತಿಯ ನಾಲ್ವರು ಹೆಣ್ಣುಮಕ್ಕಳಲ್ಲಿ ಕೊನೆಯವರು.

ಬೆಂಗಳೂರಿನ 'ಕೇರ್ ಟ್ರಸ್ಟ್' ಸಂಸ್ಥೆಯು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯಲ್ಲಿ ₹10.20 ಲಕ್ಷ ಮೌಲ್ಯದ ಸ್ಕಾಟ್ ಏರೋ ಬೈಕ್ ಅನ್ನು ಗಂಗಾ ಅವರಿಗೆ ಇತ್ತೀಚೆಗೆ ನೀಡಿದೆ. ಈ ಮೂಲಕ ಗಂಗಾ ಅವರ ಕನಸುಗಳಿಗೆ ಹೊಸ ರೆಕ್ಕೆ ಮೂಡಿದೆ.

'ವಿಜಯಪುರ, ಬಾಗಲಕೋಟೆ, ಬೆಳಗಾವಿ ಹಾಗೂ ಗದಗದಲ್ಲಿ ಸರ್ಕಾರದ ತರಬೇತಿ ವಸತಿ ನಿಲಯಗಳು ಇವೆ. ಆದರೆ, ಕೋಚ್‌ಗಳನ್ನು ನೇಮಕ ಮಾಡುತ್ತಿಲ್ಲ. ರೋಡ್ ಸೈಕ್ಲಿಂಗ್ ಅಭ್ಯಾಸವೂ ಕಷ್ಟ. ವಾಹನಗಳು ಓಡಾಡುವ ಹೆದ್ದಾರಿಗಳಲ್ಲಿ ಅಭ್ಯಾಸ ಮಾಡಬೇಕು. ಅಪಘಾತಗಳು ಸಂಭವಿಸುತ್ತವೆ. ಸೈಕ್ಲಿಸ್ಟ್‌ಗಳು ಗಾಯಗೊಂಡಿರುವ, ಮೃತರಾಗಿರುವ ಘಟನೆಗಳು ನಡೆದಿವೆ' ಎಂದು ರಾಜ್ಯ ಅಮೆಚೂರ್ ಸೈಕ್ಲಿಂಗ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶ್ರೀಶೈಲ ಕುರಣಿ ಹೇಳುತ್ತಾರೆ.

'ಸ್ಪರ್ಧಾ ಸೈಕಲ್‌ಗಳಿಗೆ ₹6–8 ಲಕ್ಷ ಕಿಮ್ಮತ್ತು ಇದೆ. ಪ್ರಾಕ್ಟೀಸ್ ಮಾಡೋ ಸೈಕಲ್ ₹2 ಲಕ್ಷ ಆಗುತ್ತೆ. ನಾವು ಎಲ್ಲಿಂದ ಖರೀದಿ ಮಾಡೋದು. ಬೇರೆ ದೇಶಗಳಲ್ಲಿ ಅತ್ಯಾಧುನಿಕ ಸೈಕಲ್ ಕೊಟ್ಟು ತರಬೇತಿ ಕೊಡ್ತಾರೆ' ಎಂದು ಪಟಿಯಾಲದ ಕ್ರೀಡಾ ನಿಲಯದಲ್ಲಿ ತರಬೇತಿ ಪಡೆಯುತ್ತಿರುವ ಬಾಗಲಕೋಟೆ ಜಿಲ್ಲೆಯ ಹುನ್ನೂರಿನ ಅನುಪಮಾ ಗುಳೇದ್ ಹೇಳುತ್ತಾರೆ.


ಅನುಪಮಾ ಅವರ ತಂದೆ ಹುನ್ನೂರಿನಲ್ಲಿ ಖಾಸಗಿ ಸಂಸ್ಥೆಯ ಉದ್ಯೋಗಿ. ಸಣ್ಣ ಸಂಬಳದಲ್ಲಿ ಸಂಸಾರ ನಡೆಯುತ್ತಿತ್ತು. ಅಣ್ಣನನ್ನು ನೋಡಿ ಸೈಕ್ಲಿಂಗ್‌ಗೆ ಬಂದ ಅನುಪಮಾ, ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಐದು ಚಿನ್ನ ಗೆದ್ದಿದ್ದಾರೆ. ಈಚೆಗೆ ಥಾಯ್ಲೆಂಡ್‌ನಲ್ಲಿ ನಡೆದಿದ್ದ ಏಷ್ಯನ್ ಸೈಕ್ಲಿಂಗ್‌ನಲ್ಲಿ ಸ್ಪರ್ಧಿಸಿದ್ದರು. ಅವರೊಂದಿಗೆ ಅದೇ ವಸತಿ ನಿಲಯದಲ್ಲಿ ಇರುವ ವಿಜಯಪುರದ ಛಾಯಾ ನಾಗಶೆಟ್ಟಿ, ಸುಜಲ್ ಯಾದವ್, ವೆಂಕಪ್ಪ ಕೆಂಗಲಗುತ್ತಿ ಅವರ ಹಿನ್ನೆಲೆಯೂ ಇದೇ ರೀತಿಯದ್ದು.

ವಿಜಯಪುರದ ಸೈಕ್ಲಿಂಗ್ ಪ್ರತಿಭೆಗಳ ಸಾಧನೆಯು ರಾಜ್ಯದ ಬೇರೆ ಬೇರೆ ಪ್ರದೇಶಗಳ ಯುವಜನರನ್ನು ಆಕರ್ಷಿಸುತ್ತಿದೆ. ಗದಗ, ಬೆಳಗಾವಿ, ಬೆಂಗಳೂರು ಮತ್ತು ಮೈಸೂರಿನಲ್ಲಿಯೂ ಸೈಕ್ಲಿಂಗ್ ಭರಾಟೆ ಜೋರಾಗಿದೆ. ಗದಗಿನ ಪವಿತ್ರಾ ಕುರ್ತಕೋಟಿ, ಬೆಂಗಳೂರಿನ ಸ್ಟಾರ್ ನರ್ಜರಿ ಕೂಡ ಪಟಿಯಾಲ ಹಾಸ್ಟೆಲ್‌ನಲ್ಲಿದ್ದಾರೆ.

ಸುಮಾರು 18 ವರ್ಷಗಳ ಹಿಂದೆ ಗದಗ ಜಿಲ್ಲೆಯ ನೀಲಮ್ಮ ಮಲ್ಲಿಗವಾಡ ಅವರು ರಾಷ್ಟ್ರಮಟ್ಟದ ಸೈಕ್ಲಿಂಗ್‌ನಲ್ಲಿ ಚಿನ್ನದ ಪದಕಗಳನ್ನು ಜಯಿಸಿದ್ದರು. ನೀಲಮ್ಮಳ ತಂದೆಯು ಮಗಳ ಸೈಕ್ಲಿಂಗ್ ತರಬೇತಿ ಹಾಗೂ ಸೈಕಲ್ ಖರೀದಿಗಾಗಿ ಸಾಲ ಮಾಡಿದ್ದರು. ಸಾಲ ಕೊಟ್ಟವರ ಮನೆಯಲ್ಲಿ ಕೂಲಿಯಾಳಾಗಿ ದುಡಿಯುತ್ತಿದ್ದರು. ಸರ್ಕಾರಿ ನೌಕರಿ ಸಿಕ್ಕಾಗ ನೀಲಮ್ಮ ಮಾಡಿದ್ದ ಮೊದಲ ಕೆಲಸ ಅಪ್ಪನ ಸಾಲ ತೀರಿಸಿ ಜೀತಮುಕ್ತರನ್ನಾಗಿಸಿದ್ದು. ಮೈಸೂರಿನ ಲೋಕೇಶ್ ನರಸಿಂಹಾಚಾರ್ ರಾಷ್ಟ್ರೀಯ ಚಾಂಪಿಯನ್ ಆದವರು. ಸದ್ಯ ತಮ್ಮ ತವರು ಜಿಲ್ಲೆಯಲ್ಲಿ ಸೈಕ್ಲಿಂಗ್ ತರಬೇತಿ ನೀಡುತ್ತಿದ್ದಾರೆ.

ವಿಜಯಪುರದಲ್ಲಿ ವೆಲೊಡ್ರಾಮ್ ಬೇಕೆಂಬ ಬೇಡಿಕೆ ಹಳೆಯದು. ಹತ್ತು ವರ್ಷಗಳಿಗೂ ಹೆಚ್ಚು ಅವಧಿಯ ಕಾಮಗಾರಿಯ ನಂತರ ಈಚೆಗೆ ಉದ್ಘಾಟನೆ ಮಾಡಿದ್ದಾರೆ. ಆದರೆ, ಅದರ ಗುಣಮಟ್ಟದ ಬಗ್ಗೆ ಫೆಡರೇಷನ್ ಅಸಮಾಧಾನ ವ್ಯಕ್ತಪಡಿಸಿದೆ. ಹಾಗಾಗಿ, ವೆಲೊಡ್ರಾಮ್ ಬಳಕೆಗೆ ಮುಕ್ತವಾಗಿಲ್ಲ. ಅದು ಅಭ್ಯಾಸಕ್ಕೆ ದೊರೆತರೆ ತರಬೇತಿಗೆ ಅನುಕೂಲ ಎನ್ನುತ್ತಾರೆ ಸೈಕ್ಲಿಂಗ್ ಸಂಸ್ಥೆ ಅಧ್ಯಕ್ಷ ರಾಜು ಬಿರಾದಾರ್.

ಸೌಲಭ್ಯಗಳ ಕೊರತೆಯಿದ್ದರೂ ಇಲ್ಲಿಯ ಸೈಕ್ಲಿಂಗ್ ಆಕರ್ಷಣೆ ಮಾತ್ರ ಕಮ್ಮಿಯಾಗಿಲ್ಲ. ಚಂದ್ರು ಕುರಣಿ ಐದು ವರ್ಷಗಳ ಹಿಂದೆ ನಿಧನರಾದರು. ಅವರು ಹಚ್ಚಿಟ್ಟ ಪಂಜಿನ ಬೆಳಕು ಇನ್ನೂ ಪ್ರಜ್ವಲಿಸುತ್ತಲೇ ಇದೆ. ಸೂರ್ಯ ಉದಯಿಸುವ ಮುನ್ನವೇ ರಸ್ತೆಗಿಳಿದು 80–100 ಕಿ.ಮೀ. ಸೈಕ್ಲಿಂಗ್ ಅಭ್ಯಾಸ ಮಾಡುವವರ ದಂಡು ವಿಜಯಪುರ, ಬಾಗಲಕೋಟೆಯ ಹೆದ್ದಾರಿಗಳಲ್ಲಿ ಪ್ರತಿದಿನ ಕಾಣಸಿಗುತ್ತದೆ. ಸ್ಥಳೀಯ ಜನರೂ ಸೈಕ್ಲಿಂಗ್ ಪ್ರೋತ್ಸಾಹಿಸುವಲ್ಲಿ ಸದಾ ಮುಂದು. ತಾವೇ ಬಡತನ ಅನುಭವಿಸುತ್ತಿದ್ದರೂ ಸೈಕ್ಲಿಸ್ಟ್‌ಗಳ ನೆರವಿಗೆ ಒದಗುವ ಉದಾರಿಗಳು ಇಲ್ಲಿಯ ಜನ. ಇಲ್ಲಿ ಸ್ಪರ್ಧೆಗಳು ನಡೆಯುವಾಗ ರಸ್ತೆಯ ಇಕ್ಕೆಲಗಳಲ್ಲಿ ರೊಟ್ಟಿ–ಮೊಸರಿನ ಬುತ್ತಿ ಕಟ್ಟಿಕೊಂಡು ಬಂದು ಜಮಾಯಿಸುವ ನೂರಾರು ಜನರು, ಬಿರುಬಿಸಿಲನ್ನೂ ಲೆಕ್ಕಿಸದೇ ಸೈಕ್ಲಿಸ್ಟ್‌ಗಳನ್ನು ಹುರಿದುಂಬಿಸುವುದನ್ನು ನೋಡುವುದೇ ಕಣ್ಣಿಗೆ ಹಬ್ಬ.



ಚಾಟಿ



ವಯಸ್ಕ ಮತದಾನಕ್ಕೆ ಕುತ್ತು

ಈವರೆಗೆ ಮತದಾರರು ಚುನಾವಣೆ ಮೂಲಕ ಪಕ್ಷವನ್ನು ಅಧಿಕಾರಕ್ಕೆ ತರುತ್ತಿದ್ದರು. ಈಗ ಪಕ್ಷಗಳು ಮತದಾರರನ್ನು ಆಯ್ಕೆ ಮಾಡಿಕೊಳ್ಳುತ್ತಿವೆ! ಸಂವಿಧಾನ ಜಾರಿ ಆಗುವ ಮೊದಲು ಕೆಲವೆಡೆ ಇದ್ದ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಆಸ್ತಿ ಉಳ್ಳವರು, ಪದವೀಧರರು ಮತ ಚಲಾಯಿಸಬಹುದಿತ್ತು. ಈಗ ಇನ್ನೊಂದು ರೀತಿ ಇದು ಎಸ್‌ಐಆರ್ ರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ.

ಕೆ. ವೆಂಕಟರಾಜು, ರಂಗಕರ್ಮಿ, 'ಫೇಸ್‌ಬುಕ್'ನಿಂದ

ಕಿಡಿನುಡಿ



'ನೀಟ್' ಪ್ರಶ್ನೆಪತ್ರಿಕೆ ಸೋರಿಕೆಯಿಂದಾಗಿ ಲಕ್ಷಾಂತರ ವಿದ್ಯಾರ್ಥಿಗಳು ಸಂಕಷ್ಟಕ್ಕೆ ತುತ್ತಾಗಿದ್ದಾರೆ. ಐವರು ಪ್ರಾಣ ಕಳೆದುಕೊಂಡಿದ್ದಾರೆ. ಇದರ ನೈತಿಕ ಹೊಣೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರೇ ಹೊರಬೇಕಿದೆ.

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ

25 ವರ್ಷಗಳ ಹಿಂದೆ

ಬುಧವಾರ, 23-5-2001

● ಹಾವಿನಂತೆ ಪೊರೆ ಬಿಡುವ ದಾವಣಗೆರೆಯ ಪೋರ

ದಾವಣಗೆರೆ, ಮೇ 22– ಹಾವಿನಂತೆ ಪೊರೆ ಬಿಡುವ 10 ವರ್ಷದ ಬಾಲಕನೊಬ್ಬ ದಾವಣಗೆರೆಯಲ್ಲಿ ಇದ್ದಾನೆ.

ಹುಟ್ಟಿದ ಕ್ಷಣದಿಂದಲೂ ಹಾವಿನಂತೆ ಪೊರೆ ಬಿಡುತ್ತಿರುವ ಈ ಬಾಲಕನಿಗೆ ಏನು ರೋಗ ಎನ್ನುವುದು ಪತ್ತೆಯಾಗದೇ ವೈದ್ಯಕೀಯ ರಂಗಕ್ಕೊಂದು ಸವಾಲಾಗಿ ಪರಿಣಮಿಸಿದ್ದಾನೆ.

ಈತನ ಚರ್ಮ ಬೆಳೆಯುತ್ತಲೇ ಇರುತ್ತದೆ. ಹೀಗೆ ಬೆಳೆದ ಚರ್ಮ ಆಗಾಗ ಉದುರುತ್ತದೆ. ಮತ್ತೆ ಹೊಸ ಚರ್ಮ ಬೆಳೆಯುತ್ತದೆ. ಇದು ನಿರಂತರ ಪ್ರಕ್ರಿಯೆಯಾಗಿದೆ.

ದಾವಣಗೆರೆ ನಿಟುವಳ್ಳಿ ಬಳಿಯ ಚಿಕ್ಕನಹಳ್ಳಿ ಹೊಸ ಬಡಾವಣೆಯಲ್ಲಿರುವ ಎಸ್. ಭೂತರಾಜ್ ಮತ್ತು ಸುಕನ್ಯ ಅವರ ಹಿರಿಯ ಪುತ್ರನಾಗಿರುವ ಬಿ. ನಾಗರಾಜ್ ಉಳಿದಂತೆ ಎಲ್ಲ ಬಾಲಕರಂತೆ ಇದ್ದಾನೆ. ರಾಘವೇಂದ್ರ ಶಾಲೆಯಲ್ಲಿ 3ನೇ ತರಗತಿ ಪಾಸಾಗಿ ನಾಲ್ಕನೇ ತರಗತಿಗೆ ಬಂದಿರುವ ಈತ ಓದಿನಲ್ಲಿ ಚುರುಕು. ಆದರೆ, ಮೈಮೇಲಿನ ಚರ್ಮವೆಲ್ಲಾ ಪೊರೆ ಬಿಡುತ್ತಿರುವುದರಿಂದ ಆಟೋಟ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವುದು ಈತನಿಗೆ ಕಷ್ಟ.

75 ವರ್ಷಗಳ ಹಿಂದೆ

ಬುಧವಾರ, 23-5-1951

● ಜೂಜು ತೆರಿಗೆಯಲ್ಲಿ ವಿನಾಯಿತಿ

ಬೆಂಗಳೂರು, ಮೇ 22– ನಾಳೆಯಿಂದ ಇಲ್ಲಿ ಆರಂಭವಾಗಲಿರುವ ಬೆಂಗಳೂರು ಕುದುರೆ ಜೂಜಿನ ಮೇಲೆ ಹಾಕುವ ಜೂಜಿನ ತೆರಿಗೆಯನ್ನು ಶೇಕಡ ಹದಿನೇಳೂವರೆಯಿಂದ 15ಕ್ಕೆ ಇಳಿಸಿರುವುದಾಗಿ ತಿಳಿದುಬಂದಿದೆ. ಈ ಬಗ್ಗೆ ಸರ್ಕಾರಿ ಪ್ರಕಟಣೆ ಇಷ್ಟರಲ್ಲಿಯೇ ಹೊರಬೀಳುವ ನಿರೀಕ್ಷೆಯಿದೆ.

ನ್ಯಾಯಬಾಹಿರ ಜೂಜನ್ನು ತಪ್ಪಿಸುವ ಉದ್ದೇಶದಿಂದ ಈ ರೀತಿ ತೆರಿಗೆಯನ್ನು ಕಡಿಮೆ ಮಾಡಲಾಗಿದೆ. ಈ ದರ ನಾಳೆಯಿಂದಲೇ ಜಾರಿಗೆ ಬರುತ್ತದೆ.

ಕಳೆದ ವರ್ಷ ಈ ತೆರಿಗೆಯಿಂದ ಸರ್ಕಾರಕ್ಕೆ 15.56 ಲಕ್ಷ ರೂ. ಆದಾಯ ಬಂತು. ಬರುವ ವರ್ಷಕ್ಕೆ 25 ಲಕ್ಷ ರೂ. ಆದಾಯ ಬರಬೇಕೆಂದು ಅಂದಾಜು ಮಾಡಲಾಗಿದೆ. ಈ ವರ್ಷ ರೇಸ್ ನಡೆವ ದಿನಗಳ ಸಂಖ್ಯೆ ಹೆಚ್ಚಾಗಿರುವುದೇ ಈ ಹೆಚ್ಚಿನ ಅಂದಾಜಿಗೆ ಕಾರಣ.

ವಾಚಕರ ವಾಣಿ

ಪಠ್ಯಪುಸ್ತಕ, ಸಮವಸ್ತ್ರ ಸಕಾಲಕ್ಕೆ ತಲಪಲಿ

ಈ ತಿಂಗಳ ಕೊನೆಯಲ್ಲಿ ವಿದ್ಯಾರ್ಥಿಗಳು ಶಾಲೆಗಳಿಗೆ ಮರಳಿ ಹಾಜರಾಗುತ್ತಾರೆ. ಅವರನ್ನು ಸಂತೋಷದಿಂದ ಬರಮಾಡಿಕೊಳ್ಳುವುದು ನಮ್ಮ ಕರ್ತವ್ಯ. ಆದರೆ, ಪ್ರತಿ ವರ್ಷವೂ ಜೂನ್ ಅಂತ್ಯದವರೆಗೂ ಪಠ್ಯಪುಸ್ತಕಗಳು ಹಾಗೂ ಸಮವಸ್ತ್ರ ದೊರೆಯುವುದಿಲ್ಲ. ಕೆಲವೊಂದು ಪುಸ್ತಕಗಳು ಬಂದರೆ, ಇನ್ನುಳಿದ ಪುಸ್ತಕಗಳು ಬಂದಿರುವುದಿಲ್ಲ. ಇದರಿಂದ ಶಿಕ್ಷಕರು ಬೋಧಿಸಲು ತೊಡಕಾಗುತ್ತದೆ; ವಿದ್ಯಾರ್ಥಿಗಳಿಗೂ ತೊಂದರೆಯಾಗುತ್ತದೆ. ಈ ಸಮಸ್ಯೆ ಪ್ರತಿವರ್ಷವೂ ಮುಂದುವರಿಯುವುದು ಸಾಮಾನ್ಯ ಎನ್ನುವಂತಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿಯಾದರೂ ಪಠ್ಯಪುಸ್ತಕಗಳು ಹಾಗೂ ಸಮವಸ್ತ್ರ ಸಕಾಲದಲ್ಲಿ ಮಕ್ಕಳ ಕೈ ಸೇರಲಿ.

ಪ್ರೇಮಾನಂದ ಹಿರೇಮಠ, ಜಮಖಂಡಿ

ಗ್ರಾಮೀಣ ಕೃಪಾಂಕ ಮರುಜಾರಿಗೊಳಿಸಿ

ರಾಜ್ಯ ಸರ್ಕಾರವು 56,432 ಸರ್ಕಾರಿ ಹುದ್ದೆಗಳ ಭರ್ತಿಗೆ ಮುಂದಾಗಿದೆ. ಭರ್ತಿಯ ವೇಳೆ ಗ್ರಾಮೀಣ ಹಾಗೂ ನಗರ ಪ್ರದೇಶದ ಅಭ್ಯರ್ಥಿಗಳಿಗೆ ಒಂದೇ ಮಾನದಂಡ ಅನುಸರಿಸಿದರೆ, ಗ್ರಾಮೀಣ ಅಭ್ಯರ್ಥಿಗಳಿಗೆ ತೀರಾ ಅನ್ಯಾಯವಾಗಲಿದೆ. ಏಕೆಂದರೆ, ನಗರಗಳಲ್ಲಿ ಓದಿದವರೊಟ್ಟಿಗೆ ಗ್ರಾಮೀಣ ವಿದ್ಯಾರ್ಥಿಗಳು ಪೈಪೋಟಿ ನಡೆಸುವುದು ಕಷ್ಟಕರ. 1991–92ರಲ್ಲಿ ಅಂದಿನ ಮುಖ್ಯಮಂತ್ರಿ ಎಸ್. ಬಂಗಾರಪ್ಪನವರು ಶೇ 15ರಷ್ಟು ಗ್ರಾಮೀಣ ಕೃಪಾಂಕ ನೀಡಿದ್ದರು. ಇದರಿಂದ ಲಕ್ಷಾಂತರ ಗ್ರಾಮೀಣ ವಿದ್ಯಾರ್ಥಿಗಳು ಘನತೆಯಿಂದ ಬದುಕು ಕಟ್ಟಿಕೊಳ್ಳಲು ಸಾಧ್ಯವಾಯಿತು. ಅದೇ ಮಾದರಿಯಲ್ಲಿಯೇ ರಾಜ್ಯ ಸರ್ಕಾರವು ನೇರ ನೇಮಕಾತಿಯಲ್ಲಿ ಗ್ರಾಮೀಣ ಕೃಪಾಂಕ ನೀಡುವ ಪದ್ಧತಿಯನ್ನು ಮರುಜಾರಿಗೊಳಿಸಲಿ.

ವಡ್ನಾಳ್ ಅಂಜನ್‌ಕುಮಾರ್ ಜಿ., ಚನ್ನಗಿರಿ

ಧಾರವಾಡವನ್ನು ಕಾಡುತ್ತಿದೆ ತಬ್ಬಲಿತನ

ಅಭಿವೃದ್ಧಿಯಲ್ಲಿ ಹಿನ್ನಡೆ ಅನುಭವಿಸುತ್ತಿರುವ ಧಾರವಾಡ ನಗರ ಈಗಲೂ ಹೋಬಳಿ ಕೇಂದ್ರದಂತೆ ಕಾಣುತ್ತಿದೆ. ಅವಳಿ ನಗರಗಳ ಕ್ರೋಡೀಕೃತ ಸಂಪನ್ಮೂಲವು ಸೂಕ್ತ ಹಂಚಿಕೆ ಕಾಣದೆ, ಮಲತಾಯಿ ಧೋರಣೆಗೆ ಈಡಾಗಿ ನಲುಗುತ್ತಿರುವ ಧಾರವಾಡದ ಅಭಿವೃದ್ಧಿ ಅಗತ್ಯವಾಗಿದೆ. ವಿಶಿಷ್ಟ ಸಾಂಸ್ಕೃತಿಕ, ಪಾರಂಪರಿಕ, ಸಾಹಿತ್ಯ, ಕಲೆ, ಸಂಗೀತ, ನೃತ್ಯ, ರಂಗಭೂಮಿ, ನಾಡು–ನುಡಿ ಹೋರಾಟ ಇತ್ಯಾದಿಯಲ್ಲಿ ತನ್ನದೇ ಆದ ಛಾಪು ಹೊಂದಿರುವ ಧಾರವಾಡ ಇಂದು ಒಳರಾಜಕೀಯ, ಸಣ್ಣತನದಿಂದ ತನ್ನ ಅಸ್ಮಿತೆ ಕಳೆದುಕೊಂಡಿರುವಂತೆ ಭಾಸವಾಗುತ್ತಿದೆ. ಸಾಂಕೇತಿಕವಾಗಿ 'ಧಾರವಾಡ ಮಹಾನಗರ ಪಾಲಿಕೆ' ಎಂಬ ಫಲಕವನ್ನು ಹು.ಧಾ.ಮ.ಪಾ. ಆಡಳಿತ ಕಚೇರಿ ಮೇಲೆ ಅಳವಡಿಸಿ ಪ್ರತಿರೋಧ ವ್ಯಕ್ತಪಡಿಸಲಾಗಿದೆ. ಸಾಂವಿಧಾನಿಕ ಹುದ್ದೆಯ ಅಲಂಕೃತ ಮಹೋದಯರು ಸೂಕ್ತ ನಿರ್ಧಾರ ಕೈಗೊಳ್ಳಲು ಬಿನ್ನಹ.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ಜೀವ ಖಜಾನೆಗಳಿಗೆ ಭೂಗಳ್ಳರಿಂದ ಕನ್ನ

ಬೆಂಗಳೂರಿನ ಬೆಳವಣಿಗೆಯ ಕಾರಣದಿಂದಾಗಿ ಉದ್ಯಾನನಗರಿಯಲ್ಲಿ ಇರುವ ಪಕ್ಷಿಸಂಕುಲ, ಕೆರೆ–ಕಟ್ಟೆ ಹಾಗೂ ಮರ–ಗಿಡಗಳು ವಿನಾಶದ ಅಂಚಿಗೆ ತಲಪಿವೆ. ಸಾವಿರಾರು ಕೆರೆಗಳ ಆಶ್ರಯತಾಣ ಆಗಿದ್ದ ಬೆಂಗಳೂರು ನಗರೀಕರಣದ ನೆಪದಲ್ಲಿ ಸಂಪೂರ್ಣವಾಗಿ ಕಾಂಕ್ರೀಟ್ ಮಯವಾಗಿದೆ. ಪರಿಸರವನ್ನು ಉಳಿಸುವ ಬೆಳೆಸುವ ಜವಾಬ್ದಾರಿ ಸರ್ಕಾರ, ಜನಪ್ರತಿನಿಧಿಗಳು, ಸ್ಥಳೀಯ ಸಂಘ–ಸಂಸ್ಥೆಗಳು ಮತ್ತು ನಾಗರಿಕರ ಆದ್ಯ ಕರ್ತವ್ಯವಾಗಿದೆ. ಇದಕ್ಕೆ ಪೂರಕವಾಗಿ ಹೂಳಿನಿಂದ ತುಂಬಿದ್ದ ನಾಗವಾರ ಕೆರೆಯ ಪುನಶ್ಚೇತನಕ್ಕೆ ಸರ್ಕಾರ ಮುಂದಾಗಿರುವುದು ಶ್ಲಾಘನೀಯ. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಭೂಗಳ್ಳರು ಕೆರೆಗಳನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಅದನ್ನು ತೆರವುಗೊಳಿಸಿ ಪುನಶ್ಚೇತನಕ್ಕೆ ಒತ್ತು ನೀಡಬೇಕಿದೆ.

ಪಟ್ಟಡಿ ಎ. ಬಸವರಾಜ್, ಬೆಂಗಳೂರು

ಕೌಶಲ ಆಧಾರಿತ ಕೋರ್ಸ್‌ಗಳು ಹೆಚ್ಚಲಿ

ಜಗತ್ತು ತಂತ್ರಜ್ಞಾನದಲ್ಲಿ ಮುಂದುವರಿದಂತೆಲ್ಲ ಅಂಕಗಳು ಮೌಲ್ಯ ಕಳೆದುಕೊಳ್ಳುತ್ತಿವೆ. ವಿದ್ಯಾರ್ಥಿಗಳ ಕೌಶಲಗಳಿಗಷ್ಟೆ ಬೆಲೆ ಸಿಗುವಂತಾಗುತ್ತಿದೆ. ಇದು ಒಳ್ಳೆಯ ಬೆಳವಣಿಗೆಯೇ ಸರಿ. ಆದರೆ, ಇದಕ್ಕೆ ತಕ್ಕಂತೆ ಸರ್ಕಾರಿ ಕಾಲೇಜುಗಳಲ್ಲಿ ಕೌಶಲ ಆಧಾರಿತ ಕೋರ್ಸ್‌ಗಳೂ ಹೆಚ್ಚಬೇಕಲ್ಲವೆ? ಪಿಯುಸಿ ಮತ್ತು ಪದವಿ ಹಂತದಲ್ಲಿಯೇ ಕೃತಕ ಬುದ್ಧಿಮತ್ತೆ, ಡಿಜಿಟಲ್ ಮೀಡಿಯಾದಂತಹ ಕೋರ್ಸ್‌ಗಳ ಪರಿಚಯಕ್ಕೆ ಉನ್ನತ ಶಿಕ್ಷಣ ಇಲಾಖೆಯು ಒತ್ತು ನೀಡಬೇಕಿದೆ. ಅದರಲ್ಲೂ ಬಿಎ ಪದವಿ ಓದುವ ವಿದ್ಯಾರ್ಥಿಗಳಿಗೆ ಕೌಶಲ ಆಧಾರಿತ ಕೋರ್ಸ್‌ಗಳ ಅಗತ್ಯ ಹೆಚ್ಚಿದೆ. ಏಕೆಂದರೆ, ಕೌಶಲದ ಅಭಾವದಿಂದಾಗಿ ಹಲವಾರು ಕಾಲೇಜುಗಳಲ್ಲಿ ತಾಂತ್ರಿಕ ಜ್ಞಾನಕ್ಕಿಂತ ಸೈದ್ಧಾಂತಿಕ ಜ್ಞಾನಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತು ತಾಂತ್ರಿಕ ಜ್ಞಾನದ ಕೌಶಲವನ್ನು ಹೆಚ್ಚಾಗಿ ಬೇಡುತ್ತದೆ.

ಗಾನವಿ ಎಚ್.ಆರ್., ತಿಪಟೂರು

ಮೆಡಿಕಲ್ ಕಾಲೇಜು ಹೊಸಪೇಟೆಗೇಕಿಲ್ಲ?

ರಾಜ್ಯ ಸರ್ಕಾರವು ರಾಮನಗರ, ಕನಕಪುರ ಮತ್ತು ಬಾಗಲಕೋಟೆಯಲ್ಲಿ ಹೊಸದಾಗಿ ಮೂರು ಸರ್ಕಾರಿ ವೈದ್ಯಕೀಯ ಕಾಲೇಜುಗಳ ಆರಂಭಕ್ಕೆ ಅನುಮತಿ ಕೋರಿ ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ ಪ್ರಸ್ತಾವ ಸಲ್ಲಿಸಿರುವುದು ಸರಿಯಷ್ಟೆ. ಆದರೆ, ಹೊಸ ಜಿಲ್ಲೆ ರಚನೆಯಾಗಿ ಐದು ವರ್ಷಗಳಾದರೂ ವೈದ್ಯಕೀಯ ಮೂಲಸೌಲಭ್ಯಗಳಿಂದ ವಂಚಿತವಾಗಿರುವ ವಿಜಯನಗರವನ್ನು (ಹೊಸಪೇಟೆ) ಕಡೆಗಣಿಸಿರುವುದು ಸರಿಯಲ್ಲ. ಈ ಭಾಗದಲ್ಲಿ ಹೆಚ್ಚಾಗಿ ಗಣಿಗಾರಿಕೆ, ಕೈಗಾರಿಕೆ, ಕೃಷಿ ಸಂಬಂಧಿತ ವೃತ್ತಿಯಿಂದಾಗಿ ಅಪಘಾತಗಳ ಪ್ರಮಾಣ ಹೆಚ್ಚಿದೆ. ಹೊಸಪೇಟೆಯಲ್ಲಿ ಸುಸಜ್ಜಿತ ಸರ್ಕಾರಿ ಆಸ್ಪತ್ರೆಯ ಕೊರತೆಯಿದೆ. ಸಕಾಲದಲ್ಲಿ ಚಿಕಿತ್ಸೆ ದೊರೆಯದೆ ಜನರ ಸಾವಿನ ಪ್ರಮಾಣ ಅಧಿಕವಾಗತೊಡಗಿದೆ. ಈ ಜಿಲ್ಲೆಗೆ ಜಿಲ್ಲಾ ಖನಿಜ ನಿಧಿ ಮತ್ತು ಕರ್ನಾಟಕ ಗಣಿ ಪ್ರದೇಶ ಪುನಶ್ಚೇತನ ನಿಗಮದ ವಿಶೇಷ ಅನುದಾನ ದೊರೆಯುತ್ತದೆ. ಆ ಹಣ ಬಳಸಿಕೊಂಡು ವೈದ್ಯಕೀಯ ಕಾಲೇಜನ್ನು ಸ್ಥಾಪಿಸಬೇಕಿದೆ.

ವೈ. ಯಮುನೇಶ್, ಹೊಸಪೇಟೆ

ಚುರುಮುರಿ



ಪಾರ್ಲೆ ವರ್ಸಸ್ ಜಿರ್ಲೆ!

● ತುರುವೇಕೆರೆ ಪ್ರಸಾದ್

'ಏನ್ರಪ್ಪಾ ನಮ್ ಮೋದಿಮಾಮ ಮೆಲೋನಿಗೆ ಮೆಲೊಡಿ ಚಾಕೊಲೇಟ್ ಕೊಟ್ಟಿದ್ದೇ ದೊಡ್ ಸುದ್ದಿ ಆಗೋಗದೆ' ಎಂದ ಗುದ್ಲಿಂಗ.

'ಭಾಳಾ ಅನ್ಯಾಯ ಕಣ್ ಬುಡ್ಲಾ! ದೀದಿ ದುರ್ಗಾಪೂಜೆ ಟೈಮಾಗೆ ಮೋದಿಮಾಮಂಗೆ ಕುರ್ತಾ, ಸ್ವೀಟ್ ಕಳ್ಸೋರು. ಅವರಿಗೆ ಒಂದ್ ಚಾಕೊಲೇಟ್ ಕೊಡೋದಿರ್‍ಲಿ, ಬಂಗಾಳಿಂದ ಟಿಕೇಟೆ ಕೊಟ್ ಬಿಟ್ರು' ಎಂದ ಮಾಲಿಂಗ.

'ಊ ಕಣೇಳ್ಲಾ! ಇಲ್ ನಮ್ ಇಟಲಿ ಸೊಸೆಗೆ ಒಂದು ಚಾಕೊಲೇಟ್ ಕೊಡಕ್ಕೇನ್ಲಾ ಆಗಿತ್ತು? ಬ್ಯಾಡ, ಅವ್ರು ಅಪೊಸಿಶನ್ನು, ಅವರ್‍ದೇ ಪಾರ್ಟಿಯ ಸ್ಮೃತಿ ಅಕ್ಕ, ಡೆಲ್ಲಿ ಸಿಎಂ ರೇಖಕ್ಕ, ವಸುಂಧರಕ್ಕ, ಬಂಗಾಳದ ರೇಖಪಾತ್ರ, ಅಗ್ನಿಮಿತ್ರಕ್ಕ ಎಲ್ಲಾ ಇಲ್ವಾ?'

'ಅದೆಲ್ಲಕ್ಕಿಂತ ಹೆಚ್ಚಾಗಿ ಡ್ರೀಮ್ ಗರ್ಲ್ ಹೇಮಾಮಾಲಿನಿ ಅವ್ರೆ, ದೀಪಿಕಾ ಅವ್ರೆ. ನೂಪುರಕ್ಕ, ಮಾಧವಿ ಅಕ್ಕ ಸದಾ ಕಮಲದ ತುತ್ತೂರಿ ಊದ್ತಾರೆ. ಇವರಿಗೆಲ್ಲಾ ನಮ್ ಮೋದಿಮಾಮ ಯಾವತ್ತಾದ್ರೂ ಚಾಕಲೇಟರಲಿ ಶುಂಠಿ ಪೆಪ್ಪರಮೆಂಟಾದ್ರೂ ಕೊಟ್ಟವ್ರೇನ್ಲಾ?' ಕೇಳಿದ ಕಲ್ಲೇಶಿ.

'ಲೇಯ್ ಅವರೆಲ್ಲಾ ಸ್ವದೇಶೀ ಕಣ್ಲಾ, ಇದು ವಿದೇಶೀ ವಿನಿಮಯ! ಸದ್ಯ ಫ್ರೆಂಚ್ ಅಧ್ಯಕ್ಷ ಮ್ಯಾಕ್ರಾನ್ ತರ ಮುತ್ತಿಕ್ಕಿಲ್ಲ, ಅಲ್ಬೇನಿಯಾ ಪ್ರಧಾನಿ ತರ ಮಂಡಿಯೂರಿಲ್ಲವಲ್ಲ..!'

'ಯೋನೇ ಯೋಳು ಇದು ತುಂಬಾ ಅವಮಾನಕರ ಸಂಗತಿ ಬುಡು' ಎಂದು ಗುದ್ಲಿಂಗ.

'ಯಾಕ್ಲಾ ಅಂಗಂದೀಯ? ಇದು ಚಾಕೊಲೇಟ್ ಡಿಪ್ಲೊಮಸಿ ಕಣ್ಲಾ!'

'ಆದರೇನ್ಲಾ? ನಮ್ದು ನಾಲ್ಕು ಟ್ರಿಲಿಯನ್ ಡಾಲರ್ ಆರ್ಥಿಕತೆ ಅಂದ್ಕೊಂಡು ಐವತ್ತು ರೂಪಾಯಿ ಚಾಕೊಲೇಟ್ ಕೊಟ್ಟವ್ರಲ್ಲ! ನಮ್ ಮರ್‍ವಾದೆ ಕತೆ ಏನು? ಇನ್ಮೇಲೆ ಜುಲೈ 7 ಚಾಕೊಲೇಟ್ ದಿನಾನ 'ಮೆಲೊಡಿ ಡೇ' ಅಂತ ಚಪ್ಪರಿಸಿ ಎಂದು ಮೋದಿ ಸಂದೇಶ ಕೊಡ್ತಾರೆ'.

'ಆದ್ರೆ ಹತ್ತು ಮಿಲಿಯನ್ ಸೈನ್ಯ ಕಟ್ಕಂಡು ಜಿರಲೆಗಳು ಮೀಸೆ ತಿರುವಿಕೊಂಡು ಓಡಾಡ್ತಿವೆ. ಚಾಕಲೇಟೆಲ್ಲಾ ಜಿರಲೆ ಪಾಲೇ ಅನ್ಸುತ್ತೆ!'

'ಪಾರ್ಲೆನ ಜಿರ್ಲೆ ನುಂಗಿತ್ತಾ ನೋಡವ್ವ ತಂಗಿ' ಎಂದ ಪರ್‍ಮೇಶಿ. ಎಲ್ಲಾ ಗೊಳ್ಳನೆ ನಕ್ಕರು.

ಸಂಗತ

ಗದ್ದಲದ ಜಗ, ಮೌನ, ನಿಧಾನ ಮತ್ತು ಆಮೆ!


ಜೀವವಿಕಾಸದ ಅತ್ಯಂತ ಹಳೆಯ ಕೊಂಡಿಗಳಾದ ಆಮೆಗಳು, ವರ್ತಮಾನದಲ್ಲಿ 'ಜೀವನಕಲೆ' ಕಲಿಸುವ ಗುರುಗಳಂತೆ ನೋಡಬಹುದಾದ ಜೀವಿಗಳೂ ಹೌದು.

● ಶ್ರೀಗುರು

ಜೊನಾಥನ್, ತೂಯಿ ಮಾಲಿಲ ಮತ್ತು ಅದ್ವೈತ! ಇವು ವಿಶ್ವ ಪ್ರಸಿದ್ಧರ ಹೆಸರುಗಳಲ್ಲ. ನಕ್ಷತ್ರ, ನೀಹಾರಿಕೆಗಳೂ ಅಲ್ಲ. ಸಮಾಜಸೇವೆ ಮಾಡುತ್ತ ಎಲೆಮರೆಯ ಕಾಯಿಯಂತೆ ಬದುಕಿದ ಮಹನೀಯರ ಹೆಸರುಗಳೂ ಅಲ್ಲ. ಒಲಿಂಪಿಕ್ ಕ್ರೀಡಾಕೂಟದ ತಾರೆಗಳೂ ಅಲ್ಲ. ಯುದ್ಧ ಬಳಕೆಯ ಕ್ಷಿಪಣಿ–ರಾಕೆಟ್‌ಗಳೂ ಅಲ್ಲ! ಕಾದಂಬರಿಯೊಂದರ ಪಾತ್ರಗಳೂ ಅಲ್ಲ. ಇವು, ಜಗತ್ತಿನ ಇತಿಹಾಸದಲ್ಲೇ ಅತಿಹೆಚ್ಚು ಕಾಲ ಬದುಕಿದ ಆಮೆಗಳ ಹೆಸರು!

'ಜೊನಾಥನ್' ಹೆಸರಿನ ಆಮೆಗೆ ಈಗ ಬರೋಬ್ಬರಿ 194 ವರ್ಷ. ದಕ್ಷಿಣ ಅಟ್ಲಾಂಟಿಕ್ ಮಹಾಸಾಗರದ ಮಧ್ಯದಲ್ಲಿರುವ ಸೇಂಟ್ ಹೆಲೆನಾ ದ್ವೀಪದ ಗವರ್ನರ್ ಅವರ ತೋಟದಲ್ಲಿ ರಾಜಾತಿಥ್ಯ ಪಡೆಯುತ್ತಿರುವ ಜಗತ್ತಿನ ಅತ್ಯಂತ ವಯಸ್ಸಾದ ಜೀವಂತಪ್ರಾಣಿ ಎಂಬ ಗಿನ್ನೆಸ್ ದಾಖಲೆಯ ಹಿರಿಮೆ ಈ ಆಮೆಯದು. ಸೇಂಟ್ ಹೆಲೆನಾ ದ್ವೀಪದ ನಾಣ್ಯದ ಮೇಲೆ ಇದರ ಚಿತ್ರವಿದೆ. ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿ ರಾಬರ್ಟ್ ಕ್ಲೈವ್ ಸಾಕಿದ್ದ, ಕೋಲ್ಕತ್ತ ಮೃಗಾಲಯಕ್ಕೆ ಬಂದು ಭಾರತದ ಇತಿಹಾಸಕ್ಕೆ ಸಾಕ್ಷಿಯಾದ 'ಅದ್ವೈತ' ಎಂಬ ಆಮೆ ಬರೋಬ್ಬರಿ 256 ವರ್ಷಗಳವರೆಗೆ (1750–2006) ಜೀವಿಸಿ ಇತಿಹಾಸ ನಿರ್ಮಿಸಿತ್ತು. ಟೊಂಗಾ ರಾಜಮನೆತನದಲ್ಲಿ ರಾಯಲ್ ಗೌರವ ಪಡೆದಿದ್ದ 'ತೂಯಿ ಮಾಲಿಲ' ಆಮೆ 188 ವರ್ಷ ಬದುಕಿತ್ತು.

ವೇಗವಾಗಿ ಓಡುವ ಜಗತ್ತಿನಲ್ಲಿ, 'ಸ್ವಲ್ಪ ನಿಲ್ಲಿ, ನಿಧಾನವೇ ಪ್ರಧಾನ' ಎಂದು ನಮಗೆ ನೆನಪಿಸುವ ಜೀವಿಗಳಿದ್ದರೆ ಅವು ಆಮೆಗಳು. ಪರಿಸರ ವಿಜ್ಞಾನದ ದೃಷ್ಟಿಯಿಂದ ನೋಡಿದರೆ, ಆಮೆಗಳು ಸಾಗರ ಮತ್ತು ಭೂಮಿಯ ಪರಿಸರ ವ್ಯವಸ್ಥೆಯ ಅತ್ಯಂತ ಪ್ರಮುಖ ಕೊಂಡಿಗಳು. ಗರಿಷ್ಠ ನಲವತ್ತು ವರ್ಷ ಬದುಕುವ ಕಡಲಾಮೆಗಳು, ಕಡಲ ಅಡಿಯ ಹುಲ್ಲನ್ನು ಮೇಯ್ದು ಸಮುದ್ರದ ಆರೋಗ್ಯವನ್ನು ಕಾಯ್ದುಕೊಂಡರೆ, 150ರಿಂದ 300 ವರ್ಷ ಬದುಕುವ ಭೂಮಿಯ ಮೇಲಿನ ಆಮೆಗಳು ಬೀಜ ಪ್ರಸರಣಕ್ಕೆ ನೆರವಾಗುತ್ತವೆ. ಡೈನೋಸಾರ್‌ಗಳ ಕಾಲದಿಂದಲೂ ಬದುಕುಳಿದು ಬಂದಿರುವ ಈ ಜೀವಿಗಳು ಜಗತ್ತಿನ ಅತ್ಯಂತ ಹಳೆಯ ಪ್ರಾಣಿಗಳು; ಜೀವವಿಕಾಸದ ಹಾದಿಯ ಸಾಕ್ಷಿಕಲ್ಲುಗಳು.



'ಆಮೆ ಮತ್ತು ಮೊಲ'ದ ಕಥೆ ತಲೆಮಾರುಗಳಿಂದ ತಲೆಮಾರುಗಳಿಗೆ ಸಾಗುತ್ತಾ ಬಂದಿದೆ. ಈ ಕಥೆ ಇಂದಿನ ಕಾಲದ ಜೀವನಶೈಲಿಯ ಕುರಿತು ನಮ್ಮನ್ನು ಮರುಚಿಂತನೆಗೆ ಹಚ್ಚುವಂತಿದೆ. ಆಮೆ ನಿಧಾನವಾಗಿ ನಡೆದು ಗೆದ್ದಿತು, ಮೊಲ ಅಹಂಕಾರದಿಂದ ಸೋತಿತು ಎಂಬುದು ಹಳೆಯ ನೀತಿ. ಇಂದಿನ ಕಾರ್ಪೊರೇಟ್ ಜಗತ್ತಿಗೆ ಇದನ್ನು ಹೋಲಿಸಿದರೆ, ಆಮೆ ನಮಗೆ 'ಬರ್ನ್‌ಔಟ್' ಆಗದಂತೆ ಬದುಕುವುದು ಹೇಗೆ ಎಂದು ಕಲಿಸುತ್ತದೆ. ಸಮಸ್ಯೆಗಳು ಬಂದಾಗ ಧೃತಿಗೆಡದೆ ಮನಸ್ಸಿನ ಕವಚದೊಳಗೆ ಅಡಗಿ ಆತ್ಮಾವಲೋಕನ ಮಾಡಿಕೊಳ್ಳಿ; ಪರಿಸ್ಥಿತಿ ಸರಿಯಾದಾಗ ಮತ್ತೆ ನಿಧಾನವಾಗಿ, ಆದರೆ ದೃಢವಾಗಿ ಮುನ್ನಡೆಯಿರಿ ಎಂಬ ನೀತಿಯನ್ನು ಕಥೆ ಸಾರುತ್ತದೆ.

ಮೊಲ ಇಂದಿನ ಯುವ ಪೀಳಿಗೆಯ ಪ್ರತಿನಿಧಿ. ಆರಂಭದಲ್ಲಿ ಸಿಕ್ಕಾಪಟ್ಟೆ ವೇಗ, ದಿನವಿಡೀ ಕೆಲಸ. ಆಮೇಲೆ ದಣಿವು, ಕೊನೆಗೆ ಡಿಪ್ರೆಷನ್! ನಿಧಾನವೇ ಪ್ರಧಾನ ಎಂಬುದು ಕೇವಲ ಗಾದೆಮಾತಲ್ಲ, ಅದು ಆಮೆಗಳ ಬದುಕಿನ ಯಶಸ್ಸಿನ ಗುಟ್ಟು. ಬೆನ್ನಿನ ಮೇಲೆ ಸುಂದರವಾದ, ಗಟ್ಟಿಯಾದ ಕವಚವನ್ನು ಆಮೆಗಳು ಜನ್ಮತಃ ಹೊಂದಿರುತ್ತವೆ. ಯಾರಾದರೂ ತೊಂದರೆ ಕೊಟ್ಟರೆ ಅಥವಾ ಜಗತ್ತಿನ ಜಂಜಾಟ ಬೇಡ ಎನಿಸಿದರೆ, ತಲೆಯನ್ನು ಒಳಗಡೆ ಎಳೆದುಕೊಂಡು 'ಡು ನಾಟ್ ಡಿಸ್ಟರ್ಬ್' ಮೋಡ್‌ಗೆ ಹೋಗಿಬಿಡುತ್ತವೆ. ಇಂತಹ ಅದ್ಭುತವಾದ ಸೆಲ್ಫ್ ಐಸೊಲೇಶನ್ ಅನುಕೂಲ ಮನುಷ್ಯನಿಗಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!

ನಿಯಂತ್ರಣಕ್ಕೆ ಸಿಗದ ಪ್ಲಾಸ್ಟಿಕ್ ಮಾಲಿನ್ಯ ಸಾಗರ ಜೀವಿಗಳ ಪ್ರಾಣಕ್ಕೆ ಕಂಟಕವಾಗುತ್ತಿದೆ. ನಾವು ಬಳಸಿ ಸಮುದ್ರಕ್ಕೆ ಎಸೆಯುವ ಪ್ಲಾಸ್ಟಿಕ್ ಕವರ್‌ಗಳನ್ನು ಜೆಲ್ಲಿ ಫಿಶ್ ಎಂದು ಭಾವಿಸಿ ತಿನ್ನುವ ಆಮೆಗಳು ಸಾವನ್ನಪ್ಪುತ್ತಿವೆ. ಮುದ್ದು ಆಮೆಗಳು ಅದೃಷ್ಟ ತರುತ್ತವೆ ಎಂಬ ಮೂಢನಂಬಿಕೆಯಿಂದ ಮತ್ತು ಮಾಂಸಕ್ಕಾಗಿ ಆಮೆಗಳ ಕಳ್ಳಸಾಗಣೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಕಡಲ ಮಾಲಿನ್ಯ ಹೆಚ್ಚುತ್ತಿರುವುದರಿಂದಾಗಿ ಹಾಗೂ ಕಡಲತೀರಗಳ ನಗರೀಕರಣ ತೀವ್ರವಾಗುತ್ತಿರುವುದರಿಂದಾಗಿ ಆಮೆಗಳ ಮೊಟ್ಟೆಯಿಡುವ ಜಾಗಗಳೇ ಮಾಯವಾಗುತ್ತಿವೆ.

ಆಮೆಗಳ ಸುರಕ್ಷತೆಗೆ ನಾವು ಸಾಮಾಜಿಕ ಜಾಲತಾಣಗಳಲ್ಲಿ ಆಮೆಯ ಫೋಟೊ ಹಾಕಿ 'ಹ್ಯಾಪಿ ಟರ್ಟಲ್ ಡೇ' ಎಂದರೆ ಸಾಲದು. ನಮ್ಮಿಂದಾಗುವ ಸಣ್ಣ ಸಹಾಯಗಳಾದ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು, ಬಳಸಿದ್ದನ್ನು ಬೇಕಾಬಿಟ್ಟಿ ಎಸೆಯದೆ ರೀಸೈಕಲ್ ಘಟಕಗಳಿಗೆ ತಲಪಿಸುವುದು, ಪ್ರವಾಸಕ್ಕೆ ಹೋದಾಗ ಕಡಲ ತೀರಗಳನ್ನು ಸ್ವಚ್ಛವಾಗಿಡುವುದು, ಆಮೆಗಳನ್ನು ಮನೆಯಲ್ಲಿ ಅಕ್ರಮವಾಗಿ ಸಾಕದೆ, ಅವುಗಳ ಮುಕ್ತ ಬದುಕಿಗೆ ಅವಕಾಶ ನೀಡುವುದು ಮತ್ತು ಶಾಲಾಕಾಲೇಜು ಪಠ್ಯಗಳಲ್ಲಿ ಆಮೆಗಳು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಪರಿಹಾರಕ್ರಮಗಳ ಪಾಠ ಅಳವಡಿಸುವುದು ಮತ್ತು ಈ ಮಾಹಿತಿಯನ್ನು ಸಂವಹನದ ವೇದಿಕೆಗಳಲ್ಲೂ ಹಂಚಿಕೊಳ್ಳಬೇಕು.


ಜಗತ್ತಿನ ಅತ್ಯಂತ ಹಳೆಯ ಮತ್ತು ವಿಶಿಷ್ಟ ಜೀವಿಗಳಾದ ಆಮೆಗಳನ್ನು ಸಂರಕ್ಷಿಸುವುದು ಹಾಗೂ ಅವುಗಳ ಆವಾಸ ಸ್ಥಾನಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಮೇ 23ನ್ನು 'ವಿಶ್ವ ಆಮೆದಿನ'ವಾಗಿ ಆಚರಿಸಲಾಗುತ್ತದೆ. ಈ ಕಾಳಜಿ ಒಂದು ದಿನಕ್ಕೆ ಸೀಮಿತವಾಗದೆ, ಅನುದಿನದ ಅಭ್ಯಾಸ ಆಗಬೇಕಿದೆ. ಪುರಾಣ–ಸಂಸ್ಕೃತಿಯ ಬಗ್ಗೆ ಭಾವುಕತೆಯನ್ನು ಹೊಂದಿರುವ ನಾವು ಕೂರ್ಮಾವತಾರದ ಪ್ರತಿನಿಧಿ ಬಗ್ಗೆ ಕಾಳಜಿ ವಹಿಸಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ

‘ಅರ್ಹರಿಗೆ ತಪ್ಪದು ಮತದಾನದ ಹಕ್ಕು’

ಅರ್ಹ ಮತದಾರರನ್ನಷ್ಟೇ ಮತದಾರರ ಪಟ್ಟಿಯಲ್ಲಿ ಉಳಿಸುವುದು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಮೂಲ ಉದ್ದೇಶ. ಅರ್ಹರನ್ನಷ್ಟೇ ಗುರುತಿಸುವ ರೀತಿಯಲ್ಲಿ ಎಸ್‌ಐಆರ್ ಪ್ರಕ್ರಿಯೆಯನ್ನು ರೂಪಿಸಲಾಗಿದ್ದು, ಅದು ಸಂಪೂರ್ಣವಾಗಿ ನಿಯಮಬದ್ಧವಾಗಿಯೇ ನಡೆಯುತ್ತದೆ. ಪ್ರಕ್ರಿಯೆ ಅಂತಿಮಗೊಂಡಾಗ ಅರ್ಹ ಮತದಾರರಷ್ಟೇ ಉಳಿಯುತ್ತಾರೆ, ಅನರ್ಹರು ಅಲ್ಲ ಎನ್ನುವುದು ರಾಜ್ಯ ಮುಖ್ಯ ಚುನಾವಣಾಧಿಕಾರಿ **ವಿ.ಅನ್ಬುಕುಮಾರ್** ಅವರ ಸ್ಪಷ್ಟ ನುಡಿ. ಎಸ್‌ಐಆರ್ ಕುರಿತ ವಿವರಗಳನ್ನು ‘ಪ್ರಜಾವಾಣಿ’ ಯೊಂದಿಗೆ ಅವರು ಹಂಚಿಕೊಂಡಿದ್ದಾರೆ.



● ಜಯಸಿಂಹ ಆರ್.

ಪ್ರಜಾವಾಣಿ ಸಂದರ್ಶನ

● ಎಸ್‌ಐಆರ್‌ನ ಮೂಲ ಉದ್ದೇಶವೇನು? ಮತದಾರರನ್ನು ಸೇರಿಸುವುದೋ ಅಥವಾ ಕೈಬಿಡುವುದೋ?

ಉತ್ತರ: ದೇಶದ ಎಲ್ಲ ಅರ್ಹ ಮತದಾರರಿಗೂ ಮತದಾನದ ಹಕ್ಕು ದೊರೆಯಬೇಕು ಎಂಬುದು ಎಸ್‌ಐಆರ್‌ನ ಮೂಲ ಉದ್ದೇಶ. ದೇಶದಲ್ಲಿ ಈವರೆಗೆ ಒಂಬತ್ತು ಬಾರಿ ಎಸ್‌ಐಆರ್ ನಡೆದಿದೆ. ರಾಜ್ಯದಲ್ಲಿ ಹಿಂದಿನ ಎಸ್‌ಐಆರ್ ನಡೆದಿದ್ದು 2002ರಲ್ಲಿ. ಈಗ ಮತ್ತೆ ಈ ಪ್ರಕ್ರಿಯೆ ಆರಂಭಿಸಲಾಗಿದೆ. ಭಾರತೀಯ ಚುನಾವಣಾ ಆಯೋಗವು ರೂಪಿಸಿರುವ ನಿಯಮಗಳಿಗೆ ಬದ್ಧವಾಗಿಯೇ ಈ ಪ್ರಕ್ರಿಯೆ ನಡೆಯುತ್ತಿದೆ. ಮತದಾರರ ಅರ್ಹತೆಯನ್ನು ಪರಿಶೀಲಿಸಿ ಮತದಾರರ ಪಟ್ಟಿಯಲ್ಲಿ ಅವರನ್ನು ಸೇರಿಸುವುದು ಮತ್ತು ಅವರ ವಿವರಗಳು ತಪ್ಪಾಗಿದ್ದರೆ, ಅದನ್ನು ಸರಿಪಡಿಸುವ ಕೆಲಸ ಎಸ್‌ಐಆರ್‌ನಲ್ಲಿ ಆಗಲಿದೆ. ಆಗ ಅರ್ಹ ಮತದಾರರಷ್ಟೇ, ಮತದಾರರ ಪಟ್ಟಿಯಲ್ಲಿ ಉಳಿಯಲಿದ್ದಾರೆ. ಅನರ್ಹರು ಪಟ್ಟಿಯಲ್ಲಿ ಇರುವುದಿಲ್ಲ.

● ಮತದಾರರನ್ನು ಅನರ್ಹ ಎಂದು ನಿರ್ಧರಿಸುವುದು ಹೇಗೆ?

ಭಾರತದ ಪ್ರಜೆಯಾಗಿರುವವರಿಗೆ 18 ವರ್ಷ ವಯಸ್ಸಾದ ನಂತರವಷ್ಟೇ ಮತದಾನದ ಹಕ್ಕು ದತ್ತವಾಗುತ್ತದೆ. ಈ ದೇಶದ ಎಲ್ಲ ಮತದಾರರಿಗೂ ಸಾರ್ವತ್ರಿಕವಾಗಿ ಅನ್ವಯವಾಗುವ ಅರ್ಹತೆ. ಈ ಅರ್ಹತೆಗಳು ಇಲ್ಲದವರು ಮತದಾರರ ಪಟ್ಟಿಯಲ್ಲಿ ಇರುವುದಿಲ್ಲ.

ಮತದಾರರ ಪಟ್ಟಿಯಲ್ಲಿ ಇರುವ ವಿಳಾಸದಲ್ಲಿ ಆ ಮತದಾರ ಇಲ್ಲದಿದ್ದರೆ (ಆಬ್ಸೆಂಟ್–ಎ), ವಿಳಾಸ ಬದಲಾಗಿದ್ದರೆ (ಶಿಫ್ಟೆಡ್–ಎಸ್), ಮೃತಪಟ್ಟಿದ್ದರೆ (ಡೆತ್–ಡಿ) ಮತ್ತು ಒಂದಕ್ಕಿಂತ ಹೆಚ್ಚು ಸ್ಥಳದಲ್ಲಿ ನೋಂದಣಿಯಾಗಿದ್ದರೆ (ಡೂಪ್ಲಿಕೇಟ್–ಡಿ) ಅವರನ್ನು ಮತದಾರರ ಪಟ್ಟಿಯಿಂದ ಕೈಬಿಡಬೇಕಾಗುತ್ತದೆ. ಈ ನಾಲ್ಕೂ (ಎಎಸ್‌ಡಿಡಿ) ಸಂದರ್ಭದಲ್ಲಿ ಮತಗಟ್ಟೆ ಅಧಿಕಾರಿಗಳು (ಬಿಎಲ್‌ಒ) ಅಗತ್ಯ ದಾಖಲೆಗಳು ಮತ್ತು ದೃಢೀಕರಣ ಪಡೆದುಕೊಂಡೇ ಮುಂದುವರಿಯಬೇಕಾಗುತ್ತದೆ.

ಎಸ್‌ಐಆರ್‌ನ ಭಾಗವಾಗಿ ರಾಜ್ಯದ 5.55 ಕೋಟಿ ಮತದಾರರಿಗೂ ಗಣತಿ ನಮೂನೆ (ಎನ್ಯುಮರೇಷನ್ ಫಾರ್ಮ್) ನೀಡಿ, ಪ್ರತಿಯೊಬ್ಬರಿಂದ ವಿವರ ಸಂಗ್ರಹಿಸಲಾಗುತ್ತದೆ. ಅದನ್ನು ಭರ್ತಿ ಮಾಡಿ, ಬಿಎಲ್‌ಒಗೆ ಸಲ್ಲಿಸಿದವರೆಲ್ಲರೂ ಕರಡು ಮತದಾರರ ಪಟ್ಟಿಯಲ್ಲಿ ಉಳಿಯುತ್ತಾರೆ. ಗಣತಿ ನಮೂನೆ ಸಲ್ಲಿಸದವರಷ್ಟೇ ಪಟ್ಟಿಯಿಂದ ಹೊರಗೆ ಉಳಿಯುತ್ತಾರೆ.

● ಮತದಾರರು ಗಣತಿ ನಮೂನೆ ಅಥವಾ ದಾಖಲೆ ಪತ್ರಗಳನ್ನು ಸಲ್ಲಿಸದೇ ಇದ್ದಾಗ ಅಥವಾ ಬದಲಿ ಸಂದರ್ಭದಲ್ಲಿ (Otherwise) ಇಆರ್‌ಒ/ಎಇಆರ್‌ಒಗಳು ಅವರ ಅರ್ಹತೆಯನ್ನು ಶಂಕಿಸಿ ನೋಟಿಸ್ ನೀಡಬಹುದು ಎಂದು ಎಸ್‌ಐಆರ್ ಕೈಪಿಡಿಯಲ್ಲಿ ಇದೆ. ಈ ‘ಬದಲಿ ಸಂದರ್ಭ’ (Otherwise) ಎಂಬುದರ ವ್ಯಾಪ್ತಿ ಏನು?

ಮತದಾರರು ಗಣತಿ ನಮೂನೆ ಸಲ್ಲಿಸಿ, ಕರಡು ಮತದಾರರ ಪಟ್ಟಿ ಪ್ರಕಟವಾದ ನಂತರದಲ್ಲಿ ನೋಟಿಸ್ ನೀಡುವ ಪ್ರಕ್ರಿಯೆ ಆರಂಭವಾಗುತ್ತದೆ. ಈ ಸಂದರ್ಭದಲ್ಲಿ ನೋಟಿಸ್ ಎಂಬುದನ್ನು ‘ಸಂವಹನ ಸಾಧನ’ ಎಂದಷ್ಟೇ ಪರಿಗಣಿಸಬೇಕು. 2025ರ ಮತದಾರರ ಪಟ್ಟಿಯಲ್ಲಿ ಇರುವವರ ವಿವರಗಳನ್ನು 2002ರ ಮತದಾರರ ಪಟ್ಟಿಗೆ ಹೋಲಿಸಿ ಮ್ಯಾಪಿಂಗ್ ಮಾಡಲಾಗುತ್ತದೆ. 2002ರ ಮತದಾರರ ಪಟ್ಟಿಯಲ್ಲಿ ಇಲ್ಲದವರು (ಸ್ವಂತ ಮತ್ತು ಪೋಷಕರು) ಹಾಗೂ ಎರಡೂ ಪಟ್ಟಿಯಲ್ಲಿನ ವಿವರ ವ್ಯತ್ಯಾಸವಿದ್ದವರಿಗೆ ನೋಟಿಸ್ ನೀಡಲಾಗುತ್ತದೆ.

ಎಸ್‌ಐಆರ್‌ನ ಇಡೀ ನಿಯಮದಲ್ಲಿ ‘ಬದಲಿ ಸಂದರ್ಭದಲ್ಲಿ–Otherwise’ ಎಂದೂ ಉಲ್ಲೇಖಿಸಲಾಗಿದೆ. ಕರಡು ಮತದಾರರ ಪಟ್ಟಿಗೆ ರಾಜಕೀಯ ಪಕ್ಷಗಳಿಂದ, ರಾಜಕೀಯ ಪಕ್ಷಗಳ ಏಜೆಂಟರಿಂದ ಮತ್ತು ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾದಾಗ ‘ಬದಲಿ ಸಂದರ್ಭ’ ಎಂಬುದು ಅನ್ವಯವಾಗುತ್ತದೆ. ನೋಟಿಸ್ ನೀಡಿದಾಕ್ಷಣ ಮತದಾರರ ಪಟ್ಟಿಯಿಂದ ತೆಗೆದುಹಾಕುತ್ತೇವೆ ಎಂದು ಅರ್ಥವಲ್ಲ.

● ನೋಟಿಸ್ ನೀಡಿದಾಕ್ಷಣ ಮತ ಪಟ್ಟಿಯಿಂದ ತೆಗೆದುಹಾಕುತ್ತೇವೆ ಎಂಬರ್ಥವಲ್ಲ ಎಂದು ನೀವು ಹೇಳುತ್ತಿದ್ದೀರಿ. ಆದರೆ, ‘ನಿಮ್ಮನ್ನು ಮತದಾರರ ಪಟ್ಟಿಯಿಂದ ಏಕೆ ತೆಗೆದುಹಾಕಬಾರದು (why should not be deleted)’ ಎಂದು ನೋಟಿಸ್ ನೀಡಬಹುದು ಎಂದು ಎಸ್‌ಐಆರ್ ಕೈಪಿಡಿಯಲ್ಲಿ ಸ್ಪಷ್ಟವಾಗಿ ಇದೆಯಲ್ಲ?

ಮತದಾರರ ವಿವರದಲ್ಲಿ ವ್ಯತ್ಯಾಸವಿದ್ದಾಗ ಮತ್ತು ಅವರ ಅರ್ಹತೆ ಕುರಿತು ಆಕ್ಷೇಪ ವ್ಯಕ್ತವಾದಾಗ, ಅವರ ಅರ್ಹತೆಯನ್ನು ಖಚಿತಪಡಿಸಿಕೊಳ್ಳಲು ನೋಟಿಸ್ ನೀಡಲೇಬೇಕಾಗುತ್ತದೆ. ಒಂದಕ್ಕಿಂತ ಹೆಚ್ಚು ಸ್ಥಳದಲ್ಲಿ ನೋಂದಣಿ ಆಗಿರುವವರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲೇಬೇಕಲ್ಲವೇ. ಈ ಕಾರಣಕ್ಕಾಗಿ ‘why should not be deleted’ ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗುತ್ತದೆ. ನೋಟಿಸ್ ನೀಡದೆ, ದಾಖಲೆಗಳನ್ನು ಸಲ್ಲಿಸಿ ಎಂದು ಮತದಾರರಿಗೆ ತಿಳಿಸುವುದು ಹೇಗೆ? ಮತದಾರರು ತಾವು ಅರ್ಹ ಎಂಬುದನ್ನು ದೃಢಪಡಿಸಲು ಅವಕಾಶ ಒದಗಿಸಲು ನೋಟಿಸ್ ಒಂದು ಮಾರ್ಗ. ನೋಟಿಸ್ ನೀಡಿದಾಕ್ಷಣ ಮತದಾರರ ಪಟ್ಟಿಯಿಂದ ಕೈಬಿಡುತ್ತೇವೆ ಎಂದರ್ಥವಲ್ಲ ಎಂದು ಈಗಲೂ ಹೇಳುತ್ತೇನೆ. ನೋಟಿಸ್ ಪಡೆದುಕೊಂಡವರು ತಮ್ಮ ಅರ್ಹತೆಯನ್ನು ದೃಢಪಡಿಸುವ ದಾಖಲೆಗಳನ್ನು ಸಲ್ಲಿಸಿದರೆ ಸಾಕು. ಯಾರೂ ಈ ಬಗ್ಗೆ ಆತಂಕಪಡುವ ಅಗತ್ಯವಿಲ್ಲ.

● ಶಂಕಿತ–ಅನರ್ಹ ಮತದಾರರ ಪ್ರಕರಣದಲ್ಲಿ ಮತದಾರರ ನೋಂದಣಾಧಿಕಾರಿಯು (ಇಆರ್‌ಒ) ಗುರುತಿನ ದಾಖಲೆ ಪತ್ರ ಅಥವಾ ಮನೆ ಭೇಟಿ ಅಥವಾ ಬದಲಿ ವಿಧಾನದ (Otherwise) ಮೂಲಕ ಅರ್ಹತೆಯನ್ನು ನಿರ್ಧರಿಸಬಹುದು ಎಂದು ಕೈಪಿಡಿಯಲ್ಲಿದೆ. ದಾಖಲೆಯಲ್ಲಿ ವಿವರ ವ್ಯತ್ಯಾಸವಿದ್ದ ಸಂದರ್ಭದಲ್ಲಿ ಮನೆ ಭೇಟಿಯಿಂದ ಅರ್ಹತೆ ಹೇಗೆ ದೃಢಪಡುತ್ತದೆ ಮತ್ತು ಇಲ್ಲಿ ‘ಬದಲಿ ವಿಧಾನ’ (Otherwise) ಎಂಬುದರ ವ್ಯಾಖ್ಯಾನವೇನು?

ವಿವರ ವ್ಯತ್ಯಾಸವಿದ್ದ ಸಂದರ್ಭದಲ್ಲಿ ನೀಡಲಾದ ನೋಟಿಸ್‌ಗೆ ಪ್ರತಿಯಾಗಿ ಮತದಾರನು ಸಲ್ಲಿಸುವ ದಾಖಲೆಗಳಲ್ಲೂ ವ್ಯತ್ಯಾಸವಿದ್ದರೆ ಅಥವಾ ದಾಖಲೆಗಳನ್ನು ಸಲ್ಲಿಸದೇ ಇದ್ದಾಗ ಇಂತಹ ಸನ್ನಿವೇಶ ಎದುರಾಗುತ್ತದೆ. ಹೀಗಾಗಿ ಸಂಬಂಧಿತ ಅಧಿಕಾರಿ ಕ್ಷೇತ್ರ ಪರಿಶೀಲನೆ ಅಥವಾ ಮನೆ ಭೇಟಿ ನಡೆಸಬೇಕಾಗುತ್ತದೆ. ಮುಖತಃ ಭೇಟಿ ಮಾಡಿ, ಇತರರನ್ನು ವಿಚಾರಿಸಿ ವಿವರಗಳನ್ನು ದೃಢಪಡಿಸಿಕೊಳ್ಳಬಹುದು ಮತ್ತು ಈ ಹಂತದಲ್ಲಿ ಇತರರನ್ನು ಸಾಕ್ಷಿಗಳಾಗಿ ಪರಿಗಣಿಸಬೇಕು. ಈ ಸನ್ನಿವೇಶದಲ್ಲಿ ‘ಬದಲಿ ವಿಧಾನ’–(Otherwise) ಎಂಬುದು ಇಆರ್‌ಒ ವಿವೇಚನೆಯಷ್ಟೆ. ಇಲ್ಲಿ ಬದಲಿ ವಿಧಾನ ಎಂಬುದಕ್ಕೆ ಸಾಮಾನ್ಯೀಕರಿಸಬಹುದಾದ ವ್ಯಾಖ್ಯಾನ ನೀಡಲು ಆಗುವುದಿಲ್ಲ. ಪ್ರತಿ ಶಂಕಿತ ಮತದಾರನ ಪ್ರಕರಣದಲ್ಲಿ ಆತ ಅರ್ಹ ಎಂಬುದನ್ನು ಖಚಿತಪಡಿಸಿಕೊಳ್ಳಲು ಇಆರ್‌ಒ ತನ್ನ ವಿವೇಚನೆಯನ್ನು ಬಳಸಿ, ನಿರ್ಧಾರ ತೆಗೆದುಕೊಳ್ಳುತ್ತಾರೆ. ಆದರೆ ಅವೆಲ್ಲವೂ ನಿಯಮಬದ್ಧವಾಗಿಯೇ ಇರಬೇಕು.

● ಕರಡು ಮತದಾರರ ಪಟ್ಟಿ ಪ್ರಕಟಣೆಯ ನಂತರ ಯಾರು ಬೇಕಾದರೂ ಆಕ್ಷೇಪಣೆ ಸಲ್ಲಿಸಬಹುದು ಎಂದು ಹೇಳಿದ್ದೀರಿ. ಒಬ್ಬರ ಬಗ್ಗೆ ಮತ್ತೊಬ್ಬ ಮತದಾರ ಎತ್ತುವ ಆಕ್ಷೇಪವನ್ನು ಹೇಗೆ ಖಚಿತಪಡಿಸಿಕೊಳ್ಳುತ್ತೀರಿ? ಅಂತಿಮ ಪಟ್ಟಿಯ ಮೇಲೆ ಇದು ಬೀರುವ ಪರಿಣಾಮ ಎಂಥದ್ದು?

ಚುನಾವಣಾ ಆಯೋಗದ ನಿಯಮಗಳ ಪ್ರಕಾರ, ಪ್ರತಿಯೊಬ್ಬ ಪ್ರಜೆ, ರಾಜಕೀಯ ಪಕ್ಷವು ಮತದಾರರ ಪಟ್ಟಿಗೆ ಆಕ್ಷೇಪಗಳನ್ನು ಸಲ್ಲಿಸಲು ಅವಕಾಶವಿದೆ. ಈ ಅವಕಾಶವನ್ನು ನೀಡಲೇಬೇಕಾಗುತ್ತದೆ. ಆದರೆ, ಆಕ್ಷೇಪ ಸಲ್ಲಿಸುವವರು ಅದನ್ನು ಸಾಬೀತುಪಡಿಸುವಂತಹ ದಾಖಲೆಗಳನ್ನು ಒದಗಿಸಲೇಬೇಕು. ಆಧಾರ–ಪುರಾವೆಗಳು ಇಲ್ಲದ ಆಕ್ಷೇಪಗಳನ್ನು ವಿಲೇವಾರಿ ಮಾಡಲು ಅವಕಾಶವಿಲ್ಲ. ಆಕ್ಷೇಪಗಳ ಜತೆಗೆ ಸಲ್ಲಿಸುವ ದಾಖಲೆಗಳನ್ನು ಇಆರ್‌ಒ/ಎಇಆರ್‌ಒ ಹಲವು ಹಂತದಲ್ಲಿ ಪರಿಶೀಲಿಸಿಯೇ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಮತದಾರರು ಸಲ್ಲಿಸಿರುವ ಗಣತಿ ನಮೂನೆಗೆ ಪ್ರತಿಯಾಗಿ, ನಮೂನೆಯ ಒಂದು ಪ್ರತಿಯನ್ನು ಬಿಎಲ್‌ಒ ಸಹಿ ಸಮೇತ ಮತದಾರರಿಗೆ ನೀಡಿರುತ್ತೇವೆ. ಯಾರೋ ಆಕ್ಷೇಪ ಸಲ್ಲಿಸಿದರು ಎಂಬ ಕಾರಣಕ್ಕೆ ಅರ್ಹ ಮತದಾರರನ್ನು ಪಟ್ಟಿಯಿಂದ ಕೈಬಿಟ್ಟರೆ, ಆ ಮತದಾರ ಗಣತಿ ನಮೂನೆ ಬಳಸಿಕೊಂಡು ನಮ್ಮನ್ನು ಪ್ರಶ್ನಿಸಬಹುದು. ಆಗ, ಅದಕ್ಕೆ ಸಂಬಂಧಪಟ್ಟ ಇಆರ್‌ಒ/ಎಇಆರ್‌ಒಗಳೇ ಉತ್ತರದಾಯಿ ಆಗಿರುತ್ತಾರೆ. ಆಕ್ಷೇಪದ ಹೊರತಾಗಿಯೂ ಮತದಾರರನ್ನು ಪಟ್ಟಿಯಲ್ಲಿ ಉಳಿಸಿದರೆ, ಅಗತ್ಯ ದಾಖಲೆಗಳನ್ನು ಚುನಾವಣಾ ಆಯೋಗದ ಪೋರ್ಟಲ್‌ಗೆ ಅಪ್‌ಲೋಡ್ ಮಾಡಬೇಕು ಎಂದು ಎಸ್‌ಐಆರ್ ಕೈಪಿಡಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

● ಎಸ್‌ಐಆರ್‌ನಲ್ಲಿ ಮ್ಯಾಪಿಂಗ್ ಆಗದವರು, ನೋಟಿಸ್ ಬಂದವರು ಏನು ಮಾಡಬೇಕು?

ಮ್ಯಾಪಿಂಗ್ ವಿವರಗಳನ್ನು ಬಿಎಲ್‌ಒಗಳ ಬಳಿ ಪರಿಶೀಲಿಸಿಕೊಳ್ಳಬಹುದು. ಮತದಾರರೇ ಆಯೋಗದ ಪೋರ್ಟಲ್‌ನಲ್ಲಿ ಪರಿಶೀಲಿಸಬಹುದು. ಮ್ಯಾಪಿಂಗ್ ಆಗದವರು ಮತ್ತು ವಿವರ ವ್ಯತ್ಯಾಸವಿದ್ದು ನೋಟಿಸ್ ಬಂದವರು, ಅಗತ್ಯ ಗುರುತಿನ ದಾಖಲೆ ಪತ್ರಗಳನ್ನು ಸಿದ್ಧಪಡಿಸಿಟ್ಟುಕೊಂಡರೆ ಸಾಕು. 12 ವಿವಿಧ ಗುರುತಿನ ಪತ್ರಗಳನ್ನು ಮಾನ್ಯ ಮಾಡಲಾಗಿದೆ. 1987ಕ್ಕೂ ಮೊದಲು ಜನಿಸಿದವರು ತಮ್ಮ ಒಂದು ದಾಖಲೆಯನ್ನು, 1987ರಿಂದ 2004ರ ಮಧ್ಯೆ ಜನಿಸಿದವರು ತಮ್ಮ ತಂದೆ ಅಥವಾ ತಾಯಿಯಲ್ಲಿ ಒಬ್ಬರ ಜನ್ಮದಿನಾಂಕ ಹಾಗೂ ಜನ್ಮಸ್ಥಳ ದೃಢೀಕರಿಸುವ, 2004ರ ನಂತರ ಜನಿಸಿದವರು ತಮ್ಮ, ತಮ್ಮ ತಂದೆ ಮತ್ತು ತಾಯಿ ಇಬ್ಬರ ಜನ್ಮದಿನಾಂಕ ಹಾಗೂ ಜನ್ಮಸ್ಥಳ ದೃಢೀಕರಿಸುವ ದಾಖಲೆಗಳನ್ನು ಒದಗಿಸಬೇಕು.

● ಮತದಾರರ ಹಕ್ಕನ್ನು ಇಆರ್‌ಒ ಖಚಿತಪಡಿಸಿದಾಗ, ಸಂಬಂಧಿತ ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕು ಎಂದು ನಿಯಮವಿದೆ. ಆದರೆ, ಒಬ್ಬರನ್ನು ಮತದಾರರ ಪಟ್ಟಿಯಿಂದ ಕೈಬಿಟ್ಟಾಗ ಇಂತಹ ಹೊಣೆಗಾರಿಕೆ ಏಕಿಲ್ಲ?

ಅನರ್ಹರನ್ನು ಮತದಾರರಪಟ್ಟಿಯಿಂದ ಕೈಬಿಡುವುದಕ್ಕೂ ಮುನ್ನ ಆ ಪಟ್ಟಿಯನ್ನು ರಾಜಕೀಯ ಪಕ್ಷಗಳಿಗೆ, ರಾಜಕೀಯ ಪಕ್ಷಗಳ ಮತಗಟ್ಟೆ ಮಟ್ಟದ ಏಜೆಂಟರಿಗೆ ಒದಗಿಸುತ್ತೇವೆ. ಅವರೂ ಆ ಪಟ್ಟಿಯನ್ನು ಪರಿಶೀಲಿಸಿ, ಮತದಾರರ ಅರ್ಹತೆ ಅಥವಾ ಅನರ್ಹತೆಯನ್ನು ದೃಢಪಡಿಸಿಕೊಳ್ಳಲು ಅವಕಾಶವಿದೆ. ಈ ಮೂಲಕವೇ ಸಾರ್ವಜನಿಕರಿಗೂ ಆ ವಿವರಗಳು ಲಭ್ಯವಾಗುತ್ತವೆ.

● ರಾಜ್ಯದಲ್ಲಿ ಎಸ್‌ಐಆರ್‌ಗೆ ಪೂರ್ವತಯಾರಿಯಾಗಿ ಮ್ಯಾಪಿಂಗ್ ನಡೆಸಿದ್ದೀರಿ. ಮ್ಯಾಪಿಂಗ್ ಆದವರೆಲ್ಲರೂ ಮತದಾರರ ಪಟ್ಟಿಯಲ್ಲಿ ಉಳಿಯುತ್ತಾರೆಯೇ?

ರಾಜ್ಯದ ಒಟ್ಟು 5.55 ಕೋಟಿ ಮತದಾರರ ಪೈಕಿ ಮೇ 21ರ ಬೆಳಿಗ್ಗೆ ವೇಳೆಗೆ 4.83 ಕೋಟಿ, ಅಂದರೆ ಶೇ 87.12ರಷ್ಟು ಮತದಾರರ ವಿವರಗಳನ್ನು ಮ್ಯಾಪಿಂಗ್ ಮಾಡಲಾಗಿದೆ. ಜುಲೈ 29ರವರೆಗೂ ಮ್ಯಾಪಿಂಗ್ ಪ್ರಕ್ರಿಯೆ ನಡೆಯಲಿದ್ದು, ಶೇ 100ರಷ್ಟು ಗುರಿ ಮುಟ್ಟುತ್ತೇವೆ. ಮ್ಯಾಪಿಂಗ್ ಆಗಿರಲಿ, ಆಗಿರದೇ ಇರಲಿ. ಎಲ್ಲ 5.55 ಕೋಟಿ ಮತದಾರರಿಗೂ ಗಣತಿ ನಮೂನೆ ನೀಡುತ್ತೇವೆ. ಎಷ್ಟು ಜನರಿಗೆ ನೋಟಿಸ್ ನೀಡಲಾಗುತ್ತದೆ, ಎಷ್ಟು ಜನ ಉಳಿಯುತ್ತಾರೆ ಎಂಬುದನ್ನು ಗಣತಿ ನಮೂನೆಗಳ ಸಲ್ಲಿಕೆಯ ನಂತರವಷ್ಟೇ ಹೇಳಬಹುದು. ಅದು ಮತದಾರರು ಒದಗಿಸುವ ವಿವರ ಮತ್ತು ಗುರುತಿನ ದಾಖಲೆ ಪತ್ರಗಳನ್ನು ಆಧರಿಸಿರುತ್ತದೆ.

● ಚುನಾವಣಾ ಆಯೋಗ ನಿಗದಿಪಡಿಸಿರುವ ಗುರುತಿನ ದಾಖಲೆ ಪತ್ರಗಳಲ್ಲಿ ಕೆಲವರ ಬಳಿ ಯಾವುದೂ ಇಲ್ಲ ಎಂಬ ಮಾಹಿತಿ ಇದೆ. ಬೇರೆ ರಾಜ್ಯಗಳಲ್ಲಿ ಎಸ್‌ಐಆರ್ ಸಂದರ್ಭದಲ್ಲಿ ಇಂತಹ ನಿದರ್ಶನಗಳು ಇದ್ದವು. ದಾಖಲೆ ಇಲ್ಲ ಎಂಬ ಕಾರಣಕ್ಕೆ ಪಟ್ಟಿಯಿಂದ ಕೈಬಿಡುವುದಾದರೆ, ಅರ್ಹರು ಮತದಾನದ ಹಕ್ಕು ಕಳೆದುಕೊಳ್ಳುವುದಿಲ್ಲವೇ?

ಮತದಾರರು 2002ರಲ್ಲಿ ಯಾವ ಕ್ಷೇತ್ರ ಮತ್ತು ಯಾವ ಮತಗಟ್ಟೆಯಲ್ಲಿ ಇದ್ದರು ಎಂಬುದನ್ನು ತಿಳಿಸಿದರೆ ಸಾಕು, ಬಿಎಲ್‌ಒಗಳು ಅಗತ್ಯ ಮಾಹಿತಿಯನ್ನು ತೆಗೆದುಕೊಡುತ್ತಾರೆ. ಮಾಹಿತಿ ಲಭ್ಯವಿಲ್ಲದ ಸಂದರ್ಭದಲ್ಲಿ ಜನ್ಮದಿನಾಂಕ ಮತ್ತು ಜನ್ಮಸ್ಥಳ ದೃಢೀಕರಿಸುವ ದಾಖಲೆ ಪತ್ರಗಳನ್ನು ಒದಗಿಸಬೇಕಾದ ಸನ್ನಿವೇಶ ಉಂಟಾಗುತ್ತದೆ. 2002ರಲ್ಲಿ ಮತದಾರ ಅಥವಾ ಅವರ ಪೋಷಕರು ಎಲ್ಲಿ ವಾಸವಾಗಿದ್ದರು ಎಂಬ ಮಾಹಿತಿಯಾದರೂ ಇರುತ್ತದೆ. ಚುನಾವಣಾ ಆಯೋಗವು ಪಟ್ಟಿ ಮಾಡಿರುವ 12 ಗುರುತಿನ ದಾಖಲೆ ಪತ್ರಗಳಲ್ಲಿ ಒಂದಾದರೂ, ಭಾರತೀಯ ಪ್ರಜೆಗಳಾದವರ ಬಳಿ ಇದ್ದೇ ಇರಬೇಕಲ್ಲವೇ? ❖

ಕೇರಳಂನಲ್ಲಿ ಹೊಸ ರಾಜಕೀಯ ಪರಿಭಾಷೆ ಬರೆದವರು ಸತೀಶನ್. 2026ರ ವಿಧಾನಸಭಾ ಚುನಾವಣೆಯ ಭಾಗವಾಗಿ ಅವರ ನೇತೃತ್ವದಲ್ಲಿ ನಡೆದ 30 ದಿನಗಳ ‘ಯುಡಿಎಫ್ ಪುದು ಯುಗ’ ಯಾತ್ರೆಯು ಕೇರಳಂ ಮುಖ್ಯಮಂತ್ರಿ ಕುರ್ಚಿಯೆಡೆಗಿನ ಅವರ ಹಾದಿಯನ್ನು ಸುಗಮಗೊಳಿಸಿತು. ಕೆಪಿಸಿಸಿ ಉಪಾಧ್ಯಕ್ಷ, ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದ ಅನುಭವವನ್ನು ಸತೀಶನ್ ಹೊಂದಿದ್ದಾರೆ. ಹಿಂದೆಂದೂ ಸಚಿವರಾಗಿ ಅನುಭವ ಇಲ್ಲದ ಸತೀಶನ್, ಈಗ ಮುಖ್ಯಮಂತ್ರಿ ಕುರ್ಚಿ ಏರಿದ್ದಾರೆ. ಯುವ ಸಮುದಾಯದ ಪಾಲಿಗೆ ಸತೀಶನ್ ಕೇರಳಂನ ‘ಪುದು ಯುಗ’ದ (ಹೊಸ ಯುಗ) ‘ಪೂಕಿ (ಮುದ್ದಿನ) ಮುಖ್ಯಮಂತ್ರಿ’ ಆಗಿದ್ದಾರೆ

ವಿ.ಡಿ.ಸತೀಶನ್: ಜೆನ್–ಝೀ ಯುಗದ ‘ಮುದ್ದು’ ಸಿ.ಎಂ



● ಜೋಮನ್ ವರ್ಗೀಸ್

ವ್ಯಕ್ತಿ

ಸಾಮಾಜಿಕ ಜಾಲತಾಣಗಳು ರಾಜಕೀಯ ಸ್ಥಿತ್ಯಂತರಕ್ಕೆ ವೇದಿಕೆಯಾಗುತ್ತಿರುವ ಕಾಲಘಟ್ಟದಲ್ಲಿ ಕೇರಳಂ ಮುಖ್ಯಮಂತ್ರಿ ಸ್ಥಾನವನ್ನು ವಡಶ್ಶೇರಿ ದಾಮೋದರನ್ ಸತೀಶನ್ ಪಡೆದುಕೊಂಡಿದ್ದಾರೆ. ಕೇರಳಂ ಇದುವರೆಗೆ ಕಂಡಿರುವ 12 ಮುಖ್ಯಮಂತ್ರಿಗಳಿಗಿಂತ 13ನೆಯವರಾದ ವಿ.ಡಿ.ಸತೀಶನ್ ಭಿನ್ನರಾಗಿ ನಿಲ್ಲುವುದು ಅವರ ಜಾತ್ಯತೀತ ನಿಲುವು ಮತ್ತು ಓದಿನಿಂದ ಗಳಿಸಿಕೊಂಡ ಜ್ಞಾನದ ಮೂಲಕ. ಸಕ್ರಿಯ ರಾಜಕಾರಣಕ್ಕೆ ಬರುವ ಮೊದಲು ಕೇರಳಂ ಹೈಕೋರ್ಟ್ ವಕೀಲರಾಗಿದ್ದ ಸತೀಶನ್, ಅಂಕಿಅಂಶಗಳ ಬಗೆಗಿನ ನಿಖರತೆ, ಮಾತು ಮತ್ತು ಭಾಷಾ ಸ್ಪಷ್ಟತೆ ಮೂಲಕವೂ ಗಮನ ಸೆಳೆಯುತ್ತಾರೆ. 61 ವರ್ಷದ ಸತೀಶನ್ (ಜನನ: ಮೇ 31, 1964) ಆಯ್ಕೆಯನ್ನು ‘ಹೊಸ ರಾಜಕೀಯ ಅಧ್ಯಾಯವೊಂದಕ್ಕೆ ಮಲಯಾಳ ಜನರು ಬರೆದ ಮುನ್ನುಡಿ’ ಎಂದು ವಿಶ್ಲೇಷಿಸಲಾಗುತ್ತಿದೆ.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ನಡೆದ ಮೊದಲ ಸುದ್ದಿಗೋಷ್ಠಿಯಲ್ಲಿ ಅವರು ಎರಡು ಪ್ರಶ್ನೆಗಳಿಗೆ ನೀಡಿದ ಉತ್ತರ ಗಮನ ಸೆಳೆಯುವಂಥದ್ದು.

ಮೊದಲನೆಯದು, ಯುಡಿಎಫ್ ಅಧಿಕಾರಕ್ಕೆ ಬಂದರೆ ವಾಹನಗಳಲ್ಲಿ ಅಪಾಯಕಾರಿಯಲ್ಲದ ಮಾರ್ಪಾಡುಗಳಿಗೆ ಅನುಮತಿ ನೀಡಲಾಗುತ್ತದೆ ಎಂದು ಅವರು ಚುನಾವಣಾಪೂರ್ವದಲ್ಲಿ ಹೇಳಿದ್ದರು. ಈ ಕುರಿತು ಯುವಕನೊಬ್ಬ ಪ್ರಶ್ನಿಸಿದಾಗ, ಕೆಳತುಟಿಯನ್ನು ಕಚ್ಚಿ ಹಿಡಿದು, ಎರಡೂ ಹುಬ್ಬುಗಳನ್ನು ಮೇಲಕ್ಕೆತ್ತಿ ಕಣ್ಣಿನ ಸನ್ನೆಯಲ್ಲೇ ಹೌದು ಎನ್ನುತ್ತಾ, ‘ನಾವು ಅಧಿಕಾರಕ್ಕೆ ಬಂದಿರುವುದೇ ಜನರ ಆಶೋತ್ತರಗಳನ್ನು ಈಡೇರಿಸಲು, ನಾವು ಹಾಗೆ ಹೇಳಿದ್ದರೆ ಖಂಡಿತ ಅದನ್ನು ಜಾರಿಗೊಳಿಸುತ್ತೇವೆ’ ಎಂದಿದ್ದರು. ವಿಶೇಷ ಭಾವಭಂಗಿಯೊಂದಿಗಿನ ಈ ಪ್ರತಿಕ್ರಿಯೆ ಸಾಮಾಜಿಕ ಜಾಲತಾಣದಲ್ಲಿ ಭಾರಿ ಸಂಚಲನವನ್ನೇ ಸೃಷ್ಟಿಸಿದೆ. ಮುಖ್ಯವಾಗಿ, ಹೊಸ ತಲೆಮಾರು ಎಂದೇ ಹೆಸರಾದ ಜೆನ್–ಝೀಗಳು ಸತೀಶನ್ ಅವರ ಪ್ರತಿಕ್ರಿಯೆಯನ್ನು ‘ಪೂಕಿ’ ಎಂಬ ವಿಶೇಷಣದೊಂದಿಗೆ ಸ್ವಾಗತಿಸಿದ್ದಾರೆ. ‘ಪೂಕಿ’ ಎನ್ನುವುದು ಜೆನ್–ಝೀಗಳು ಸಾಮಾಜಿಕ ಜಾಲತಾಣದಲ್ಲಿ ತಮ್ಮ ಆರಾಧಕರು, ಪ್ರೀತಿಪಾತ್ರರನ್ನು ಪ್ರೀತಿಯಿಂದ ಕರೆಯಲು ಬಳಸುವ ಪದ. ಈಗ ಯುವ ಸಮುದಾಯದ ಪಾಲಿಗೆ ಸತೀಶನ್ ಕೇರಳಂನ ‘ಪುದು ಯುಗ’ದ (ಹೊಸ ಯುಗ) ‘ಪೂಕಿ (ಮುದ್ದಿನ) ಮುಖ್ಯಮಂತ್ರಿ’ ಆಗಿದ್ದಾರೆ.

ಸತೀಶನ್ ನೀಡಿದ ಎರಡನೆಯ ಉತ್ತರ ‘ಜಾತಿ ರಾಜಕಾರಣ’ಕ್ಕೆ ಸಂಬಂಧಿಸಿದ್ದು. ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಅವರು ತಮ್ಮ ತಂದೆ ‘ವಡಶ್ಶೇರಿ ದಾಮೋದರ ಮೆನನ್’ ಅವರ ಹೆಸರು ಪ್ರಸ್ತಾಪಿಸಿದ್ದರು. ‘ಮೆನನ್’ ಎನ್ನುವುದು ಕೇರಳಂನ ನಿರ್ಣಾಯಕ ರಾಜಕೀಯ ಶಕ್ತಿಯಾದ ನಾಯರ್ ಸಮುದಾಯವನ್ನು ಪ್ರತಿನಿಧಿಸುತ್ತದೆ. ಈ ಬಗ್ಗೆಯೂ ವಿವಾದಗಳು ಎದ್ದಿದ್ದವು. ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಬೆಂಬಲದೊಂದಿಗೆ ಮುಖ್ಯಮಂತ್ರಿಯಾದರೂ ಸತೀಶನ್, ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಜಾತಿಪ್ರೀತಿಯನ್ನು ಹೊರಹಾಕಿದ್ದಾರೆ ಎಂಬ ಟೀಕೆಗಳು ಕೇಳಿಬಂದಿದ್ದವು. ಆದರೆ, ‘ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ತಂದೆಯ ಹೆಸರು ಪ್ರಸ್ತಾಪಿಸಿದ್ದರಲ್ಲಿ ತಪ್ಪೇನಿದೆ, ನನ್ನ ತಂದೆ ಹೆಸರು ಹೇಗಿದೆಯೋ ಹಾಗೆಯೇ ಹೇಳಿದ್ದೇನೆ. ನನಗೆ ತಾಯಿಯ ಹೆಸರನ್ನೂ ಪ್ರಸ್ತಾಪಿಸಬೇಕೆಂಬ ಆಸೆ ಇತ್ತು. ಆದರೆ, ಅದಕ್ಕೆ ಅವಕಾಶ ಇರಲಿಲ್ಲ. ನಾನು ಶಾಸಕನಾಗುವುದಕ್ಕಿಂತಲೂ ಮೊದಲೇ ತಂದೆ–ತಾಯಿ ಇಬ್ಬರೂ ಮೃತಪಟ್ಟಿದ್ದಾರೆ. ಹಾಗಾಗಿ, ಅವರಿಬ್ಬರನ್ನೂ ಎದೆಯೊಳಗೆ ಇಟ್ಟುಕೊಂಡೇ ಪ್ರಮಾಣ ವಚನ ಸ್ವೀಕರಿಸಿದ್ದೇನೆ’ ಎನ್ನುವ ಮೂಲಕ ವಿವಾದಕ್ಕೆ ತೆರೆ ಎಳೆದಿದ್ದರು.

ಬ್ರೇನ್ ಡ್ರೈನ್ ತಡೆಯುವ ಸವಾಲು

ಉತ್ತಮ ಕೆಲಸದ ವಾತಾವರಣ, ಹೆಚ್ಚಿನ ವೇತನ ಸಿಗುವ ದೇಶಗಳಿಗೆ ವಿದ್ಯಾವಂತರ ವಲಸೆ ಸಮಸ್ಯೆಯನ್ನು (ಬ್ರೇನ್ ಡ್ರೈನ್) ಕೇರಳಂ ಎರಡು ದಶಕಗಳಿಂದ ತೀವ್ರವಾಗಿ ಎದುರಿಸುತ್ತಿದೆ. ಇದು ಅಲ್ಲಿನ ಸಾಮಾಜಿಕ ವ್ಯವಸ್ಥೆ ಮತ್ತು ಆರ್ಥಿಕತೆ ಮೇಲೂ ಪರಿಣಾಮ ಬೀರಿದೆ. ರಾಜ್ಯಕ್ಕೆ ಕೊಲ್ಲಿ ರಾಷ್ಟ್ರಗಳಿಂದ ಬರುತ್ತಿದ್ದ ಹಣದ ಪ್ರಮಾಣ ಇತ್ತೀಚಿನ ವರ್ಷಗಳಲ್ಲಿ ಕಡಿಮೆಯಾಗಿದೆ. ಬದಲಿಗೆ, ಇಲ್ಲಿಂದ ₹30 ಲಕ್ಷ–₹40 ಲಕ್ಷ ಸಾಲ ಮಾಡಿ ಯುವಜನರು ವಿದೇಶಗಳಿಗೆ ಹೋಗುವುದು ಗಣನೀಯವಾಗಿ ಹೆಚ್ಚುತ್ತಿದೆ. ಇಷ್ಟೇ ಸಂಖ್ಯೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ, ಬಿಹಾರ ಮೊದಲಾದ ರಾಜ್ಯಗಳ ಯುವಜನರು ಕೇರಳಂನಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ರಾಜ್ಯಕ್ಕೆ ಹಣದ ಒಳಹರಿವಿಗಿಂತಲೂ ಹೊರಹರಿವು ಹೆಚ್ಚಿದೆ. ಈ ‘ಹಿಮ್ಮುಖ ಹಣ ರವಾನೆ’ ಸಮಸ್ಯೆಯಿಂದಾಗಿ ಅಲ್ಲಿನ ಆರ್ಥಿಕತೆ ಸಂಕಷ್ಟದಲ್ಲಿದೆ. ಈ ಹೊತ್ತಿನಲ್ಲಿ ಸತೀಶನ್ ಅವರು ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಿರುವುದು ಹೊಸ ತಲೆಮಾರಿನವರಲ್ಲಿ ಭರವಸೆ ಹುಟ್ಟುಹಾಕಿದೆ. ‘ಜನಸಂಖ್ಯಾ ಲಾಭಾಂಶ’ದ ವಿಷಯದಲ್ಲೂ, ಅಂದರೆ ರಾಜ್ಯದ ದುಡಿಯುವ ವಯಸ್ಸಿನ ಜನಸಂಖ್ಯೆ (ಶೇ 60ರಷ್ಟು ಯುವಜನರು) ಸದ್ಬಳಕೆ ವಿಷಯದಲ್ಲೂ ಕೇರಳಂ ಹಿಂದುಳಿದಿದೆ. ಈ ನಷ್ಟವನ್ನು ಸರಿದೂಗಿಸಿಕೊಳ್ಳಲು ‘ಬ್ರೇನ್ ಡ್ರೈನ್’ ತಡೆಯುವ ಯೋಜನೆಯನ್ನು ಸತೀಶನ್, ಸಿ.ಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದ ಮೊದಲ ದಿನವೇ ಪ್ರಸ್ತಾಪಿಸಿದ್ದಾರೆ.

ಪರವೂರಿನ ನಾಯಕ: ಸತೀಶನ್ ಅವರು ಕೊಚ್ಚಿ ಸಮೀಪದ ನೆಟ್ಟೂರಿನಲ್ಲಿ ಜನಿಸಿದರು. ತಂದೆ ಕೆ. ದಾಮೋದರ ಮೆನನ್. ತಾಯಿ ವಿಲಾಸಿನಿ ಅಮ್ಮ. ಸತೀಶನ್ ಅವರ ಸಾರ್ವಜನಿಕ ಜೀವನ ಆರಂಭವಾಗಿದ್ದು ವಿದ್ಯಾರ್ಥಿ ರಾಜಕೀಯದ ಮೂಲಕ. 1986–87ರ ದಶಕದಲ್ಲಿ ಅವರು ಕೇರಳಂನ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಘಟಕದ ಅಧ್ಯಕ್ಷರಾಗಿದ್ದರು. ನಂತರ ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್ ಆಫ್ ಇಂಡಿಯಾದ (ಎನ್‌ಎಸ್‌ಯುಐ) ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದರು. ಕಾನೂನು ಪದವಿ ಪೂರ್ಣಗೊಳಿಸಿದ ನಂತರ ಕೇರಳಂ ಹೈಕೋರ್ಟ್‌ನಲ್ಲಿ ವಕೀಲರಾಗಿ ವೃತ್ತಿ ಆರಂಭಿಸಿದರು. ವಾದ ಮಂಡಿಸುವ ತಮ್ಮ ವಿಶೇಷ ಸಾಮರ್ಥ್ಯವನ್ನು ಸತೀಶನ್ ಮುಂದೆ ವಿಧಾನಸಭೆಯಲ್ಲೂ ಸಮರ್ಥವಾಗಿ ಬಳಸಿಕೊಂಡರು.

1996ರಲ್ಲಿ ಮೊದಲ ವಿಧಾನಸಭಾ ಚುನಾವಣೆಯಲ್ಲಿ ಪರವೂರು ಕ್ಷೇತ್ರದಲ್ಲಿ ಸೋಲನುಭವಿಸಿದರೂ, 2001ರ ನಂತರ ಇದುವರೆಗಿನ (2006, 2011, 2016, 2021, 2026) ಎಲ್ಲ ಚುನಾವಣೆಗಳಲ್ಲಿ ಪರವೂರಿನ ಜನರು ಅವರ ಕೈ ಹಿಡಿದಿದ್ದಾರೆ. ಈ ಬಾರಿಯೂ 20,600 ಮತಗಳ ಅಂತರದಿಂದ ಗೆದ್ದಿದ್ದಾರೆ. 2021ರ ಚುನಾವಣೆಯಲ್ಲಿ ಸಿಪಿಎಂ ಅಲೆಯಲ್ಲಿ ಕೇರಳಂನಲ್ಲಿ ಯುಡಿಎಫ್ ನೆಲಕಚ್ಚಿತ್ತು. ಈ ಸಂಕಷ್ಟದ ಸಮಯದಲ್ಲಿ ಸತೀಶನ್, ಪಕ್ಷದ ಮುಖಂಡ ರಮೇಶ್ ಚೆನ್ನಿತ್ತಲ ಅವರ ಉತ್ತರಾಧಿಕಾರಿಯಾಗಿ ವಿರೋಧ ಪಕ್ಷದ ನಾಯಕತ್ವ ವಹಿಸಿಕೊಂಡರು. ಪಕ್ಷವನ್ನು ಮತ್ತು ಯುಡಿಎಫ್ ಮೈತ್ರಿಕೂಟವನ್ನು ಪುನಶ್ಚೇತನಗೊಳಿಸಬೇಕಾದ ಮಹತ್ವದ ಜವಾಬ್ದಾರಿ ಅವರ ಹೆಗಲೇರಿತು.


2024ರ ಲೋಕಸಭಾ ಚುನಾವಣೆಯಲ್ಲಿ 20 ಸ್ಥಾನಗಳಲ್ಲಿ 18ರಲ್ಲಿ ಲಭಿಸಿದ ಗೆಲವು ಮತ್ತು ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಕಾಂಗ್ರೆಸ್ ಗಳಿಸಿದ ಮುನ್ನಡೆಯ ಮೂಲಕ ಸತೀಶನ್ ಕೇರಳಂನಲ್ಲಿ ಹೊಸ ರಾಜಕೀಯ ಪರಿಭಾಷೆ ಬರೆದರು. 2026ರ ವಿಧಾನಸಭಾ ಚುನಾವಣೆಯ ಭಾಗವಾಗಿ ಅವರ ನೇತೃತ್ವದಲ್ಲಿ ನಡೆದ 30 ದಿನಗಳ ‘ಯುಡಿಎಫ್ ಪುದು ಯುಗ’ ಯಾತ್ರೆಯು ಕೇರಳಂ ಮುಖ್ಯಮಂತ್ರಿ ಕುರ್ಚಿಯೆಡೆಗಿನ ಅವರ ಹಾದಿಯನ್ನು ಸುಗಮಗೊಳಿಸಿತು. ಕೆಪಿಸಿಸಿ ಉಪಾಧ್ಯಕ್ಷ, ಮುಖ್ಯ ಸಚೇತಕರಾಗಿ ಕಾರ್ಯನಿರ್ವಹಿಸಿದ ಅನುಭವವನ್ನೂ ಸತೀಶನ್ ಹೊಂದಿದ್ದಾರೆ. ಹಿಂದೆಂದೂ ಸಚಿವರಾಗಿ ಅನುಭವ ಇಲ್ಲದ ಸತೀಶನ್, ಈಗ ಮುಖ್ಯಮಂತ್ರಿ ಕುರ್ಚಿಯಲ್ಲಿ ಕುಳಿತಿದ್ದಾರೆ.

ಅಧಿಕಾರಿಗಳು ಹಾಗೂ ರಾಜಕಾರಣಿಗಳಲ್ಲಿ ತಾಯಿಯ ಅಂತಃಕರಣ, ಸ್ಪಂದನಾಶೀಲತೆ ಇರಬೇಕು ಎಂಬ ಮಾತಿದೆ. ಸತೀಶನ್ ಅವರ ನಡೆ, ನುಡಿಯಲ್ಲಿ ಜನರ ಸಮಸ್ಯೆಗಳ ಬಗ್ಗೆ ಪ್ರೀತಿ, ಅಂತಃಕರಣದಿಂದ ಸ್ಪಂದಿಸುವುದನ್ನು ಕಾಣಬಹುದು. ಇದಕ್ಕೆ ಎರಡು ಘಟನೆಗಳು ಸಾಕ್ಷಿ. ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಸೀತಾ ಲಕ್ಷ್ಮಿ ಅಮ್ಮಾಳ್ ಎಂಬ ವೃದ್ಧೆ ಬಂದಿದ್ದರು. ಇವರು 2018ರಲ್ಲಿ ಕೇರಳಂನಲ್ಲಿ ಸಂಭವಿಸಿದ ಪ್ರವಾಹದ ಸಂತ್ರಸ್ತೆ. ಸತೀಶನ್ ಅವರನ್ನು ಕಂಡಾಗ ಓಡೋಡಿ ಬಂದ ವೃದ್ಧೆ, ನನ್ನ ಮಗ ಎಂದು ಅವರನ್ನು ಬಿಗಿದಪ್ಪಿಕೊಂಡರು. ಅವರನ್ನು ವೇದಿಕೆಯ ಮೇಲೆ ಕರೆತಂದ ಸತೀಶನ್, ರಾಹುಲ್ ಗಾಂಧಿ ಅವರಿಗೆ ನನ್ನ ತಾಯಿ ಎಂದು ಅವರನ್ನು ಪರಿಚಯಿಸಿದರು.

ಎರಡನೆಯ ಘಟನೆ ಸತೀಶನ್ ವಿರೋಧ ಪಕ್ಷದ ನಾಯಕರಾಗಿದ್ದಾಗ ನಡೆದದ್ದು. ಎಸ್‌ಬಿಐನ ವ್ಯವಸ್ಥಾಪಕಿ ಶ್ರೀರಸ್ತು ಎಂಬವರು ಕಚೇರಿ ಕಾರ್ಯದ ನಿಮಿತ್ತ ರೈಲಿನಲ್ಲಿ ತ್ರಿಶ್ಶೂರ್‌ಗೆ ಹೊರಟಿದ್ದರು. ಅವರ ಎದುರಿನ ಆಸನದಲ್ಲಿ ಸತೀಶನ್ ಇದ್ದರು. ‘ಅವರೇ ಮುಂದಾಗಿ ನನ್ನ ಹೆಸರು, ಹುದ್ದೆ, ಕೆಲಸ ಮಾಡುವ ಸ್ಥಳ, ಕುಟುಂಬ ಸದಸ್ಯರ ಬಗ್ಗೆ ಮಾಹಿತಿ ಪಡೆದುಕೊಂಡರು. ಮಧ್ಯಾಹ್ನ, ಮನೆಯಿಂದ ತಂದಿದ್ದ ಬುತ್ತಿಯನ್ನು ನನಗೆ ನೀಡಿದರು. ಬೇಡ ಎಂದರೂ, ತಮ್ಮ ಸಿಬ್ಬಂದಿಗಾಗಿ ಹೆಚ್ಚುವರಿ ಬುತ್ತಿ ತಂದಿರುವುದಾಗಿ ಹೇಳಿ, ನನಗೆ ಊಟ ಮಾಡುವಂತೆ ಸೂಚಿಸಿದರು. ಸಾಮಾನ್ಯ ವ್ಯಕ್ತಿಯಾಗಿ, ಕುಟುಂಬ ಸದಸ್ಯನಂತೆ ಬೆರೆತು ಅವರೂ ಜತೆಗೆ ಊಟ ಮಾಡಿದರು. ಇದು ಅವರ ಸರಳತೆಗೆ ಸಾಕ್ಷಿ’ ಎಂದು ಸ್ಮರಿಸುತ್ತಾರೆ ಶ್ರೀರಸ್ತು.

ಪತ್ನಿ ಆರ್.ಲಕ್ಷ್ಮಿ ಪ್ರಿಯಾ, ಪುತ್ರಿ ಉಣ್ಣಿಮಾಯಾ ಅವರ ಪುಟ್ಟ, ಸಂತೃಪ್ತ ಕುಟುಂಬ; ಕಪ್ಪುಚುಕ್ಕೆ ಇಲ್ಲದ ರಾಜಕಾರಣ. ಸ್ಪಷ್ಟವಾದ ಮಾತು, ನಿಖರವಾದ ಕಾರ್ಯಯೋಜನೆ ಮೂಲಕ ಜನ ನಾಯಕ, ಜನ ಸೇವಕನಾಗುವ ಮಾದರಿಗೆ ಸತೀಶನ್ ಮೇಲ್ಪಂಕ್ತಿ ಹಾಕಿದ್ದಾರೆ. ಪುಸ್ತಕಗಳ ಓದು, ಸಾಹಿತ್ಯದ ಒಡನಾಟ ಅವರಿಗೆ ಹೆಚ್ಚೇ ಇದೆ. ಎರಡು ಕೃತಿಗಳ ರಚನೆಕಾರರು ಅವರು. ಪಶ್ಚಿಮ ಘಟ್ಟ ಸಂರಕ್ಷಣೆಗೆ ಸಂಬಂಧಿಸಿದ ಮಾಧವ ಗಾಡ್ಗೀಳ್ ವರದಿಯ ಬಗ್ಗೆ ಸದನದಲ್ಲಿ ಮಂಡಿಸಿದ ವಾದವು ಅವರ ಅಧ್ಯಯನಶೀಲತೆಗೆ ಸಾಕ್ಷಿ. ‘ದೇವರ ಸ್ವಂತ ನಾಡಿನ’ ಆಡಳಿತ ಚುಕ್ಕಾಣಿ ಹಿಡಿದಿರುವ ಸತೀಶನ್ ಅವರನ್ನು ‘ಡೌನ್ ಟು ಅರ್ಥ್’ ವೆಬ್‌ತಾಣ ‘ಹಸಿರು ಮುಖ್ಯಮಂತ್ರಿ’ ಎಂದು ಕರೆದಿದೆ. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

23 ಮೇ 2026 ಶನಿವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಶುಕ್ಲ ಅಷ್ಟಮಿ ಗಂ. 28-28 ನಕ್ಷತ್ರ : ಮಘಾ ಗಂ. 26-10 ಯೋಗ : ಧ್ರುವ ಗಂ. 06-14 ಕರಣ : ವಿಷ್ಟಿ ಗಂ. 16-41, ವೃಷಭ ಮಾಸದ 08 ನೇ ದಿನ. ಮಳೆ ನಕ್ಷತ್ರ : ಕೃತ್ತಿಕ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30 ,ಸೂರ್ಯೋದಯ : 06-07 ಸೂರ್ಯಾಸ್ತ : 06-48,ಮುಸ್ಲಿಂ ದಿನಾಂಕ : 06 ದುಲ್ ಹಿಜ್ಜಾ ,ಅದೃಷ್ಟ ಸಂಖ್ಯೆ : 2, 5

ಮೇಷ: ಆಸ್ತಿ ವಿಷಯಗಳನ್ನು ತ್ವರಿತಗತಿಯಲ್ಲಿ ಬಗೆಹರಿಸಿಕೊಳ್ಳಲು ಹಿತೈಷಿಯೊಬ್ಬರ ನೆರವು ಪಡೆಯುವಿರಿ. ಆಧ್ಯಾತ್ಮಿಕ ವಿಚಾರಗಳತ್ತ ಗಮನ ಹರಿಯಲಿದೆ. ಗಣಪತಿಯ ಅನುಗ್ರಹದಿಂದ ಸ್ಥಾನ ಲಭ್ಯವಾಗಲಿದೆ.

ವೃಷಭ: ಹೊಸ ವಿದ್ಯುತ್ ಉಪಕರಣಗಳ ಅಳವಡಿಕೆ ಅನಿವಾರ್ಯ. ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿದ ಲಾಭ ಸಿಗಲಿದೆ. ವಿದ್ಯಾಭ್ಯಾಸ ನಿಶ್ಚಿಂತೆಯಿಂದ ಸಾಗಲಿದೆ.

ಮಿಥುನ: ಕೆಲಸಕ್ಕೆ ಇತರೆ ಜೊತೆಗಾರರಿಂದ ಅಡೆತಡೆಗಳು ಎದುರಾಗಲಿವೆ. ಟೀಕೆಯ ಮಾತುಗಳನ್ನು ಕೇಳಬೇಕಾಗಬಹುದು. ಗಣ್ಯ ವ್ಯಕ್ತಿಗಳ ಪರಿಚಯ ಸ್ವಂತ ಕೆಲಸವೊಂದಕ್ಕೆ ಸಹಾಯವಾಗುವುದು.

ಕರ್ಕಾಟಕ: ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲಗಳನ್ನು ಸಾಮಾಜಿಕವಾಗಿ ಪ್ರದರ್ಶಿಸಿ. ಜೀವನದಲ್ಲಿ ಹೊಸದೊಂದು ಅಧ್ಯಾಯ ಶುರುವಾಗಲಿದೆ. ಚರ್ಮಕ್ಕೆ ಸಂಬಂಧಪಟ್ಟಂತೆ ಅನಾರೋಗ್ಯ ಎದುರಾಗಬಹುದು.

ಸಿಂಹ: ನವಉದ್ಯಮಿಗಳಿಗೆ ಹಿರಿಯರಿಂದ ತಿಳಿವಳಿಕೆಯ ಮಾತುಗಳು, ಆಶೀರ್ವಾದವು ಪ್ರಾಪ್ತಿ. ಆಹಾರ ಸೇವಿಸಲು ಸಂಕೋಚ ಮಾಡಿಕೊಳ್ಳಬೇಡಿ. ವಿದ್ಯುತ್ ಉಪಕರಣಗಳ ಮಾರಾಟಗಾರರಿಗೆ ಶುಭಕಾಲ.

ಕನ್ಯಾ: ಮನೆಯಲ್ಲಿ ನಡೆಯಬೇಕಿರುವ ಮಂಗಳಕಾರ್ಯಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಸುದಿನ. ಮನೆಯಲ್ಲಿ ಅಗತ್ಯವಾದ ಹೊಂದಾಣಿಕೆ ಮಾಡಿಕೊಳ್ಳಿ.

ತುಲಾ: ಶ್ರಮಕ್ಕೆ ಅನುಗುಣವಾಗಿ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಳ್ಳಲಿವೆ. ರೇಷ್ಮೆ ಹಾಗೂ ಕಬ್ಬು ಬೆಳೆಗಳಿಂದ ನಿರೀಕ್ಷೆಗೂ ಮೀರಿದ ಲಾಭ ಇದೆ. ಮಕ್ಕಳ ನಡವಳಿಕೆಯಿಂದ ಗೌರವಕ್ಕೆ ಧಕ್ಕೆ ತರುವಂತಾಗಬಹುದು.

ವೃಶ್ಚಿಕ: ಮೌನದ ಉತ್ತರದಿಂದ ಭಿನ್ನಾಭಿಪ್ರಾಯದ ಸಮಸ್ಯೆಗೆ ಅಂತ್ಯ ಹೇಳಬಹುದು. ಕೆಲಸವು ಮೊದಲ ಪ್ರಯತ್ನದಲ್ಲಿಯೇ ಸಫಲವಾಗಲಿದೆ. ವೈದ್ಯಕೀಯ ಖರ್ಚುಗಳು ಹೆಚ್ಚಲಿವೆ.

ಧನು: ಕೆಲಸದ ಕ್ಷೇತ್ರದಲ್ಲಿ ಜವಾಬ್ದಾರಿಯುತ ಕಾರ್ಯವೈಖರಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಲಿದೆ. ವಿದ್ವಾಂಸರೊಡನೆ ಕೆಲ ಹೊತ್ತು ಕಳೆಯಲಿದ್ದೀರಿ. ಸಿಟ್ಟಿನಿಂದ ಹೊರಬರಲು ಶನೈಶ್ಚರನನ್ನು ಪ್ರಾರ್ಥಿಸಿ.

ಮಕರ: ಸಂಸ್ಥೆಯಿಂದ ತರಬೇತಿ ಪಡೆದುಕೊಳ್ಳುವ ಅವಕಾಶಗಳು ಎದುರಾಗಲಿವೆ. ಒಂದು ವಿಚಾರದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೇ ತೀರ್ಮಾನವನ್ನೂ ತೆಗೆದುಕೊಳ್ಳಬೇಡಿ.

ಕುಂಭ: ಆಸ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ತಾಳ್ಮೆಯಿಂದ ಕೆಲಸನಿರ್ವಹಿಸಬೇಕಾಗುವುದು. ನಿರುದ್ಯೋಗಿಗಳಿಗೆ ಹಂಗಾಮಿ ನೌಕರಿಯನ್ನು ಒಪ್ಪಿಕೊಳ್ಳುವುದು ಅನಿವಾರ್ಯ. ಯಂತ್ರೋಪಕರಣ ಮಾರಾಟದಿಂದ ಲಾಭ.

ಮೀನ: ಕಷ್ಟ ಪರಿಸ್ಥಿತಿಯಲ್ಲಿ ಜನಬಲದ ಕೊರತೆಯಾದರೂ, ಸಕಾಲಕ್ಕೆ ಸ್ನೇಹಿತರಿಂದ ಹಣದ ಸಹಾಯ ಸಿಗಲಿದೆ. ಪ್ರವಾಸದಿಂದ ಸಂತೋಷ ಹೊಂದುವಿರಿ. ಕ್ಷಣಿಕ ಸುಖಕ್ಕಾಗಿ ಹಣ ವ್ಯಯ ಮಾಡುವುದು ಸರಿಯಲ್ಲ.

ಪದಬಂಧ 6411

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅಂತರಂಗದಲ್ಲಿನ ಅಲೆ (3)
3.ಲೋಹದ ಅಥವಾ ಮರದ ಹಾಳೆ (3)
5.ಅಬಲೆ ಬೀಸಿದ ಜಾಲ (2)
6.ರಾಟೆಯನ್ನು ಕೊನೆಗೆ ಇಟ್ಟಾಗಲೇ ಈ ಆಕ್ಷೇಪಣೆ! (3)
7.ನಿಯಮ ಹೇಳಿದ ನರಕಾಧಿಪತಿ (2)
9.ದುರಾಚಾರಿ ಇಲ್ಲಿದ್ದಾನೆ (2)
10.ಹಣೆಯಲ್ಲಿ ಧರಿಸುವ ಲಾಂಛನವು ಮೋಸವೂ ಹೌದು! (2)
11.ಶಿಖರದ ಮೇಲ್ಭಾಗ (2)
13.ನೆನಪು ಮಾಡಿಕೊಂಡು ತೋರಿದ ವೈಯಾರ (3)
15.ಆಕಳು ಹಿಡಿದಿರುವ ಸೇವಕ (2)
16.ಹೆಚ್ಚು ಪದದ ವಿರುದ್ಧ ಪದ (3)
17.ಮೂಲಿಕೆಗಳನ್ನು ಭಟ್ಟಿಯಿಳಿಸಿ ತೆಗೆದ ರಸ (3)

ಮೇಲಿಂದ ಕೆಳಕ್ಕೆ

1.ಅನ್ನವನ್ನು ಮಾಡುವ ಪಾತ್ರೆಯು ತಲೆಯಲ್ಲಿದೆ (3)
2.ತಗಣಿ ಎಣಿಸುತ್ತಾ ಕಲಿತಿರುವ ಲೆಕ್ಕ ಶಾಸ್ತ್ರ (3)
3.ಕೆಲಸಕ್ಕೆ ಬಾರದ ಮಾತು (3)
4.ಇಳೆಯಲ್ಲಿ ಒಂದಾಗಿರುವ ಸ್ನೇಹಿತ (3)
5.ಪ್ರತ್ಯುತ್ತರವಿದು (5)
8.ಈಕೆ ಲಗ್ನವಾಗುತ್ತಿರುವವಳು (5)
12.ಅಂಕವಿರುವ ತಾರೀಕು (3)
13.ಮೆಲುವಾಗಿ ವ್ಯಕ್ತವಾದ ಪ್ರೀತಿ (3)
14.ಜಳಕ ಮಾಡುವಾಗಲೇ ಈ ರೋಮಾಂಚನ! (3)
15.ದೇವಾಲಯದ ಹತ್ತಿರವಿರುವ ಮನೆ (3)

■	1		2	■	3		4	■
■		■		■		■		■
5		■	6			■	7	8
	■	■	■	■	■	■	■	
9		■	■	■	■	■	10	
	■	■	■	■	■	■	■	
11	12	■	13		14	■	15	
■		■		■		■		■
■	16			■	17			■

6410ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆಷಾಢಭೂತಿ 3.ಕೃತಘ್ನ 5.ರಣಕಹಳೆ 7.ದರದು 9.ಕಪೋಲ 11.ಕುಸುಮ 13.ಉಪನಯನ 15.ವಿಷಯ 16.ಹುಲುಮನುಜ

ಮೇಲಿಂದ ಕೆಳಕ್ಕೆ: 1.ಆಯುರ್ವೇದ 2.ಭೂಶಿರ 4.ತರಳೆ 6.ಕಶ್ಮಲ 8.ರಫ್ತು 9.ಕದನ 10.ರಾಸು 12.ಮಹಾರಾಜ 13.ಉದ್ಘೋಷ 14.ನವಿಲು

ಸುಡೊಕು 6794

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

1		3	5		6			7
				4			8	
7		4	9			5	2	3
	1				5			
		7		9				5
5	2		6		3			
8		1		5			6	
			1		4	8		9
4		9		6			5	

6793 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4



ಕೇಂಬ್ರಿಡ್ಜ್ ಬಡಾವಣೆಯಲ್ಲಿ ಅಕ್ರಮ ಕಟ್ಟಡಗಳನ್ನು ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಲಾಯಿತು

ಬಿಡಿಎ: ₹12 ಕೋಟಿ ಮೌಲ್ಯದ ಆಸ್ತಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಕೇಂಬ್ರಿಡ್ಜ್ ಬಡಾವಣೆ, ದೂಕನಹಳ್ಳಿ ಹಾಗೂ ದೊಮ್ಮಲೂರು ಬಡಾವಣೆಯಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಕಟ್ಟಡಗಳನ್ನು ತೆರವುಗೊಳಿಸಿ, ₹12 ಕೋಟಿ ಮೌಲ್ಯದ ಆಸ್ತಿ ವಶಪಡಿಸಿಕೊಂಡಿದೆ.

ಕೇಂಬ್ರಿಡ್ಜ್ ಬಡಾವಣೆಯ ನಿವೇಶನ ಸಂಖ್ಯೆ 61ರ 40x60 ಅಡಿ ಅಳತೆಯ ನಿವೇಶನ, ದೂಕನಹಳ್ಳಿ ಗ್ರಾಮದ ನಿವೇಶನ ಸಂಖ್ಯೆ 3746ರ 40x40 ಅಡಿ ನಿವೇಶನ ಮತ್ತು ದೊಮ್ಮಲೂರು 1ನೇ ಹಂತದಲ್ಲಿರುವ ನಿವೇಶನ ಸಂಖ್ಯೆ 30ರ 20x40ರಲ್ಲಿ ನಿರ್ಮಿಸಿದ್ದ ಕಟ್ಟಡಗಳನ್ನು ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಲಾಯಿತು. ಬಳಿಕ ಪ್ರಾಧಿಕಾರ ಈ ಜಾಗವನ್ನು ಸುಪರ್ದಿಗೆ ಪಡೆದುಕೊಂಡು ಸುತ್ತಲೂ ಬೇಲಿ ಹಾಕಿದೆ. ಕಾರ್ಯಾಚರಣೆ ವೇಳೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ಪೂರ್ವ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಸ್ಥಳೀಯ ಪೊಲೀಸರು ಇದ್ದರು.

‘ಅವಳ ಹೆಜ್ಜೆ...’ ಕಿರುಚಿತ್ರೋತ್ಸವ ನಾಳೆ

ಬೆಂಗಳೂರು: ಗುಬ್ಬಿವಾಣಿ ಟ್ರಸ್ಟ್ ಮೇ 24ರಂದು ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ‘ಅವಳ ಹೆಜ್ಜೆ...’ ಕಿರುಚಿತ್ರೋತ್ಸವದಲ್ಲಿ ಆಯ್ದ ಕಿರುಚಿತ್ರಗಳ ಪ್ರದರ್ಶನ ಹಮ್ಮಿಕೊಂಡಿದೆ.

ವಿಜೇತ ಕಿರುಚಿತ್ರಕ್ಕೆ ₹1 ಲಕ್ಷ ನಗದು ಬಹುಮಾನ ಘೋಷಿಸಲಾಗುವುದು ಎಂದು ಟ್ರಸ್ಟ್‌ನ ಅಧ್ಯಕ್ಷೆ ಮಾಳವಿಕಾ ಗುಬ್ಬಿವಾಣಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ಚಿತ್ರೋತ್ಸವವು ಮಹಿಳಾ ನಿರ್ದೇಶಕಿಯರಿಗಾಗಿ ಮೀಸಲಾಗಿದೆ. ಸಂಗೀತಾ ನಂಜುಂಡಸ್ವಾಮಿ, ದೀಪ್ತಿ ಮೂರ್ತಿ ಅಯ್ಯರ್, ಸುಮನಾ ಚಂದ್ರಗಿರಿ ಅವರನ್ನು ಒಳಗೊಂಡ ತೀರ್ಪುಗಾರರ ತಂಡವು ‘ಕಾಶಿ ಕೈಲಾಸ, ಸೋರುತಿಹುದು ಮನೆಯ ಮಾಳಿಗೆ, ರೊಟ್ಟಿ, ಎ ಲಿಟ್ಲ್ ಕೇರ್, ಹುಲಿಯಪ್ಪ, ದಾರಿ, ಮೌನರಾಗ, ಆ ಮಾಡಿ, ಗೆಜ್ಜೆ, ನಿತ್ಯ’ ಎಂಬ10 ಕಿರುಚಿತ್ರಗಳನ್ನು ಆಯ್ಕೆ ಮಾಡಿದೆ’ ಎಂದರು.

ಅವಳ ಹೆಜ್ಜೆ ಕಿರುಚಿತ್ರೋತ್ಸವದ ನಿರ್ದೇಶಕಿ ಶಾಂತಲಾ ದಾಮ್ಲೆ ಮಾತನಾಡಿ, ‘ಕಿರು ಚಿತ್ರೋತ್ಸವದಲ್ಲಿ ಸಿನಿಮಾದಲ್ಲಿ ಅವಳ ಹೆಜ್ಜೆ: ‘ಅ’ ಯಿಂದ ‘ಅಃ’ವರೆಗೆ ವಿಷಯಾಧಾರಿತ ಚರ್ಚಾಗೋಷ್ಠಿ ನಡೆಯಲಿದ್ದು, ನೀತೂ ಶೆಟ್ಟಿ, ಗ್ರೀಷ್ಮಾ ಶ್ರೀಧರ್, ಸಂಗೀತಾ ನಂಜುಂಡಸ್ವಾಮಿ, ಸಂಜೋತಾ ಭಂಡಾರಿ ಪಾಲ್ಗೊಳ್ಳಲಿದ್ದಾರೆ. ಪ್ರಥಮ ಸ್ಥಾನ ಪಡೆದ ಕಿರುಚಿತ್ರಕ್ಕೆ ಅವಳ ಹೆಜ್ಜೆ ಪ್ರಶಸ್ತಿ ಹಾಗೂ ₹1 ಲಕ್ಷ ನಗದು ಬಹುಮಾನ ನೀಡಲಾಗುವುದು. ಆಯ್ದ ಕೆಲವು ಕಿರುಚಿತ್ರಗಳಿಗೆ ₹10 ಸಾವಿರ ಬಹುಮಾನ ನೀಡಲಾಗುವುದು’ ಎಂದು ಮಾಹಿತಿ ನೀಡಿದರು.

ವಾಲಿಬಾಲ್: ಮಹಿಳಾ ತಂಡದ ಶುಭಾರಂಭ

ಬೆಂಗಳೂರು: ಭಾರತ ತಂಡವು, ಕಠ್ಮಂಡುವಿನಲ್ಲಿ ಶುಕ್ರವಾರ ಆರಂಭವಾದ ಮಧ್ಯ ಏಷ್ಯಾ ಮಹಿಳಾ ವಾಲಿಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವಿನೊಡನೆ ಅಭಿಯಾನ ಶುರುಮಾಡಿತು. ‘ಎ’ ಗುಂಪಿನ ಪಂದ್ಯದಲ್ಲಿ ಆತಿಥೇಯ ನೇಪಾಳ ತಂಡವನ್ನು 3-2 ಸೆಟ್‌ಗಳಿಂದ (21-15, 25-20, 25-19, 21-25, 19-9 ರಿಂದ ಸೋಲಿಸಿತು.

ಲಕ್ಷ್ಮಿ ಉತ್ತಮ ಆಟಗಾರ್ತಿ ಗೌರವಕ್ಕೆ ಪಾತ್ರರಾದರು. ಭಾರತ ಶನಿವಾರ ಮಾಲ್ಡೀವ್ಸ್ ತಂಡವನ್ನು ಎದುರಿಸಲಿದೆ. ಕಿರ್ಗಿಸ್ತಾನ ಸಹ ಇದೇ ಗುಂಪಿನಲ್ಲಿದೆ. ಇರಾನ್, ಕಜಾಕಸ್ತಾನ, ಶ್ರೀಲಂಕಾ ಮತ್ತು ಬಾಂಗ್ಲಾದೇಶ ‘ಬಿ’ ಗುಂಪಿನಲ್ಲಿವೆ.

ಬ್ಯಾಸ್ಕೆಟ್‌ಬಾಲ್: ರಾಜ್ಯದ ಬಾಲಕರಿಗೆ ಜಯ

ಬೆಂಗಳೂರು: ಕರ್ನಾಟಕ ಬಾಲಕರ ತಂಡವು ಪುದುಚೆರಿಯ ರಾಜೀವಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ಆರಂಭಗೊಂಡ 76ನೇ ಜೂನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿತು.

ಕರ್ನಾಟಕದ ಬಾಲಕರ ತಂಡವು 71-55ರಿಂದ ಪಂಜಾಬ್ ತಂಡವನ್ನು ಮಣಿಸಿತು. ರಾಜ್ಯ ತಂಡದ ಅನ್ಷುಲ್ ಸಾಯಿ (15), ದೀವಿತ್ ಶೇಣವ (14), ಸಮರ್ಥ ಮಣೂರ್ (12), ವಿಜಯೀಂದ್ರ ವೇದಾಂತಿ (11) ಗೆಲುವಿನಲ್ಲಿ ಮಿಂಚಿದರು.

ಆದರೆ, ರಾಜ್ಯದ ಬಾಲಕಿಯರ ತಂಡವು ನಾಲ್ಕು (52-56) ಅಂಕಗಳಿಂದ ಛತ್ತೀಸಗಢ ತಂಡಕ್ಕೆ ಮಣಿಯಿತು. ಕರ್ನಾಟಕ ಪರ ಸ್ವಾತಿ ಪ್ರಭು 16 ಅಂಕ ಗಳಿಸಿದರೆ, ಶ್ರಾವಣಿ ಶಿವಣ್ಣ 11, ನೀಲಯ ರೆಡ್ಡಿ 10 ಪಾಯಿಂಟ್ಸ್ ಗಳಿಸಿದರು.

ಬೆಂಗಳೂರು ರೇಸ್

ಏಂಜಲಿಸ್ ಗೆಲ್ಲುವ ನಿರೀಕ್ಷೆ

ಕೆ.ಎನ್.ಗುರುಸ್ವಾಮಿ ಮೆಮೋರಿಯಲ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಮುಖ ಆಕರ್ಷಣೆ. ಕಣದಲ್ಲಿ ಹನ್ನೊಂದು ಸ್ಪರ್ಧಿಗಳಿರುವ ಈ ರೇಸ್‌ನಲ್ಲಿ ಮುಂಬೈ ಸ್ಪರ್ಧಿ ಏಂಜಲಿಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬ್ರೈಟ್ ಥಂಡರ್ 1, ಆನ್ ದಿ ರೈಝ್ 3, ಒಸಾಕ 4
2ನೇ ರೇಸ್: ಕಾಜಿಂಗ್ 1, ಎಲ್.ಜೀಸ್ ಸ್ಪಿರಿಟ್ 3, ಶಾಕ್ ಅಂಡ್ ಆವ್ 8
3ನೇ ರೇಸ್: ಕ್ವೀನ್‌ಡಮ್ 7, ಲೆನಾ 3, ಬ್ಲೂ ಸ್ವಾರ್ಮ್ 2
4ನೇ ರೇಸ್: ಏಂಜಲಿಸ್ 11, ಪರ್ಫೆಕ್ಟ್ ಆಟಿಟ್ಯೂಡ್ 3, ಅಕ್ವಾಸ್ಟಿಕ್ 1
5ನೇ ರೇಸ್: ಮಾರ್ಗರೆಟ್ಟ 6, ಐಸ್ ಆಫ್ ಫೈರ್ 5, ಪ್ರೊಕೊಫಿವ್ 3
6ನೇ ರೇಸ್: ಮ್ಯಾಂಡೇಟ್ 3, ಲಾರ್ಸನ್ 2, ರಾಝ್ಮಟಾಝ್ 4
7ನೇ ರೇಸ್: ಫ್ಲೈಟ್ ಆಫ್ ಫ್ಯಾನ್ಸಿ 1, ಝಿಲ್ಫೀ 3, ಕ್ಯಾರಟ್ ಲವ್ 8

ಉತ್ತಮ ಬೆಟ್: ಕ್ವೀನ್‌ಡಮ್


ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

‘ಪ್ರಜಾವಾಣಿ’ ವಿಶಿಷ್ಟ ಸಾಧನೆ: ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಮೇ 17ರಂದು ಏರ್ಪಡಿಸಿದ್ದ ಬೇಸಿಗೆ ಋತುವಿನ ದಿನದ ಎಲ್ಲಾ ಆರು ರೇಸ್‌ಗಳಲ್ಲಿ ‘ಪ್ರಜಾವಾಣಿ’ ಗುರುತಿಸಿದ್ದ ಮೊದಲನೇ ಆಯ್ಕೆ ಕುದುರೆಗಳು ಜಯಗಳಿಸಿವೆ. ಇದೂ ಸೇರಿದಂತೆ, ‘ಪ್ರಜಾವಾಣಿ’ ಈವರೆಗೂ ಮೂರು ಬಾರಿ ಇಂತಹ ಸಾಧನೆ ಮಾಡಿದೆ.

ಗುಡುಗು–ಮಿಂಚು, ಆಲಿಕಲ್ಲು ಮಳೆ ಹೆಚ್ಚಳ

ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಹವಾಮಾನ ಇಲಾಖೆಯು ನಡೆಸಿದ ಅಧ್ಯಯನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರದಲ್ಲಿ ವರ್ಷದಿಂದ ವರ್ಷಕ್ಕೆ ಗುಡುಗು–ಮಿಂಚು ಮತ್ತು ಆಲಿಕಲ್ಲು ಮಳೆಯ ಪ್ರಮಾಣವು ಗಣನೀಯವಾಗಿ ಹೆಚ್ಚಳವಾಗುತ್ತಿದೆ ಎನ್ನುವುದು ಹವಾಮಾನ ಇಲಾಖೆ ನಡೆಸಿದ ಅಧ್ಯಯನದಿಂದ ದೃಢಪಟ್ಟಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಭೌತ ವಿಜ್ಞಾನ ವಿಭಾಗ ಹಾಗೂ ಆಂಧ್ರಪ್ರದೇಶ ವಿಶ್ವವಿದ್ಯಾಲಯದ ಹವಾಮಾನ ಮತ್ತು ಸಮುದ್ರ ವಿಜ್ಞಾನ ವಿಭಾಗದ ಸಹಯೋಗದಲ್ಲಿ ಈ ಅಧ್ಯಯನ ನಡೆದಿದೆ. ‘ದಕ್ಷಿಣ ಪರ್ಯಾಯ ದ್ವೀಪದ ಮೇಲೆ ಹವಾಮಾನ ವಿಜ್ಞಾನ ಮತ್ತು ವಾತಾವರಣ ಸಂಯೋಜನೆಯ ಮೇಲೆ ಗುಡುಗು ಸಹಿತ ಮಳೆ ಹಾಗೂ ಅವುಗಳ ಪ್ರಭಾವ’ ಶೀರ್ಷಿಕೆಯಡಿ ನಡೆದ ಈ ಅಧ್ಯಯನ, ‘ಕರೆಂಟ್ ವರ್ಲ್ಡ್ ಎನ್ವಿರಾನ್ಮೆಂಟ್’ ಜರ್ನಲ್‌ನಲ್ಲಿ ಪ್ರಕಟಗೊಂಡಿದೆ.

ವರದಿಯ ಪ್ರಕಾರ, ನಗರದಲ್ಲಿ ವಾರ್ಷಿಕ ಗುಡುಗು ಸಹಿತ ಮಳೆ ಶೇ 3.41ರಷ್ಟು ಮತ್ತು ಮಿಂಚಿನ ಪ್ರಮಾಣವು ಶೇ 3.3 ರಷ್ಟು ಹೆಚ್ಚಳ ಕಾಣುತ್ತಿದೆ.

ಹವಾಮಾನ ಇಲಾಖೆ ತಜ್ಞ ಸಿ.ಎಸ್. ಪಾಟೀಲ ಅವರ ನೇತೃತ್ವದಲ್ಲಿ ಈ ಅಧ್ಯಯನ ನಡೆದಿದೆ. ಶೇಕ್ ದರ್ಗಾ ಸಾಹೇಬ್, ಗುಂಟಾ ಪಾಪರಾವ್ ಹಾಗೂ ಕಂಸಾಲಿ ನಾಗರಾಜ ಅವರು ಈ ಅಧ್ಯಯನ ಕೈಗೊಂಡಿದ್ದಾರೆ. 2011ರಿಂದ 2023ರ ಅವಧಿಯಲ್ಲಿ ಗುಡುಗು ಮತ್ತು ಮಿಂಚಿನ ಚಟುವಟಿಕೆಗಳನ್ನು ವಿಶ್ಲೇಷಿಸಿದ್ದಾರೆ.

ಬೆಂಗಳೂರಿನಲ್ಲಿ ಪ್ರತಿ ವರ್ಷ ಸರಾಸರಿ 41 ದಿನ ಗುಡುಗು ಸಹಿತ ಮಳೆ ಹಾಗೂ 157 ದಿನ ಮಿಂಚು ಕಾಣಿಸಿಕೊಳ್ಳುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ನೈರುತ್ಯ ಮತ್ತು ಈಶಾನ್ಯ ಮಾನ್ಸೂನ್‌ನಿಂದ ಬರುವ ತಾಪಮಾನ ಮತ್ತು ಹೇರಳ ತೇವಾಂಶವು ಈ ಪ್ರದೇಶದ ಮೇಲೆ ಗುಡುಗು ಸಹಿತ ಮಳೆಯಾಗಲು ಅನುಕೂಲಕರ ವಾತಾವರಣ ಸೃಷ್ಟಿಸುತ್ತದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.


1.44 ಮಿ.ಮೀ ಹೆಚ್ಚಳ: ‘13 ವರ್ಷಗಳ ಅವಧಿಯಲ್ಲಿ ನಗರದಲ್ಲಿ ಒಟ್ಟು ಮಳೆಯ ಪ್ರಮಾಣ ವರ್ಷಕ್ಕೆ ಸರಾಸರಿ 1.44 ಮಿ.ಮೀ ಹೆಚ್ಚಳ ಕಂಡಿದ್ದು, ಸಾಪೇಕ್ಷ ಆರ್ದ್ರತೆ ವರ್ಷಕ್ಕೆ ಶೇ 0.74 ರಷ್ಟು ಏರಿಕೆಯಾಗಿದೆ. ಅದೇ ಸಮಯದಲ್ಲಿ ಸ್ಥಳೀಯ ಮೇಲ್ಮೈ ತಾಪಮಾನವು ವರ್ಷಕ್ಕೆ 0.06 ಡಿಗ್ರಿ ಸೆಲ್ಸಿಯಸ್ ಪ್ರಮಾಣದಲ್ಲಿ ಇಳಿಕೆಯನ್ನೂ ದಾಖಲಿಸಿದೆ’ ಎಂದು ಉಲ್ಲೇಖಿಸಿದ್ದಾರೆ.

‘ಹಗಲಿನ ಸಮಯದಲ್ಲಿ ಉಂಟಾಗುವ ಹೆಚ್ಚಿನ ಉಷ್ಣತೆ ಹಾಗೂ ಅಪಾರ ತೇವಾಂಶ ಸೇರ್ಪಡೆಯಿಂದ ತೀವ್ರ ಗುಡುಗು ಸಹಿತ ಮಳೆಗೆ ಅನುಕೂಲಕರ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಉಷ್ಣತೆ ಮತ್ತು ತೇವಾಂಶವು ಗುಡುಗು ಸಹಿತ ಮಳೆಗೆ ಮೂಲಭೂತ ಅಂಶವಾಗಿರುವುದರಿಂದ ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರ ಗುಡುಗು ಸಹಿತ ಮಳೆಯಾಗುವ ನಿರೀಕ್ಷೆಯಿದೆ’ ಎಂದು ಹೇಳಿದ್ದಾರೆ.

‘ಗುಡುಗು–ಮಿಂಚು ಬೆಳಿಗ್ಗೆಯಿಂದ ಮಧ್ಯಾಹ್ನದ ಅವಧಿಯಲ್ಲಿ ವಿರಳವಾಗಿರುತ್ತವೆ. ಮಧ್ಯಾಹ್ನ 3 ಗಂಟೆಯ ನಂತರ ಭೂಮಿಯ ಮೇಲ್ಮೈ ಸೂರ್ಯನ ತಾಪಕ್ಕೆ ಬಿಸಿಯಾಗುವುದರಿಂದ, ಗುಡುಗು–ಮಳೆ ಪ್ರಾರಂಭವಾಗುತ್ತದೆ. ಸಂಜೆ 7 ಗಂಟೆಯಿಂದ 9 ಗಂಟೆಯ ಅವಧಿಯಲ್ಲಿ ಗರಿಷ್ಠ ಮಟ್ಟ ತಲುಪುತ್ತದೆ’ ಎಂದು ತಿಳಿಸಿದ್ದಾರೆ.

ಎನ್‌ಸಿಇಆರ್‌ಟಿ ಪಠ್ಯಕ್ಕೆ ‘ಅಂತರ್ಜಲ’: ಬೋಸರಾಜು ಪತ್ರ

ಪ್ರಜಾವಾಣಿ ವಾರ್ತೆ



ಎನ್‌.ಎಸ್‌. ಬೋಸರಾಜು

ಬೆಂಗಳೂರು: ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ (ಎನ್‌ಸಿಇಆರ್‌ಟಿ) ಪಠ್ಯಕ್ರಮದಲ್ಲಿ ‘ಅಂತರ್ಜಲ’ ಕುರಿತ ಪ್ರತ್ಯೇಕ ಅಧ್ಯಾಯವನ್ನು ಅಳವಡಿಸುವಂತೆ ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಹವಾಮಾನ ಬದಲಾವಣೆ ಮತ್ತು ಅಂತರ್ಜಲದ ಅತಿ ಬಳಕೆಯಿಂದ ಭವಿಷ್ಯದಲ್ಲಿ ಎದುರಾಗಬಹುದಾದ ಜಲಕ್ಷಾಮ ತಪ್ಪಿಸಲು ಶಾಲಾ ಹಂತದಲ್ಲೇ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಬೇಕಿದೆ. ಪ್ರಸ್ತುತ ಎನ್‌ಸಿಇಆರ್‌ಟಿ 10ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ‘ಜಲ ಸಂಪನ್ಮೂಲಗಳು’ ಎಂಬ ಅಧ್ಯಾಯವಿದ್ದರೂ, ಅದರಲ್ಲಿ ಕೇವಲ ಮೇಲ್ಮೈ ಜಲಕ್ಕೆ ಒತ್ತು ನೀಡಲಾಗಿದೆ. ಭೂಮಿಯ ಮೇಲಿರುವ ದ್ರವರೂಪದ ಸಿಹಿ ನೀರಿನಲ್ಲಿ ಶೇ 97ರಷ್ಟು ಪಾಲು ಅಂತರ್ಜಲದ ರೂಪದಲ್ಲಿದೆ. ದೇಶದ ಶೇ 50ರಷ್ಟು ಗೃಹಬಳಕೆ ಹಾಗೂ ಶೇ 5ರಷ್ಟು ಕೃಷಿಯು ನೀರಿಗಾಗಿ ಅಂತರ್ಜಲವನ್ನೇ ಅವಲಂಬಿಸಿದೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಪ್ರತಿ ವರ್ಷ ನೀರಿನ ಬಳಕೆಯು ಶೇ 1ರಷ್ಟು ಹೆಚ್ಚಾಗುತ್ತಿದ್ದು, ಹವಾಮಾನ ಬದಲಾವಣೆಯಿಂದಾಗಿ ಮೇಲ್ಮೈ ಜಲದ ಲಭ್ಯತೆ ಕಡಿಮೆಯಾಗುತ್ತಿದೆ. ಅಂತರ್ಜಲದ ಮೇಲಿನ ಅವಲಂಬನೆ ಇನ್ನಷ್ಟು ತೀವ್ರವಾಗಲಿದೆ. ಕಳೆದ ಎರಡು ದಶಕಗಳಲ್ಲಿ ಅತಿ-ಬಳಕೆಯ ಮತ್ತು ಅಪಾಯಕಾರಿ ಮಟ್ಟದಲ್ಲಿರುವ ಅಂತರ್ಜಲ ಪ್ರದೇಶಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದೆ. ಅಂತರ್ಜಲ ಕಲುಷಿತಗೊಳ್ಳುತ್ತಿರುವ ಬೆನ್ನಲ್ಲೇ ಅಂತರ್ಜಲದ ಗುಣಮಟ್ಟವೂ ನಿರಂತರವಾಗಿ ಕುಸಿಯುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಭೂಮಿ ಪೂಜೆ ಇಂದು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಇಂಡ್ಲವಾಡಿಯ ಸೂರ್ಯಸಿಟಿ ನಾಲ್ಕನೇ ಹಂತದಲ್ಲಿ ನಿರ್ಮಾಣಗೊಳ್ಳಲಿರುವ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶನಿವಾರ ಬೆಳಿಗ್ಗೆ 11ಕ್ಕೆ ಭೂಮಿ ಪೂಜೆ ನೆರವೇರಿಸಲಿದ್ದಾರೆ.

ಕರ್ನಾಟಕ ಗೃಹ ಮಂಡಳಿಯು ₹943.46 ಕೋಟಿ ವೆಚ್ಚದಲ್ಲಿ ಸ್ಟೇಡಿಯಂ ನಿರ್ಮಾಣ ಮಾಡುತ್ತಿದ್ದು, 80 ಸಾವಿರ ಆಸನಗಳ ವ್ಯವಸ್ಥೆ ಇರಲಿದೆ. ಇದಲ್ಲದೆ ಮುಂದಿನ ಹಂತದಲ್ಲಿ ಕ್ರೀಡಾ ಸಂಕೀರ್ಣ ನಿರ್ಮಾಣವಾಗಲಿದ್ದು ಫಿಟ್ನೆಸ್ ಸೆಂಟರ್, ಈಜುಕೊಳ, ಮಾರಾಟ ಮಳಿಗೆ, ಸಮಾವೇಶ ಸಭಾಂಗಣ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಇದು ಒಳಗೊಳ್ಳಲಿದೆ.

ವಸತಿ ಸಚಿವ ಜಮೀರ್ ಅಹಮದ್ ಖಾನ್, ಕಳೆದ ಮೂರು ದಿನಗಳಿಂದ ಇಲ್ಲಿಯೇ ಮೊಕ್ಕಾಂ ಹೂಡಿದ್ದಾರೆ. ಅಧಿಕಾರಿಗಳೊಂದಿಗೆ ನಿರಂತರ ಸರಣಿ ಸಭೆ ನಡೆಸಿ ಕಾರ್ಯಕ್ರಮದ ಯಶಸ್ಸಿಗೆ ಕಾರ್ಯತಂತ್ರ ರೂಪಿಸಿದ್ದಾರೆ.

ಮಳೆಯಿಂದಾಗಿ ಸಣ್ಣ ಪುಟ್ಟ ಅನಾಹುತವಾಗಿದೆ. ಮುಖ್ಯ ವೇದಿಕೆಗೆ ಯಾವುದೇ ಹಾನಿಯಾಗಿಲ್ಲ. ಊಟದ ವ್ಯವಸ್ಥೆಗೆ ಹಾಕಲಾಗಿದ್ದ ಟೆಂಟ್‌ಗೆ ನೀರು ಬಂದಿದೆ. ಕಾರ್ಯಕ್ರಮದಲ್ಲಿ ಯಾವುದೇ ಬದಲಾವಣೆ ಇಲ್ಲ

ಜಮೀರ್ ಅಹಮ್ಮದ್ ಖಾನ್
ವಸತಿ ಸಚಿವ

ಸುತ್ತಮುತ್ತಲ ಗ್ರಾಮಗಳಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ. ಕಾಂಗ್ರೆಸ್ ಬಾವುಟಗಳು ರಾರಾಜಿಸುತ್ತಿವೆ. ಕಟೌಟ್ ಅಬ್ಬರ ಜೋರಾಗಿದೆ.

ಕಾರ್ಯಕ್ರಮಕ್ಕೆ ಬಿಗಿ ಪೊಲೀಸ್ ಭದ್ರತೆ ಕಲ್ಪಿಸಲಾಗಿದೆ. 1,500ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿದೆ. ಉದ್ಘಾಟನಾ ಕಾರ್ಯಕ್ರಮದಲ್ಲಿ ಕ್ರಿಕೆಟ್ ದಿಗ್ಗಜರಾದ ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್, ವೆಂಕಟೇಶ್ ಪ್ರಸಾದ್ ಪಾಲ್ಗೊಳ್ಳಲಿದ್ದಾರೆ ಎಂದು ಆಯೋಜಕರು ತಿಳಿಸಿದ್ದಾರೆ.



ಸ್ಟೇಡಿಯಂನ ನೀಲನಕ್ಷೆ

ಇ–ಲಾಟರಿಗೆ ಮುಖ್ಯಮಂತ್ರಿ ಚಾಲನೆ

ಸೂರ್ಯಸಿಟಿ 4ನೇ ಹಂತದಲ್ಲಿನ ಬಡಾವಣೆ ನಿವೇಶನಗಳನ್ನು ಹಂಚಿಕೆ ಮಾಡಲು ಇ–ಲಾಟರಿ ಪ್ರಕ್ರಿಯೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ಇಂಡ್ಲವಾಡಿ ಸುತ್ತಮುತ್ತ 1,938 ಎಕರೆ ಜಮೀನಿನ ಪೈಕಿ 1,200 ಎಕರೆ ಬಡಾವಣೆಯಾಗಿ ಅಭಿವೃದ್ಧಿಪಡಿಸಲಾಗಿದೆ.

ಅಪಾರ್ಟ್‌ಮೆಂಟ್‌ಗಳ ನಿರ್ಮಾಣ

ಸೂರ್ಯನಗರ ಮೊದಲ ಹಂತದಲ್ಲಿ ‘ಸೂರ್ಯಶೈನ್’ ಅಡಿ 2 ಬಿಎಚ್‌ಕೆಗೆ ಸೇರಿದ 40 ಹಾಗೂ ‘ಸೂರ್ಯ ಡಿವೈನ್’ ಯೋಜನೆಯಡಿ ಅಡಿ 3 ಬಿಎಚ್‌ಕೆಗೆ ಸೇರಿದ 50 ಫ್ಲ್ಯಾಟ್‌ಗಳ ಅಪಾರ್ಟ್‌ಮೆಂಟ್ ನಿರ್ಮಿಸಲಾಗುತ್ತದೆ. ಇದಲ್ಲದೆ ‘ಸೂರ್ಯಕಿರಣ’ ಯೋಜನೆಯಡಿ ಸೂರ್ಯನಗರ 3ನೇ ಹಂತದಲ್ಲಿ 2ಬಿಎಚ್‌ಕೆಗೆ ಸೇರಿದ 56 ಫ್ಲ್ಯಾಟ್‌ಗಳ ಅಪಾರ್ಟ್‌ಮೆಂಟ್ ನಿರ್ಮಿಸಲಾಗುತ್ತದೆ. ಕೆಂಗೇರಿಯಲ್ಲಿ 2.5 ಬಿಎಚ್‌ಕೆಗೆ ಸೇರಿದ 112 ಹಾಗೂ 3 ಬಿಎಚ್‌ಕೆಗೆ ಸೇರಿದ 112 ಫ್ಲ್ಯಾಟ್‌ಗಳ ಅಪಾರ್ಟ್‌ಮೆಂಟ್ ನಿರ್ಮಾಣವಾಗಲಿದೆ. ರಾಯಸಂದ್ರದಲ್ಲಿ 44 ಡ್ಯೂಪ್ಲೆಕ್ಸ್ ಮನೆಗಳನ್ನು ನಿರ್ಮಿಸಲಾಗುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕನಕೋದ್ಯಮಿಗಳ ಸಮ್ಮಿಲನ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲುಮತ ಉದ್ಯಮಿಗಳ ಸಂಘದಿಂದ ಮೇ 24ರ ಭಾನುವಾರ ಜ್ಞಾನಗಂಗಾ ನಗರದ ವಿಶ್ವೇಶ್ವರಯ್ಯ ಬಡಾವಣೆಯಲ್ಲಿರುವ ಕನಕದಾಸ ಸಮುದಾಯ ಭವನದಲ್ಲಿ ‘ಕನಕೋದ್ಯಮಿಗಳ ಸಮ್ಮಿಲನ ಮತ್ತು ಉದ್ಯಮಶೀಲತಾ ಅವಕಾಶಗಳ ಅರಿವು’ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾಗಿನೆಲೆ ಮಹಾಸಂಸ್ಥಾನ ಕನಕ ಗುರು ಪೀಠದ ನಿರಂಜನಾನಂದ ಪುರಿ ಸ್ವಾಮೀಜಿ ನೇತೃತ್ವದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ರಾಮಕೃಷ್ಣ ಯೋಗಾಶ್ರಮದ ಯೋಗೇಶ್ವರಾನಂದ ಸ್ವಾಮೀಜಿ, ಕನಕ ಗುರುಪೀಠ ಶಾಖಾ ಮಠದ ಈಶ್ವರಾನಂದಪುರಿ ಸ್ವಾಮೀಜಿ ಸಾನ್ನಿಧ್ಯವಹಿಸುವರು.

ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಕಾರ್ಯಕ್ರಮ ಉದ್ಘಾಟಿಸುವರು. ಸಂಘದ ಅಧ್ಯಕ್ಷ ಸುನೀಲ್ ಜಯರಾಜ್, ಮಾಜಿ ಸಚಿವ ಬಂಡೆಪ್ಪ ಕಾಶಂಪುರ, ಶ್ರೀದೇವಿ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಎಂ.ಆರ್. ಹುಲಿನಾಯ್ಕರ್, ವಾಣಿಜ್ಯ ತೆರಿಗೆ ಇಲಾಖೆ ಹೆಚ್ಚುವರಿ ಆಯುಕ್ತ ಎಂ.ಬಿ. ನಾರಾಯಣ ಸ್ವಾಮಿ, ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಎಂ. ಈರಣ್ಣ, ಹಾಲುಮತ ಮಹಾಸಭಾ ಅಧ್ಯಕ್ಷ ರುದ್ರಣ್ಣ ಗುಳಗುಳಿ, ಕನಕಶ್ರೀ ಹೌಸ್ ಬಿಲ್ಡಿಂಗ್ ಕೋ ಆಪರೇಟಿವ್ ಸೊಸೈಟಿ ಸಂಸ್ಥಾಪಕ ಅಧ್ಯಕ್ಷ ಟಿ.ಬಿ. ಬೆಳಗಾವಿ, ಇನ್‌ಸೈಟ್ಸ್ ಐಎಎಸ್ ಅಕಾಡೆಮಿ ಸಂಸ್ಥಾಪಕ ಬಿ.ಜಿ. ವಿನಯ್ ಕುಮಾರ್, ವೆಂಚುರಾ ಇನ್ಫ್ರಾ ಸಂಸ್ಥಾಪಕ ನರೇಂದ್ರಬಾಬು, ಪೀಣ್ಯ ಕೈಗಾರಿಕಾ ಸಂಘದ ನಿಕಟಪೂರ್ವ ಅಧ್ಯಕ್ಷ ಆರ್. ಶಿವಕುಮಾರ್, ಶ್ರೀನಗರ ಆಸ್ಪತ್ರೆ ಮುಖ್ಯಸ್ಥೆ ಲೀಲಾ ಭಾಗವಹಿಸುವರು.

ಕಾರ್ಯಕ್ರಮದಲ್ಲಿ ಕೌಶಲಾಭಿವೃದ್ಧಿ ಮತ್ತು ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರದ ಉತ್ತೇಜನ ಕುರಿತು ಜಿಟಿಟಿಸಿ ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗಪ್ಪ ಪೂಜಾರಿ ಉಪನ್ಯಾಸ ನೀಡುವರು. ಉದ್ಯಮಶೀಲತಾ ಅಭಿವೃದ್ಧಿ ಕುರಿತು ಕೌಶಲಾಭಿವೃದ್ಧಿ ಇಲಾಖೆಯ ಸಿಡಾಕ್ ಜಂಟಿ ನಿರ್ದೇಶಕ ಗ್ಯಾನಪ್ಪ ಯು. ಹುಡೇದ್ ಉಪನ್ಯಾಸ ನೀಡುವರು.

ಯಶಸ್ವಿ ಕನಕೋದ್ಯಮಿಗಳಿಗೆ ಪ್ರಶಸ್ತಿ ನೀಡಲಾಗುವುದು ಎಂದು ಹಾಲುಮತ ಉದ್ಯಮಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಸುದರ್ಶನ್ ರಾಮಯ್ಯ ತಿಳಿಸಿದ್ದಾರೆ.

ವಿಟಿಯು: ಪರೀಕ್ಷೆ ಹಿಂದೆಯೆ ಫಲಿತಾಂಶ ಪ್ರಕಟ

ಬೆಳಗಾವಿ: ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಎಂಜಿನಿಯರಿಂಗ್ ಕೋರ್ಸ್‌ನ ಅಂತಿಮ ಸೆಮಿಸ್ಟರ್ ಪರೀಕ್ಷೆ ಮುಗಿದ 10 ನಿಮಿಷದಲ್ಲೇ ಫಲಿತಾಂಶ ಪ್ರಕಟಿಸಿದೆ.

ಕುಲಪತಿ ಪ್ರೊ.ಎಸ್.ವಿದ್ಯಾಶಂಕರ ಹಾಗೂ ಮೌಲ್ಯಮಾಪನ ಕುಲಸಚಿವ ಪ್ರೊ.ಯು.ಜೆ.ಉಜ್ವಲ್ ಜಂಟಿಯಾಗಿ ಶುಕ್ರವಾರ ಫಲಿತಾಂಶ ಬಿಡುಗಡೆ ಮಾಡಿದರು.

ಬಿ.ಇ., ಬಿ.ಟೆಕ್ ಅಂತಿಮ ಸೆಮಿಸ್ಟರ್ ಪರೀಕ್ಷೆಗೆ 56,192 ವಿದ್ಯಾರ್ಥಿಗಳು ಹಾಜರಾಗಿದ್ದರು. ಶುಕ್ರವಾರ ಸಂಜೆ 5.30ಕ್ಕೆ ಪರೀಕ್ಷೆ ಮುಗಿದಿದ್ದು, 5.40ಕ್ಕೆ ಫಲಿತಾಂಶ ಬಿಡುಗಡೆ ಮಾಡಿದೆ. ಶೇ 99.98 ಫಲಿತಾಂಶ ದಾಖಲಾಗಿದೆ.

'ವಿಟಿಯು ವಿದ್ಯಾರ್ಥಿ ಸ್ನೇಹಿಯಾಗಿದೆ ಎಂಬುದಕ್ಕೆ ಈ ಫಲಿತಾಂಶ ಸಾಕ್ಷಿ' ಎಂದು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ ಹೇಳಿದರು. ವಿದ್ಯಾರ್ಥಿಗಳು ಫಲಿತಾಂಶ ವೀಕ್ಷಣೆಗೆ ವೆಬ್‌ಸೈಟ್ https://results.vtu.ac.inಗೆ ಭೇಟಿ ನೀಡಬಹುದು.

ಶ್ರಮಿಕರಿಗೆ ನಿವೇಶನ: ಶೇ 50 ಸಬ್ಸಿಡಿ

'ನಮ್ಮ ಮನೆ' ಯೋಜನೆಗೆ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕವಾಗಿ ಹಿಂದುಳಿದಿದ್ದು, ಬೇರೆ ಬೇರೆ ವೃತ್ತಿಯಲ್ಲಿ ತೊಡಗಿರುವ ಶ್ರಮಿಕ ವರ್ಗದವರೂ ಸ್ವಂತ ಸೂರಿನಲ್ಲಿ ನೆಲಸಲಿ ಎಂಬ ಉದ್ದೇಶದಿಂದ ಶೇ 50ರಷ್ಟು ಸಬ್ಸಿಡಿ ದರದಲ್ಲಿ 50 ಸಾವಿರ ನಿವೇಶನಗಳನ್ನು ಹಂಚಿಕೆ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ.

20X30 ಅಡಿ ವಿಸ್ತೀರ್ಣದ ನಿವೇಶನಗಳನ್ನು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿನ ಶ್ರಮಿಕರಿಗೆ ನೀಡಲಾಗುತ್ತದೆ. ಇದಕ್ಕಾಗಿ 300 ಎಕರೆ ಜಾಗವನ್ನು ಗುರುತಿಸಲಾಗಿದೆ. 'ನಮ್ಮ ಮನೆ' ಎಂದು ಕರೆಯುವ ಈ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಚಾಲನೆ ನೀಡಲಿದ್ದಾರೆ ಎಂದು ಗೃಹಮಂಡಳಿಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಸೂರ್ಯನಗರದ ನಾಲ್ಕನೇ ಹಂತದಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸುತ್ತಿದ್ದು, ಇದೇ ಸಂದರ್ಭದಲ್ಲಿ ಈ ಯೋಜನೆಗೆ ಚಾಲನೆ ಸಿಗಲಿದೆ. ಸೂರ್ಯನಗರ ಸೇರಿದಂತೆ ಕೆಲವು ಕಡೆ ನಿವೇಶನಗಳು ಹಂಚಿಕೆಗೆ ಲಭ್ಯ ಇವೆ. ಕೆಲವು ಕಡೆ ಜಾಗ ಲಭ್ಯವಿದ್ದು, ಬಡಾವಣೆಗಳನ್ನು ನಿರ್ಮಾಣ ಮಾಡಬೇಕಾಗಿದೆ ಎಂದು ವಿವರಿಸಿದರು.

ಗೃಹ ಮಂಡಳಿಯು ರಾಜ್ಯದ ಹಲವೆಡೆ ನಿರ್ಮಿಸಿರುವ ಬಡಾವಣೆಗಳಲ್ಲಿ ನಿವೇಶನಗಳಿಗೆ ಬೇರೆ ಬೇರೆ ದರ ನಿಗದಿ ಮಾಡಲಾಗಿದೆ. ಸೂರ್ಯನಗರದಲ್ಲಿ ಅಭಿವೃದ್ಧಿಪಡಿಸಿದ ನಿವೇಶನಕ್ಕೆ ಚದರ ಅಡಿಗೆ ₹2,200 ದರ ನಿಗದಿಯಾಗಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಶೇ 50ರಷ್ಟು ಸಬ್ಸಿಡಿ ಸಿಗುವುದರಿಂದ ಚದರ ಅಡಿಗೆ ₹1,100 ದರದಲ್ಲಿ ನಿವೇಶನ ಖರೀದಿಸಬಹುದಾಗಿದೆ. ಇದೇ ರೀತಿ ನಗರಗಳಿಗೆ ಅನುಗುಣವಾಗಿ ದರದಲ್ಲಿ ವ್ಯತ್ಯಾಸವಿದೆ ಎಂದು ತಿಳಿಸಿದರು.

ಯಾವ ವರ್ಗದವರಿಗೆ ನಿವೇಶನ: ಅಂಗನವಾಡಿ ಕಾರ್ಯಕರ್ತೆಯರು, ಕಟ್ಟಡ ನಿರ್ಮಾಣ ಕಾರ್ಮಿಕರು, ಕೈಗಾರಿಕಾ ಕಾರ್ಮಿಕರು, ಸಿನಿಮಾ ಕ್ಷೇತ್ರದ ಕಾರ್ಮಿಕರು, ಬಾರ್ಬರ್, ಮಾರುಕಟ್ಟೆ ಏಜೆಂಟರು, ಕಸ್ಟಮರ್ ಸರ್ವಿಸ್, ಆಟೊ, ಟ್ಯಾಕ್ಸಿ ಚಾಲಕರು, ಪ್ಲಂಬರ್, ವೆಲ್ಡರ್, ಎಲೆಕ್ಟ್ರಿಷಿಯನ್, ಅಡುಗೆಯವರು, ತರಕಾರಿ ಮಾರುವವರು, ಬೀದಿ ಬದಿ ವ್ಯಾಪಾರಿಗಳು, ಕಾರ್ಪೆಂಟರ್ ಇತ್ಯಾದಿ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ನಿವೇಶನಗಳನ್ನು ನೀಡಲು ಕರ್ನಾಟಕ ಗೃಹ ಮಂಡಳಿ ತೀರ್ಮಾನಿಸಿದೆ.

7,000 ಸಫಾಯಿ ಕರ್ಮಚಾರಿಗಳಿಗೆ ವಸತಿ: ಎಚ್.ಸಿ.ಮಹದೇವಪ್ಪ



'ರಾಜ್ಯದಲ್ಲಿ ಸುಮಾರು 7,000 ಸಫಾಯಿ ಕರ್ಮಚಾರಿಗಳು ಇದ್ದು, ಎಲ್ಲರಿಗೂ ವಸತಿ ಮತ್ತು ಸಾಮಾಜಿಕ ಭದ್ರತೆ ಒದಗಿಸಲು ಸರ್ಕಾರ ನಿರ್ಧರಿಸಿದೆ' ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಹೇಳಿದರು.

ಬರಿಗೈಯಲ್ಲಿ ಮಲಗುಂಡಿ ಸ್ವಚ್ಛತೆಗೆ ನೇಮಕಾತಿ ನಿಷೇಧ ಮತ್ತು ಪುನರ್ವಸತಿ ಕುರಿತು ವಿಕಾಸ ಸೌಧದಲ್ಲಿ ಶುಕ್ರವಾರ ನಡೆದ ರಾಜ್ಯ ಮೇಲ್ವಿಚಾರಣಾ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

'ರಾಜ್ಯದಲ್ಲಿರುವ ಸಫಾಯಿ ಕರ್ಮಚಾರಿಗಳ ಸಂಖ್ಯೆ, ಆರ್ಥಿಕ, ಸಾಮಾಜಿಕ ಮತ್ತು ಆರೋಗ್ಯ ಸ್ಥಿತಿಯ ಬಗ್ಗೆ ರಾಷ್ಟ್ರೀಯ ಕಾನೂನು ಶಾಲೆಯ ತಂಡವು ಸಮೀಕ್ಷೆ ನಡೆಸಿ, ವರದಿ ಸಿದ್ಧಪಡಿಸಿದೆ. ರಾಜ್ಯದಲ್ಲಿ ಸುಮಾರು 7,000 ಸಫಾಯಿ ಕರ್ಮಚಾರಿಗಳು ಇದ್ದಾರೆ ಎಂಬ ವಿವರ ಆ ವರದಿಯಲ್ಲಿ ಇದೆ. ಅದರ ಆಧಾರದಲ್ಲಿ ಅವರ ಪುನರ್ವಸತಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ' ಎಂದು ಅವರು ತಿಳಿಸಿದರು.

'ಸಮೀಕ್ಷಾ ವರದಿಯ ಆಧಾರದಲ್ಲಿಯೇ ಸಫಾಯಿ ಕರ್ಮಚಾರಿಗಳಿಗೆ ವಸತಿ, ಶಿಕ್ಷಣ, ಆರೋಗ್ಯ ಮತ್ತು ಇತರೆ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. ಜತೆಗೆ, ಮಲಗುಂಡಿ ಸ್ವಚ್ಛತೆಗೆ ಯಂತ್ರೋಪಕರಣಗಳ ಬಳಕೆಯನ್ನು ಉತ್ತೇಜಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ' ಎಂದರು.

ಸುದ್ದಿ 2 ನಿಮಿಷ

ಬೀದರ್, ಕಲಬುರಗಿಗೆ ವಿಮಾನಯಾನ ಪುನರಾರಂಭ

ಬೆಂಗಳೂರು: 'ಬೆಂಗಳೂರಿನಿಂದ ಬೀದರ್ ಮತ್ತು ಕಲಬುರಗಿಗೆ ಕ್ರಮವಾಗಿ ಜೂನ್ 1 ಹಾಗೂ ಜೂನ್ 10ರಿಂದ ವಿಮಾನಯಾನ ಸೇವೆ ಪುನರಾರಂಭವಾಗಲಿದೆ' ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. 'ಘೋಡಾವತ್ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಸ್ಟಾರ್ ಏರ್‌ಲೈನ್ಸ್ ಸಂಸ್ಥೆಯು ಬೆಂಗಳೂರು–ಬೀದರ್ ಮತ್ತು ಬೆಂಗಳೂರು–ಕಲಬುರಗಿ ಮಾರ್ಗದಲ್ಲಿ ವಿಮಾನಯಾನ ಸೇವೆ ಒದಗಿಸಲಿದೆ. ಇದಕ್ಕೆ ಬೆಂಬಲವಾಗಿ ರಾಜ್ಯ ಸರ್ಕಾರವು ₹28.47 ಕೋಟಿ ನಿಧಿಯನ್ನು ಒದಗಿಸಲಿದೆ' ಎಂದರು.

'ನಷ್ಟದ ಕಾರಣಕ್ಕೆ ಬೆಂಗಳೂರು–ಕಲಬುರಗಿ ಮಾರ್ಗದ ವಿಮಾನಯಾನ ಸೇವೆ ಸ್ಥಗಿತಗೊಂಡಿತ್ತು. ಕಲ್ಯಾಣ ಕಾರ್ಯಕ್ರಮ ಭಾಗದ ಕೈಗಾರಿಕೆ, ಶಿಕ್ಷಣ, ಕೃಷಿ, ವಾಣಿಜ್ಯ ವಹಿವಾಟು ಮತ್ತು ಪ್ರವಾಸೋದ್ಯಮವನ್ನು ಕೇಂದ್ರವಾಗಿರಿಸಿಕೊಂಡು ಪ್ರಾದೇಶಿಕ ವಿಮಾನಯಾನ ಸಂಪರ್ಕ ಉಪಕ್ರಮದಡಿ, ಮತ್ತೆ ಈ ಸೇವೆಯನ್ನು ಆರಂಭಿಸಲಾಗುತ್ತಿದೆ. ಎರಡೂ ಮಾರ್ಗಗಳಲ್ಲಿ ಈಗಾಗಲೇ ಟಿಕೆಟ್‌ಗಳು ಮಾರಾಟವಾಗಿವೆ' ಎಂದು ಮಾಹಿತಿ ನೀಡಿದರು.

ದಾಖಲೆಯ ಆಶ್ಲೇಷ ಬಲಿ ಸೇವೆ



ಸುಬ್ರಹ್ಮಣ್ಯ: ಆಶ್ಲೇಷ ನಕ್ಷತ್ರದ ಅಂಗವಾಗಿ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಶುಕ್ರವಾರ ರಾಜ್ಯ, ಹೊರರಾಜ್ಯಗಳಿಂದ ಬಂದ ಸಾವಿರಾರು ಭಕ್ತರು 'ಆಶ್ಲೇಷ ಬಲಿ' ಸೇವೆ ಸಲ್ಲಿಸಿದರು. ಈ ಬಾರಿ ದಾಖಲೆಯ 2,540ಕ್ಕೂ ಅಧಿಕ ಸೇವೆ ನಡೆದಿವೆ.

ಏಕಾದಶಿ ಹೊರತುಪಡಿಸಿ ಉಳಿದೆಲ್ಲಾ ದಿನಗಳಲ್ಲಿ ಆಶ್ಲೇಷ ಬಲಿ ಸೇವೆ ನಡೆಯುತ್ತದೆ. ಕುಕ್ಕೆ ಸುಬ್ರಹ್ಮಣ್ಯ ದೇವರ ನಕ್ಷತ್ರವು ಆಶ್ಲೇಷ ಆಗಿರುವುದರಿಂದ ತಿಂಗಳಿನಲ್ಲಿ ಬರುವ ಆಶ್ಲೇಷ ನಕ್ಷತ್ರದಂದು ಹೆಚ್ಚಿನ ಭಕ್ತರು ಬಂದು ಸೇವೆ ಸಲ್ಲಿಸುವುದು ವಾಡಿಕೆ. ಆಶ್ಲೇಷ ಬಲಿ ಸೇವೆಯು ಪ್ರತಿದಿನ ಬೆಳಿಗ್ಗೆ 6.30ಕ್ಕೆ ಆರಂಭವಾಗಿ 3 ಬ್ಯಾಚ್ ಹಾಗೂ ಸಂಜೆ 5ಕ್ಕೆ ಒಂದು ಬ್ಯಾಚ್‌ನಲ್ಲಿ ನಡೆಯುತ್ತದೆ.

ಭಕ್ತರು ಬೆಳಿಗ್ಗೆ ಕುಮಾರಧಾರಾ ನದಿಯಲ್ಲಿ ಸ್ನಾನ ಮಾಡಿ, ದೇವಳದಲ್ಲಿ ಆಶ್ಲೇಷ ಬಲಿ ರಶೀದಿ ನಂತರ ಸಂಕಲ್ಪ ಮಂದಿರದಲ್ಲಿ ಸಂಕಲ್ಪ ಮಾಡಿಸಿ, ಆಶ್ಲೇಷ ಬಲಿ ನಡೆಯುವ ಅಂಗಣಕ್ಕೆ ಸರತಿ ಸಾಲಿನಲ್ಲಿ ತೆರಳಿ ಸೇವೆ ಸಲ್ಲಿಸುತ್ತಾರೆ.

ಪಾಲಿಕೆಗಾಗಿ ಹೋರಾಟ...

ಪ್ರಜಾವಾಣಿ ಚಿತ್ರ



ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆ ಪ್ರಸ್ತಾವಕ್ಕೆ ರಾಜ್ಯಪಾಲರು ಅನುಮೋದನೆ ನೀಡುವಂತೆ ಆಗ್ರಹಿಸಿ ಮಹಾನಗರ ಪಾಲಿಕೆ ಹೋರಾಟ ವೇದಿಕೆ ಸದಸ್ಯರು ಶುಕ್ರವಾರ ಧಾರವಾಡದಲ್ಲಿ ಚಕ್ಕಡಿ ಮೆರವಣಿಗೆ ನಡೆಸಿದರು

ಕೈಗಾ ತಲುಪಿದ ಅಣು ವಿಕಿರಣ ರಕ್ಷಾಕವಚ

ಪ್ರಜಾವಾಣಿ ವಾರ್ತೆ

ಕಾರವಾರ: ಕೈಗಾದ ಅಣು ವಿದ್ಯುತ್ ಸ್ಥಾವರದ 5 ಮತ್ತು 6ನೇ ಘಟಕಕ್ಕೆ ಅಳವಡಿಸಲು ಒಯ್ಯುವಾಗ, ತಾಲ್ಲೂಕಿನ ಹರ್ಟುಗಾ ಬಳಿ ಪಲ್ಟಿಯಾಗಿದ್ದ ಅಣು ವಿಕಿರಣ ರಕ್ಷಾಕವಚವನ್ನು (ರೇಡಿಯೇಶನ್ ಎಂಡ್‌ಶೀಲ್ಡ್) ಮೇಲಕ್ಕೆತ್ತಿ ಶುಕ್ರವಾರ ಕೈಗಾಕ್ಕೆ ತರಲಾಯಿತು.

120 ಟನ್‌ಗೂ ಅಧಿಕ ಭಾರ ಇರುವ ಈ ಯಂತ್ರ ಮೇ 7ರಂದು ಕೈಗಾದಿಂದ 4 ಕಿ.ಮೀ ದೂರದಲ್ಲಿ ಇರುವಾಗ ಪಲ್ಟಿ ಆಗಿತ್ತು. ಕೈಗಾ ರಸ್ತೆಯಲ್ಲಿ ಸಾಗುತ್ತಿದ್ದ ವೇಳೆ ಯಂತ್ರವನ್ನು ಹೊತ್ತಿದ್ದ ಮಲ್ಟಿಎಕ್ಸೆಲ್ ವಾಹನದ ಟೈರ್ ಸ್ಫೋಟಗೊಂಡಿದ್ದರಿಂದ ನಿಯಂತ್ರಣ ತಪ್ಪಿ ವಾಹನ ವಾಲಿತ್ತು.

'ಅತಿ ಭಾರದ ಯಂತ್ರ, ಅದನ್ನು ಹೊತ್ತು ತಂದಿದ್ದ ವಾಹನ ಮೇಲಕ್ಕೆತ್ತಲು ಪುಣೆ, ಹೈದರಾಬಾದ್‌ನಿಂದ ಕ್ರೇನ್‌ಗಳನ್ನು ತರಿಸಲಾಗಿತ್ತು ಕ್ರೇನ್ ಮೂಲಕವೇ ವಾಹನಸಮೇತ ಯಂತ್ರವನ್ನು ಕೈಗಾವರೆಗೆ ಎಳೆದೊಯ್ಯಲಾಗಿದೆ' ಎಂದು ಕೈಗಾ ಅಣು ವಿದ್ಯುತ್ ಘಟಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಕಾರವಾರ ತಾಲ್ಲೂಕಿನ ಹರ್ಟುಗಾ ಬಳಿ ಪಲ್ಟಿಯಾಗಿದ್ದ ಅಣು ವಿಕಿರಣ ರಕ್ಷಾಕವಚವನ್ನು ಸಾಗಣೆಗೆ ಅನುಕೂಲವಾಗುವಂತೆ ಮೇಲಕ್ಕೆತ್ತಿ ಇಡಲಾಗಿತ್ತು

ಅಣು ಸ್ಥಾವರದಲ್ಲಿ ವಿಕಿರಣ ಸೋರಿಕೆಯಾಗದಂತೆ ಸುರಕ್ಷತೆ ಒದಗಿಸಲು ಅನುಕೂಲವಾಗುವ ಈ ಯಂತ್ರವನ್ನು ಫೆಬ್ರುವರಿ 9ರಂದು ಸೂರತ್‌ನಿಂದ ರವಾನೆಯಾಗಿತ್ತು. ನ್ಯಾಬ್ರೊಸ್ ಟ್ರಾನ್ಸ್‌ಪೋರ್ಟ್ ಸಂಸ್ಥೆಯು ಸಾಗಣೆಯ ಹೊಣೆ ಹೊತ್ತುಕೊಂಡಿತ್ತು.

ಪ್ರಕರಣ ವಾಪಸ್: ಜಟಾಪಟಿ

ಒಂದನೇ ಪುಟದಿಂದ...

ಮುಸ್ಲಿಮರ ಪ್ರಕರಣವನ್ನು ಮಾತ್ರ ಎತ್ತಿತೋರಿಸಿ, ಶಾಂತಿ ಕದಡುವ ಕೆಲಸ ಮಾಡಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಜಿ.ಪರಮೇಶ್ವರ, ಸತೀಶ ಜಾರಕಿಹೊಳಿ, ಬಸವರಾಜ ಬೊಮ್ಮಾಯಿ ಅವರು ಈ ಹಿಂದೆ ಗೃಹ ಸಚಿವರಾಗಿದ್ದ ಅವಧಿಯಲ್ಲಿ ರದ್ದುಕೋರಿ ಮನವಿ ಸಲ್ಲಿಕೆಯಾಗಿದ್ದ ಪ್ರಕರಣಗಳನ್ನು ಇವು ಒಳಗೊಂಡಿವೆ.

ವಾಟಾಳ್, ನಾರಾಯಣಗೌಡ ವಿರುದ್ಧ ಪ್ರಕರಣ

ಒಂದನೇ ಪುಟದಿಂದ...

- ಬೆಂಗಳೂರಿನ ವಿಧಾನಸೌಧದ ಬಳಿ, ಸೋಫಿಯಾ ಶಾಲೆ ಬಳಿ, ದಂಡು ರೈಲು ನಿಲ್ದಾಣದ ಬಳಿ, ಮೈಸೂರಿನಲ್ಲಿ ನಡೆಸಿದ ವಿವಿಧ ಪ್ರತಿಭಟನೆಗಳಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣಗೌಡ ಮತ್ತು ಬೆಂಬಲಿಗರ ವಿರುದ್ಧ ದಾಖಲಾಗಿದ್ದ ಐದು ಪ್ರಕರಣಗಳು
- ಕಾವೇರಿ ನೀರು ಹಂಚಿಕೆ ವಿಚಾರವಾಗಿ ಬೆಂಗಳೂರಿನ ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಪ್ರತಿಭಟನೆ, ನಿಷೇದಾಜ್ಞೆ ಉಲ್ಲಂಘನೆ ಪ್ರಕರಣಗಳು
- ಬೆಂಗಳೂರಿನ ಸೋಫಿಯಾ ಶಾಲೆಯ ಬಳಿ ಸ್ಕೈವಾಕ್‌ನಲ್ಲಿ ಅಂಟಿಸಿದ್ದ ಇಂಗ್ಲಿಷ್ ಬ್ಯಾನರ್ ತೆರವುಗೊಳಿಸಿದ್ದ ಪ್ರಕರಣದಲ್ಲಿ ರೂಪೇಶ್ ರಾಜಣ್ಣ ವಿರುದ್ಧದ ಪ್ರಕರಣ
- ಕೋವಿಡ್ ಅವಧಿಯಲ್ಲಿ ಪರಸ್ಪರ ಅಂತರ ಕಾಯ್ದುಕೊಳ್ಳುವಿಕೆ ನಿಯಮ ಉಲ್ಲಂಘಿಸಿ ಗುಂಪುಸೇರಿದ ಮತ್ತು ಪ್ರತಿಭಟನೆ ನಡೆಸಿದುದರ ವಿರುದ್ಧ ರಾಜಕೀಯ ನಾಯಕರ ವಿರುದ್ಧ ದಾಖಲಾಗಿದ್ದ ಪ್ರಕರಣಗಳು

> ವಿವಿಧ ಸಂಘಟನೆಗಳ ಮುಖಂಡರು ಮಾಡಿದ್ದ ಮನವಿಯಂತೆ ಸಚಿವ ಸಂಪುಟ ಉಪಸಮಿತಿ ರಚಿಸಲಾಗಿತ್ತು. ಪ್ರತಿ ಪ್ರಕರಣವನ್ನೂ ಕೂಲಂಕಷವಾಗಿ ಪರಿಶೀಲಿಸಿದ ನಂತರ ಕೆಲ ಪ್ರಕರಣಗಳನ್ನು ಕೈಬಿಡಲು ನಿರ್ಧರಿಸಲಾಗಿದೆ
>
> **ಜಿ.ಪರಮೇಶ್ವರ**, ಗೃಹಸಚಿವ

> ರಾಜ್ಯ ಸರ್ಕಾರ ಒಂದು ಕಡೆ ಹಿಂದೂ ಕಾರ್ಯಕರ್ತರನ್ನು ಗುರಿ ಮಾಡಿ ಸುಳ್ಳು ಪ್ರಕರಣ ದಾಖಲಿಸಿ, ರೌಡಿಶೀಟ್ ತೆರೆದು ಪೊಲೀಸ್ ಇಲಾಖೆಯ ಮೂಲಕ ಕಿರುಕುಳ ಕೊಡುತ್ತಿದೆ. ಮತ್ತೊಂದೆಡೆ ಮುಸ್ಲಿಮರ ವಿರುದ್ಧದ ಅಪರಾಧ ಪ್ರಕರಣ ವಾಪಸ್ ಪಡೆಯುತ್ತಿದೆ
>
> **ಸಿ.ಟಿ.ರವಿ**, ವಿಧಾನ ಪರಿಷತ್ ಸದಸ್ಯ, ಬಿಜೆಪಿ

ಹಲವೆಡೆ ಜಮೀನು ಜಲಾವೃತ • ಭತ್ತ, ಪಪ್ಪಾಯ, ಬಾಳೆ ಬೆಳೆ ಹಾನಿ

ಮಳೆ: ಚಾವಣಿ ಕುಸಿದು ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ದಾವಣಗೆರೆ/ಮೈಸೂರು/ಹೊಸಪೇಟೆ: ರಾಜ್ಯದಲ್ಲಿ ಮೈಸೂರು, ಮಧ್ಯ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಶುಕ್ರವಾರ ಬಿರುಗಾಳಿ ಸಹಿತ ಭಾರಿ ಮಳೆಯಾಗಿದೆ. ಜನಜೀವನ ಅಸ್ತವ್ಯಸ್ತವಾಗಿದೆ.

ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಅಸಾಂಡಹಳ್ಳಿಯಲ್ಲಿ ಮನೆ ಚಾವಣಿ ಕುಸಿದು ನಾರಾಯಣಪ್ಪ (60) ಅವರು ಮೃತಪಟ್ಟರು. ಮೈಸೂರು ಜಿಲ್ಲೆಯಲ್ಲಿ ಮನೆಯೊಂದು ಕುಸಿದಿದೆ.

ಉಳಿದಂತೆ ದಾವಣಗೆರೆ, ತುಮಕೂರು, ಕೋಲಾರ, ಬಳ್ಳಾರಿ ಜಿಲ್ಲೆಯ ವಿವಿಧೆಡೆಯು ಗುರುವಾರ ರಾತ್ರಿ ಹಾಗೂ ಶುಕ್ರವಾರ ಉತ್ತಮ ಮಳೆಯಾಗಿದೆ.

ದಾವಣಗೆರೆ ವರದಿ: ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಬಿರುಗಾಳಿ, ಗುಡುಗು, ಸಿಡಿಲು ಸಮೇತ ಭಾರಿ ಮಳೆ ಸುರಿಯಿತು. ಬೆಳಗಿನ ಜಾವ 5.30ಕ್ಕೆ ಆರಂಭವಾದ ಮಳೆಯು ಬೆಳಿಗ್ಗೆ 8ರವರೆಗೂ ಸುರಿಯಿತು.

ವರುಣನ ಆರ್ಭಟಕ್ಕೆ ಹಲವು ವಸತಿ ಪ್ರದೇಶಗಳು ಜಲಾವೃತವಾದವು. ವಾಹನ ಸವಾರರು ಪರದಾಡಿದರು. ಒಂದು ವಾರದಿಂದ ಸುರಿಯುತ್ತಿರುವ ಮಳೆ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳಿಗೆ ಜೀವ ತುಂಬಿದ್ದರೆ, ಹಲವೆಡೆ ತೋಟಗಾರಿಕೆ ಬೆಳೆಗಳ ಹಾನಿಗೂ ಕಾರಣವಾಗಿದೆ.



ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕು ಸಂತೇಬಾಚಹಳ್ಳಿ ಹೋಬಳಿಯ ಕೊಡಗಹಳ್ಳಿಯಲ್ಲಿ ಗುರುವಾರ ರಾತ್ರಿ ಸುರಿದ ಭಾರಿ ಮಳೆಗೆ ಮನೆ ಕುಸಿದು ಬಿದ್ದಿದೆ

ದಾವಣಗೆರೆ ತಾಲ್ಲೂಕಿನ ಮಾಗಾನಹಳ್ಳಿ, ಕಡ್ಲೇಬಾಳು, ಕೋಳೇನಹಳ್ಳಿ, ಅರಸಾಪುರ, ಕುಕ್ಕುವಾಡ, ಓಬಜ್ಜಿಹಳ್ಳಿ ಸೇರಿ ಹಲವುಗ್ರಾಮಗಳಲ್ಲಿ ಮಳೆಯಿಂದ ಭತ್ತದ ಬೆಳೆಯು ಚಾಪೆ ಹಾಸಿದೆ. ಭತ್ತ, ಪಪ್ಪಾಯ, ಬಾಳೆ, ಈರುಳ್ಳಿ ಬೆಳೆಗಳು ಹಾಳಾಗಿವೆ.

ದಾವಣಗೆರೆಯಲ್ಲಿ 3.43 ಸೆಂ.ಮೀ., ಜಗಳೂರಿನಲ್ಲಿ 3.87 ಸೆಂ.ಮೀ., ಹರಿಹರದಲ್ಲಿ 2.66 ಸೆಂ.ಮೀ ಮಳೆ ಸುರಿದಿದೆ. ಜಿಲ್ಲೆಯಲ್ಲಿ 2.33 ಸೆಂ.ಮೀ. ಸರಾಸರಿ ಮಳೆಯಾಗಿದೆ. 11 ಮನೆಗಳಿಗೆ ಹಾನಿಯಾಗಿದೆ.

ಚಿತ್ರದುರ್ಗ ವರದಿ: ಚಿತ್ರದುರ್ಗ ನಗರ ಹಿರಿಯೂರು, ಮೊಳಕಾಲ್ಮುರು, ಚಳ್ಳಕೆರೆ, ನಾಯಕನಹಟ್ಟಿಯ ವಿವಿಧೆಡೆ ಉತ್ತಮ ಮಳೆಯಾಗಿದೆ. ತೋಟಗಾರಿಕಾ ಬೆಳೆಗಳಿಗೆ ಜೀವಕಳೆ ಬಂದಿದ್ದು, ಕೆಲವೆಡೆ ಪಪ್ಪಾಯ, ಬಾಳೆ, ಅಡಿಕೆ ತೋಟಗಳಿಗೆ ಹಾನಿಯಾಗಿದ್ದು, ಕೆಲವು ಗ್ರಾಮಗಳಲ್ಲಿ ಮನೆಗಳಿಗೆ ಹಾನಿಯಾಗಿದೆ.

ತುಮಕೂರು ವರದಿ: ಕೊರಟಗೆರೆ ತಾಲ್ಲೂಕಿನ ಹೊಳವನಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ ಮಳೆಗೆ ಮರಗಳು, ವಿದ್ಯುತ್ ಕಂಬಗಳು ಉರುಳಿವೆ. ಅಡಿಕೆ, ತೆಂಗು, ಬಾಳೆ ಬೆಳೆಗೆ ಹಾನಿಯಾಗಿದೆ. ಶಿರಾ ತಾಲ್ಲೂಕಿನ ಕರೆಮಾದೇನಹಳ್ಳಿಯಲ್ಲಿ ಸಿಡಿಲು ಬಡಿದು ಐದು ಮೇಕೆಗಳು ಮೃತಪಟ್ಟಿವೆ.

ಕೋಲಾರ ವರದಿ: ಮಾಲೂರು ತಾಲ್ಲೂಕಿನ ಅಸಾಂಡಹಳ್ಳಿಯಲ್ಲಿ ಮನೆ ಮೇಲೆ ಮರ ಬಿದ್ದು, ಚಾವಣಿ ಕುಸಿದು ನಾರಾಯಣಪ್ಪ (60) ಮೃತರಾಗಿದ್ದಾರೆ. ಮುಳಬಾಗಿಲು ತಾಲ್ಲೂಕಿನ ಕೀಲಾಗಾಣಿ ಗ್ರಾಮದಲ್ಲಿ ಫಸಲಿಗೆ ಬಂದಿದ್ದ ಬಾಳೆ ತೋಟ ಸಂಪೂರ್ಣ ನಾಶವಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆ ಚೇಳೂರು ತಾಲ್ಲೂಕಿನ ಚಿನ್ನಗಾನಪಲ್ಲಿಯಲ್ಲಿ ತಡರಾತ್ರಿ ಸುರಿದ ಬಿರುಗಾಳಿ ಮಳೆಗೆ ಹಲವಡೆ ಮರ, ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿವೆ. ಇಡೀ ಗ್ರಾಮದಲ್ಲಿ ವಿದ್ಯುತ್ ಸಂಪರ್ಕ ಸಂಪೂರ್ಣವಾಗಿ ಕಡಿತಗೊಂಡಿತ್ತು.

ಕುಸಿದ ಮನೆ, ಕೊಚ್ಚಿ ಹೋದ ರಸ್ತೆ

ಮೈಸೂರು: ಮೈಸೂರು ಭಾಗದ ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಗುರುವಾರ ಮಧ್ಯರಾತ್ರಿ ಭಾರೀ ಮಳೆ ಸುರಿದು ಮನೆಗಳು ಕುಸಿದು, ರಸ್ತೆಗಳು ಕೊಚ್ಚಿ ಹೋಗಿವೆ.

ಮಂಡ್ಯ ಜಿಲ್ಲೆಯ ಸಂತೇಬಾಚಹಳ್ಳಿ ಹೋಬಳಿಯ ಕೊಡಗಹಳ್ಳಿಯಲ್ಲಿ ಸಹೋದರರಾದ ನಾಗೇಶ್, ರಾಜೇಗೌಡ, ಶಿವರಾಮು ಅವರ ವಾಸದ ಮನೆ ಧರೆಗುರುಳಿದೆ. ಪ್ರಾಣ ಹಾನಿಯಾಗಿಲ್ಲ.

ಮನೆ ಕುಸಿತದ ರಭಸಕ್ಕೆ, ಪಕ್ಕದಲ್ಲಿ ನಿರ್ಮಾಣ ಹಂತದಲ್ಲಿದ್ದ ಮೊಗಣ್ಣ ಅವರ ಮನೆಯ ಗೋಡೆ ಕುಸಿದು ಬಿದ್ದಿದೆ. ತಾಲ್ಲೂಕು ಆಡಳಿತ ಪರಿಹಾರ ನೀಡಬೇಕು ಎಂದು ಸಂತ್ರಸ್ತರು ಕೋರಿದ್ದಾರೆ.

ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಮಾರ್ಟಳ್ಳಿಯಲ್ಲಿ ಹಲವು ರಸ್ತೆಗಳು ಕೊಚ್ಚಿಹೋಗಿವೆ. ಗ್ರಾಮದಲ್ಲಿ ಸೇಂಟ್ ಮೇರಿಸ್ ಶಾಲೆಗೆ ಸಂಪರ್ಕ ರಸ್ತೆ ಹಾಳಾಗಿದೆ. ಏರಿಕಾಡು ಗ್ರಾಮದಲ್ಲಿ ವಿದ್ಯುತ್ ಪರಿವರ್ತಕದ ಮೇಲೆ ಬೃಹತ್ ಮರ ಬಿದ್ದು ಹಾನಿಯಾಗಿದೆ.

ಹೆದ್ದಾರಿಯಲ್ಲಿ 6 ಗಂಟೆ ದಟ್ಟಣೆ

ಹೊಸಪೇಟೆ/ಬಳ್ಳಾರಿ: ಹೊಸಪೇಟೆ ನಗರ ಸೇರಿ ಜಿಲ್ಲೆಯ ಕೆಲವಡೆ ಶುಕ್ರವಾರ ನಸುಕಿನ 3 ರಿಂದ ಉತ್ತಮ ಮಳೆಯಾಯಿತು. ತಾಲ್ಲೂಕಿನ ಮರಿಯಮ್ಮನಹಳ್ಳಿ ಹೋಬಳಿ ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಮಳೆ ನೀರು ನಿಂತ ಕಾರಣ ಸುಮಾರು ಆರು ಗಂಟೆಗೂ ಹೆಚ್ಚು ಸಮಯ ಸಂಚಾರಕ್ಕೆ ಅಡಚಣೆಯಾಯಿತು.

ಹೆದ್ದಾರಿಯ ಡಣಾಪುರ ಬಳಿ ಸೇತುವೆ, ಅಂಡರ್‌ಪಾಸ್, ಸರ್ವಿಸ್ ರಸ್ತೆ ನಿರ್ಮಾಣ ನಡೆದಿದ್ದು, ಎರಡು ಕಿ.ಮೀವರೆಗೆ ಏಕಮುಖ ಸಂಚಾರಕ್ಕೆ ವ್ಯವಸ್ಥೆಯಿದೆ. ಅಂಡರ್ ಪಾಸ್ ಬಳಿ ಒಂದೂವರೆ ಅಡಿಗೂ ಹೆಚ್ಚು ನೀರು ನಿಂತಿದ್ದು, ವಾಹನಗಳು ನಿಧಾನವಾಗಿ ಸಾಗಿದವು.

ಕೂಡ್ಲಿಗಿ ಪಟ್ಟಣ ಸೇರಿ ತಾಲ್ಲೂಕಿನಲ್ಲಿ ಗುಡೇಕೋಟೆ, ಹೊಸಹಳ್ಳಿ, ಚಿಕ್ಕಜೋಗಿಹಳ್ಳಿ, ಬಣವಿಕಲ್ಲು ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಮಳೆಯಾಯಿತು. ಬಳ್ಳಾರಿ ಜಿಲ್ಲೆಯ ಸಿರುಗುಪ್ಪದಲ್ಲಿ ಗುರುವಾರ ಮಧ್ಯರಾತ್ರಿ ಸಿಡಿಲು ಬಡಿದು 8 ಕುರಿಗಳು ಮೃತಪಟ್ಟಿವೆ. ಭಾರಿ ಮಳೆಗೆ ಬೃಹತ್ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿವೆ.

ಹಾವೇರಿಯಲ್ಲಿ ಪೊಲೀಸ್ ಭದ್ರತೆ • ಕೇಂದ್ರದ ಬಳಿ ಸಾಲುಗಟ್ಟಿದ ರೈತರು

ಬ್ಯಾರಿಕೇಡ್ ಹಾಕಿ ಬೀಜ ವಿತರಣೆ

ಪ್ರಜಾವಾಣಿ ವಾರ್ತೆ

ಹಾವೇರಿ: ಬಿತ್ತನೆ ಬೀಜ ಖರೀದಿ ವೇಳೆ ಉಂಟಾಗುತ್ತಿರುವ ನೂಕುನುಗ್ಗಲು ನಿಯಂತ್ರಿಸಲು ಕ್ರಮ ಕೈಗೊಂಡಿರುವ ಕೃಷಿ ಇಲಾಖೆ ಅಧಿಕಾರಿಗಳು ಶುಕ್ರವಾರ ರೈತ ಸಂಪರ್ಕ ಕೇಂದ್ರಗಳ (ಆರ್‌ಎಸ್‌ಕೆ) ಎದುರು ಪೊಲೀಸರ ಭದ್ರತೆಯಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿಸಿ, ರೈತರಿಗೆ ಬೀಜ ವಿತರಣೆ ಮಾಡಿದರು.

ಸೋಯಾಬಿನ್, ಶೇಂಗಾ ಬೀಜಕ್ಕೆ ಬೇಡಿಕೆ ಇರುವ ಕಾರಣ ರೈತರು ತಂಡವಾಗಿ ಆರ್‌ಎಸ್‌ಕೆಗಳಿಗೆ ಬರುತ್ತಿದ್ದಾರೆ. ದಟ್ಟಣೆ ತಪ್ಪಿಸಲು ಪೊಲೀಸರು, ಬ್ಯಾರಿಕೇಡ್‌ಗಳನ್ನು ಹಾಕಿ ರೈತರನ್ನು ಸರದಿಯಲ್ಲಿ ನಿಲ್ಲಿಸಿದರು. ರೈತರು, ಕೌಂಟರ್ ಬಳಿ ಹೋಗಿ ಆರ್‌ಟಿಸಿ ವಿವರ ನೀಡಿ, ಬೀಜ ಖರೀದಿಸಿದರು.

ಆನ್‌ಲೈನ್ ನೋಂದಣಿ ಮೂಲಕ ಎಕರೆ ಲೆಕ್ಕದಲ್ಲಿ ರೈತರಿಗೆ ಬೀಜ ವಿತರಿಸಲಾಗುತ್ತಿದೆ. ಈ ಪ್ರಕ್ರಿಯೆಗೆ ಕನಿಷ್ಠ 5 ನಿಮಿಷ ಬೇಕು. ಶುಕ್ರವಾರವೂ ರೈತರು, ಕೇಂದ್ರದ ಎದುರು ಬೀಜಕ್ಕಾಗಿ ಕಾದರು. ಸಂಜೆಯವರೆಗೆ ನಿಂತರೂ ಹಲವರಿಗೆ ಬೀಜಗಳು ಸಿಗದ ಕಾರಣ, ಕೂಪನ್ ಕೊಟ್ಟು ಶನಿವಾರ ಬರಲು ತಿಳಿಸಲಾಯಿತು. ಹಾವೇರಿ ಆರ್‌ಎಸ್‌ಕೆಯಲ್ಲಿ ಒಂದೇ ದಿನ 300 ಕ್ವಿಂಟಲ್ ಸೋಯಾಬಿನ್ ಬೀಜ ಮಾರಾಟವಾಗಿದೆ.

ಬಿತ್ತನೆ ಬೀಜ ಖರೀದಿಗೆ ರೈತರು ಪರದಾಡುತ್ತಿರುವ ಕುರಿತು ವಿಶೇಷ ವರದಿ ಮೇ 22ರ ಪ್ರಜಾವಾಣಿ ಸಂಚಿಕೆಯಲ್ಲಿ ಪ್ರಕಟವಾಗಿತ್ತು.



ಕರ್ಜಗಿ ರೈತ ಸಂಪರ್ಕ ಕೇಂದ್ರದ ಎದುರು ಹಾಕಿರುವ ಬ್ಯಾರಿಕೇಡ್‌ನಲ್ಲಿ ಶುಕ್ರವಾರ ರೈತರು ಸರದಿಯಲ್ಲಿ ನಿಂತಿದ್ದರು

ಶಾಸಕನ ಅಣ್ಣನಿಗೆ ರೈತರ ತರಾಟೆ

ಸವಣೂರು ರೈತ ಸಂಪರ್ಕ ಕೇಂದ್ರದಲ್ಲಿ ಶಾಸಕ ಯಾಸೀರ್ ಅಹ್ಮದ್ ಖಾನ್ ಬದಲು ಬೀಜ ವಿತರಣೆಗೆ ಚಾಲನೆ ನೀಡಿದ ಸಹೋದರ ಮೊಹಮ್ಮದ್ ಮುನ್ನಾ ಪಠಾಣ ಅವರನ್ನು ಸ್ಥಳೀಯ ರೈತರು ತೀವ್ರ ತರಾಟೆಗ ತೆಗೆದುಕೊಂಡರು.

ಶುಕ್ರವಾರ ಬೆಳಿಗ್ಗೆ ಬೀಜ ವಿತರಣೆ ಆರಂಭಿಸಬೇಕಿತ್ತು. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರಕ್ಕೆ ಬಂದಿದ್ದರು. ಶಾಸಕರು ಬರುವವರೆಗೂ ಬೀಜ ನೀಡುವುದಿಲ್ಲವೆಂದು ಹೇಳಿದ ಅಧಿಕಾರಿಗಳು, ಮಧ್ಯಾಹ್ನ 12 ಗಂಟೆಯವರೆಗೂ ರೈತರನ್ನು ಕಾಯುವಂತೆ ಮಾಡಿದರು. ಬಳಿಕ, ಶಾಸಕರ ಬದಲು ಸ್ಥಳಕ್ಕೆ ಬಂದ ಮುನ್ನಾ ಅವರಿಂದಲೇ ಅಧಿಕಾರಿಗಳು ಚಾಲನೆ ಕೊಡಿಸಿದರು. ಸ್ಥಳದಲ್ಲಿದ್ದ ರೈತರು, 'ಶಾಸಕನ ಅಣ್ಣನ ದರ್ಬಾರ್ ನಡೆಯುತ್ತಿದೆ. ಅದಕ್ಕೆ ಅವಕಾಶ ಹೇಗೆ ಕೊಟ್ಟಿದ್ದೀರಾ' ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಇದರಿಂದ ಕೇಂದ್ರದಲ್ಲಿ ಗಲಾಟೆ ನಡೆಯಿತು. ಪೊಲೀಸರು ಪರಿಸ್ಥಿತಿ ತಿಳಿಗೊಳಿಸಿದರು.

> ರೈತರು ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರಕ್ಕೆ ಬರುತ್ತಿರುವುದರಿಂದ ತೊಂದರೆ ಆಗುತ್ತಿದೆ. ಶನಿವಾರ ಎಲ್ಲ ಕೇಂದ್ರಗಳಲ್ಲಿ ಮೂಲ ಸೌಲಭ್ಯ ಕಲ್ಪಿಸಿ ಬೀಜ ವಿತರಿಸಲಾಗುವುದು
>
> **ಮಲ್ಲಿಕಾರ್ಜುನ**, ಜಂಟಿ ನಿರ್ದೇಶಕ, ಕೃಷಿ ಇಲಾಖೆ

ಗೊರುಚಗೆ 'ನಾಲ್ವಡಿ ಕೃಷ್ಣರಾಜ ಒಡೆಯರ್' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 2026ನೇ ಸಾಲಿನ 'ನಾಲ್ವಡಿ ಕೃಷ್ಣರಾಜ ಒಡೆಯರ್' ಪ್ರಶಸ್ತಿಗೆ ಜಾನಪದ ವಿದ್ವಾಂಸ ಗೊ.ರು.ಚನ್ನಬಸಪ್ಪ ಆಯ್ಕೆಯಾಗಿದ್ದಾರೆ.



ಗೊ.ರು. ಚನ್ನಬಸಪ್ಪ

ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಕಂಚಿನ ಫಲಕ ಒಳಗೊಂಡಿದೆ. 82ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಗೊ.ರು.ಚನ್ನಬಸಪ್ಪ ಅವರು, ಈ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಜೂನ್ 2ರಂದು ಸಂಜೆ 5.15ಕ್ಕೆ ಇಲ್ಲಿನ ಕನ್ನಡ ಭವನದಲ್ಲಿರುವ ನಯನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಸಾಹಿತಿ ಹಂಪ ನಾಗರಾಜಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಆರ್.ಕೆ. ನಲ್ಲೂರು ಪ್ರಸಾದ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿತ್ತಾರೆ.

ಕಸಾಪ ಮಾಜಿ ಅಧ್ಯಕ್ಷರಾದ ಹರಿಕೃಷ್ಣ ಪುನರೂರು ಮತ್ತು ಮಾಜಿ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ ಅವರು ಮುಖ್ಯ ಅತಿಥಿಯಾಗಿ ಭಾಗ ವಹಿಸುತ್ತಾರೆ ಎಂದು ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.

ಸಬಲ ಕುಟುಂಬದವರಿಗೆ ಮೀಸಲಾತಿ ಏಕೆ?

ಅಪ್ಪ-ಅಮ್ಮ ಐಎಎಸ್ ಅಧಿಕಾರಿಗಳಾಗಿದ್ದರೂ ಮಕ್ಕಳಿಗೇಕೆ ಮೀಸಲಾತಿ- ಸುಪ್ರೀಂ ಕೋರ್ಟ್ ಪ್ರಶ್ನೆ

ನವದೆಹಲಿ (ಪಿಟಿಐ): ಶೈಕ್ಷಣಿಕ ಮತ್ತು ಆರ್ಥಿಕ ಸಬಲೀಕರಣದ ಜತೆಗೆ ಸಾಮಾಜಿಕ ಚಲನಶೀಲತೆ ಇರುತ್ತದೆ ಎಂಬುದನ್ನು ಹೇಳಿದ ಸುಪ್ರೀಂ ಕೋರ್ಟ್, ಹಿಂದುಳಿದ ವರ್ಗಗಳಿಗೆ ಸೇರಿದ್ದರೂ ಆರ್ಥಿಕ ಮತ್ತು ಶೈಕ್ಷಣಿಕವಾಗಿ ಮುಂದುವರಿದಿರುವ ಕುಟುಂಬಗಳ ಮಕ್ಕಳಿಗೆ ಮೀಸಲಾತಿ ಸೌಲಭ್ಯ ನೀಡುವುದನ್ನು ಶುಕ್ರವಾರ ಪ್ರಶ್ನಿಸಿದೆ.

ಅರ್ಜಿದಾರರ ಇಬ್ಬರೂ ಪೋಷಕರು ರಾಜ್ಯ ಸರ್ಕಾರಿ ನೌಕರರಾಗಿದ್ದು, ಅವರನ್ನು ಮೀಸಲಾತಿಯಿಂದ ಹೊರಗಿಟ್ಟ ಕ್ರಮವನ್ನು ಎತ್ತಿಹಿಡಿದ ಕರ್ನಾಟಕ ಹೈಕೋರ್ಟ್ ತೀರ್ಪನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಈ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರಿದ್ದ ಪೀಠ ನಡೆಸಿತು.

'ಇಬ್ಬರೂ ಪೋಷಕರು ಐಎಎಸ್ ಅಧಿಕಾರಿಗಳಾಗಿರುವಾಗ, ಅವರ ಮಕ್ಕಳಿಗೆ ಮೀಸಲಾತಿ ಏಕೆ ಬೇಕು? ಶೈಕ್ಷಣಿಕ ಮತ್ತು ಆರ್ಥಿಕ ಸಬಲೀಕರಣದೊಂದಿಗೆ ಸಾಮಾಜಿಕ ಚಲನಶೀಲತೆಯೂ ಇರುತ್ತದೆ. ಮಕ್ಕಳಿಗಾಗಿ ಪುನಃ ಮೀಸಲಾತಿ ಕೇಳಿದರೆ, ನಾವು ಎಂದಿಗೂ ಅದರಿಂದ ಹೊರ ಬರುವುದಿಲ್ಲ' ಎಂದು ಪೀಠ ಹೇಳಿತು.

ಮುಖ್ಯಾಂಶಗಳು
- ಕರ್ನಾಟಕ ಹೈಕೋರ್ಟ್ ತೀರ್ಪು ಪ್ರಶ್ನಿಸಿರುವ ಅರ್ಜಿಯ ವಿಚಾರಣೆ
- ಕೆಪಿಟಿಸಿಎಲ್‌ಗೆ ಆಯ್ಕೆ ಆಗಿದ್ದ ಅಭ್ಯರ್ಥಿಯಿಂದ ಮೇಲ್ಮನವಿ
- ಅಭ್ಯರ್ಥಿಯ ಪೋಷಕರು ಕೆನೆಪದರದೊಳಗೆ ಬರುತ್ತಾರೆ

ಮೀಸಲಾತಿಯಿಂದ ಹೊರಬರಬೇಕು: 'ಪೋಷಕರು ಉತ್ತಮ ಉದ್ಯೋಗ ಗಳಲ್ಲಿದ್ದು ಉತ್ತಮ ಆದಾಯ ಹೊಂದಿದ್ದರೆ ಅವರ ಮಕ್ಕಳು ಮೀಸಲಾತಿಯಿಂದ ಹೊರಬರಬೇಕು' ಎಂದು ಪೀಠ ಇದೇ ವೇಳೆ ಉಲ್ಲೇಖಿಸಿತು.

ಶ್ರೀಮಂತ ವರ್ಗಗಳನ್ನು ಮೀಸಲಾತಿ ಸೌಲಭ್ಯಗಳಿಂದ ಹೊರಗಿಡಲು ಸರ್ಕಾರ ಈಗಾಗಲೇ ಹಲವು ಆದೇಶಗಳನ್ನು ಜಾರಿ ಗೊಳಿಸಿದೆ. ಆದರೆ ಈಗ ಅವುಗಳನ್ನು ಪ್ರಶ್ನಿಸಲಾಗುತ್ತಿದೆ ಎಂದೂ ಪೀಠ ಹೇಳಿತು.

ಪ್ರಕರಣದ ವಿವರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ (ಕೆಪಿಟಿಸಿಎಲ್) ಮೀಸಲು ವರ್ಗದ ಅಡಿಯಲ್ಲಿ ಅರ್ಜಿದಾರರನ್ನು ಸಹಾಯಕ ಎಂಜಿನಿಯರ್ (ವಿದ್ಯುತ್) ಹುದ್ದೆಗೆ ಆಯ್ಕೆ ಮಾಡಲಾಗಿತ್ತು.

ಆದರೆ, ಜಿಲ್ಲಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯು ಅವರು ಕೆನೆಪದರದೊಳಗೆ ಬರುತ್ತಾರೆ ಎಂದು ತೀರ್ಮಾನಿಸಿ, ಅವರ ಜಾತಿ ಪ್ರಮಾಣಪತ್ರ ಸಿಂಧುತ್ವವನ್ನು ರದ್ದುಗೊಳಿಸಿತು.

ಅಭ್ಯರ್ಥಿಯ ಇಬ್ಬರೂ ಪೋಷಕರು ಸರ್ಕಾರಿ ನೌಕರರಾಗಿದ್ದು, ಅವರ ಒಟ್ಟು ಆದಾಯವು ನಿಗದಿತ ಕೆನೆಪದರ ಮಿತಿಯನ್ನು (₹ 8 ಲಕ್ಷ) ಮೀರಿದೆ ಎಂದು ಅಧಿಕಾರಿಗಳು ಉಲ್ಲೇಖಿಸಿದ್ದಾರೆ. ಕುರುಬ ಸಮುದಾಯಕ್ಕೆ ಸೇರಿದ್ದ ಅರ್ಜಿದಾರರ ಜಾತಿ ಪ್ರಮಾಣಪತ್ರ ಸಿಂಧುತ್ವ ಈ ಕಾರಣಕ್ಕೆ ರದ್ದುಗೊಂಡಿತ್ತು.

ಕಪ್ಪುಪಟ್ಟಿಯಿಂದ ಶಿಕ್ಷಣ ತಜ್ಞರ ಹಿಂದಕ್ಕೆ ಪಡೆದ ಸುಪ್ರೀಂ



ನವದೆಹಲಿ (ಪಿಟಿಐ): ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಪ್ರಕಟಿಸಿದ್ದ ಪಠ್ಯಪುಸ್ತಕದಲ್ಲಿನ ನ್ಯಾಯಾಂಗದ ಅಧ್ಯಾಯಕ್ಕೆ ಸಂಬಂಧಿಸಿದಂತೆ ಮೂವರು ತಜ್ಞರನ್ನು ಕಪ್ಪುಪಟ್ಟಿಗೆ ಸೇರ್ಪಡೆಗೊಳಿಸಿ ಮಾರ್ಚ್ 11ರಂದು ನೀಡಿದ ಆದೇಶವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಮಾರ್ಪಡಿಸಿದೆ.

'ರಾಜ್ಯ, ಕೇಂದ್ರ ಸರ್ಕಾರ, ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾಲಯಗಳು, ರಾಜ್ಯ, ಕೇಂದ್ರ ಸರ್ಕಾರದ ಅನುದಾನಿತ ಸಂಸ್ಥೆಗಳು ಮಾರ್ಚ್ 11ರಂದು ನೀಡಿದ ಆದೇಶದಿಂದ ಪ್ರಭಾವಿತವಾಗದೇ, ಸ್ವತಂತ್ರ ನಿರ್ಧಾರ ತೆಗೆದುಕೊಳ್ಳಬಹುದು' ಎಂದು ತಿಳಿಸಿದೆ.

ಎನ್‌ಸಿಇಆರ್‌ಟಿ ಪ್ರಕಟಿಸಿದ್ದ 8ನೇ ತರಗತಿಯ ಪಠ್ಯಪುಸ್ತಕದಲ್ಲಿ ನ್ಯಾಯಾಂಗ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಸ್ವಯಂ ಪ್ರೇರಿತವಾಗಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಅದರಲ್ಲಿನ ವಿಷಯಗಳು ನ್ಯಾಯಾಂಗದ ಘನತೆಯನ್ನು ಕುಗ್ಗಿಸುವಂತಿದೆ ಎಂಬುದಾಗಿ ಹೇಳಿತ್ತು. ಈ ಸಂಬಂಧ ಕ್ಷಮೆ ಕೋರಿದ್ದ ಎನ್‌ಸಿಇಆರ್‌ಟಿ ಈ ಪುಸ್ತಕವನ್ನು ಮಾರುಕಟ್ಟೆಯಿಂದ ಹಿಂತೆಗೆದುಕೊಂಡಿತ್ತು.

ಈ ಪಠ್ಯ ರಚನೆಯಲ್ಲಿ ಪಾಲ್ಗೊಂಡು ಅದನ್ನು ಅಂತಿಮಗೊಳಿಸುವಲ್ಲಿ ತೊಡಗಿದ್ದ ತಜ್ಞರಾದ ಪ್ರೊ. ಮೈಕಲ್ ಡ್ಯಾನಿನೊ, ಸುಪರ್ಣ ದಿವಾಕರ್ ಮತ್ತು ಅಲೋಕ್ ಪ್ರಸನ್ನ ಕುಮಾರ್ ಅವರನ್ನು ಭಾರತದಲ್ಲಿ ಯಾವುದೇ ಪಠ್ಯ ಪುಸ್ತಕ ರಚನಾ ಕಾರ್ಯಗಳಿಗೆ ನಿಯೋಜಿಸಬಾರದು ಎಂದು ಸುಪ್ರೀಂ ಕೋರ್ಟ್ ನಿರ್ದೇಶಿಸಿತ್ತು.

ನಾವು ಮೂರು ಮಂದಿಯನ್ನಷ್ಟೆ ಪತ್ತೆ ಹಚ್ಚಿಲ್ಲ. ಇದು ಸಾಮೂಹಿಕ ಪ್ರಕ್ರಿಯೆಯಾಗಿತ್ತು. ಹೀಗಾಗಿ, ತಮ್ಮ ವಿರುದ್ಧ ಮಾಡಿರುವ ನಿರ್ಬಂಧಗಳನ್ನು ಮರು ಪರಿಶೀಲಿಸಬೇಕೆಂದು ಮೂವರು ತಜ್ಞರು ಮನವಿ ಮಾಡಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ, ನ್ಯಾಯಮೂರ್ತಿ ವಿಪುಲ್ ಎಂ. ಪಂಚೋಲಿ ಅವರ ನ್ಯಾಯಪೀಠ, ಮೂವರು ನೀಡಿದ ವಿವರಣೆಯಿಂದ ತೃಪ್ತಿಗೊಂಡಿದ್ದೇವೆ. ಈ ಕುರಿತು ಶಿಕ್ಷಣ ಸಂಸ್ಥೆಗಳು ಸ್ವತಂತ್ರ ನಿರ್ಧಾರ ತೆಗೆದುಕೊಳ್ಳಬಹುದು ಎಂದು ಸ್ಪಷ್ಟಪಡಿಸಿದೆ.

ತ್ರಿಭಾಷೆ: ಮುಂದಿನ ವಾರ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 9ನೇ ತರಗತಿ ವಿದ್ಯಾರ್ಥಿಗಳಿಗೆ ಜುಲೈ 1ರಿಂದ ತ್ರಿಭಾಷಾ ಅಧ್ಯಯನವನ್ನು ಕಡ್ಡಾಯ ಗೊಳಿಸಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯ ಬಗ್ಗೆ ಮುಂದಿನ ವಾರ ವಿಚಾರಣೆ ನಡೆಸಲಾಗುವುದು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ತಿಳಿಸಿದೆ.

ಎರಡು ಭಾರತೀಯ ಸ್ಥಳೀಯ ಭಾಷೆ ಸೇರಿದಂತೆ ಒಟ್ಟು ಮೂರು ಭಾಷೆಗಳನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡುವಂತೆ ಸಿಬಿಎಸ್‌ಇ ಇತ್ತೀಚಿಗೆ ಹೊರಡಿಸಿರುವ ಆದೇಶದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಕೆಯಾಗಿತ್ತು.

ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲರಾದ ಮುಕುಲ್ ರೋಹಟಗಿ ಅವರು, ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರನ್ನೊಳಗೊಂಡ ಪೀಠದ ಮುಂದೆ ಈ ವಿಚಾರವನ್ನು ಪ್ರಸ್ತಾಪಿಸಿದರು.

'ಇದು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಸಲ್ಲಿಸಿರುವ ತುರ್ತು ಸಾರ್ವಜನಿಕ ಹಿತಾಸಕ್ತಿ (ಪಿಐಎಲ್) ಅರ್ಜಿಯಾಗಿದ್ದು, ಶೀಘ್ರವಾಗಿ ಈ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಬೇಕು' ಎಂದು ಕೋರಿದರು.

ರಷ್ಯಾ ಸೇನೆಗೆ 217 ಭಾರತೀಯರು; 49 ಸಾವು: ಕೇಂದ್ರ ಸರ್ಕಾರದ ವರದಿ

ನವದೆಹಲಿ (ಪಿಟಿಐ): ರಷ್ಯಾದ ಸೇನಾ ಪಡೆಗಳನ್ನು 217 ಭಾರತೀಯ ನಾಗರಿಕರು ಸೇರಿರುವ ಮಾಹಿತಿ ಇದ್ದು, ಇದರಲ್ಲಿ 49 ಮಂದಿ ರಷ್ಯಾ ಮತ್ತು ಉಕ್ರೇನ್ ನಡುವೆ ನಡೆಯುತ್ತಿರುವ ಸಂಘರ್ಷದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಶುಕ್ರವಾರ ತಿಳಿಸಿದೆ.

ಸುಪ್ರೀಂ ಕೋರ್ಟ್ ಮುಂದೆ ಯಥಾಸ್ಥಿತಿ ವರದಿಯನ್ನು ಕೇಂದ್ರ ಸರ್ಕಾರ ಸಲ್ಲಿಸಿದೆ. ರಷ್ಯಾದೊಂದಿಗೆ ಭಾರತ ಸರ್ಕಾರ ರಾಜತಾಂತ್ರಿಕ ಮಾತುಕತೆ ನಡೆಸಿ ಸೇನೆ ಸೇರುವ ಒಪ್ಪಂದಕ್ಕೆ ಸಹಿ ಮಾಡಿದ್ದ 139 ಭಾರತೀಯರನ್ನು ಈಗಾಗಲೇ ಬಿಡುಗಡೆ ಮಾಡಿಸಲಾಗಿದೆ ಎಂದು ವರದಿಯಲ್ಲಿ ಹೇಳಿದೆ.

ನೀಟ್: ಪುಣೆಯ ಶಿಕ್ಷಕಿ ಬಂಧಿಸಿದ ಸಿಬಿಐ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನಡೆಸಿದ ನೀಟ್- ಯುಜಿ 2026 ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೌತವಿಜ್ಞಾನದ ಪ್ರಶ್ನೆಪತ್ರಿಕೆ ಸಿದ್ಧಪಡಿಸಿದ ತಂಡದಲ್ಲಿದ್ದ ಪುಣೆಯ ಶಿಕ್ಷಕಿಯನ್ನು ಸಿಬಿಐ ಬಂಧಿಸಿದೆ.

ಪುಣೆಯ ಸೇಠ್ ಹೀರಾಲಾಲ್ ಸರಾಫ್ ಪ್ರಶಾಲಾದ ಶಿಕ್ಷಕಿ ಮನೀಷಾ ಸಂಜಯ್ ಹವಾಲ್ದಾರ್ ಅವರನ್ನು ವಿಚಾರಣೆಯ ನಂತರ ಬಂಧಿಸಲಾಗಿದೆ ಎಂದು ಸಿಬಿಐ ಶುಕ್ರವಾರ ತಿಳಿಸಿದೆ.

ನೀಟ್- ಯುಜಿ 2026 ಪರೀಕ್ಷಾ ಪ್ರಕ್ರಿಯೆಯಲ್ಲಿ ಎನ್‌ಟಿಎ ತಜ್ಞರಾಗಿ ಮನೀಷಾ ಭಾಗಿಯಾಗಿದ್ದು, ಭೌತವಿಜ್ಞಾನದ ಕೆಲವು ಪ್ರಶ್ನೆಗಳನ್ನು ಈಗಾಗಲೇ ಬಂಧಿತಳಾಗಿರುವ ಆರೋಪಿ ಮನೀಷಾ ಮಂಧರೆ ಅವರೊಂದಿಗೆ ಹಂಚಿಕೊಂಡಿದ್ದಾರೆ. ಪ್ರಶ್ನೆಪತ್ರಿಕೆಯಲ್ಲಿ ಬಂದಂತಹ ಪ್ರಶ್ನೆಗಳು ಇವುಗಳೊಂದಿಗೆ ಹೊಂದಿಕೆಯಾಗಿವೆ ಎಂದು ಸಿಬಿಐ ಪ್ರಕಟಣೆಯಲ್ಲಿ ಹೇಳಿದೆ.

ದೆಹಲಿ, ಜೈಪುರ, ಗುರುಗ್ರಾಮ, ನಾಸಿಕ್, ಪುಣೆ, ಲಾತೂರ್, ಅಹಿಲ್ಯಾ ನಗರದ 11 ಮಂದಿಯನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸ ಲಾಗಿದೆ.



ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಉತ್ತರ ಪ್ರದೇಶದ ಲಖನೌದಲ್ಲಿ ಸಮಾಜವಾದಿ ಪಕ್ಷದ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

'ಮರುಪರೀಕ್ಷೆ; ಶೇ 100 ದೋಷಮುಕ್ತ'

ನವದೆಹಲಿ (ಪಿಟಿಐ): 'ನೀಟ್-ಯುಜಿ' ಪರೀಕ್ಷೆಯಲ್ಲಿ ಅಕ್ರಮಗಳು ಕಂಡುಬಂದ ಕಾರಣ, ಸರ್ಕಾರವು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಾಯಿತು. ಪರೀಕ್ಷಾ ಮಾಫಿಯಾದಿಂದ ಒಬ್ಬ ಅರ್ಹ ವಿದ್ಯಾರ್ಥಿಯೂ ಕೂಡ ಸೀಟು ಕಳೆದುಕೊಳ್ಳಲು ಅಧಿಕಾರಿಗಳು ಅವಕಾಶ ನೀಡುವುದಿಲ್ಲ' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಭರವಸೆ ನೀಡಿದ್ದಾರೆ.

'ಇದೇ ಜೂನ್ 21ರಂದು ನಡೆಯಲಿರುವ ಮರುಪರೀಕ್ಷೆಯು ಶೇ 100ರಷ್ಟು ದೋಷರಹಿತವಾಗಿರಲಿದೆ' ಎಂದು ಈ ವೇಳೆ ಖಚಿತಪಡಿಸಿದ್ದಾರೆ.

ಇಲ್ಲಿ ನಡೆದ 'ಜಾಗರಣ ಭಾರತ ಶೈಕ್ಷಣಿಕ ಶೃಂಗಸಭೆ' ಉದ್ದೇಶಿಸಿ ಮಾತನಾಡಿದ ಅವರು, 'ವೈದ್ಯಕೀಯ ಪ್ರವೇಶ ಪರೀಕ್ಷೆಯ ಪ್ರಶ್ನೆಪತ್ರಿಕೆಯ ಸೋರಿಕೆಯಿಂದ 22 ಲಕ್ಷ ವಿದ್ಯಾರ್ಥಿಗಳು ಮಾನಸಿಕ ವೇದನೆಗೆ ಒಳಗಾದರು. ಸರ್ಕಾರವು ಈ ಸಮಸ್ಯೆಯನ್ನು ಬಗೆಹರಿಸಲು ಬದ್ಧವಾಗಿದೆ' ಎಂದು ತಿಳಿಸಿದ್ದಾರೆ.

'ಪರೀಕ್ಷೆ ರದ್ದುಪಡಿಸಿದ್ದರಿಂದ ಮಕ್ಕಳು ತೀವ್ರ ಆಘಾತಕ್ಕೆ ಒಳಗಾದರು. ಅವರ ದುಃಖವನ್ನು ಅರ್ಥಮಾಡಿಕೊಂಡು, ನಾನೇ ಜವಾಬ್ದಾರಿಯನ್ನು ತೆಗೆದುಕೊಂಡಿದ್ದು, ಸರ್ಕಾರವು ಈ ಸಲ ಕಠಿಣ ಕ್ರಮ ಕೈಗೊಂಡಿದೆ' ಎಂದಿದ್ದಾರೆ.

'ಮೇ 3ರಂದು ನಡೆದಿದ್ದ 'ನೀಟ್-ಯುಜಿ' ಪರೀಕ್ಷೆಯನ್ನು ಪ್ರಶ್ನೆಪತ್ರಿಕೆ ಸೋರಿಕೆ ಆರೋಪದ ಕಾರಣ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ರದ್ದುಪಡಿಸಿತ್ತು. ಈ ಕುರಿತು ಸಿಬಿಐ ತನಿಖೆ ನಡೆಸುತ್ತಿದೆ. ಕೆಲವು ವ್ಯವಸ್ಥೆಯಲ್ಲಿ ದೋಷ ಕಂಡುಬಂದ ಕಾರಣ ಈ ನಿರ್ಧಾರ ತೆಗೆದುಕೊಳ್ಳಲಾಗಿತ್ತು' ಎಂದು ಪ್ರಧಾನ್ ತಿಳಿಸಿದರು.

ಕುಸ್ತಿ ತಾರೆ ವಿನೇಶ್‌ರನ್ನು ಅನರ್ಹಗೊಳಿಸಿದ ನಿರ್ಧಾರ
ಫೆಡರೇಷನ್‌ಗೆ ದೆಹಲಿ ಹೈಕೋರ್ಟ್ ತರಾಟೆ

ನವದೆಹಲಿ (ಪಿಟಿಐ): ಒಲಿಂಪಿಯನ್ ಕುಸ್ತಿ ತಾರೆ ವಿನೇಶ್ ಫೋಗಟ್ ಅವರನ್ನು ದೇಶಿ ಸ್ಪರ್ಧೆಗಳಲ್ಲಿ ಭಾಗವಹಿಸದಂತೆ ಅನರ್ಹಗೊಳಿಸಿರುವ ನಿರ್ಧಾರಕ್ಕೆ ದೆಹಲಿ ಹೈಕೋರ್ಟ್ ಶುಕ್ರವಾರ ಭಾರತ ಕುಸ್ತಿ ಫೆಡರೇಷನ್ ಅನ್ನು (ಡಬ್ಲ್ಯುಎಫ್‌ಐ) ತರಾಟೆಗೆ ತೆಗೆದುಕೊಂಡಿದೆ. ವಿನೇಶ್ ಅವರು ಈ ತಿಂಗಳ ಕೊನೆಯಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸಬಹುದೇ ಎಂಬ ಬಗ್ಗೆ ಆದೇಶ ಹೊರಡಿಸುವುದಾಗಿಯೂ ನ್ಯಾಯಾಲಯ ತಿಳಿಸಿತು.

ಟೂರ್ನಿಗಳಲ್ಲಿ ಭಾಗವಹಿಸ ಬಹುದೆಂದು ವಿಶ್ವ ಕುಸ್ತಿ ಸಂಸ್ಥೆಯು (ಯುನೈಟೆಡ್ ವರ್ಲ್ಡ್ ರೆಸ್ಲಿಂಗ್) ವಿನೇಶ್ ಅವರಿಗೆ ಅನುಮತಿ ನೀಡಿದ್ದರೂ, ಫೆಡರೇಷನ್ ಅವಕಾಶ ನಿರಾಕರಿಸುತ್ತಿದೆ. ಹಿಂದಿನ ಸಾಧನೆಗಳ ಆಧಾರದಲ್ಲಿ ಖ್ಯಾತನಾಮ ಕುಸ್ತಿಪಟುಗಳಿಗೆ ಅವಕಾಶ ನೀಡುವ ಸಂಪ್ರದಾಯದಿಂದ ಫೆಡರೇಷನ್ ವಿಮುಖವಾಗುವುದನ್ನು ಇದು ತೋರಿಸುತ್ತಿದೆ ಎಂದು ನ್ಯಾಯಮೂರ್ತಿಗಳಾದ ಡಿ.ಕೆ. ಉಪಾಧ್ಯಾಯ ಮತ್ತು ತೇಜಸ್ ಕಾರಿಯಾ ಅವರಿದ್ದ ಪೀಠವು ಅಭಿಪ್ರಾಯಪಟ್ಟಿತು.



ವಿನೇಶ್ ಫೋಗಟ್

ಮಾತೃತ್ವ ವಿರಾಮ ಪಡೆದು ಪುನರಾಗಮನ ಮಾಡುತ್ತಿರುವ ವಿನೇಶ್ ಅಂತರ ರಾಷ್ಟ್ರೀಯ ಕುಸ್ತಿಪಟು ವಾಗಿದ್ದಾರೆ. ತಾಯಿ ಆಗಿದ್ದಾರೆನ್ನುವ ಕಾರಣಕ್ಕೆ ವಿನೇಶ್ ಅವರನ್ನು ಈ ರೀತಿ ನಡೆಸಿ ಕೊಳ್ಳುವುದು ಸರಿಯಲ್ಲ ಎಂದೂ ಹೇಳಿತು. 'ಆಯ್ಕೆ ಮಾನದಂಡವು ತಾಯಿ ಆದವರನ್ನು ಹೊರಗಿಡುವುದಿಲ್ಲ. ಸಮಸ್ಯೆ ಉದ್ಭವವಾಗಿರುವುದು ವಿನೇಶ್ ಫೋಗಟ್ ಅವರ ನಿವೃತ್ತಿ ನಿರ್ಧಾರದಿಂದ' ಎಂದು ಫೆಡರೇಷನ್ ವಕೀಲರು ಸ್ಪಷ್ಟಪಡಿಸಿದರು.

ಫೆಡರೇಷನ್‌ನ ನಿಯಮದಿಂದಾಗಿ ಅವರು ಸ್ಪರ್ಧೆಯಿಂದ ಹೊರಗುಳಿ ಯುವಂತಾಗಿದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿತು. ಕ್ರೀಡಾಪಟು ವೊಬ್ಬರು ಟೂರ್ನಿಯ ಸಿದ್ಧತೆಯ ಕಡೆಗಷ್ಟೇ ಗಮನ ಹರಿಸಬೇಕು. ಕೋರ್ಟ್ ಕೇಸ್ ಗಳತ್ತ ಅಲ್ಲ ಎಂದೂ ಹೇಳಿತು.

ಫೋಗಟ್ ಅವರು ಆಯ್ಕೆ ಟ್ರಯಲ್ಸ್‌ನಲ್ಲಿ ಯಶಸ್ಸು ಗಳಿಸಿದರೆ, ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಲು ಭಾರತ ಕ್ರೀಡಾ ಪ್ರಾಧಿಕಾರವು ರೂಪಿಸಿರುವ ಚೌಕಟ್ಟಿನಿಂದ ಅವರಿಗೆ ರಿಯಾಯಿತಿ ನೀಡಬಹುದಾಗಿದೆ. ಆದರೆ ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸಲು ಇರುವ ಮಾನದಂಡಗಳಿಗೆ ಫೆಡರೇಷನ್ ಮಾತ್ರ ರಿಯಾಯಿತಿ ನೀಡಬೇಕಾಗುತ್ತದೆ' ಎಂದು ಕೇಂದ್ರ ಸರ್ಕಾರದ ವಕೀಲರು ತಿಳಿಸಿದರು.

ಈ ಪ್ರಕರಣವನ್ನು ಸೋಮವಾರಕ್ಕೆ ಪಟ್ಟಿ ಮಾಡುವಂತೆ ಮತ್ತು ಫೆಡರೇಷನ್‌ಗೆ ಮನವಿ ಸಲ್ಲಿಸಲು ವಿನೇಶ್ ಅವರಿಗೆ ಸೂಚಿಸುವಂತೆ ಡಬ್ಲ್ಯುಎಫ್‌ಐ ವಕೀಲರು ನ್ಯಾಯಾಲಯಕ್ಕೆ ವಿನಂತಿಸಿದರು. ಆದರೆ, ನಾವು ಆದೇಶ ಹೊರಡಿಸುತ್ತೇವೆ ಎಂದು ಪೀಠವು ತಿಳಿಸಿತು.

ಎವರೆಸ್ಟ್: ಇಬ್ಬರು ಭಾರತೀಯರ ಸಾವು

ಕಠ್ಮಂಡು (ಪಿಟಿಐ): ಮೌಂಟ್ ಎವರೆಸ್ಟ್ ಏರಿದ್ದ ಇಬ್ಬರು ಭಾರತೀಯರು ಕೆಳಗೆ ಇಳಿಯುವಾಗ ಮೃತಪಟ್ಟಿದ್ದಾರೆ.

'ಅರುಣ್ ಕುಮಾರ್ ತಿವಾರಿ ಮತ್ತು ಸಂದೀಪ್ ಅರೆ ಅವರು ಶಿಖರದಿಂದ ಇಳಿಯುತ್ತಿದ್ದಾಗ ತುಂಬಾ ಸುಸ್ತಾಗಿದ್ದರು. ಅವರ ಮಾರ್ಗದರ್ಶಕರು ತುಂಬಾ ಪ್ರಯತ್ನಪಟ್ಟರು ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗಿಲ್ಲ' ಎಂದು ನೇಪಾಳದ ಶಿಖರ ಯಾತ್ರೆ ನಿರ್ವಾಹಕರ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ರಿಶಿ ರಾಮ್ ಭಂಡಾರಿ ಅವರು ಶುಕ್ರವಾರ ತಿಳಿಸಿದ್ದಾರೆ.

'ತಿವಾರಿ ಅವರು ಶಿಖರದ ತುತ್ತತುದಿಗಿಂತ ಸ್ವಲ್ಪ ಕೆಳಗೆ 'ಹಿಲರಿ ಸ್ಟೆಪ್' ಬಳಿ ಗುರುವಾರ ಸಂಜೆ ಮೃತಪಟ್ಟರು. ಅರೆ ಅವರು ಶಿಬಿರದಲ್ಲಿ ಮೃತಪಟ್ಟರು' ಎಂದು ಶಿಖರ ಯಾತ್ರೆಯನ್ನು ಆಯೋಜಿಸಿದ್ದ



ಪಯೋನಿರ್ ಅಡ್ವೆಂಚರ್ಸ್ ನಿರ್ದೇಶಕ ನಿವೇಶ್ ಕರ್ಕಿ ಅವರು ತಿಳಿಸಿದ್ದಾರೆ.

ಸಂದೀಪ್ ಅರೆ ಅವರು ಬುಧವಾರ ಮತ್ತು ತಿವಾರಿ ಅವರು ಗುರುವಾರ ಎವರೆಸ್ಟ್ ಶಿಖರವನ್ನು ತಲುಪಿದ್ದರು.

ಅರೆ ಅವರು, ಏಕಕಾಲಕ್ಕೆ 274 ಮಂದಿ ಮೌಂಟ್ ಎವರೆಸ್ಟ್ ಏರುವ ಮೂಲಕ ಗುರುವಾರ ಹೊಸ ದಾಖಲೆ ಮಾಡಿದ್ದ ತಂಡದ ಭಾಗವಾಗಿದ್ದರು.

ಈ ಅವಧಿಯಲ್ಲಿ ಎವರೆಸ್ಟ್‌ನಲ್ಲಿ ಮೃತರಾದವರ ಸಂಖ್ಯೆ ಐದಕ್ಕೆ ಏರಿಕೆಯಾಗಿದೆ.

ಒಳನುಸುಳುವಿಕೆ ತಡೆಗೆ 'ಸ್ಮಾರ್ಟ್ ಬಾರ್ಡರ್'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ (ಪಿಟಿಐ): ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳೊಂದಿಗೆ ಭಾರತವು ಹಂಚಿಕೊಂಡಿರುವ ಆರು ಸಾವಿರ ಕಿ.ಮೀ ಗಡಿ ಉದ್ದಕ್ಕೂ 'ಸ್ಮಾರ್ಟ್ ಬಾರ್ಡರ್' ಯೋಜನೆಯನ್ನು ಕೇಂದ್ರ ಸರ್ಕಾರವು ಮುಂದಿನ ವರ್ಷದಿಂದ ಆರಂಭಿಸಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಹೇಳಿದರು.

ಈ ಯೋಜನೆಯಿಂದ ಒಳನುಸುಳು ಕೋರರಿಗೆ ಗಡಿದಾಟಿ ಬರುವುದು ಅಸಾಧ್ಯವಾಗಲಿದೆ ಮತ್ತು ಕೆಲವು ಪ್ರದೇಶಗಳಲ್ಲಿ ಜನಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವ 'ಪಿತೂರಿ'ಯು ಕೊನೆಗೊಳ್ಳಲಿದೆ ಎಂದು ಹೇಳಿದರು.

ಗಡಿ ಭದ್ರತಾ ಪಡೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕೇಂದ್ರ ಸರ್ಕಾರವು ಪ್ರತಿಯೊಬ್ಬ ಒಳನುಸುಳುಕೋರನನ್ನೂ ಪತ್ತೆ ಮಾಡಿ ದೇಶದಿಂದ ಹೊರದಬ್ಬಲಿದೆ' ಎಂದು ಒತ್ತಿ ಹೇಳಿದರು.

ಮುಖ್ಯಾಂಶಗಳು
- ತಂತ್ರಜ್ಞಾನ ಚಾಲಿತ ವ್ಯವಸ್ಥೆ
- ಒಳನುಸುಳುವಿಕೆ ತಡೆಗೆ ಸಮಗ್ರ ಯೋಜನೆ
- ಡ್ರೋನ್, ರೇಡಾರ್, ಅತ್ಯಾಧುನಿಕ ಕ್ಯಾಮೆರಾ ಬಳಕೆ

'ಬಿಎಸ್‌ಎಫ್‌ನ 60ನೇ ವರ್ಷಾಚರಣೆ ವೇಳೆ 'ಸ್ಮಾರ್ಟ್ ಬಾರ್ಡರ್' ಯೋಜನೆ ಆರಂಭ ವಾಗಲಿದೆ. ಪಾಕಿಸ್ತಾನ ಮತ್ತು ಬಾಂಗ್ಲಾದೇಶದೊಂದಿಗೆ ಭಾರತ ಹಂಚಿಕೊಂಡಿರುವ ಗಡಿಯನ್ನು ಅಬೇಧ್ಯಗೊಳಿಸು ತ್ತೇವೆ ಎಂದು ಭರವಸೆ ನೀಡುತ್ತೇನೆ' ಎಂದರು.

'ಸ್ಮಾರ್ಟ್ ಬಾರ್ಡರ್ ಯೋಜನೆಯು ನೂತನ ತಂತ್ರಜ್ಞಾನ, ಡ್ರೋನ್‌ಗಳು, ರೇಡಾರ್‌ಗಳು ಮತ್ತು ಸ್ಮಾರ್ಟ್ ಕ್ಯಾಮೆರಾ ಗಳನ್ನು ಒಳಗೊಂಡಿರುತ್ತದೆ. ಈ ವಿಚಾರವಾಗಿ ಸಮಗ್ರ ವಿನ್ಯಾಸವನ್ನು ಗೃಹ ಇಲಾಖೆಯು ಸಿದ್ಧಪಡಿಸಿದ್ದು, ಶೀಘ್ರವೇ ಅದನ್ನು ದೇಶದ ಮುಂದೆ ಅನಾವರಣ ಗೊಳಿಸಲಿದೆ' ಎಂದು ತಿಳಿಸಿದರು.



ಅಮಿತ್ ಶಾ

ತ್ರಿಪುರ, ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಸರ್ಕಾರವು ಅಧಿಕಾರದಲ್ಲಿದ್ದು, ಅಲ್ಲಿನ ಮುಖ್ಯಮಂತ್ರಿಗಳೊಂದಿಗೆ ಒಳ ನುಸುಳುವಿಕೆಯ ತಡೆ ಗಟ್ಟುವಿಕೆಗೆ ಸಂಬಂಧಿಸಿ ದಂತೆ ಶೀಘ್ರ ಮಾತುಕತೆ ನಡೆಸುತ್ತೇವೆ ಎಂದರು.

'ಗ್ರಾಮ ಅಧಿಕಾರಿಗಳು, ಸ್ಥಳೀಯ ಪೊಲೀಸರು, ಜಿಲ್ಲಾಧಿಕಾರಿ ಗಳು, ಪೊಲೀಸ್ ವರಿಷ್ಠಾಧಿಕಾರಿ ಗಳೊಂದಿಗೆ ಬಿಎಸ್‌ಎಫ್ ಸಿಬ್ಬಂದಿ ನಿರಂತರ ಸಂಪರ್ಕದಲ್ಲಿರಬೇಕು. ಒಳನುಸುಳು ಕೋರ ಯಾರು ಎಂಬುದು ಅವರಿಗೂ ತಿಳಿಯಬೇಕು. ಈ ಮೂಲಕ ನುಸುಳುಕೋರರ ಎಲ್ಲ ಮಾರ್ಗಗಳನ್ನು ಮುಚ್ಚಬೇಕು' ಎಂದು ಒತ್ತಿ ಹೇಳಿದರು.

ಜೋಸೆಫ್ ವಿಜಯ್ ಸಂಪುಟ ವಿಸ್ತರಣೆ ವಿಸಿಕೆ, ಐಯುಎಂಎಲ್ ಸೇರ್ಪಡೆ

ಚೆನ್ನೈ (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು ಶುಕ್ರವಾರ ತಮ್ಮ ಸಂಪುಟ ವಿಸ್ತರಣೆ ಮಾಡಿದರು. ಐಯುಎಂಎಲ್ ಪಕ್ಷದ ಎ.ಎಮ್. ಶಹಜಹಾನ್, ವಿಸಿಕೆ ಪಕ್ಷದ ವಣ್ಣಿಅರಸು ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಲೋಕಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ನೂತನ ಸಚಿವರಿಗೆ ಅಧಿಕಾರ ಗೋಪ್ಯತೆ ಬೋಧಿಸಿದರು.

ಇಬ್ಬರು ಶಾಸಕರ ಸೇರ್ಪಡೆ ಮೂಲಕ ವಿಜಯ್ ಅವರ ಸಂಪುಟ ಪೂರ್ಣ ಪ್ರಮಾಣದಲ್ಲಿ (ಮುಖ್ಯಮಂತ್ರಿ ಸೇರಿ 35ಮಂದಿ) ರಚನೆ ಆದಂತಾಗಿದೆ.

ಎನ್‌ಎಂಡಿಸಿಯಿಂದ ಬೇಸಿಗೆ ಶಿಬಿರ ಆಯೋಜನೆ

ಹೈದರಾಬಾದ್: ಬುಡಕಟ್ಟು ಸಮುದಾಯದ ಮಕ್ಕಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮವು (ಎನ್‌ಎಂಡಿಸಿ) ಜೂನ್ 15ರವರೆಗೆ ಛತ್ತೀಸಗಢದ ದಂತೇವಾಡ ಜಿಲ್ಲೆಯ 17 ಗ್ರಾಮಗಳಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಿದೆ.

ಶಿಬಿರದಲ್ಲಿ ಈ ಭಾಗದ 1,700ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದೆ. ಶಿಬಿರದಲ್ಲಿ ಪ್ರಯೋಗಾತ್ಮಕ ಕಲಿಕೆ, ಕಲಾಕೃತಿಗಳ ರಚನೆ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಒತ್ತು ನೀಡಲಾಗಿದೆ. ಚಟುವಟಿಕೆಗಳು ಈಗಾಗಲೇ ಆರಂಭವಾಗಿದ್ದರೂ ಇನ್ನಷ್ಟು ಹೆಚ್ಚಿಸಲು ಕ್ರಮ ಕೈಗೊಂಡಿದೆ. ಗ್ರಾಮಗಳಲ್ಲಿ ಹಮ್ಮಿಕೊಂಡ ಪ್ರತಿ ಶಿಬಿರದಲ್ಲಿ 30ರಿಂದ 40 ವಿದ್ಯಾರ್ಥಿಗಳು ಭಾಗಿಯಾಗಿದ್ದಾರೆ.

ಶಿಬಿರದಲ್ಲಿ ಮಕ್ಕಳು ನಿತ್ಯ 3-4 ಗಂಟೆಗಳ ಕಾಲ ಓದಿನ ಜೊತೆಗೆ ಕರಕುಶಲ ವಸ್ತುಗಳ ರಚನೆ, ಸಂಗೀತ ಕಾರ್ಯಾಗಾರದಲ್ಲಿ ಭಾಗಿಯಾಗುತ್ತಿದ್ದಾರೆ. ಕಬಡ್ಡಿ, ಕೊಕ್ಕೊ ಆಟದ ಜೊತೆಗೆ ಆರೋಗ್ಯಯುತ ಆಹಾರ ಸೇವಿಸಿ ದಿನದ ಚಟುವಟಿಕೆಯನ್ನು ಕೊನೆಗೊಳಿಸುತ್ತಾರೆ.

ಶಿಕ್ಷಣ ಹಾಗೂ ಸಮುದಾಯದ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ಸಾಮಾಜಿಕ, ಸಾಂಸ್ಕೃತಿಕ ಜಾಗೃತಿಗಾಗಿ ಮಹಿಳಾ ಸಂಸ್ಥೆ ಸಹಯೋಗದೊಂದಿಗೆ ಈ ಶಿಬಿರವನ್ನು ಆಯೋಜಿಸಲಾಗಿದ್ದು, ಮಕ್ಕಳಿಗೆ ಸುರಕ್ಷಿತ ವಾತಾವರಣ ನಿರ್ಮಿಸುವ ಜೊತೆಗೆ ಬಸ್ತರ್ ಪ್ರಾಂತ್ಯವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಉದ್ದೇಶ ಹೊಂದಿದೆ.



ಛತ್ತೀಸಗಢದ ದಂತೇವಾಡದಲ್ಲಿ ಎನ್‌ಎಂಡಿಸಿಯಿಂದ ಆಯೋಜಿಸಿದ್ದ ಬೇಸಿಗೆ ಶಿಬಿರದಲ್ಲಿ ಮಕ್ಕಳು ಕಲಾಕೃತಿಗಳ ರಚನೆಯಲ್ಲಿ ತೊಡಗಿದ್ದರು

ರಚನಾತ್ಮಕ ಕಲಿಕೆಗೆ ಗ್ರಾಮೀಣ ಭಾಗದಲ್ಲಿ ಸೀಮಿತವಾದ ಅವಕಾಶಗಳಿದ್ದು, ತಳಮಟ್ಟದಲ್ಲಿ ಜನರ ಆಕಾಂಕ್ಷೆಗಳನ್ನು ನೆರವೇರಿಸುವ ನಿಟ್ಟಿನಲ್ಲಿ ಎನ್‌ಎಂಡಿಸಿ ಸಂಸ್ಥೆಯು ಸೇತುವೆಯಾಗಿ ಕೆಲಸ ಮಾಡುತ್ತಿದೆ. ಗ್ರಾಮದ ಸರ್ವತೋಮುಖ ಅಭಿವೃದ್ಧಿಯ ಜೊತೆಗೆ ಸೌಲಭ್ಯ ವಂಚಿತ ಮಕ್ಕಳಲ್ಲಿ ಕೌಶಲ ಬೆಳೆಸಿ, ಯುವ ಸಮುದಾಯದಲ್ಲಿ ಆತ್ಮ ವಿಶ್ವಾಸ ಬೆಳೆಸಲು ಶ್ರಮಿಸುತ್ತಿದೆ.

ಶಿಬಿರ ಆಯೋಜಿಸಿದ ಬಳಿಕ ಗ್ರಾಮಸ್ಥರು ಕೂಡ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಮಕ್ಕಳ ಕುಟುಂಬಸ್ಥರು, ಸಮುದಾಯವನ್ನು ಸೇರಿಸಿಕೊಂಡು ದಂತೇವಾಡದಲ್ಲಿ ಉತ್ಸಾಹಭರಿತ ಬೇಸಿಗೆ ಶಿಬಿರ ನಡೆಸುವ ಗುರಿ ಹೊಂದಿದೆ.

ಮುಖ್ಯಾಂಶಗಳು
- ಶಿಬಿರದಲ್ಲಿ 1,700 ವಿದ್ಯಾರ್ಥಿಗಳು ಭಾಗಿಯಾಗುವ ನಿರೀಕ್ಷೆ
- ಯುವ ಸಮುದಾಯಕ್ಕೆ ಕೌಶಲ ಕಲಿಕೆಗೆ ಅವಕಾಶ

ಅಶಿಸ್ತು: ಸೇನೆಯ ಮೂವರು ವಜಾ

ನವದೆಹಲಿ (ಪಿಟಿಐ): ಮಿಲಿಟರಿ ಸಮವಸ್ತ್ರದಲ್ಲೇ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಸೇನೆಯು, ಅಶಿಸ್ತಿನ ನಡವಳಿಕೆಯ ಆಧಾರದ ಮೇಲೆ ಮೂವರನ್ನು ಸೇವೆಯಿಂದ ಶುಕ್ರವಾರ ವಜಾಗೊಳಿಸಿದೆ.

ಚಂದು ಚವಾಣ್, ಹರೇಂದ್ರ ಯಾದವ್, ಪಿ. ನರೇಂದರ್ ವಜಾ ಗೊಂಡವರು. ಮತ್ತೊಬ್ಬರು ಶಂಕರ್ ಸಿಂಗ್ ಗುಜ್ಜರ್. ಗುಜ್ಜರ್ ಈಗಾಗಲೇ ಸೇನೆಯಿಂದ ಹೊರಗಿದ್ದಾರೆ.

ಯುಎಪಿಎ: ವಿಸ್ತೃತ ಪೀಠಕ್ಕೆ ಶಿಫಾರಸು

ಒಂದನೇ ಪುಟದಿಂದ...

ದೆಹಲಿ ಗಲಭೆ ಪ್ರಕರಣದಲ್ಲಿ ಬಂಧಿತರಾಗಿದ್ದ ಏಳು ಮಂದಿಯ ಪೈಕಿ ಗುಲ್‌ಫಿಶಾ ಫಾತಿಮಾ ಸೇರಿ ದಂತೆ ಐವರು ಆರೋಪಿಗಳಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿದೆ. ಆದರೆ, ಅದೇ ಪ್ರಕರಣದ ಆರೋಪಿಗಳಾದ ಉಮರ್ ಖಾಲಿದ್, ಶಾರ್ಜೀಲ್ ಇಮಾಮ್ ಅವರಿಗೆ ಜಾಮೀನು ನಿರಾಕರಿಸಲಾಗಿತ್ತು.

ಉಮರ್ ಖಾಲಿದ್ ಮತ್ತು ಶಾರ್ಜೀಲ್ ಇಮಾಮ್ ಅವರಿಗೆ ಜಾಮೀನು ತಿರಸ್ಕರಿಸುವಾಗ ಬೇರೆ, ಬೇರೆ ನ್ಯಾಯಾಲಯಗಳು, ನ್ಯಾಯ ಪೀಠಗಳು ವ್ಯಕ್ತಪಡಿಸಿರುವ ಆಕ್ಷೇಪಣೆ ಗಳನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಪರಿಶೀಲಿಸಿದೆ. ಈ ಪೀಠಗಳು ನೀಡಿರುವ ತೀರ್ಪನ್ನು ಸುಪ್ರೀಂ ಕೋರ್ಟ್ ವಿಶ್ಲೇಷಿಸುವುದಿಲ್ಲ. ಆದರೆ, ತೀರ್ಪು ಉನ್ನತ ಸಾಂಸ್ಥಿಕ ವಿಧಾನ ಹೊಂದಿರ ಬೇಕು. ಎರಡು ಸಮನ್ವಯ ಪೀಠಗಳ ನಡುವಿನ ಭಿನ್ನ ಮತದ ತೀರ್ಪು ಅಸಾಮಾನ್ಯವೂ ಅಲ್ಲ, ಅನಪೇಕ್ಷಿತವೂ ಅಲ್ಲ' ಎಂದು ನ್ಯಾಯಪೀಠ ಹೇಳಿದೆ. ವಿಸ್ತೃತ ಪೀಠ ರಚನೆಗಾಗಿ ಈ ವಿಷಯ ವನ್ನು ಮುಖ್ಯ ನ್ಯಾಯಮೂರ್ತಿಯವರ ಮುಂದೆ ಇಡಬೇಕು ಎಂದೂ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ನಜೀಬ್ ಪ್ರಕರಣ: 2021ರಲ್ಲಿ ಕೆ.ಎ.ನಜೀಬ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠವು ಮಹತ್ವದ ಆದೇಶ ನೀಡಿತ್ತು. ಯುಎಪಿಎ ಪ್ರಕರಣದ ಜಾಮೀನು ಅರ್ಜಿಗೆ ಸಂಬಂಧಿಸಿದ ವಿಚಾರಣೆ ನಿಗದಿತ ಅವಧಿಯಲ್ಲಿ ಮುಗಿಯುವು ದಿಲ್ಲ ಎನ್ನುವುದಾದರೆ ಅಥವಾ ಆರೋಪಿ ಈಗಾಗಲೇ ಗರಿಷ್ಠ ಅವಧಿಯ ಜೈಲು ಶಿಕ್ಷೆ ಅನುಭವಿಸಿದ್ದರೆ ಜಾಮೀನು ನೀಡಬಹುದು ಎಂದಿತ್ತು. ಆದರೆ, ಈ ಆದೇಶವನ್ನು ವಿವಿಧ ನ್ಯಾಯಾಲಯಗಳಲ್ಲಿ ಮತ್ತು ಪೀಠಗಳಲ್ಲಿ ಭಿನ್ನವಾಗಿ ವ್ಯಾಖ್ಯಾನಿಸಲಾಗುತ್ತಿದೆ. ಈ ಅಂಶಗಳನ್ನು ವಿಸ್ತೃತ ಪೀಠ ಪರಿಶೀಲನೆಗೆ ಒಳಪಡಿಸಲಿದೆ.

ಖಾಲಿದ್‌ಗೆ ಮಧ್ಯಂತರ ಜಾಮೀನು

ಒಂದನೇ ಪುಟದಿಂದ...

'ಖಾಲಿದ್ ಸಲ್ಲಿಸಿದ್ದ ನಿಯಮಿತ ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ಜನವರಿ 5ರಂದು ತಿರಸ್ಕರಿಸಿರುವುದು ಗಮನದಲ್ಲಿದೆ. ಆದರೆ, ಸಹಾನು ಭೂತಿಯ ದೃಷ್ಟಿಯಿಂದ ಅವರ ಮನವಿಯನ್ನು ಹೈಕೋರ್ಟ್ ಪುರಸ್ಕರಿಸಿದೆ. ಈ ಮೂರು ದಿನ ಅವರು ತಾಯಿಯೊಂದಿಗೆ ಮಾತ್ರ ಕಳೆಯಬೇಕು' ಎಂದು ಪೀಠ ಹೇಳಿದೆ.

ದೆಹಲಿ ಪೊಲೀಸರ ಪರವಾಗಿ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ ರಾಜು ಅವರು, 'ಖಾಲಿದ್ ಅವರ ತಾಯಿ ಶಸ್ತ್ರಚಿಕಿತ್ಸೆಗೆ ಒಳಪಡುತ್ತಿದ್ದು, ಅವರನ್ನು ಭೇಟಿಯಾಗಲು ಖಾಲಿದ್‌ಗೆ ಪೊಲೀಸ್ ಭದ್ರತೆ ಯಲ್ಲಿ ಅವಕಾಶ ನೀಡಬೇಕು' ಎಂದು ಮನವಿ ಮಾಡಿಕೊಂಡಿದ್ದರು.

ವಿಚಾರಣಾ ನ್ಯಾಯಾಲಯದ ಎದುರು ಖಾಲಿದ್ 15 ದಿನಗಳ ಮಧ್ಯಂತರ ಜಾಮೀನಿಗಾಗಿ ಮನವಿ ಮಾಡಿಕೊಂಡಿದ್ದರು. ನ್ಯಾಯಾಲಯ ಅದನ್ನು ಮೇ 19ರಂದು ತಿರಸ್ಕರಿಸಿತ್ತು. ಇದರ ವಿರುದ್ಧ ಅವರು ದೆಹಲಿ ಹೈಕೋರ್ಟ್ ಮೊರೆ ಹೋಗಿದ್ದರು.

ಪ್ರಕರಣವನ್ನು ಸಿಬಿಐಗೆ ವಹಿಸಲು ಪ್ರಸ್ತಾವ ಸಲ್ಲಿಸಿದ ಮಧ್ಯಪ್ರದೇಶ ಸರ್ಕಾರ

ಟ್ವಿಶಾ ಪ್ರಕರಣ: ಪತಿ ಸಮರ್ಥ್ ಬಂಧನ

ಭೋಪಾಲ್/ಜಬಲಪುರ (ಪಿಟಿಐ): ನಟಿ ಟ್ವಿಶಾ ಶರ್ಮಾ ಸಾವಿನ ಪ್ರಕರಣ ಸಂಬಂಧ, ಪತಿ ಸಮರ್ಥ್ ಸಿಂಗ್ ಅವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಸಮರ್ಥ್ ಅವರು ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯನ್ನು ಹಿಂಪಡೆದ ಬಳಿಕ, ಶರಣಾಗತಿಯಾಗುವ ಉದ್ದೇಶದಿಂದ ಜಬಲಪುರ ಜಿಲ್ಲಾ ನ್ಯಾಯಾಲಯಕ್ಕೆ ಸಂಜೆ ಬಂದಾಗ ಓಮತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಳೆದ ವಾರ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ್ದರಿಂದ ಹೈಕೋರ್ಟ್‌ಗೆ ಗುರುವಾರ ಅರ್ಜಿ ಸಲ್ಲಿಸಿದ್ದರು.

ಸಿಬಿಐಗೆ ವಹಿಸಲು ಪ್ರಸ್ತಾವ: ಈ ಪ್ರಕರಣವನ್ನು ಸಿಬಿಐಗೆ ವರ್ಗಾಯಿಸಲು ಮಧ್ಯಪ್ರದೇಶ ಸರ್ಕಾರ ಪ್ರಸ್ತಾವ ಸಲ್ಲಿಸಿದೆ.



ಸಮರ್ಥ್, ಟ್ವಿಶಾ ಶರ್ಮಾ

ಗೃಹ ಇಲಾಖೆಯ ಕಾರ್ಯದರ್ಶಿ ಕೃಷ್ಣವೇಣಿ ದೇಸಾವಟು ಅವರು ಈ ಬಗ್ಗೆ ಅಧಿಸೂಚನೆ ಹೊರಡಿಸಿದ್ದಾರೆ.

ಭೋಪಾಲ್‌ನ ಕತಾರ ಹಿಲ್ಸ್ ಪ್ರದೇಶದಲ್ಲಿರುವ ಮನೆಯಲ್ಲಿ ಟ್ವಿಶಾ ಅವರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಮೇ 12ರಂದು ಪತ್ತೆಯಾಗಿತ್ತು.

ಟ್ವಿಶಾ ಅವರ ಪತಿ ಸಮರ್ಥ್ ಸಿಂಗ್ ಮತ್ತು ಅತ್ತೆ, ನಿವೃತ್ತ ನ್ಯಾಯಾಧೀಶರಾದ ಗಿರಿಬಾಲಾ ಸಿಂಗ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 80(2), 85, ಮತ್ತು 3(5) ಹಾಗೂ ವರದಕ್ಷಿಣೆ ನಿಷೇಧ ಕಾಯ್ದೆಯ ಸಂಬಂಧಿತ ಸೆಕ್ಷನ್‌ಗಳಡಿ ಕತಾರ ಹಿಲ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು.


'ವರದಕ್ಷಿಣೆ ಕಿರುಕುಳ ನೀಡಿ ಆಕೆಯನ್ನು ಕೊಲೆ ಮಾಡಲಾಗಿದೆ' ಎಂದು ಟ್ವಿಶಾ ಅವರ ಪೋಷಕರು ಆರೋಪಿಸಿದ್ದರು. 'ಸೊಸೆಯು ಮಾದಕ ವಸ್ತುವಿನ ವ್ಯಸನಿಯಾಗಿದ್ದಳು' ಎಂದು ಸಿಂಗ್ ದಂಪತಿ ದೂರಿದ್ದರು.

2ನೇ ಬಾರಿ ಮರಣೋತ್ತರ ಪರೀಕ್ಷೆಗೆ ಅನುಮತಿ

ಟ್ವಿಶಾ ಶರ್ಮಾ ಅವರ ಶವವನ್ನು ಎರಡನೇ ಬಾರಿ ಮರಣೋತ್ತರ ಪರೀಕ್ಷೆ ನಡೆಸಲು ಮಧ್ಯಪ್ರದೇಶ ಹೈಕೋರ್ಟ್ ಶುಕ್ರವಾರ ಅನುಮತಿ ನೀಡಿದೆ.

'ಟ್ವಿಶಾ ಅವರ ತಂದೆ ನವನಿಧಿ ಶರ್ಮಾ ಅವರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಪುರಸ್ಕರಿಸಿದೆ. ದೆಹಲಿಯ ಏಮ್ಸ್ ವೈದ್ಯರ ತಂಡವನ್ನು ಭೋಪಾಲ್‌ಗೆ ಕಳುಹಿಸಲು ವ್ಯವಸ್ಥೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ' ಎಂದು ನವನಿಧಿ ಅವರ ವಕೀಲ ಅಂಕುರ್ ಪಾಂಡೆ ತಿಳಿಸಿದ್ದಾರೆ.

ಎರಡನೇ ಬಾರಿ ಮರಣೋತ್ತರ ಪರೀಕ್ಷೆ ನಡೆಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಕೆಳಹಂತದ ನ್ಯಾಯಾಲಯ ತಿರಸ್ಕರಿಸಿದ ಎರಡು ದಿನಗಳ ನಂತರ ಕುಟುಂಬವು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	23,654
ಇಂದಿನ ಅಂತ್ಯ:	23,719
ದಿನದ ಗರಿಷ್ಠ:	23,835
	64

ಮೊಟ್ಟೆ ಧಾರಣೆ (ಎನ್‌ಇಸಿಸಿ)	
ಬೆಂಗಳೂರು	
100 ಕ್ಕೆ	₹600
12 ಕ್ಕೆ	₹86
ಮೈಸೂರು: 100 ಕ್ಕೆ	₹610

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹248
ಆರ್‌ಎಸ್‌ಎಸ್-5	₹241
ಗುಡ್ ಲಾಟ್	₹208

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹322-713
ದ್ವಿತಳಿ (ಬಿ.ವಿ)	₹465-890

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈಂಡ್)	₹1640 (1640)
ಸೋಯಾ (ರಿಫೈಂಡ್)	₹1510 (1510)
ಸೂರ್ಯಕಾಂತಿ (ರಿಫೈಂಡ್)	₹1650 (1650)
ಪಾಮೋಲಿನ್	₹1495 (1500)

ಮುದ್ರೆಮನೆ ಕಾಫಿ (50 ಕೆ.ಜಿಗೆ)	
ಎಪಿ	₹23000
ಎಸಿ	₹13000
ಆರ್‌ಪಿ	₹18200
ಆರ್‌ಸಿ	₹9700

60 ಟನ್ ವಿದೇಶಿ ಅಡಿಕೆ ವಶ

ನವದೆಹಲಿ (ಪಿಟಿಐ): ಈಶಾನ್ಯ ಭಾರತದಲ್ಲಿ ಅಕ್ರಮವಾಗಿ ಸಾಗಿಸಲಾಗುತ್ತಿದ್ದ 60 ಟನ್ ವಿದೇಶಿ ಮೂಲದ ಅಡಿಕೆಯನ್ನು ಕಂದಾಯ ಗುಪ್ತಚರ ನಿರ್ದೇಶನಾಲಯವು (ಡಿಆರ್‌ಐ) ವಶಪಡಿಸಿಕೊಂಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಐವರನ್ನು ಬಂಧಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಶುಕ್ರವಾರ ತಿಳಿಸಿದೆ.

ಮಿಜೋರಾಂ ಮತ್ತು ಅಸ್ಸಾಂನಲ್ಲಿ ಡಿಆರ್‌ಐ ಕಾರ್ಯಾಚರಣೆ ನಡೆಸಿ, ವಶಪಡಿಸಿಕೊಂಡಿದೆ. ಆರಂಭಿಕ ಹಂತದ ತನಿಖೆಯಲ್ಲಿ ಮ್ಯಾನ್ಮಾರ್ ಮತ್ತು ಮಿಜೋರಾಂ ಗಡಿಯ ಮೂಲಕ ಭಾರತಕ್ಕೆ ಕಳ್ಳಸಾಗಣೆ ಮಾಡಲಾಗುತ್ತಿತ್ತು ಎಂದು ತಿಳಿದು ಬಂದಿದೆ.

ನೆರೆಯ ದೇಶಗಳಿಂದ ಅಕ್ರಮವಾಗಿ ಸಾಗಣೆ ಆಗುವ ಈ ಅಡಿಕೆಯಿಂದ ದೇಶದ ಆರ್ಥಿಕತೆಯ ಮೇಲೆ ಪರಿಣಾಮ ಬೀರುವುದಲ್ಲದೆ, ಅಡಿಕೆ ಬೆಳೆಗಾರರಿಗೆ ತೊಂದರೆ ಆಗಲಿದೆ.

ಚಿನ್ನಾಭರಣ ಮಾರಾಟ ಶೇ 15 ಇಳಿಕೆ?

ಹೆಚ್ಚುತ್ತಿರುವ ಚಿನ್ನದ ಬೆಲೆ, ಆಮದು ಸುಂಕದ ಏರಿಕೆಯು ರಿಟೇಲ್ ಮಾರಾಟ ತಗ್ಗಲು ಕಾರಣ: ಕ್ರಿಸಿಲ್ ವರದಿ

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಚಿನ್ನಾಭರಣಗಳ ರಿಟೇಲ್ ಮಾರಾಟವು ದೇಶದಲ್ಲಿ ಶೇ 13ರಿಂದ ಶೇ 15ರಷ್ಟು ಇಳಿಕೆ ಆಗುವ ಸಾಧ್ಯತೆ ಇದೆ ಎಂದು ಕ್ರಿಸಿಲ್ ರೇಟಿಂಗ್ಸ್ ಸಂಸ್ಥೆಯ ವರದಿ ತಿಳಿಸಿದೆ.

ಹೆಚ್ಚುತ್ತಿರುವ ಚಿನ್ನದ ಬೆಲೆ ಮತ್ತು ಇತ್ತೀಚೆಗೆ ಹಳದಿ ಲೋಹದ ಆಮದು ಮೇಲೆ ವಿಧಿಸಿರುವ ಸುಂಕದ ಹೆಚ್ಚಳದಿಂದಾಗಿ ಮಾರಾಟವು ಕಡಿಮೆ ಆಗಲಿದೆ ಎಂದು ತಿಳಿಸಿದೆ. 2024-25ರಲ್ಲಿ ಚಿನ್ನಾಭರಣಗಳ ಮಾರಾಟದ ಪ್ರಮಾಣವು ಶೇ 8ರಷ್ಟು ಇಳಿಕೆ ಆಗಿತ್ತು.

ಆದರೆ, ಚಿನ್ನದ ದರ ಏರಿಕೆಯಿಂದ ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ವರಮಾನವು ಶೇ 20ರಿಂದ ಶೇ 25ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಿದೆ.

ಮುಖ್ಯಾಂಶಗಳು

- 2025-26ರಲ್ಲಿ ಚಿನ್ನದ ದರವು ಶೇ 55ರಷ್ಟು ಜಿಗಿತ
- ಶೇ 50ಕ್ಕಿಂತ ಹೆಚ್ಚು ಚಿನ್ನದ ಗಟ್ಟಿ, ನಾಣ್ಯಗಳ ಮಾರಾಟ
- ಕಡಿಮೆ ಕ್ಯಾರಟ್‌ನ ಚಿನ್ನಾಭರಣಗಳತ್ತ ಜನರ ಒಲವು



2025-26ರಲ್ಲಿ ದೇಶಕ್ಕೆ 720 ಟನ್‌ನಷ್ಟು ಚಿನ್ನ ಆಮದಾಗಿತ್ತು. ಇದರಿಂದ ₹6.89 ಲಕ್ಷ ಕೋಟಿ ವಿದೇಶಿ ಕರೆನ್ಸಿಯು ಹೊರಹರಿವಾಗಿದೆ. ಜಾಗತಿಕ ಅನಿಶ್ಚಿತತೆ, ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆಯಿಂದಾಗಿ ಇದೇ ಅವಧಿಯಲ್ಲಿ ಹಳದಿ ಲೋಹದ ದರವು ಶೇ 55ರಷ್ಟು ಏರಿಕೆಯಾಗಿದೆ.

ಇದರಿಂದ ಖರೀದಿದಾರರು ಕೈಗೆಟುಕುವ, ಕಡಿಮೆ ತೂಕದ, ಕಡಿಮೆ ಕ್ಯಾರಟ್‌ನ ಚಿನ್ನಾಭರಣಗಳನ್ನು (16-22 ಕ್ಯಾರಟ್) ಖರೀದಿಸುವಂತೆ ಮಾಡಿದೆ ಎಂದು ತಿಳಿಸಿದೆ.

ಕಳೆದ ಎರಡು ಆರ್ಥಿಕ ವರ್ಷದಿಂದ ಚಿನ್ನದಲ್ಲಿ ಹೂಡಿಕೆ ಹೆಚ್ಚಳವಾಗಿದೆ. ಚಿನ್ನಾಭರಣ ಮಾರಾಟ ಶೇ 25ರಷ್ಟು ಇಳಿಕೆ ಆಗಿದ್ದರೆ, ಚಿನ್ನದ ಗಟ್ಟಿ ಮತ್ತು ನಾಣ್ಯಗಳ ಮಾರಾಟ ಶೇ 50ಕ್ಕಿಂತ ಹೆಚ್ಚಾಗಿದೆ ಎಂದು ತಿಳಿಸಿದೆ.

ಆದರೆ, ನಿರಂತರವಾಗಿ ಹೆಚ್ಚುತ್ತಿರುವ ಚಿನ್ನದ ದರ ಮತ್ತು ಚಿನ್ನದ ಆಮದು ಮೇಲಿನ ಶುಲ್ಕವನ್ನು ಇತ್ತೀಚೆಗೆ ಶೇ 6ರಿಂದ ಶೇ 15ಕ್ಕೆ ಹೆಚ್ಚಿಸಿರುವುದರಿಂದ ಹಳದಿ ಲೋಹದ ಬೇಡಿಕೆ ಇಳಿಕೆ ಆಗುವ ಸಾಧ್ಯತೆ ಇದೆ ಎನ್ನಲಾಗಿದೆ.

'ಚಿನ್ನದ ಮೇಲಿನ ಹೆಚ್ಚಿನ ಆಮದು ಸುಂಕದ ನಿರ್ಧಾರವು ಚಿನ್ನಾಭರಣಗಳ ಬೇಡಿಕೆಗೆ ಅಡ್ಡಿಯಾಗಲಿದೆ. ಇದರ ಪರಿಣಾಮವಾಗಿ, ಚಿನ್ನಾಭರಣಗಳ ರಿಟೇಲ್ ಮಾರಾಟವು ಈ ಆರ್ಥಿಕ ವರ್ಷದಲ್ಲಿ ಶೇ 13ರಿಂದ ಶೇ 15ರಷ್ಟು ಕುಸಿದು 620ರಿಂದ 640 ಟನ್‌ಗಳಿಗೆ ತಲುಪಲಿದೆ' ಎಂದು ಕ್ರಿಸಿಲ್ ರೇಟಿಂಗ್ಸ್ ಸಂಸ್ಥೆಯ ನಿರ್ದೇಶಕ ಹಿಮಾಂಕ್ ಶರ್ಮಾ ಹೇಳಿದ್ದಾರೆ.

ಚಿನ್ನದ ಬೇಡಿಕೆ 60 ಟನ್ ಇಳಿಕೆ

ಆಮದು ಸುಂಕ ಹೆಚ್ಚಳದಿಂದಾಗಿ 2026ರ ಕ್ಯಾಲೆಂಡರ್ ವರ್ಷದಲ್ಲಿ ಭಾರತ ಚಿನ್ನದ ಬೇಡಿಕೆ 50ರಿಂದ 60 ಟನ್‌ನಷ್ಟು ಕಡಿಮೆ ಆಗುವ ನಿರೀಕ್ಷೆ ಇದೆ. ಇದು 2025ರಲ್ಲಿ ಆಮದಾದ ಚಿನ್ನಕ್ಕೆ ಹೋಲಿಸಿದರೆ ಶೇ 10ರಷ್ಟು ಕಡಿಮೆ ಎಂದು ವಿಶ್ವ ಚಿನ್ನ ಸಮಿತಿ ತಿಳಿಸಿದೆ.

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)	
ದೊಡ್ಡ	₹1000-1400
ಮಧ್ಯಮ	₹600-1000
ಸಣ್ಣ	₹200-600

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹24000-24000
ಬಂಟ್ವಾಳ	₹10000-13000

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್ ವಲಯದ ಕಂಪನಿಗಳ ಷೇರು ಖರೀದಿ ಹೆಚ್ಚಳದಿಂದ ಶುಕ್ರವಾರ ನಡೆದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 231 ಅಂಶ ಏರಿಕೆಯಾಗಿ, 75,415ಕ್ಕೆ ವಹಿವಾಟು ಅಂತ್ಯ ಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 64 ಅಂಶ ಹೆಚ್ಚಳವಾಗಿ, 23,719ಕ್ಕೆ ಕೊನೆಗೊಂಡಿದೆ.

76 ಪೈಸೆ ಏರಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಶುಕ್ರವಾರ 76 ಪೈಸೆ ಏರಿಕೆಯಾಗಿದೆ. ವಹಿವಾಟಿನ ಅಂತ್ಯಕ್ಕೆ 95.60 ಆಗಿತ್ತು.

ಮುಂಬೈ ಧಾರಣೆ (ಶೇಂಗಾ) 22-05-2026	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಪಾಮ್ ವಾರದ ಡೆಲಿವರಿ	1493 (1498)
ಸೂರ್ಯಕಾಂತಿ ಎಣ್ಣೆ ಕಚ್ಚಾ	1550 (1550)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,57,700 (1,57,400)
ಬೆಳ್ಳಿ ಕೆ.ಜಿಗೆ	2,66,500 (2,64,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ 2 ನಿಮಿಷ

ಕೇಂದ್ರಕ್ಕೆ ₹2.87 ಲಕ್ಷ ಕೋಟಿ ಲಾಭಾಂಶ: ಆರ್‌ಬಿಐ

ಮುಂಬೈ (ಪಿಟಿಐ): 2025-26ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ₹2.87 ಲಕ್ಷ ಕೋಟಿಯಷ್ಟು ದಾಖಲೆ ಮೊತ್ತದ ಲಾಭಾಂಶ ಪಾವತಿಸಲು ನಿರ್ಧರಿಸಲಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

2024-25ರ ಆರ್ಥಿಕ ವರ್ಷದಲ್ಲಿ ಆರ್‌ಬಿಐ ₹2.69 ಲಕ್ಷ ಕೋಟಿ ಲಾಭಾಂಶ ಪಾವತಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿಯ ಲಾಭಾಂಶದಲ್ಲಿ ಶೇ 6.7ರಷ್ಟು ಹೆಚ್ಚಳವಾಗಿದೆ. 2023-24ರಲ್ಲಿ ₹2.1 ಲಕ್ಷ ಕೋಟಿ ಮತ್ತು 2022-23ರಲ್ಲಿ ₹87,416 ಕೋಟಿ ಪಾವತಿಸಿತ್ತು.

ಪಶ್ಚಿಮ ಏಷ್ಯಾ ಸಂಘರ್ಷದಿಂದ ಹೆಚ್ಚುತ್ತಿರುವ ಆಮದು ಬಿಲ್ ಮತ್ತು ಪೂರೈಕೆ ಸರಪಳಿಯ ಅಡಚಣೆಯ ನಡುವೆ ಇದು ಸರ್ಕಾರದ ಬೊಕ್ಕಸಕ್ಕೆ ಉತ್ತೇಜನ ನೀಡಲಿದೆ.

ಆರ್‌ಬಿಐ ಗವರ್ನರ್ ಅಧ್ಯಕ್ಷತೆಯಲ್ಲಿ ನಡೆದ ಆರ್‌ಬಿಐನ ಕೇಂದ್ರೀಯ ಮಂಡಳಿಯ ನಿರ್ದೇಶಕರ 623ನೇ ಸಭೆಯು ಇದಕ್ಕೆ ಅನುಮೋದನೆ ನೀಡಿದೆ.



ಭಾರತೀಯ ರಿಸರ್ವ್ ಬ್ಯಾಂಕ್‌ನ ಬ್ಯಾಲೆನ್ಸ್‌ಶೀಟ್ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಶೇ 20ರಷ್ಟು ಏರಿಕೆಯಾಗಿದ್ದು, ₹91.97 ಲಕ್ಷ ಕೋಟಿಗೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಗೇಲ್ ಲಾಭ ಶೇ 38ರಷ್ಟು ಇಳಿಕೆ

ನವದೆಹಲಿ (ಪಿಟಿಐ): 2025-26ರ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್‌ನ (ಗೇಲ್) ನಿವ್ವಳ ಲಾಭದಲ್ಲಿ ಶೇ 38ರಷ್ಟು ಇಳಿಕೆಯಾಗಿದೆ.

2024-25ರ ಮಾರ್ಚ್ ತ್ರೈಮಾಸಿಕದಲ್ಲಿ ₹2,049 ಕೋಟಿ ಲಾಭ ಗಳಿಸಿತ್ತು. ಇದು ಈ ಬಾರಿ ₹1,262 ಕೋಟಿಗೆ ಇಳಿದಿದೆ. ಪಶ್ಚಿಮ ಏಷ್ಯಾದ ಸಂಘರ್ಷದಿಂದ ಎಲ್‌ಎನ್‌ಜಿ, ಇಂಧನ ಪೂರೈಕೆಗೆ ಅಡಚಣೆ ಉಂಟಾಗಿದೆ. ಇದು ಕಂಪನಿಯ ಲಾಭದ ಮೇಲೆ ಪರಿಣಾಮ ಬೀರಿದೆ ಎಂದು ಗೇಲ್ ಷೇರುಪೇಟೆಗೆ ತಿಳಿಸಿದೆ.

ಕಂಪನಿಯ ವರಮಾನವು ₹34,797 ಕೋಟಿಗೆ ಇಳಿದಿದೆ. ತೆರಿಗೆ, ಬಡ್ಡಿ, ಸಾಲ ತೀರುವಳಿ ಪೂರ್ವದ ವರಮಾನ (ಇಬಿಐಟಿಡಿಎ) ₹3,335 ಕೋಟಿಯಿಂದ ₹2,175 ಕೋಟಿಗೆ ಇಳಿದಿದೆ.

ಕಳೆದ ಪೂರ್ಣ ಆರ್ಥಿಕ ವರ್ಷದಲ್ಲಿ ಕಂಪನಿಯ ಲಾಭವು ₹6,968 ಕೋಟಿಗೆ ಇಳಿದಿದೆ. 2024-25ರಲ್ಲಿ ಇದು ₹11,312 ಕೋಟಿಯಷ್ಟಾಗಿತ್ತು.

ಪ್ರತಿ ಷೇರಿಗೆ 50 ಪೈಸೆ ಅಂತಿಮ ಲಾಭಾಂಶ ನೀಡಲು ಕಂಪನಿಯ ಆಡಳಿತ ಮಂಡಳಿಯು ಶಿಫಾರಸು ಮಾಡಿದೆ.

ಇರಾನ್ ಜೊತೆಗಿನ ಮಾತುಕತೆ: ರುಬಿಯೊ ಅಭಿಮತ

'ಉತ್ತಮ ಬೆಳವಣಿಗೆ; ಆಯ್ಕೆಗಳು ಮುಕ್ತ'

ವಾಷಿಂಗ್ಟನ್ (ಎಪಿ): 'ಇರಾನ್ ಜೊತೆಗಿನ ಮಾತುಕತೆಯಲ್ಲಿ ಉತ್ತಮ ಬೆಳವಣಿಗೆ ಕಂಡಿದ್ದರೂ, ಇತರೆ ಆಯ್ಕೆಗಳು ಕೂಡ ಮುಕ್ತವಾಗಿವೆ' ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ತಿಳಿಸಿದ್ದಾರೆ.



ಮಾರ್ಕೊ ರುಬಿಯೊ

'ಬಹಿರಂಗವಾಗಿ ಆಶಾವಾದಿಯಾಗಿ ಧ್ವನಿಸದಂತೆ ಎಚ್ಚರಿಕೆ ವಹಿಸಿದ್ದೇವೆ. ಪಾಕಿಸ್ತಾನ ಹಾಗೂ ಅವುಗಳ ಮಿತ್ರಪಕ್ಷಗಳು ರಾಜತಾಂತ್ರಿಕ ಪರಿಹಾರ ಕಂಡುಹಿಡಿಯಲು ಶ್ರಮಿಸುತ್ತಿವೆ. ಕೆಲವು ಅಧಿಕಾರಿಗಳು ಶುಕ್ರವಾರವೇ ಟೆಹರಾನ್‌ಗೆ ತೆರಳಿದ್ದು, ಇತರ ಆಯ್ಕೆಗಳ ಕುರಿತಂತೆ ಮುಕ್ತವಾಗಿದ್ದೇವೆ' ಎಂದು ತಿಳಿಸಿದ್ದಾರೆ.

'ಒಳ್ಳೆಯ ಒಪ್ಪಂದ ಮಾಡಿಕೊಳ್ಳುವುದು ಅಧ್ಯಕ್ಷ ಟ್ರಂಪ್ ಅವರ ಆದ್ಯತೆಯಾಗಿದೆ. ಅದು ಅವರ ಪ್ರಮುಖ ಆದ್ಯತೆಯಾಗಿ ರಲಿದೆ. ನಾವು ಕೂಡ ಒಳ್ಳೆಯ ಒಪ್ಪಂದಕ್ಕೆ ಯತ್ನಿಸುತ್ತಿದ್ದು, ಅದು ಶ್ರೇಷ್ಠವಾಗಿರಲಿದೆ. ಒಂದೊಮ್ಮೆ ಒಳ್ಳೆಯ ಒಪ್ಪಂದ ನೆರವೇರ ದಿದ್ದರೆ, ಇತರೆ ಆಯ್ಕೆಗಳ ಕುರಿತಂತೆ ಅಧ್ಯಕ್ಷರು ಅನುಮೋದನೆ ನೀಡಲಿದ್ದಾರೆ' ಎಂದು ತಿಳಿಸಿದ್ದಾರೆ.

'ಹೊರ್ಮುಜ್ ಜಲಸಂಧಿಗೆ ಸುಂಕ ವಿಧಿಸುವ ಇರಾನ್ ಪ್ರಸ್ತಾಪವು ಒಪ್ಪಂದವನ್ನೇ ಅಸಾಧ್ಯವಾಗಿಸಲಿದೆ. ನಿರ್ಣಾಯಕ ಜಲಮಾರ್ಗದ ಮೇಲೆ ಹಿಡಿತ ಹೊಂದಿರುವ ಇರಾನ್, ಆ ಮೂಲಕ ಆರ್ಥಿಕ ಲಾಭ ಪಡೆಯುವುದನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಟೀಕಿಸಿದ್ದಾರೆ.

'ಸುಂಕ ವಿಧಿಸುವ ವ್ಯವಸ್ಥೆಗೆ ಜಗತ್ತಿನ ಯಾವುದೇ ದೇಶವೂ ಕೂಡ ಒಲವು ಹೊಂದಿಲ್ಲ. ಅದನ್ನು ಒಪ್ಪಲ್ಲ. ಅದನ್ನು ಮುಂದುವರಿಸಿದರೆ, ರಾಜತಾಂತ್ರಿಕ ಮಾರ್ಗವೂ ಅಸಾಧ್ಯವಾಗಿಸಲಿದೆ' ಎಂದು ರುಬಿಯೊ ಹೇಳಿದ್ದಾರೆ.

'ಇರಾನ್ ಜೊತೆಗಿನ ಮಾತುಕತೆಯಲ್ಲಿ ಉತ್ತಮ ಬೆಳವಣಿಗೆಗಳು ಕಂಡುಬಂದಿದ್ದು, ದೀರ್ಘಕಾಲದ ಯುದ್ಧವು ಆದಷ್ಟು ಬೇಗ ಮುಕ್ತಾಯ ಗೊಳ್ಳಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕ್ಯೂಬಾ ಸಮಸ್ಯೆಗೂ ಪರಿಹಾರ: ಕ್ಯೂಬಾ ಸರ್ಕಾರದ ಜೊತೆಗೆ ಉಂಟಾಗಿರುವ ಸಮಸ್ಯೆಯನ್ನು ರಾಜತಾಂತ್ರಿಕವಾಗಿ ಬಗೆಹರಿಸಲು ಒತ್ತು ನೀಡಲಾಗುವುದು. ಈ ವಿಚಾರದಲ್ಲಿ ಆಶಾವಾದಿಯಾಗಿರದೇ, ಅದನ್ನು ಸಾಧಿಸಲಿದ್ದೇವೆ. ಅಧ್ಯಕ್ಷ ಟ್ರಂಪ್ ಅವರು ಶಾಂತಿಯುತವಾಗಿ ಒಪ್ಪಂದ ನಡೆಸಲು ಆದ್ಯತೆ ನೀಡುತ್ತಾರೆ. ಆ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದೇವೆ' ಎಂದು ಅವರು ವಿವರಿಸಿದ್ದಾರೆ.

ಅಡಿಕೆ ಧಾರಣೆ					
ಕುಮಟಾ		ಬೆಟ್ಟೆ	53009-64600	ಬಿಳಿಗೋಟು	23909-35899
ಚಾಲಿ	44487-46100	ರಾಶಿ	45099-53799	ಚಾಲಿ	43600-47001
ಚಿಪ್ಪು	29019-33999	ಗೊರಬಲು	19009-40259	ಕೆಂಪುಗೋಟು	26700-38099
ಕೋಕ	17509-33009	**ಸಿದ್ದಾಪುರ**		ರಾಶಿ	51099-53499
ಫ್ಯಾಕ್ಟರಿ	13029-27800	ಬಿಳಿಗೋಟು	26109-34889	**ಯಲ್ಲಾಪುರ**	
ಹಳೆಚಾಲಿ	45099-48098	ಚಾಲಿ	38300-46209	ಅಪಿ	56921-60799
ಹೊಸಚಾಲಿ	37396-46699	ಕೋಕ	21199-34609	ಬಿಳಿಗೋಟು	20000-36199
ಪುತ್ತೂರು		ಕೆಂಪುಗೋಟು	31900-36900	ಚಾಲಿ	38169-46899
ಕೋಕ	20000-34500	ರಾಶಿ	47099-52899	ಕೋಕ	13200-32299
ಹೊಸತು	30000-47500	ತಟ್ಟಿಬೆಟ್ಟೆ	36889-47219	ಕೆಂಪುಗೋಟು	16189-36999
ಶಿವಮೊಗ್ಗ		**ಶಿರಸಿ**		ರಾಶಿ	50999-56199
ಸರಕು	64499-98399	ಬೆಟ್ಟೆ	41600-50999	ತಟ್ಟಿಬೆಟ್ಟೆ	37310-49821

ಎಸ್‌ಬಿಐ ಸಿಬ್ಬಂದಿ ಮುಷ್ಕರ ಮುಂದೂಡಿಕೆ

ನವದೆಹಲಿ / ಕೋಲ್ಕತ್ತ (ಪಿಟಿಐ): ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮೇ 25 ಮತ್ತು 26ರಂದು ಕರೆ ನೀಡಿದ್ದ ಮುಷ್ಕರವನ್ನು ಆಲ್ ಇಂಡಿಯಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸ್ಟಾಫ್ ಫೆಡರೇಷನ್ (ಎಐಎಸ್‌ಬಿಐಎಸ್‌ಎಫ್) ಮುಂದೂಡಿದೆ.

ಸೋಮವಾರ ಮತ್ತು ಮಂಗಳವಾರ ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಶಾಖೆಗಳಲ್ಲಿ ಎಂದಿನಂತೆ ಕಾರ್ಯಾಚರಣೆ ನಡೆಯಲಿದೆ.

ಬ್ಯಾಂಕ್‌ನ ಆಡಳಿತ ಮಂಡಳಿ ಮತ್ತು ನೌಕರರ ಸಂಘಗಳ ಪ್ರತಿನಿಧಿಗಳ ನಡುವೆ ಮುಂಬೈನಲ್ಲಿ ನಡೆದ ಸಕಾರಾತ್ಮಕ ಮಾತುಕತೆಯ ಬಳಿಕ ದೇಶಾದ್ಯಂತ ನಡೆಸಲು ಉದ್ದೇಶಿಸಿದ್ದ ಮುಷ್ಕರವನ್ನು ಮುಂದೂಡಲಾಗಿದೆ ಎಂದು ಎಸ್‌ಬಿಐನ ಅಧಿಕಾರಿಗಳು ತಿಳಿಸಿದ್ದಾರೆ.

ಕೊಚ್ಚಿ ವಿಮಾನ ನಿಲ್ದಾಣದಲ್ಲಿ ಕಣ್ಗಾವಲು


ಕೊಚ್ಚಿ (ಪಿಟಿಐ): ಎಬೋಲಾ ವೈರಾಣು ಸೋಂಕು ಹರಡುತ್ತಿರುವ ಕಾರಣ ಕೊಚ್ಚಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ (ಸಿಐಎಎಲ್) ಆಡಳಿತ ಮಂಡಳಿ ಮತ್ತು ವಿಮಾನ ನಿಲ್ದಾಣ ಅಧಿಕಾರಿಗಳು ಶುಕ್ರವಾರ ತುರ್ತು ಸಭೆ ನಡೆಸಿ, ವಿಮಾನ ನಿಲ್ದಾಣದಲ್ಲಿ ಕಣ್ಗಾವಲು ಮತ್ತು ಮುನ್ನೆಚ್ಚರಿಕಾ ಕ್ರಮಗಳನ್ನು ಬಿಗಿಗೊಳಿಸಿದ್ದಾರೆ.

'ಪ್ರಯಾಣಿಕರಲ್ಲಿ ಸಂಭವನೀಯ ರೋಗ ಲಕ್ಷಣಗಳನ್ನು ಪತ್ತೆ ಹಚ್ಚಲು ದಿನದ 24 ಗಂಟೆಯೂ ಮೇಲ್ವಿಚಾರಣಾ ವ್ಯವಸ್ಥೆಯನ್ನು ಸಕ್ರಿಯಗೊಳಿಸಲಾಗಿದೆ. ದೇಹದ ಉಷ್ಣತೆಯ ತಪಾಸಣೆ ಮತ್ತು 21 ದಿನಗಳ ಪ್ರಯಾಣ ದಾಖಲೆಗಳ ಪರಿಶೀಲನೆಯನ್ನು ಕಡ್ಡಾಯಗೊಳಿಸಲಾಗಿದೆ' ಎಂದು ವಿಮಾನ ನಿಲ್ದಾಣದ ವಕ್ತಾರರು ತಿಳಿಸಿದ್ದಾರೆ.

ಎಬೋಲಾ: ಕಾಂಗೊದಲ್ಲಿ ತೀವ್ರ

ಜಿನೀವಾ (ಎಪಿ): ಕಾಂಗೊದಲ್ಲಿ ಎಬೋಲಾ ವ್ಯಾಪಕವಾಗಿ ಹರಡುತ್ತಿದ್ದು, ಪರಿಸ್ಥಿತಿ ತೀವ್ರ ಅಪಾಯಕಾರಿಯಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಶುಕ್ರವಾರ ತಿಳಿಸಿದೆ.

'ಕಾಂಗೊದಲ್ಲಿನ ಪರಿಸ್ಥಿತಿಯನ್ನು ತೀವ್ರ ಅಪಾಯಕಾರಿ ಎಂದು ಪರಿಷ್ಕರಿಸಲಾಗುತ್ತಿದೆ' ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮಹಾ ನಿರ್ದೇಶಕ ಟೆಡ್ರೊಸ್ ಅಧಾನೊಮ್ ಅವರು ತಿಳಿಸಿದ್ದಾರೆ. ಈ ಹಿಂದೆ ಅಪಾಯಕಾರಿ ಎಂದಷ್ಟೆ ಘೋಷಿಸಲಾಗಿತ್ತು.



ಟೆಡ್ರೊಸ್ ಅಧಾನೊಮ್

'ಪ್ರಾದೇಶಿಕವಾಗಿ ಸೋಂಕು ಹರಡುವ ಅಪಾಯ ಹೆಚ್ಚಿದ್ದು, ಜಾಗತಿಕವಾಗಿ ಕಡಿಮೆಯಿದೆ. ಕಾಂಗೊದಲ್ಲಿ 82 ಪ್ರಕರಣಗಳು ಮತ್ತು ಸೋಂಕಿನಿಂದಾಗಿ ಏಳು ಸಾವು ದೃಢಪಟ್ಟಿದೆ. ಆದರೆ ಅಲ್ಲಿ ಸೋಂಕು ವ್ಯಾಪಕವಾಗಿದೆ ಎಂಬುವುದು ನಮಗೆ ತಿಳಿದಿದೆ' ಎಂದು ಹೇಳಿದ್ದಾರೆ.

'750 ಶಂಕಿತ ಪ್ರಕರಣ ಮತ್ತು 177 ಶಂಕಿತ ಸಾವು ವರದಿಯಾಗಿದೆ. ನೆರೆಯ ಉಗಾಂಡದಲ್ಲಿ ಪರಿಸ್ಥಿತಿ ಸ್ಥಿರವಾಗಿದೆ. ಕಾಂಗೊದಿಂದ ತೆರಳಿರುವ ಇಬ್ಬರಲ್ಲಿ ಸೋಂಕು ದೃಢಪಟ್ಟಿದ್ದು, ಅದರಲ್ಲಿ ಒಬ್ಬರು ಮೃತಪಟ್ಟಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ಪಚ್ಚನ ಪರಿಚಯಿಸಿದ ಸುದೀಪ್

ನಟ ಸುದೀಪ್ ಅವರ ಸೋದರಳಿಯ ಸಂಚಿತ್ ಸಂಜೀವ್ 'ಮ್ಯಾಂಗೋ ಪಚ್ಚ' ಸಿನಿಮಾ ಮೂಲಕ ನಾಯಕನಾಗಿ ತೆರೆಗೆ ಬರುತ್ತಿದ್ದಾರೆ. ಸಿನಿಮಾ ಜೂನ್ 5ರಂದು ತೆರೆಕಾಣುತ್ತಿದ್ದು, ಶೀಘ್ರದಲ್ಲೇ ಟ್ರೇಲರ್ ರಿಲೀಸ್ ಆಗಲಿದೆ ಎಂದಿದೆ ಚಿತ್ರತಂಡ.

ಇತ್ತೀಚೆಗೆ ಸುದೀಪ್ ಅವರು ಚಿತ್ರದ ತುಣುಕೊಂದನ್ನು ತಮ್ಮ ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದು, ಸಿನಿಮಾದೊಳಗಿನ ಪಾತ್ರಗಳನ್ನು ತಮ್ಮ ದನಿಯಲ್ಲೇ ಪರಿಚಯಿಸಿದ್ದಾರೆ. 2002ರಲ್ಲಿ ಮೈಸೂರಿನಲ್ಲಿ ನಡೆಯುವ ಘಟನೆಗಳ ಸುತ್ತ ಚಿತ್ರದ ಕಥೆ ಇದೆ. 'ಪದ್ಮ' ಎಂಬ ಪಾತ್ರದಲ್ಲಿ ಹರಿಣಿ ಶ್ರೀಕಾಂತ್, 'ಸುಜಿ'ಯಾಗಿ ಕಾಜಲ್ ಕುಂದರ್, 'ಶ್ಯಾಮ'ನಾಗಿ ಜೈ, 'ನಾಗಪ್ಪ' ಎಂಬ ಪಾತ್ರದಲ್ಲಿ ಮಯೂರ್ ಪಟೇಲ್, 'ಶ್ರೀಧರ್' ಆಗಿ ಮಂಜು, 'ಮಹೇಂದ್ರ' ಎಂಬ ಪಾತ್ರದಲ್ಲಿ ಪ್ರಶಾಂತ್ ಹಿರೇಮಠ ನಟಿಸಿದ್ದಾರೆ. ಇನ್ನು ನಾಯಕ ಸಂಚಿತ್ 'ಪಚ್ಚ' ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಆತನ ಕಥೆಯೇ ಸಿನಿಮಾ ಎಂದಿದೆ ಚಿತ್ರತಂಡ.

'ಮ್ಯಾಂಗೋ ಪಚ್ಚ' ವಿವೇಕ ನಿರ್ದೇಶನದ ಚೊಚ್ಚಲ ಸಿನಿಮಾವಾಗಿದೆ. ಮೈಸೂರು ಭಾಗದಲ್ಲಿ ನಡೆಯುವ ಕಥೆಯುಳ್ಳ ಈ ಸಿನಿಮಾ ಕ್ರೈಂ ಥ್ರಿಲ್ಲರ್ ಜಾನರ್‌ನಲ್ಲಿದೆ. ಈ ಹಿಂದೆ ಜ.15ರಂದು ಸಿನಿಮಾ ಬಿಡುಗಡೆಗೆ ಚಿತ್ರತಂಡ ನಿರ್ಧರಿಸಿತ್ತು. ಚಿತ್ರವನ್ನು ಕೆಆರ್‌ಜಿ ಮತ್ತು ಸುದೀಪ್ ಅವರ ಸುಪ್ರಿಯಾನ್ವಿ ಪ್ರೊಡಕ್ಷನ್ಸ್ ಜಂಟಿಯಾಗಿ ನಿರ್ಮಾಣ ಮಾಡಿದೆ. ಶೇಖರ್ ಚಂದ್ರ ಛಾಯಾಚಿತ್ರಗ್ರಹಣ, ಚರಣ್ ರಾಜ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.


ಸಂಚಿತ್ ಸಂಜೀವ್


ಪವನ್ ಕಲ್ಯಾಣ್, ಚಿರಂಜೀವಿ

ಕೆವಿಎನ್ ನಿರ್ಮಾಣದಲ್ಲಿ ಚಿರಂಜೀವಿ ಸಿನಿಮಾ

ನಿರ್ಮಾಪಕ ವೆಂಕಟ್ ಕೆ.ನಾರಾಯಣ ತಮ್ಮ 'ಕೆವಿಎನ್ ಪ್ರೊಡಕ್ಷನ್ಸ್'ನಡಿ ಸಾಲು ಸಾಲು ಸಿನಿಮಾಗಳನ್ನು ನಿರ್ಮಾಣ ಮಾಡುತ್ತಿದ್ದಾರೆ.

'ಬೈಟು ಲವ್', 'ಸಖತ್', 'KD', 'ಬಾಲನ್', 'ಹೈವಾನ್', ವಿಜಯ್ ನಟನೆಯ 'ಜನ ನಾಯಗನ್', ಯಶ್ ನಟನೆಯ 'ಟಾಕ್ಸಿಕ್' ಬೆನ್ನಲ್ಲೇ ತೆಲುಗಿನ ಮೆಗಾಸ್ಟಾರ್ ಚಿರಂಜೀವಿ ಸಿನಿಮಾವನ್ನು ಕೆವಿಎನ್ ನಿರ್ಮಾಣ ಮಾಡುತ್ತಿದೆ. ಇತ್ತೀಚೆಗೆ ಚಿತ್ರದ ಮುಹೂರ್ತ ನಡೆದಿದ್ದು, ನಟ, ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಕ್ಲ್ಯಾಪ್ ಮಾಡಿದರು. 'ವಾಲ್ತೇರು ವೀರಯ್ಯ' ಸಿನಿಮಾ ಮಾಡಿದ್ದ ಬಾಬಿ ಕೊಲ್ಲಿ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಇದು ಚಿರಂಜೀವಿ ಹಾಗೂ ಬಾಬಿ ಕಾಂಬಿನೇಷನ್‌ನ ಎರಡನೇ ಸಿನಿಮಾವಾಗಿದೆ. ದೊಡ್ಡ ಬಜೆಟ್‌ನಲ್ಲಿ ಸಿನಿಮಾ ನಿರ್ಮಾಣವಾಗಲಿದೆ ಎಂದು ಕೆವಿಎನ್ ತಿಳಿಸಿದೆ.

ಇದೊಂದು ಹೈ-ವೋಲ್ಟೇಜ್ ಆ್ಯಕ್ಷನ್ ಎಂಟರ್‌ಟೈನರ್ ಸಿನಿಮಾವಾಗಿದ್ದು, ಇದಕ್ಕಾಗಿ ಚಿರಂಜೀವಿ ದೈಹಿಕವಾಗಿಯೂ ಸಜ್ಜಾಗಿದ್ದಾರೆ.

ನಿರ್ದೇಶಕರ ಕನಸಿಗೆ 'ಸಿನಿ ಸಮ್ಮಾನ' ಕಿರೀಟ



ಕರ್ನಾಟಕದ ಸಮೃದ್ಧ ಸಿನಿಮಾ ಪರಂಪರೆಯನ್ನು ಸಂಭ್ರಮಿಸುವ ಹಾಗೂ ಚಂದನವನದ ಪ್ರತಿಭೆಗಳನ್ನು ಗೌರವಿಸುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿ ಸಮಾರಂಭ ಜೂನ್ 19ರಂದು ನಡೆಯಲಿದೆ.

ಸಿನಿಮಾದ ನಿರ್ದೇಶಕನನ್ನು ಚಿತ್ರದ ಸೂತ್ರಧಾರನೆಂದೇ ಕರೆಯಲಾಗುತ್ತದೆ. ಕಥೆ, ದೃಶ್ಯ, ಭಾವನೆ ಮತ್ತು ಪಾತ್ರಗಳಿಗೆ ಜೀವ ತುಂಬಿ ಒಂದು ಸಂಪೂರ್ಣ ಸಿನಿಮಾವನ್ನು ಕಟ್ಟಿಕೊಡುವ ಹೊಣೆ ನಿರ್ದೇಶಕನದ್ದೇ. ಇದೇ ಕಾರಣಕ್ಕೆ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಆರಂಭದಿಂದಲೂ 'ಅತ್ಯುತ್ತಮ ನಿರ್ದೇಶನ' ವಿಭಾಗದ ಮೂಲಕ ಪ್ರತಿಭಾವಂತ ನಿರ್ದೇಶಕರನ್ನು ಗೌರವಿಸುತ್ತ ಬಂದಿದೆ.

ಮೊದಲ ಆವೃತ್ತಿಯಲ್ಲಿ ಈ ಪ್ರಶಸ್ತಿಯನ್ನು 'ಕಾಂತಾರ' ಚಿತ್ರದ ಅದ್ಭುತ ಯಶಸ್ಸಿಗಾಗಿ ರಿಷಬ್ ಶೆಟ್ಟಿ ತಮ್ಮದಾಗಿಸಿಕೊಂಡಿದ್ದರು. ವಿಭಿನ್ನ ಪ್ರೇಮಕಥೆಯನ್ನು ಮನಮುಟ್ಟುವ ದೃಶ್ಯಕಾವ್ಯವಾಗಿ ಮೂಡಿಸಿದ 'ಸಪ್ತ ಸಾಗರದಾಚೆ ಎಲ್ಲೋ' ಚಿತ್ರದ ನಿರ್ದೇಶನಕ್ಕಾಗಿ ಹೇಮಂತ್ ಎಂ. ರಾವ್ ಎರಡನೇ ಆವೃತ್ತಿಯ ಪುರಸ್ಕಾರಕ್ಕೆ ಭಾಜನರಾದರು. 'ಭೈರತಿ ರಣಗಲ್' ಚಿತ್ರದ ಮೂಲಕ ಶಿವರಾಜ್‌ಕುಮಾರ್ ಅವರ ಪರದೆ ಎನರ್ಜಿಯನ್ನು ಮತ್ತಷ್ಟು ಪ್ರಭಾವಿಯಾಗಿ ತೆರೆದಿಟ್ಟ ನರ್ತನ್ ಮೂರನೇ ಆವೃತ್ತಿಯ ಪ್ರಶಸ್ತಿ ಪಡೆದರು. ಈ ಬಾರಿಯೂ 'ಅತ್ಯುತ್ತಮ ನಿರ್ದೇಶನ' ವಿಭಾಗದಲ್ಲಿ ಅರ್ಹ ನಿರ್ದೇಶಕರು ನಾಮನಿರ್ದೇಶನ ಗೊಂಡಿದ್ದು, ತೀವ್ರ ಪೈಪೋಟಿ ನಿರೀಕ್ಷಿಸಲಾಗಿದೆ.




ನಾಲ್ಕನೇ ಆವೃತ್ತಿಗೆ 2025ರಲ್ಲಿ ಬಿಡುಗಡೆಯಾದ ಸಿನಿಮಾಗಳನ್ನು ಪರಿಗಣಿಸಲಾಗಿದೆ. 150ಕ್ಕೂ ಹೆಚ್ಚು ಸಿನಿಮಾಗಳು ಪ್ರಶಸ್ತಿಗಾಗಿ ಸ್ಪರ್ಧಿಸಿದ್ದು, ತೀರ್ಪುಗಾರರ ಮಂಡಳಿ ವಿವಿಧ ವಿಭಾಗಗಳ ನಾಮನಿರ್ದೇಶನಗಳನ್ನು ಅಂತಿಮಗೊಳಿಸಿದೆ. 'ಸಿನಿ ಸಮ್ಮಾನ'ದ ಮುಖ್ಯ ತೀರ್ಪುಗಾರರು ಇವುಗಳಿಗೆ ಅಂತಿಮ ಮುದ್ರೆ ಒತ್ತಲಿದ್ದು, ಮಾಸಾಂತ್ಯದೊಳಗೆ ನಾಮನಿರ್ದೇಶಿತರ ಪಟ್ಟಿ ಪ್ರಕಟವಾಗಲಿದೆ.


ಹೇಮಂತ್ ಎಂ.ರಾವ್

ವಿಜೇತರ ಆಯ್ಕೆಗಾಗಿ ಚಿತ್ರರಂಗದ ಸಾವಿರಕ್ಕೂ ಹೆಚ್ಚು ಮಂದಿ ಮತದಾನದಲ್ಲಿ ಪಾಲ್ಗೊಳ್ಳಲಿದ್ದಾರೆ. ಚಿತ್ರರಂಗದ ಪ್ರಮುಖ ಸಂಘ-ಸಂಸ್ಥೆಗಳ ಸದಸ್ಯರು ಮತದಾನದ ಮೂಲಕ ನಾಮನಿರ್ದೇಶಿತರಲ್ಲಿ ತಮ್ಮ ಆಯ್ಕೆಯನ್ನು ಸೂಚಿಸಲಿದ್ದಾರೆ.

ಈ ವರ್ಷದ 'ಸಿನಿ ಸಮ್ಮಾನ'ದಲ್ಲಿ 'ಪ್ರತಿಭಾನ್ವಿತ ಕಲಾವಿದರು' ವಿಭಾಗದಲ್ಲಿ 15 ಪ್ರಶಸ್ತಿಗಳು, 'ಜನಮೆಚ್ಚಿದ ವಿಭಾಗ'ದಲ್ಲಿ ನಾಲ್ಕು ಪ್ರಶಸ್ತಿಗಳು, 'ಚಿತ್ರೋದ್ಯಮಕ್ಕೆ ದಿಕ್ಸೂಚಿಯಾಗಬಲ್ಲ ಸಿನಿಮಾಗಳು' ವಿಭಾಗದಲ್ಲಿ ನಾಲ್ಕು ಪ್ರಶಸ್ತಿಗಳು ಹಾಗೂ 'ಜೀವಮಾನ ಸಾಧನೆ' ಪುರಸ್ಕಾರ ಪ್ರದಾನವಾಗಲಿದೆ. ಜೊತೆಗೆ ಸಂಪಾದಕೀಯ ಆಯ್ಕೆ ವಿಭಾಗದಲ್ಲಿ 'ಸಿನಿ ಧ್ರುವತಾರೆ', 'ನವತಾರೆ (ನಟ-ನಟಿ)' ಮತ್ತು 'ವರ್ಷದ ಅತ್ಯುತ್ತಮ ಸಾಧನೆ' ಸೇರಿದಂತೆ ವಿಶೇಷ ಪ್ರಶಸ್ತಿಗಳೂ ಇರಲಿವೆ.


ರಿಷಬ್ ಶೆಟ್ಟಿ
ನರ್ತನ್

ಮೈಸೂರು, ಹುಬ್ಬಳ್ಳಿಯಲ್ಲಿ ಮಹಾರಾಜ ಟ್ರೋಫಿ

ಕೆಎಸ್‌ಸಿಎ ಆಶ್ರಯದಲ್ಲಿ ಜೂನ್ 20ರಿಂದ ಜುಲೈ 12ರವರೆಗೆ ಟಿ20 ಕ್ರಿಕೆಟ್ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆಶ್ರಯದಲ್ಲಿ ಜೂನ್ 20 ರಿಂದ ಜುಲೈ 12ರವರೆಗೆ ಮೈಸೂರು ಮತ್ತು ಹುಬ್ಬಳ್ಳಿಯಲ್ಲಿ 'ಮಹಾರಾಜ ಟ್ರೋಫಿ' ಹಾಗೂ 'ಮಹಾರಾಣಿ ಕಪ್' ಟಿ20 ಕ್ರಿಕೆಟ್ ಟೂರ್ನಿಗಳು ನಡೆಯಲಿವೆ.

ಮಹಾರಾಜ ಟ್ರೋಫಿ ಟೂರ್ನಿಯಲ್ಲಿ ಪುರುಷರ ಆರು ಮತ್ತು ಮಹಾರಾಣಿ ಕಪ್ ಟೂರ್ನಿಯಲ್ಲಿ ಮಹಿಳೆಯರ ನಾಲ್ಕು ತಂಡಗಳು ಆಡಲಿವೆ.

ಶುಕ್ರವಾರ ನಡೆದ ಫ್ರ್ಯಾಂಚೈಸಿಗಳ ಘೋಷಣೆ ಕಾರ್ಯಕ್ರಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್, 'ಟೂರ್ನಿಯು ಮೂರು ಹಂತಗಳಲ್ಲಿ ನಡೆಯಲಿದೆ. ಮೈಸೂರಿನಲ್ಲಿ ಉದ್ಘಾಟನೆಗೊಳ್ಳಲಿದೆ. ಮೊದಲ ಹಂತದ ಪಂದ್ಯಗಳು ನಡೆಯುತ್ತವೆ. ಎರಡನೇ ಹಂತದ ಪಂದ್ಯಗಳು ಹುಬ್ಬಳ್ಳಿಯಲ್ಲಿ ಆಯೋಜನೆಗೊಳ್ಳುತ್ತವೆ. ತೃತೀಯ ಹಂತದಲ್ಲಿ ಫೈನಲ್ ಸೇರಿದಂತೆ ಕೆಲವು ಪಂದ್ಯಗಳು ಮತ್ತೆ ಮೈಸೂರಿನಲ್ಲಿ ನಡೆಯಲಿವೆ' ಎಂದರು.



ತಂಡಗಳ ಆಟಗಾರರ ಹರಾಜು ಪ್ರಕ್ರಿಯೆಯು ಜೂನ್ 4ರಂದು ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುವ ನಿರೀಕ್ಷೆ ಇದೆ.

'ಪ್ರತಿ ತಂಡವು ₹ 60 ಲಕ್ಷ ಹಣದ ಥೈಲಿ ಇಟ್ಟುಕೊಳ್ಳಬಹುದು. ನೋಂದಾಯಿತರಾದ 130 ರಿಂದ 150 ಆಟಗಾರರಲ್ಲಿ ಆಯ್ಕೆ ಮಾಡಿಕೊಳ್ಳಬಹುದು. ಆಟಗಾರರ ಆಯ್ಕೆಯನ್ನು ಕೆಎಸ್‌ಸಿಎ ಆಯ್ಕೆ ಸಮಿತಿಯ ಮಾರ್ಗದರ್ಶನದಲ್ಲಿ ನಡೆಸಲಾಗುವುದು. ಪ್ರತಿ ತಂಡವೂ ಕನಿಷ್ಠ 16 ಮತ್ತು ಗರಿಷ್ಠ 18 ಆಟಗಾರರನ್ನು ಖರೀದಿಸಬಹುದು. ಇಬ್ಬರು ಸ್ಥಳೀಯ (ಫ್ರ್ಯಾಂಚೈಸಿ ವ್ಯಾಪ್ತಿಯ ಭೌಗೋಳಿಕ ಪ್ರದೇಶ) ಆಟಗಾರರ ಆಯ್ಕೆ ಕಡ್ಡಾಯ' ಎಂದೂ ತಿಳಿಸಿದರು.

ಈ ಸಂದರ್ಭದಲ್ಲಿ ಆರು ಫ್ರ್ಯಾಂಚೈಸಿಗಳನ್ನು ಘೋಷಿಸಲಾಯಿತು. ಕಲ್ಯಾಣಿ ಮೋಟಾರ್ಸ್ (ಬೆಂಗಳೂರು ವಲಯ), ಸೈಕಲ್ ಅಗರಬತ್ತಿ-ನ್ಯಾಚುರಲ್ ಎಸೆನ್ಸಿಯಲ್ಸ್ ಆಯಿಲ್ ಲಿಮಿಟೆಡ್ (ಮೈಸೂರು), ಜಿಂದಾಲ್ ಸ್ಟೀಲ್ (ಹುಬ್ಬಳ್ಳಿ), ಮೈಕಾನ್ ಇಂಡಸ್ಟ್ರಿಸ್ ಪ್ರೈವೇಟ್ ಲಿಮಿಟೆಡ್ (ರಾಯಚೂರು), ಮಾನ್ಯತಾ ಡೆವಲಪರ್ಸ್ (ಮಂಗಳೂರು), ಐಸಿಎಸ್ ಮೊಬೈಲ್ ಪ್ರೈವೇಟ್ ಲಿ. (ಶಿವಮೊಗ್ಗ) ಫ್ರ್ಯಾಂಚೈಸಿಗಳಿಗೆ ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಅವರು ಪ್ರಮಾಣಪತ್ರ ನೀಡಿದರು.

ಟೂರ್ನಿಯ ನೇರಪ್ರಸಾರವನ್ನು ಸೋನಿ ಸ್ಪೋರ್ಟ್ಸ್ ಎಚ್‌.ಡಿ ಮತ್ತು ಕನ್ನಡ ವಾಹಿನಿಗಳು ಮಾಡಲಿವೆ.

ಮಹಿಳೆಯರ 'ಮಹಾರಾಣಿ ಕಪ್' ಕ್ರಿಕೆಟ್ ಟೂರ್ನಿಯನ್ನೂ ಇದೇ ಸಂದರ್ಭದಲ್ಲಿ ಆಯೋಜಿಸಲಾಗುತ್ತಿದೆ. ಆದರೆ ಫ್ರ್ಯಾಂಚೈಸಿಗಳ ಅಂತಿಮಗೊಳಿಸುವಿಕೆಯ ಪ್ರಕ್ರಿಯೆ ಇನ್ನಷ್ಟೇ ಆಗಬೇಕಿದೆ.

'ಮಹಾರಾಜ ಟ್ರೋಫಿಯಷ್ಟೇ ಮಹಾರಾಣಿ ಕಪ್ ಟೂರ್ನಿಗೂ ಮಹತ್ವದ ನೀಡಲಾಗುತ್ತಿದೆ. ಇಲ್ಲಿಯವರೆಗೆ, ಆರು ಫ್ರ್ಯಾಂಚೈಸಿಗಳು ತಂಡಗಳನ್ನು ರಚಿಸಲು ಆಸಕ್ತಿ ವ್ಯಕ್ತಪಡಿಸಿವೆ. ಆದರೆ ರಾಜ್ಯದಲ್ಲಿ ಮಹಿಳಾ ಕ್ರಿಕೆಟ್ ಪ್ರತಿಭೆಗಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಇಲ್ಲ. ಆದ್ದರಿಂದ ನಾಲ್ಕು ತಂಡಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಯಾವುದೇ ಕಾರಣಕ್ಕೂ ಗುಣಮಟ್ಟದೊಂದಿಗೆ ರಾಜಿ ಇಲ್ಲ' ಎಂದು ಮೆನನ್ ಸ್ಪಷ್ಟಪಡಿಸಿದರು.

ಚಿನ್ನಸ್ವಾಮಿ ಕ್ರೀಡಾಂಗಣ ಮೇಲ್ದರ್ಜೆ ಯೋಜನೆ: ಪ್ರಸಾದ್

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣವನ್ನು ಮೇಲ್ದರ್ಜೆಗೇರಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ನಿರ್ಧರಿಸಿದೆ. ಅದಕ್ಕಾಗಿ ಭಾರತ ಮತ್ತು ವಿದೇಶಗಳ 30 ವಾಸ್ತುಶಿಲ್ಪ ಸಂಸ್ಥೆಗಳು 'ಮರುವಿನ್ಯಾಸ' ಮಾಡಲು ಆಸಕ್ತಿ ತೋರಿ ಪ್ರಸ್ತಾವ ಸಲ್ಲಿಸಿದ್ದವು. ಅದರಲ್ಲಿ ಮೂರು ಸಂಸ್ಥೆಗಳನ್ನು ಅಂತಿಮ ಪಟ್ಟಿಯಲ್ಲಿ ಉಳಿಸಿಕೊಳ್ಳಲಾಗಿದೆ. ನೀಲ ನಕ್ಷೆಗಳನ್ನು ಶೀಘ್ರದಲ್ಲಿಯೇ ಆಹ್ವಾನಿಸಲಾಗುವುದು ಎಂದು ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ತಿಳಿಸಿದರು.



ವೆಂಕಟೇಶ್ ಪ್ರಸಾದ್

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಚಿನ್ನಸ್ವಾಮಿ ಕ್ರೀಡಾಂಗಣವನ್ನು ಮೇಲ್ದರ್ಜೆಗೇರಿಸುವುದಾಗಿದೆ. 50 ವರ್ಷಗಳಿಗಿಂತಲೂ ಹಳೆಯದಾದ ಈ ಐತಿಹಾಸಿಕ ಕ್ರೀಡಾಂಗಣದ ಆಸನ ಸಾಮರ್ಥ್ಯವನ್ನು 55 ಸಾವಿರಕ್ಕೆ ಏರಿಸುವ ಯೋಜನೆ ಇದೆ. ವೃತ್ತಿಪರ, ಅನುಭವಿ ಮತ್ತು ಪ್ರತಿಷ್ಠಿತ ವಿನ್ಯಾಸಕಾರರಿಗೆ ನೀಲನಕ್ಷೆಯನ್ನು ಸಿದ್ಧಪಡಿಸಿ ಕೊಡುವ ಪ್ರಸ್ತಾವ ಸಲ್ಲಿಸಲಾಗುವುದು' ಎಂದರು.

'ಕ್ರೀಡಾಂಗಣದ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ ಅನುಮತಿಯನ್ನು ಪಡೆಯುವ ವಿಶ್ವಾಸವಿದೆ. ಪರಿಣತ ಸಂಸ್ಥೆಗಳು ನೀಡುವ ನೀಲನಕ್ಷೆಯನ್ನು ಸರ್ಕಾರದ ಮುಂದಿಡುತ್ತೇವೆ' ಎಂದು ಸ್ಪಷ್ಟಪಡಿಸಿದರು.

ಪ್ರಸ್ತುತ ಕ್ರೀಡಾಂಗಣದ ಆಸನ ಸಾಮರ್ಥ್ಯವು 32 ಸಾವಿರವಾಗಿದೆ. ಸದಸ್ಯರು, ಗಣ್ಯರ ಪಾಸ್ ಹಾಗೂ ಉಚಿತ ಪಾಸ್‌ಗಳು ಇತ್ಯಾದಿಗಳನ್ನು ಕಳೆದರೆ ಸಾರ್ವಜನಿಕರಿಗೆ ಉಳಿಯುವುದು 25 ಸಾವಿರ ಟಿಕೆಟ್‌ಗಳು ಮಾತ್ರ.

'ಚಿನ್ನಸ್ವಾಮಿ ಕ್ರೀಡಾಂಗಣ, ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಕ್ರೀಡಾಂಗಣ ಮತ್ತು ಹುಬ್ಬಳ್ಳಿಯಲ್ಲಿರುವ ಕೆಎಸ್‌ಸಿಎ ಕ್ರೀಡಾಂಗಣಗಳಲ್ಲಿರುವ ದೀಪಸ್ತಂಭಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ಮೂರು ಸ್ಥಳಗಳಲ್ಲಿ ಹಂತ ಹಂತವಾಗಿ ಅತ್ಯಾಧುನಿಕ ಎಲ್‌ಇಡಿ ದೀಪಗಳನ್ನು ಅಳವಡಿಸಲಿದ್ದೇವೆ. ಕ್ರೀಡಾಂಗಣದಲ್ಲಿ ಅಭಿಮಾನಿಗಳಿಗೆ ಮತ್ತು ಮನೆಯಲ್ಲಿ ಟಿವಿಯಲ್ಲಿ ನೋಡುವವರಿಗೆ ಬಳಕೆದಾರರ ಅನುಭವವನ್ನು ಹೆಚ್ಚಿಸುವುದು ಇದರ ಹಿಂದಿನ ಉದ್ದೇಶವಾಗಿದೆ. ಈ ಋತುವಿನಲ್ಲಿ ಆತಿಥ್ಯ ವಹಿಸಲಿರುವ ಅಂತಾರಾಷ್ಟ್ರೀಯ ಪಂದ್ಯಗಳ ಮೊದಲು ಇದನ್ನು ಕಾರ್ಯಗತಗೊಳಿಸಲಾಗುವುದು' ಎಂದು ಹೇಳಿದರು.



ಜೂ.18ಕ್ಕೆ ರಾಜ್ಯಸಭಾ ಚುನಾವಣೆ

ಒಂದನೇ ಪುಟದಿಂದ...

ಕಾಂಗ್ರೆಸ್‌ನಲ್ಲಿ ಮಲ್ಲಿಕಾರ್ಜುನ ಖರ್ಗೆ ಪುನರಾಯ್ಕೆಯಾಗಲಿದ್ದಾರೆ. ಉಳಿದ ಎರಡು ಸ್ಥಾನಗಳಿಗಾಗಿ ಭಾರಿ ಲಾಬಿ ಆರಂಭವಾಗಿದೆ. ಈ ಸಲ ಅಭ್ಯರ್ಥಿಗಳ ಆಯ್ಕೆಯಲ್ಲಿ ಲಿಂಗಾಯತ ಹಾಗೂ ಇತರ ಹಿಂದುಳಿದ ವರ್ಗದವರಿಗೆ (ಒಬಿಸಿ) ಪ್ರಾತಿನಿಧ್ಯ ನೀಡಲು ಪಕ್ಷದಲ್ಲಿ ಒಲವು ವ್ಯಕ್ತವಾಗಿದೆ.

ಯುವ ಕಾಂಗ್ರೆಸ್‌ನ ಮಾಜಿ ರಾಷ್ಟ್ರೀಯ ಅಧ್ಯಕ್ಷ ಬಿ.ವಿ.ಶ್ರೀನಿವಾಸ್, ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಮಾಜಿ ಸಂಸದ ಮುದ್ದ ಹನುಮೇಗೌಡ, ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್ ಸೇರಿದಂತೆ ಹಲವು ಆಕಾಂಕ್ಷಿಗಳು ಲಾಬಿ ನಡೆಸಿದ್ದಾರೆ.

ಬಿ. ವಿ.ಶ್ರೀನಿವಾಸ್ ಅವರು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಆಪ್ತರು. ಶ್ರೀನಿವಾಸ್ ಅವರು ವಿಧಾನ ಪರಿಷತ್ ಸದಸ್ಯ ಸ್ಥಾನವನ್ನು ಈ ಹಿಂದೆ ನಿರಾಕರಿಸಿದ್ದರು. ರಾಜ್ಯಸಭೆಗೆ ತಮ್ಮನ್ನು ಪರಿಗಣಿಸಬೇಕು ಎಂದು ಹೈಕಮಾಂಡ್ ನಾಯಕರಲ್ಲಿ ಕೋರಿದ್ದರು. ಆದರೆ, 2029ರ ಚುನಾವಣೆಯಲ್ಲಿ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಸಿದ್ಧತೆ ನಡೆಸುವಂತೆ ಶ್ರೀನಿವಾಸ್ ಅವರಿಗೆ ಹೈಕಮಾಂಡ್ ನಾಯಕರು ಸಲಹೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸುಪ್ರೀಂ ಕೋರ್ಟ್ ಹಿರಿಯ ವಕೀಲ ಮೋಹನ್ ಕಾತರಕಿ ಅವರನ್ನು ರಾಜ್ಯಸಭೆಗೆ ಪರಿಗಣಿಸಬೇಕು ಎಂದು ಬೆಳಗಾವಿ ಜಿಲ್ಲಾ ಕಾಂಗ್ರೆಸ್‌ನ ಮುಖಂಡರು ಹೈಕಮಾಂಡ್‌ಗೆ ಮನವಿ ಸಲ್ಲಿಸಿದ್ದಾರೆ. ಹೈಕಮಾಂಡ್ ಆಯ್ಕೆಯಾಗಿ ಎಐಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರ ಹೆಸರು ಕೇಳಿ ಬರುತ್ತಿದೆ. ಆದರೆ, ಅವರನ್ನು ರಾಜಸ್ಥಾನದಿಂದ ಕಣಕ್ಕಿಳಿಸುವ ಸಂಭವ ಇದೆ. ಕರ್ನಾಟಕದಲ್ಲಿ ಅನ್ಯ ರಾಜ್ಯದವರಿಗೆ ಮಣೆ ಹಾಕುವ ಬದಲು ರಾಜ್ಯದ ನಾಯಕರಿಗೆ ಆದ್ಯತೆ ನೀಡಬೇಕು ಎಂಬ ಒತ್ತಡವೂ ಇದೆ.

ನಾಲ್ಕು ಸ್ಥಾನಗಳಿಗೆ ಸಂಭಾವ್ಯರು

ಕಾಂಗ್ರೆಸ್
- ಮಲ್ಲಿಕಾರ್ಜುನ ಖರ್ಗೆ
- ಬಿ.ವಿ.ಶ್ರೀನಿವಾಸ್
- ಮೋಹನ್ ಕಾತರಕಿ
- ವಿ.ಆರ್.ಸುದರ್ಶನ್
- ಅಂಜಲಿ ನಿಂಬಾಳ್ಕರ್
- ಮುದ್ದ ಹನುಮೇಗೌಡ
- ಡಾ.ಬಿ.ಜೆ. ವಿಜಯ ಕುಮಾರ್

ಬಿಜೆಪಿ
- ಡಿ.ವಿ.ಸದಾನಂದ ಗೌಡ
- ನಿರ್ಮಲ್ ಕುಮಾರ್ ಸುರಾನಾ

ಜೆಡಿಎಸ್
- ಎಚ್.ಡಿ.ದೇವೇಗೌಡ

ಮೇಲ್ಮನೆಯಲ್ಲಿ ಬಿಜೆಪಿ ಬಲ ಯಥಾಸ್ಥಿತಿ: ಈ ಚುನಾವಣೆಯಲ್ಲಿ ವಿರೋಧ ಪಕ್ಷವು ಅಲ್ಪ ಲಾಭ ಗಳಿಸುವ ಸಾಧ್ಯತೆಯಿದೆ. ಆದರೆ, ಆಡಳಿತಾರೂಢ ಎನ್‌ಡಿಎ ತನ್ನ ಹಾಲಿ ಸ್ಥಾನಗಳ ಸಂಖ್ಯೆಯನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಬಹುದು.

ಮಹಾರಾಷ್ಟ್ರ ಉಪಮುಖ್ಯಮಂತ್ರಿ, ಎನ್‌ಸಿಪಿಯ ಸುನೇತ್ರಾ ಪವಾರ್ ಮತ್ತು ಶಾಸಕರಾಗಿರುವ ಎಐಎಡಿಎಂಕೆಯ ಸಿ.ವಿ. ಷಣ್ಮುಗಂ ಅವರ ರಾಜೀನಾಮೆಯಿಂದ ತೆರವಾಗಿದ್ದ ಮಹಾರಾಷ್ಟ್ರ ಮತ್ತು ತಮಿಳುನಾಡಿನ ಎರಡು ರಾಜ್ಯಸಭಾ ಸ್ಥಾನಗಳಿಗೆ ಉಪಚುನಾವಣೆಯೂ ಅದೇ ದಿನ ನಡೆಯಲಿದೆ.

ತಮಿಳುನಾಡಿನಲ್ಲಿ ನಡೆಯುವ ಉಪಚುನಾವಣೆ ಕುತೂಹಲ ಮೂಡಿಸಿದೆ. ಏಕೆಂದರೆ, ಆಡಳಿತಾರೂಢ ಟಿವಿಕೆ ಮೇಲ್ಮನೆಗೆ ಪ್ರವೇಶಿಸುತ್ತದೆಯೇ ಅಥವಾ ಆ ಸ್ಥಾನವನ್ನು ಮಿತ್ರಪಕ್ಷ ಕಾಂಗ್ರೆಸ್‌ಗೆ ಬಿಟ್ಟುಕೊಡುತ್ತದೆಯೇ ಎಂದು ಕಾದು ನೋಡಬೇಕಾಗಿದೆ. ಮಹಾರಾಷ್ಟ್ರದಲ್ಲಿ ನಡೆಯುವ ಉಪಚುನಾವಣೆಯಲ್ಲಿ ಎನ್‌ಡಿಎ ಗೆಲ್ಲಲಿದೆ.

ಉಪಚುನಾವಣೆಗೆ ನಡೆಯುವ ಎರಡು ಸ್ಥಾನಗಳು ಸೇರಿದಂತೆ 26 ಸ್ಥಾನಗಳಲ್ಲಿ ಎನ್‌ಡಿಎ 18 ಸ್ಥಾನಗಳನ್ನು ಹೊಂದಿದ್ದರೆ, ಕಾಂಗ್ರೆಸ್ ನಾಲ್ಕು, ಜೆಎಂಎಂ ಒಂದು ಮತ್ತು ವೈಎಸ್‌ಆರ್ ಕಾಂಗ್ರೆಸ್ ಮೂರು ಸ್ಥಾನಗಳನ್ನು ಹೊಂದಿವೆ. ಎನ್‌ಡಿಎ 18 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆಯಿದೆ. ವಿರೋಧ ಪಕ್ಷದ ಸದಸ್ಯರ ಸಂಖ್ಯೆ ಐದರಿಂದ ಎಂಟಕ್ಕೆ ಏರುತ್ತದೆ. ವೈಎಸ್‌ಆರ್ ಕಾಂಗ್ರೆಸ್ ತನ್ನ ಮೂರು ಸ್ಥಾನಗಳನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ. ಗುಜರಾತ್‌ನಲ್ಲಿ ಎಲ್ಲ ನಾಲ್ಕು ಸ್ಥಾನಗಳನ್ನು ಬಿಜೆಪಿ ಗೆಲ್ಲಲಿದೆ. ರಾಜ್ಯದಲ್ಲಿ ಕಾಂಗ್ರೆಸ್ ತನ್ನ ಪ್ರಾತಿನಿಧ್ಯ ಕಳೆದುಕೊಳ್ಳಲಿದೆ.

ಒಂದೇ ದಿನ 2 ಬಾರಿ ಬದಲಾದ ರಾಷ್ಟ್ರೀಯ ದಾಖಲೆ

ರಾಂಚಿ (ಪಿಟಿಐ): ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸೀನಿಯರ್ ಅಥ್ಲೆಟಿಕ್ಸ್ ಫೆಡರೇಷನ್ ಕಪ್ ಕೂಟದ ಮೊದಲ ದಿನವಾದ ಶುಕ್ರವಾರ ಪುರುಷರ 100 ಮೀ. ಓಟದ ರಾಷ್ಟ್ರೀಯ ದಾಖಲೆಯು ಎರಡು ಬಾರಿ ಬದಲಾಯಿತು.

ಮೊದಲ ಸೆಮಿಫೈನಲ್ ಹೀಟ್ಸ್‌ನಲ್ಲಿ ರಿಲಯನ್ಸ್ ತಂಡದ ಗುರಿಂದರ್‌ವೀರ್ ಸಿಂಗ್ ಅವರು 10.17 ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ಅನಿಮೇಶ್ ಕುಜೂರ್ (10.18ಸೆ) ಅವರು 10 ತಿಂಗಳ ಹಿಂದೆ ನಿರ್ಮಿಸಿದ್ದ ರಾಷ್ಟ್ರೀಯ ದಾಖಲೆಯನ್ನು ಮುರಿದರು.

ಅದಾದ ಕೆಲವೇ ನಿಮಿಷದಲ್ಲಿ ನಡೆದ ಎರಡನೇ ಸೆಮಿಫೈನಲ್ ಹೀಟ್ಸ್‌ನಲ್ಲಿ ಅನಿಮೇಶ್ 10.15 ಸೆಕೆಂಡುಗಳಲ್ಲಿ ಓಡಿ, ದಾಖಲೆಯ ಒಡೆತನ ಮರಳಿ ಪಡೆದರು. ಶನಿವಾರ ನಡೆಯುವ ಫೈನಲ್‌ನಲ್ಲಿ ಗುರಿಂದರ್‌ವೀರ್ ಮತ್ತು ಅನಿಮೇಶ್ ಮತ್ತೆ ಕಣಕ್ಕಿಳಿಯಲಿದ್ದಾರೆ.

ಒಡಿಶಾವನ್ನು ಪ್ರತಿನಿಧಿಸುವ ಅನಿಮೇಶ್ 2026ರ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೂ ಅರ್ಹತೆ ಸಂಪಾದಿಸಿದ್ದಾರೆ. ಅವರು ಭಾರತ ಅಥ್ಲೆಟಿಕ್ಸ್ ಫೆಡರೇಷನ್ ನಿಗದಿಪಡಿಸಿದ್ದ ಅರ್ಹತಾ ಮಾನದಂಡ (10.16 ಸೆ) ದಾಟಿದ್ದಾರೆ.

ಬೆಳಗಿನ ಅವಧಿಯಲ್ಲಿ ಉತ್ತರಾಖಂಡದ ದೀಪಕ್ ಭಟ್ ಅವರು ಪುರುಷರ 10,000 ಮೀ ಓಟವನ್ನು 29 ನಿಮಿಷ 42.93 ಸೆಕೆಂಡುಗಳಲ್ಲಿ ತಲುಪಿ ಪ್ರಶಸ್ತಿ ಗೆದ್ದರು. ಕರ್ನಾಟಕದ ಅಥ್ಲೀಟ್ ಶಿವಾಜಿ ಎಂ. ಅವರು ಸ್ಪರ್ಧೆಯ ವೇಳೆ ನಿರ್ಜಲೀಕರಣದಿಂದ ಬಳಲುತ್ತಿದ್ದರು. ತಂಡದ ತರಬೇತುದಾರರು ಅವರ ನೆರವಿಗೆ ಧಾವಿಸಿದರು.

ಮಹಾರಾಷ್ಟ್ರದ ರವಿನಾ ಗಾಯಕವಾಡ್ ಮಹಿಳೆಯರ 10,000 ಮೀ. ಓಟವನ್ನು 35 ನಿಮಿಷ 30.98 ಸೆಕೆಂಡ್‌ಗಳಲ್ಲಿ ಕ್ರಮಿಸಿ ಗೆದ್ದರು.

ಕ್ರಿಕೆಟ್: ವಿಜಯಶಂಕರ್ ವಿದಾಯ

ನವದೆಹಲಿ (ಪಿಟಿಐ): ಭಾರತ ತಂಡದ ಆಲ್‌ರೌಂಡರ್ ವಿಜಯಶಂಕರ್ ಅವರು ದೇಶಿ ಕ್ರಿಕೆಟ್ ಮತ್ತು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್‌ನಿಂದ ಶುಕ್ರವಾರ ನಿವೃತ್ತಿ ಘೋಷಿಸಿದರು.

'ಹೊಸ ಅವಕಾಶಗಳನ್ನು ಬಳಸಿಕೊಂಡು ಹೆಚ್ಚು ಕ್ರಿಕೆಟ್ ಆಡುವ ಉದ್ದೇಶದಿಂದ ವಿದಾಯ ಹೇಳಿರುವೆ' ಎಂದು ವಿಜಯ್ ಅವರು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದಾರೆ.

35 ವರ್ಷದ ವಿಜಯ್ 12 ಅಂತರ ರಾಷ್ಟ್ರೀಯ ಏಕದಿನ ಮತ್ತು 9 ಟಿ20 ಪಂದ್ಯಗಳನ್ನು ಆಡಿದ್ದಾರೆ. 2018 ಮತ್ತು 2019ರಲ್ಲಿ ಅವರು ಭಾರತ ತಂಡವನ್ನು ಪ್ರತಿನಿಧಿಸಿದ್ದರು. ತಮ್ಮ ತವರು ತಮಿಳುನಾಡು ತಂಡದಲ್ಲಿ ದೇಶಿಕ್ರಿಕೆಟ್‌ನಲ್ಲಿ ಆಡಿದ್ದರು. ಹೋದ ಋತುವಿನಲ್ಲಿ ಅವರು ತ್ರಿಪುರ ತಂಡವನ್ನು ಸೇರಿದ್ದರು.

'ಕ್ರಿಕೆಟ್ ಎಂದರೆ ನನಗೆ ಜೀವನ. ಹತ್ತು ವರ್ಷದವನಿದ್ದಾಗ ಆಡಲು ಆರಂಭಿಸಿದೆ. 25 ವರ್ಷಗಳಲ್ಲಿ ನಾನು ಎಲ್ಲ ಹಂತಗಳಲ್ಲಿ ಆಡಿರುವ ತೃಪ್ತಿ ಇದೆ. ಭಾರತ ತಂಡಕ್ಕೆ ಆಡಿದೆ. ದೇಶದ ತಂಡವನ್ನು ಪ್ರತಿನಿಧಿಸುವುದು ಯಾವಾಗಲೂ ಹೆಮ್ಮೆಯ ಸಂಗತಿ. ದೇಶಿ ಮತ್ತು ಐಪಿಎಲ್ ಟೂರ್ನಿಗಳಿಂದ ನಿವೃತ್ತಿ ಪಡೆಯಲು ನಿರ್ಧರಿಸಿದ್ದೇನೆ. ಹೊಸ ಅವಕಾಶಗಳತ್ತ ಮುಖ ಮಾಡಿರುವೆ' ಎಂದು ಅವರು ಸಾಮಾಜಿಕ ತಾಣದಲ್ಲಿ ಬರೆದಿದ್ದಾರೆ.



ವಿಜಯ್ ಶಂಕರ್

2019ರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದ ಭಾರತ ತಂಡದಲ್ಲಿ ವಿಜಯಶಂಕರ್ ಇದ್ದರು. ಆ ಟೂರ್ನಿಯಲ್ಲಿ ವೆಸ್ಟ್ ಇಂಡೀಸ್ ಪಂದ್ಯದಲ್ಲಿ ಆಡಿದ್ದರು. ಅದರ ನಂತರ ಅವರು ಏಕದಿನ ಟೂರ್ನಿಯಲ್ಲಿ ಆಡುವ ಅವಕಾಶ ಪಡೆದಿಲ್ಲ.

ಐಪಿಎಲ್‌ನಲ್ಲಿ ಅವರು ಚೆನ್ನೈ ಸೂಪರ್ ಕಿಂಗ್ಸ್, ಸನ್‌ರೈಸರ್ಸ್ ಹೈದರಾಬಾದ್, ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಗುಜರಾತ್ ಟೈಟನ್ಸ್ ತಂಡಗಳಲ್ಲಿ ಆಡಿದ್ದರು.

ಬಲಗೈ ಬ್ಯಾಟಿಂಗ್ ಆಲ್‌ರೌಂಡರ್ ವಿಜಯ್ 77 ಪ್ರಥಮ ದರ್ಜೆ ಪಂದ್ಯಗಳಿಂದ 4253 ಮತ್ತು 112 ಲಿಸ್ಟ್ ಎ ಪಂದ್ಯಗಳಲ್ಲಿ 2790 ರನ್ ಗಳಿಸಿದರು. 159 ಟಿ20 ಪಂದ್ಯಗಳಿಂದ 2583 ರನ್ ಗಳಿಸಿದ್ದಾರೆ. ಅದರಲ್ಲಿ 15 ಅರ್ಧಶತಕಗಳಿವೆ. 73 ವಿಕೆಟ್ ಪಡೆದಿದ್ದಾರೆ.

ಎಸ್‌.ಎಂ.ಕೃಷ್ಣ ಸ್ಮರಣಾರ್ಥ ಎಟಿಪಿ ಚಾಲೆಂಜರ್ ಟೆನಿಸ್

ಫೈನಲ್‌ಗೆ ಇವಾಶ್ಕ– ಬಿಯುರ್ಕೋವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಲರೂಸ್‌ನ ಇಲ್ಯಾ ಇವಾಶ್ಕ ಮತ್ತು ಬ್ರಿಟನ್‌ನ ಹಮಿಶ್ ಸ್ಟುವರ್ಟ್ ಅವರು ಶುಕ್ರವಾರ ನಡೆದ ಸಿಂಗಲ್ಸ್ ಸೆಮಿಫೈನಲ್ ಪಂದ್ಯದಲ್ಲಿ ಚೆಂಡನ್ನು ಬಿರುಸಾಗಿ ಹೊಡೆದಟ್ಟುವ ಪೈಪೋಟಿಯಲ್ಲಿ ತೊಡಗಿದಂತೆ ಕಂಡುಬಂದಿತು. ಅಂತಿಮವಾಗಿ ಆಟವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿದ ಇವಾಶ್ಕ ಜಯಶಾಲಿಯಾಗಿ ಎಸ್‌.ಎಂ.ಕೃಷ್ಣ ಸ್ಮರಣಾರ್ಥ ಎಟಿಪಿ ಚಾಲೆಂಜರ್ ಟೂರ್ನಿಯ ಫೈನಲ್ ತಲುಪಿದರು

ಕಬ್ಬನ್‌ಪಾರ್ಕ್‌ನ ಎಸ್‌.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಶ್ರೇಯಾಂಕರಹಿತ ಆಟಗಾರ ಇವಾಶ್ಕ 6-3, 3-6, 6-2 ರಿಂದ ಮೂರನೇ ಶ್ರೇಯಾಂಕದ ಹಮಿಶ್ ಅವರನ್ನು ಸೋಲಿಸಿದರು. ಈ ಪಂದ್ಯ 2 ಗಂಟೆ 7 ನಿಮಿಷ ನಡೆಯಿತು.

ಹಿಂದೊಮ್ಮೆ ವಿಶ್ವ ಕ್ರಮಾಂಕದಲ್ಲಿ ಅಗ್ರ 50ರೊಳಗೆ ಸ್ಥಾನ ಪಡೆದಿದ್ದ 32 ವರ್ಷ ವಯಸ್ಸಿನ ಇವಾಶ್ಕ ಸತತ ಎರಡನೇ ವಾರ ಚಾಲೆಂಜರ್ ಟೂರ್ನಿಯ ಸೆಮಿಫೈನಲ್ ತಲುಪಿದರು. ಅವರು ತಮ್ಮ ಸರ್ವ್‌ಗಳಲ್ಲಿ ಕರಾರುವಾಕ್ ಆಗಿದ್ದರು. ಬಿರುಸಾದ ಗ್ರೌಂಡ್‌ಸ್ಟ್ರೋಕ್‌ಗಳು ಅವರಿಗೆ ಹೇರಳ ಪಾಯಿಂಟ್‌ಗಳನ್ನು ತಂದುಕೊಟ್ಟವು.

ಹಮಿಶ್, ಎದುರಾಳಿಯ ಆಟದ ವೇಗವನ್ನು ನಿಭಾಯಿಸುವಲ್ಲಿ ಪರದಾಡಿದರು. ಹೀಗಾಗಿ ಇವಾಶ್ಕ ಅವರಿಗೆ ಮೇಲುಗೈ ಸಾಧಿಸಲು ಸಾಧ್ಯವಾಯಿತು. ಎರಡನೇ ಸೆಟ್‌ನಲ್ಲಿ ತಂತ್ರ ಬದಲಾಯಿಸಿ ಹೆಚ್ಚು ರ್‍ಯಾಲಿ ಮತ್ತು ದೂರದ ಹೊಡೆತಗಳನ್ನು ಪ್ರಯೋಗಿಸಿದ ಬ್ರಿಟನ್‌ನ ಆಟಗಾರ ಎದುರಾಳಿಯ ಮೇಲುಗೈಗೆ ಕೆಲಕಾಲ ತಡೆಯೊಡ್ಡಿದ್ದರು. ಕೆಲವು ಲೈನ್ ತೀರ್ಪುಗಳು ಇವಾಶ್ಕ ಅವರ ಏಕಾಗ್ರತೆಗೆ ಸವಾಲೊಡ್ಡಿದವು.

6ಅಡಿ4 ಇಂಚು ಎತ್ತರದ ಬೆಲರೂಸ್‌ನ ಆಟಗಾರ ಅಂತಿಮ ಸೆಟ್‌ನಲ್ಲಿ ಸಂಯಮ ವಹಿಸಿ ಆಡಿದರು. ಆರು ಮತ್ತು ಎಂಟನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಮುರಿದು ಪಂದ್ಯ ಗೆದ್ದರು.


ಚೆಂಡನ್ನು ಹೊಡೆದಟ್ಟಿದ ರಷ್ಯಾದ ಪೀಟರ್ ಬರ್ ಬಿಯುರ್ಕೋವ್ ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ವಿಶ್ವ ಕ್ರಮಾಂಕದಲ್ಲಿ ಸದ್ಯ 631ನೇ ಸ್ಥಾನದಲ್ಲಿರುವ ಇವಾಶ್ಕ ಅವರು ಫೈನಲ್ ಪಂದ್ಯದಲ್ಲಿ ರಷ್ಯಾದ ಪೀಟರ್ ಬರ್ ಬಿಯುರ್ಕೋವ್ ಅವರನ್ನು ಎದುರಿಸಲಿದ್ದಾರೆ. 24 ವರ್ಷ ವಯಸ್ಸಿನ ಬಿಯುರ್ಕೋವ್ ಇನ್ನೊಂದು ಸೆಮಿಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಅಲಸ್ಟರ್ ಗ್ರೇ ಅವರ ಸವಾಲನ್ನು 3-6, 6-4, 7-6 (5) ರಿಂದ ಬದಿಗೊತ್ತಿದರು.

ಡಬಲ್ಸ್: ಅದಿಲ್ ಕಲ್ಯಾಣಪುರ– ಮುಕುಂದ ಶಶಿಕುಮಾರ್ ಜೋಡಿ ಡಬಲ್ಸ್ ಸೆಮಿಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಚಾರ್ಲ್ಸ್ ಬ್ಯಾರಿ– ಜೋಶುವಾ ಚಾರ್ಲ್‌ಟನ್ (ಆಸ್ಟ್ರೇಲಿಯಾ) ಅವರನ್ನು ಸೋಲಿಸಿತು. ಇನ್ನೊಂದು ಸೆಮಿಫೈನಲ್‌ನಲ್ಲಿ ಪೀಟರ್ ಬರ್ ಬಿಯುರ್ಕೋವ್– ಗ್ರಿಗೊರಿ ಲೊಮಾಕಿನ್ (ಕಜಾಕಸ್ತಾನ) ಜೋಡಿ 6-3, 6-4 ರಿಂದ ನಿಕಿ ಕಲಿಯಂಡ ಪೂಣಚ್ಚ– ಸಾಕೇತ್ ಮೈನೇನಿ ಜೋಡಿಯನ್ನು ಹಿಮ್ಮೆಟ್ಟಿಸಿತು.

ಕರುವಾನಗೆ ಮಣಿದ ಪ್ರಜ್ಞಾನಂದ

ಬುಕಾರೆಸ್ಟ್ (ರೊಮೇನಿಯಾ), (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಪ್ರಜ್ಞಾನಂದ ಅವರು ಸೂಪರ್ ಚೆಸ್ ಕ್ಲಾಸಿಕ್ ಟೂರ್ನಿಯಲ್ಲಿ ಮೊದಲ ಸೋಲು ಅನುಭವಿಸಿದರು. ಗುರುವಾರ ರಾತ್ರಿ ನಡೆದ ಏಳನೇ ಸುತ್ತಿನಲ್ಲಿ ಚೆನ್ನೈನ ಆಟಗಾರ ಅಮೆರಿಕದ ಫ್ಯಾಬಿಯಾನೊ ಕರುವಾನಾ ಅವರಿಗೆ 33 ನಡೆಗಳಲ್ಲಿ ಸೋತರು.

ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಈ ಟೂರ್ನಿಯಲ್ಲಿ ಇನ್ನು ಎರಡು ಸುತ್ತುಗಳಷ್ಟೇ ಬಾಕಿವುಳಿದಿವೆ.

ಏಳನೇ ಸುತ್ತಿನಲ್ಲಿ ನಾಟಕೀಯ ಬೆಳವಣಿಗೆಗಳು ನಡೆದವು. ಆರನೇ ಸುತ್ತಿನವರೆಗೆ ಮುನ್ನಡೆ ಕಾಯ್ದುಕೊಂಡಿದ್ದ ಜರ್ಮನಿಯ ವಿನ್ಸೆಂಟ್ ಕೀಮರ್ ಅವರು ಗುರುವಾರ ವಿಶ್ವಕಪ್ ಚಾಂಪಿಯನ್ ಜಾವೊಖಿರ್ ಸಿಂದರೋವ್ (ಉಜ್ಬೇಕಿಸ್ತಾನ) ಅವರಿಗೆ 40 ನಡೆಗಳಲ್ಲಿ ಮಣಿದರು. ಡಚ್ ಗ್ರ್ಯಾಂಡ್‌ಮಾಸ್ಟರ್ ಜೋರ್ಡನ್ ವಾನ್ ಫೋರೀಸ್ಟ್ ಅವರು, ಫ್ರಾನ್ಸ್‌ನ ಅಲಿರೇಝಾ ಫಿರೋಜ್‌ಜಾ ಅವರಿಂದ ದೊರೆತ ವಾಕ್‌ಓವರ್‌ನಿಂದ ಒಂದು ಪಾಯಿಂಟ್ ಪಡೆದರು. ಹೀಗಾಗಿ ಕೀಮರ್, ಫೋರೀಸ್ಟ್ ಮತ್ತು ಕರುವಾನ– ಈ ಮೂರು ಮಂದಿ ತಲಾ 4.5 ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್, ಪ್ರಜ್ಞಾನಂದ, ಅಮೆರಿಕದ ವೆಸ್ಲಿ ಸೊ, ಸಿಂದರೋವ್ ಅವರು ತಲಾ 3.5 ಅಂಕ ಕಲೆಹಾಕಿದ್ದಾರೆ. ನೆದರ್ಲೆಂಡ್ಸ್‌ನ ಅನೀಶ್ ಗಿರಿ (3) ಮತ್ತು ರೊಮೇನಿಯಾದ ಡೀಕ್ ಡೇನಿಯಲ್ (2.5) ನಂತರದ ಸ್ಥಾನದಲ್ಲಿದ್ದಾರೆ.

ರಾಜ್ಯ ಸಬ್ ಜೂನಿಯರ್ ರ್‍ಯಾಂಕಿಂಗ್ ಬ್ಯಾಡ್ಮಿಂಟನ್

ಸೆಮಿಗೆ ಮೆಹುಲ್, ಪಿಯೂಷ್

ಪ್ರಜಾವಾಣಿ ವಾರ್ತೆ

ವಿಜಯಪುರ: ಅಗ್ರ ಶ್ರೇಯಾಂಕದ ಮೆಹುಲ್ ಮಾನವ್ ಅರುಳ್ ಮುರುಗನ್, ಮೂರನೇ ಶ್ರೇಯಾಂಕದ ಪಿಯೂಷ್ ತ್ರಿಪಾಠಿ ಅವರು ಡಾ.ಬಿ.ಆರ್. ಅಂಬೇಡ್ಕರ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಯಾನೆಕ್ಸ್-ಸನ್‌ರೈಸ್' ಕರ್ನಾಟಕ ರಾಜ್ಯ ಸಬ್ ಜೂನಿಯರ್ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯ 17 ವರ್ಷದೊಳಗಿನವರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್ ತಲುಪಿದರು.

ಮೊದಲ ಬಾರಿ ನಗರದಲ್ಲಿ ನಡೆಯುತ್ತಿರುವ ಈ ಟೂರ್ನಿಯ ಪಂದ್ಯಗಳು ಉತ್ತಮ ಪೈಪೋಟಿಯಿಂದ ಕೂಡಿದ್ದವು. ಶುಕ್ರವಾರ ಬಹುತೇಕ ಪಂದ್ಯಗಳು ಮೂರು ಗೇಮ್‌ಗಳನ್ನು ಕಂಡವು.

ಅರುಳ್‌ಮುರುಗನ್ 21-19, 16-21, 21-12 ರಿಂದ ಸಾತ್ವಿಕ್ ಎಸ್. ಪ್ರಭು ಅವರನ್ನು ಸೋಲಿಸಿದರು. ಇತರ ಪಂದ್ಯಗಳಲ್ಲಿ ಪಿಯೂಷ್ 21-15, 14-21, 21-16 ರಿಂದ ಇವಾನ್ ಫರ್ನಾಂಡಿಸ್ ಅವರನ್ನು, ಐದನೇ ಶ್ರೇಯಾಂಕದ ಶಿವರಾಜ್ ಕಬ್ಬೇರಳ್ಳಿ 21-18, 21-23, 21-13 ರಿಂದ ದೇವಾಂಶ್ ಚೌಧರಿ ಅವರನ್ನು ಹಾಗೂ ಡೈಲನ್ ಪಿ. ಥೋಕ್‌ಚೋಮ್ 21-11, 18-21, 21-14 ರಿಂದ ಶ್ಯಾಮ್ ಬಿಂದಿಗನವಿಲೆ ಅವರನ್ನು ಸೋಲಿಸಿದರು.

15 ವರ್ಷದೊಳಗಿನವರ ವಿಭಾಗದಲ್ಲಿ 13ನೇ ಶ್ರೇಯಾಂಕದ ಯಶೋವರ್ಧನ್ ಎಸ್.ಆರ್. (ಬೆಂಗಳೂರು ಗ್ರಾಮಾಂತರ) ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 21-18, 21-10 ರಲ್ಲಿ ನೇರ ಗೇಮ್‌ಗಳಿಂದ ರಾಯಚೂರಿನ ರೋಹನ್ ಕರುತುರಿ ಅವರನ್ನು ಸೋಲಿಸಿದರು.

ಎಂಟರ ಘಟ್ಟದ ಇತರ ಪಂದ್ಯಗಳಲ್ಲಿ ಇಶಾನ್ ಪಾಠಕ್ 21-15, 21-15 ರಿಂದ ಮಾಧವ ಸತೀಶ್ ವೀಣ ವಿರುದ್ಧ, ಬಿ. ಬಿ.ವಿಶಾಲ್ ಉತ್ತಪ್ಪ 21-18, 16-21, 21-19 ರಿಂದ ಆಯುಷ್ ಮಿಶ್ರಾ ವಿರುದ್ಧ, ಗೌತಮ್ ಎಸ್. ನಾಯರ್ 21-10, 21-7 ರಿಂದ 16ನೇ ಶ್ರೇಯಾಂಕದ ಅರ್ಜುನ್ ಅಗ್ರವಾಲ್ ವಿರುದ್ಧ ಜಯಗಳಿಸಿ ಸೆಮಿಫೈನಲ್ ಪ್ರವೇಶಿಸಿದರು.

ಮಿಂಚಿದ ಮಹಿತಾ: 15 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಮಹಿತಾ ನಾಯ್ಡು ಸುರಿಸೆಟ್ಟಿ (ಬೆಂಗಳೂರು ನಗರ) 21-8, 21-15 ರಿಂದ ಲಿಶಾ ವಿ. ವಿರುದ್ಧ ಜಯಗಳಿಸಿ ಸೆಮಿಫೈನಲ್‌ಗೆ ಮುನ್ನಡೆದರು.

ಇತರ ಪಂದ್ಯಗಳಲ್ಲಿ ಮೂರನೇ ಶ್ರೇಯಾಂಕದ ಆದಿತಿ ಸುಶಾಂತ್ 21-18, 21-1 8 ರಿಂದ ಸಿರಿ ಟಿ. ಆರ್. ವಿರುದ್ಧ, ಆರನೇ ಶ್ರೇಯಾಂಕದ ಹನ್ಸಿಕಾ ರಾಕೇಶ್ 21-17, 12-21, 21-13 ರಿಂದ ಹಂಸಾ ಮುರಳಿಧರ ವಿರುದ್ಧ, ಸ್ಮೃತಿ ಎಸ್. 21-16, 17-21, 21-15 ರಿಂದ ಎಂಟನೇ ಶ್ರೇಯಾಂಕದ ಜೋಹನ್ನಾ ಅಹಿಲನ್ ವಿರುದ್ಧ ಗೆಲುವು ಸಾಧಿಸಿದರು.

17 ವರ್ಷದೊಳಗಿನ ಬಾಲಕಿಯರ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಅಗ್ರ ಶ್ರೇಯಾಂಕದ ಕೀರ್ತಿ ಬಾಲಾಜಿ 21-9, 21-17 ರಿಂದ ಯಶಿಕಾ ಶಿವಪ್ರಕಾಶ್ ವಿರುದ್ಧ, ಮಹಿತಾ ನಾಯ್ಡು ಸುರಿಸೆಟ್ಟಿ 21-10, 21-9 ರಿಂದ ಹಂಸಾ ಮುರಳಿಧರ ವಿರುದ್ಧ, ಸಿರಿ ಟಿ.ಆರ್. 21-14, 11-21, 22-20 ರಿಂದ 17ನೇ ಶ್ರೇಯಾಂಕದ ಡೆಬೋರಾ ಜಾನ್ ವಿರುದ್ಧ; ಹಾಗೂ ಆದಿತಿ ಸುಶಾಂತ್ 21-17, 21-18 ರಿಂದ ಐದನೇ ಶ್ರೇಯಾಂಕದ ಶ್ರೀನಾಗಲಕ್ಷ್ಮಿ ಪಿ. ವಿರುದ್ಧ ಜಯಗಳಿಸಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.



ವಿಜಯಪುರದಲ್ಲಿ ಶುಕ್ರವಾರ ನಡೆದ 15 ವರ್ಷದ ಒಳಗಿನ ಬ್ಯಾಡ್ಮಿಂಟನ್ ಮಿಶ್ರ ಡಬಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಯುವನ್ ಕೃಷ್ಣ ರವೆಲ್ಲಾ ಮತ್ತು ನೀಹಾರಿಕಾ ಎ.ಪಿ ಅವರು ಉತ್ತಮ ಪೈಪೋಟಿ ನೀಡಿದರು ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ



ಅಗ್ರಸ್ಥಾನದಲ್ಲೇ ಉಳಿದ ಆರ್‌ಸಿಬಿ

ಪಂದ್ಯ ಗೆದ್ದರೂ ಮೊದಲೆರಡರಲ್ಲಿ ಸ್ಥಾನ ಗಳಿಸಲು ವಿಫಲವಾದ ಸನ್‌ರೈಸರ್ಸ್ ಹೈದರಾಬಾದ್

ಹೈದರಾಬಾದ್ (ಪಿಟಿಐ): ಪ್ರಮುಖ ಬ್ಯಾಟರ್‌ಗಳ ಕಾಣಿಕೆಯಿಂದಾಗಿ ದೊಡ್ಡ ಮೊತ್ತ ಕಲೆಹಾಕಿದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಶುಕ್ರವಾರ ಐಪಿಎಲ್‌ನ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು 55 ರನ್‌ಗಳಿಂದ ಸುಲಭವಾಗಿ ಮಣಿಸಿತು. ಈ ಸೋಲಿನ ಹೊರತಾಗಿಯೂ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡವು ಅಂಕಪಟ್ಟಿಯಲ್ಲಿ ಅಗ್ರಸ್ಥಾನವನ್ನು ಉಳಿಸಿಕೊಂಡಿತು.

ಈ ಮೊದಲೇ ಪ್ಲೇ ಆಫ್ ಪ್ರವೇಶಿಸಿದ್ದ ಆರ್‌ಸಿಬಿ, ಗುಜರಾತ್ ಟೈಟನ್ಸ್ ಮತ್ತು ಸನ್‌ರೈಸರ್ಸ್ ತಂಡಗಳು ತಲಾ 18 ಅಂಕಗಳೊಂದಿಗೆ ಲೀಗ್ ಹಂತದ ಅಭಿಯಾನವನ್ನು ಮುಗಿಸಿದವು. ಆದರೆ, ನೆಟ್ ರನ್‌ರೇಟ್ ಆಧಾರದಲ್ಲಿ ಬೆಂಗಳೂರು (0.783) ಮತ್ತು ಟೈಟನ್ಸ್ (0.695) ತಂಡಗಳು ಕ್ರಮವಾಗಿ ಮೊದಲೆರಡು ಸ್ಥಾನಗಳನ್ನು ಗಳಿಸಿದವು. ಈ ತಂಡಗಳು ಇದೇ 26ರಂದು ನಡೆಯುವ ಮೊದಲ ಕ್ವಾಲಿಫೈಯರ್‌ನಲ್ಲಿ ಮುಖಾಮುಖಿಯಾಗಲಿವೆ.

ಸನ್‌ರೈಸರ್ಸ್ ತಂಡವು ಈ ಪಂದ್ಯವನ್ನು ಕನಿಷ್ಠ 89 ರನ್‌ಗಳ ಅಂತರದಿಂದ ಗೆದ್ದಿದ್ದರೆ ಎರಡನೇ ಸ್ಥಾನ ಗಳಿಸುವ ಅವಕಾಶವಿತ್ತು. ಇದೀಗ ಮೂರನೇ ಸ್ಥಾನದಲ್ಲೇ ಉಳಿದ ಪ್ಯಾಟ್ ಕಮಿನ್ಸ್ (0.524) ಬಳಗವು ಇದೇ 27ರಂದು ನಡೆಯುವ ಎಲಿಮಿನೇಟರ್ ಪಂದ್ಯವನ್ನು ಆಡಬೇಕಿದೆ.

ರಾಜೀವಗಾಂಧಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ತಂಡದ ಬ್ಯಾಟರ್ ಅಭಿಷೇಕ್ ಶರ್ಮಾ (56;22ಎ), ಇಶಾನ್ ಕಿಶನ್ (79;46ಎ) ಮತ್ತು ಹೆನ್ರಿಚ್ ಕ್ಲಾಸೆನ್ (51;24ಎ) ಅವರು ಅಬ್ಬರದ ಅರ್ಧಶತಕ ದಾಖಲಿಸಿದರು. ಇದರಿಂದಾಗಿ ತಂಡವು 4 ವಿಕೆಟ್‌ಗಳಿಗೆ 255 ರನ್‌ಗಳ ಭಾರೀ ಮೊತ್ತ ಪೇರಿಸಿತು.

ಗುರಿ ಬೆನ್ನಟ್ಟಿದ ಆರ್‌ಸಿಬಿ ತಂಡದ ಪರ ವೆಂಕಟೇಶ್ ಅಯ್ಯರ್ (44;19ಎ), ನಾಯಕ ರಜತ್ ಪಾಟೀದಾರ್ (56;39ಎ) ಮತ್ತು ಕೃಣಾಲ್ ಪಾಂಡ್ಯ (41;31ಎ) ಹೋರಾಟ ತೋರಿದರು. ಆದರೆ, ಅದು ಗೆಲುವಿಗೆ ಸಾಕಾಗಲಿಲ್ಲ. ತಂಡವು 4 ವಿಕೆಟ್‌ಗೆ 200 ರನ್‌ಗಳಿಸಿ ಓವರ್‌ಗಳನ್ನು ಮುಗಿಸಿತು.

ಕಳೆದ ಪಂದ್ಯದಲ್ಲಿ ಮಿಂಚಿದ್ದ ವೆಂಕಟೇಶ್ ಅವರು ಈ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಅವರೊಂದಿಗೆ ಆರಂಭಿಕ ಆಟಗಾರನಾಗಿ ಕಣಕ್ಕಿಳಿದರು. ಅವರಿಬ್ಬರು ಮೊದಲ ವಿಕೆಟ್‌ಗೆ ಬಿರುಸಿನ 60 ರನ್ ಸೇರಿಸಿ ತಂಡಕ್ಕೆ ಉತ್ತಮ ಆರಂಭ ನೀಡಿದರು. ವೇಗಿ ಇಶಾನ್ ಮಾಲಿಂಗ ಈ ಜೊತೆಯಾಟವನ್ನು ಮುರಿದರು. ಅದರ ಬೆನ್ನಲ್ಲೇ ಸಾಕಿಬ್ ಹುಸೇನ್ ಅವರ ಬೌಲಿಂಗ್‌ನಲ್ಲಿ ಕೊಹ್ಲಿ ಅವರು ಆರ್.ಸ್ಮರಣ್‌ಗೆ ಕ್ಯಾಚಿತ್ತು ಪೆವಿಲಿಯನ್ ಸೇರಿಕೊಂಡರು.

ಆಟಕ್ಕೆ ಕುದುರುತ್ತಿದ್ದ ಕನ್ನಡಿಗ ದೇವದತ್ತ ಪಡಿಕ್ಕಲ್ (21) ಅವರೂ ನಿರಾಸೆ ಮೂಡಿಸಿದರು. 94 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿದ್ದ ತಂಡಕ್ಕೆ ರಜತ್ ಮತ್ತು ಕೃಣಾಲ್ ಅವರು ನಾಲ್ಕನೇ ವಿಕೆಟ್‌ಗೆ 84 (57ಎ) ರನ್ ಸೇರಿಸಿ ಚೇತರಿಕೆ ನೀಡುವ ಪ್ರಯತ್ನ ನಡೆಸಿದರು. ಆದರೆ, ಎದುರಾಳಿ ತಂಡದ ಬೌಲರ್‌ಗಳು ಪರಿಣಾಮಕಾರಿ ದಾಳಿ ನಡೆಸಿ, ಆರ್‌ಸಿಬಿ ತಂಡದ ರನ್‌ವೇಗಕ್ಕೆ ಕಡಿವಾಣ ಹಾಕಿದರು. ಮಾಲಿಂಗ ಎರಡು ವಿಕೆಟ್ ಪಡೆದು ಮಿಂಚಿದರು.

ಸನ್ ಬ್ಯಾಟರ್‌ಗಳ ಅಬ್ಬರ: ಇದಕ್ಕೂ ಮೊದಲು ಟಾಸ್ ಗೆದ್ದ ಕಮಿನ್ಸ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡು ಅಚ್ಚರಿ ಮೂಡಿಸಿದರು. ಆದರೆ, ಅವರ ನಿರ್ಧಾರವನ್ನು ಆರಂಭಿಕ ಬ್ಯಾಟರ್‌ಗಳು ಸಮರ್ಥಿಸಿಕೊಂಡರು.

ಟ್ರಾವಿಸ್ ಹೆಡ್ ಮತ್ತು ಅಭಿಷೇಕ್ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 45 (24ಎ) ರನ್ ಸೇರಿಸಿದರು. ರಸಿಕ್ ಸಲಾಮ್ ದಾರ್ ಅವರು ಹಾಕಿದ ನಿಖರವಾದ ಯಾರ್ಕರ್ ಎಸೆತಕ್ಕೆ ಹೆಡ್ ಅವರ ವಿಕೆಟ್ ಉರುಳಿತು. ಅಭಿಷೇಕ್ ಜೊತೆಗೂಡಿದ ಇಶಾನ್ ರನ್ ಗಳಿಕೆಯ ವೇಗವನ್ನು ಮತ್ತಷ್ಟು ಹೆಚ್ಚಿಸಿದರು. ಇಬ್ಬರ ಬೀಸಾಟಕ್ಕೆ ಬೌಲರ್‌ಗಳು ಬಸವಳಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರೂ ಸೇರಿ 26 ಎಸೆತಗಳಲ್ಲಿ 52 ರನ್ ಗಳಿಸಿದರು. ಆದರೆ ತಂಡದ ಮೊತ್ತವು 100ರ ಸನಿಹದಲ್ಲಿದ್ದಾಗ ಅಭಿಷೇಕ್ ವಿಕೆಟ್ ಗಳಿಸಿದ ಸ್ಪಿನ್ನರ್ ಸುಯಶ್ ಶರ್ಮಾ ಭರವಸೆ ಮೂಡಿಸಿದರು. ಆದರೆ ಅದು ಹುಸಿಯಾಯಿತು.

ಇಶಾನ್ ಜೊತೆಗೂಡಿದ ಕ್ಲಾಸೆನ್ ಅವರ ಅಬ್ಬರ ಮುಗಿಲುಮುಟ್ಟಿತು. ಐದು ಸಿಕ್ಸರ್ ಮತ್ತು ಎರಡು ಬೌಂಡರಿ ಸಿಡಿಸಿದ ಹೆನ್ರಿಚ್ ಆರ್‌ಸಿಬಿಯ ಬೌಲರ್‌ಗಳ ದಿಕ್ಕು ತಪ್ಪಿಸಿದರು. ಇನ್ನೊಂದು ಬದಿಯಲ್ಲಿ ಎಡಗೈ ಬ್ಯಾಟರ್ ಇಶಾನ್ ಕೂಡ ಚೆಂಡನ್ನು ಬೌಂಡರಿ ದಾಟಿಸುವಲ್ಲಿ ಮಗ್ನರಾದರು. ಇವರಿಬ್ಬರ ಜೊತೆಯಾಟದಲ್ಲಿ 113 (48 ಎ) ರನ್‌ಗಳು ಸೇರಿದವು.

ಕೃಣಾಲ್ ಬೌಲಿಂಗ್‌ನಲ್ಲಿ ಕ್ಲಾಸೆನ್ ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು. ಕ್ರೀಸ್‌ಗೆ ಬಂದ ನಿತೀಶ್ ಕುಮಾರ್ ರೆಡ್ಡಿ ಕೇವಲ 12 ಎಸೆತಗಳಲ್ಲಿ ಅಜೇಯ 29 ರನ್ ಗಳಿಸಿದರು. ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ ಇಶಾನ್ ಔಟಾದರು.



ಇಶಾನ್ ಕಿಶನ್ ಮತ್ತು ಹೆನ್ರಿಚ್ ಕ್ಲಾಸೆನ್ ಜೊತೆಯಾಟ ಚಿತ್ರ: ಎಎಫ್‌ಪಿ/ ಪಿಟಿಐ



ಅರ್ಧಶತಕ ದಾಖಲಿಸಿದ ಅಭಿಷೇಕ್ ಶರ್ಮಾ

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್: 4 ವಿಕೆಟ್‌ಗೆ 255 (20 ಓವರ್‌ಗಳಲ್ಲಿ)

ಅಭಿಷೇಕ್ ಸಿ ಸಬ್ (ಜೆ.ಎಂ.ಕಾಕ್ಸ್) ಬಿ ಸುಯಶ್ 56 (22ಎ, 4x4, 6x5)
ಹೆಡ್ ಬಿ ರಸಿಕ್ ಸಲಾಂ 26 (16ಎ, 4x5)
ಇಶಾನ್ ಸಿ ಪಡಿಕ್ಕಲ್ ಬಿ ರಸಿಕ್ ಸಲಾಂ 79 (46ಎ, 4x3, 6x3)
ಕ್ಲಾಸೆನ್ ಸಿ ಅಯ್ಯರ್ ಬಿ ಪಾಂಡ್ಯ 51 (24ಎ, 4x2, 6x5)
ನಿತೀಶ್ ಕುಮಾರ್ ರೆಡ್ಡಿ ಔಟಾಗದೇ 29 (12ಎ, 4x1, 6x3)
ಇತರೆ: 14 (ವೈಡ್ 14)
ವಿಕೆಟ್ ಪತನ: 1–45 (ಟ್ರಾವಿಸ್ ಹೆಡ್, 3.6), 2–97 (ಅಭಿಷೇಕ್ ಶರ್ಮಾ, 8.2), 3–210 (ಹೆನ್ರಿಚ್ ಕ್ಲಾಸೆನ್, 16.2), 4–255 (ಇಶಾನ್ ಕಿಶನ್, 19.6)
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–51–0; ಜೋಶ್ ಹೇಝಲ್‌ವುಡ್ 4–0–55–0; ರಸಿಕ್ ಸಲಾಂ 4–0–52–2; ಸುಯಶ್ ಶರ್ಮಾ 3–0–36–1; ರೊಮಾರಿಯೊ ಶೆಫರ್ಡ್ 3–0–37–0; ಕೃಣಾಲ್ ಪಾಂಡ್ಯ 2–0–24–1

ರಾಯಲ್ ಚಾಲೆಂಜರ್ಸ್ ಬೆಂಗಳೂರು: 4ಕ್ಕೆ 200 (20 ಓವರ್‌ಗಳಲ್ಲಿ)

ವೆಂಕಟೇಶ್ ಸಿ ಅಭಿಷೇಕ್ ಬಿ ಮಾಲಿಂಗ 44 (19ಎ, 4x4, 6x4)
ಕೊಹ್ಲಿ ಸಿ ಸ್ಮರಣ್ ಬಿ ಸಾಕಿಬ್ 15 (11ಎ, 4x2)
ಪಡಿಕ್ಕಲ್ ಸಿ ಅಭಿಷೇಕ್ ಬಿ ಮಾಲಿಂಗ 21 (14ಎ, 4x2, 6x1)
ರಜತ್ ಸಿ ಸ್ಮರಣ್ ಬಿ ಹೆಡ್ 56 (39ಎ, 4x6, 6x1)
ಕೃಣಾಲ್ ಪಾಂಡ್ಯ ಔಟಾಗದೇ 41 (31ಎ, 4x5)
ಟಿಮ್ ಡೇವಿಡ್ ಔಟಾಗದೇ 15 (7ಎ, 4x1, 6x1)
ಇತರೆ: 8 (ಲೆಗ್‌ಬೈ 2, ನೋಬಾಲ್ 1, ವೈಡ್ 5)
ವಿಕೆಟ್ ಪತನ: 1-60 (ವೆಂಕಟೇಶ್ ಅಯ್ಯರ್, 4.3), 2-74 (ವಿರಾಟ್ ಕೊಹ್ಲಿ, 5.5), 3-94 (ದೇವದತ್ತ ಪಡಿಕ್ಕಲ್, 8.5), 4–178 (ರಜತ್ ಪಾಟೀದಾರ್, 18.2)
ಬೌಲಿಂಗ್: ಪ್ಯಾಟ್ ಕಮಿನ್ಸ್ 4–0–48–0, ಇಶಾನ್ ಮಾಲಿಂಗ 4–0–33–2, ಶಿವಾಂಗ್ ಕುಮಾರ್ 2–0–32–0, ಸಾಕಿಬ್ ಹುಸೇನ್ 4–0–31–1, ಹರ್ಷಲ್ ಪಟೇಲ್ 4–0–37–0, ನಿತೀಶ್ ಕುಮಾರ್ ರೆಡ್ಡಿ 1–0–10–0, ಟ್ರಾವಿಸ್ ಹೆಡ್ 1–0–7–1
ಪಂದ್ಯದ ಆಟಗಾರ: ಇಶಾನ್ ಕಿಶನ್

ಲಖನೌ ಎದುರು ಗೆದ್ದರಷ್ಟೇ ಪ್ಲೇ ಆಫ್ ಕನಸು ಜೀವಂತ

ಒತ್ತಡದಲ್ಲಿ ಶ್ರೇಯಸ್ ಬಳಗ

ಲಖನೌ (ಪಿಟಿಐ): ಪಂಜಾಬ್ ಕಿಂಗ್ಸ್ ತಂಡವು ಶನಿವಾರ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ಎದುರು ಭಾರಿ ಜಯ ಸಾಧಿಸಿ ಪ್ಲೇ ಆಫ್ ಕನಸನ್ನು ಜೀವಂತವಾಗಿರಿಸಿಕೊಳ್ಳಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ಸೋಲಿನ ಸರಪಳಿ ಕಿತ್ತೊಗೆಯಬೇಕಿದೆ.

ಪಂಜಾಬ್ ತಂಡವು ಟೂರ್ನಿಯ ಆರಂಭದ ಏಳು ಪಂದ್ಯಗಳಲ್ಲಿ ಸೋಲನ್ನೇ ಕಂಡಿರಲಿಲ್ಲ. ಡೆಲ್ಲಿ ಕ್ಯಾಪಿಟಲ್ಸ್ ತಂಡದ ಎದುರು 265 ರನ್ ಗುರಿಯನ್ನೂ ಯಶಸ್ವಿಯಾಗಿ ಮೀರಿ ನಿಂತು ಗೆದ್ದಿತ್ತು. ಆದರೆ ನಂತರದ ನಾಟಕೀಯ ಬೆಳವಣಿಗೆಯಲ್ಲಿ ಸತತ ಅರ್ಧ ಡಜನ್ ಸೋಲುಗಳ ಕಹಿಯುಂಡಿದೆ.

ಶ್ರೇಯಸ್ ಅಯ್ಯರ್ ನಾಯಕತ್ವದ ತಂಡವು 13 ಅಂಕಗಳನ್ನು ಗಳಿಸಿ, ಐದನೇ ಸ್ಥಾನದಲ್ಲಿದೆ. ಒಂದೊಮ್ಮೆ ಈ ಪಂದ್ಯದಲ್ಲಿ ಗೆದ್ದರೂ ಭಾನುವಾರದ ಎರಡು ಪಂದ್ಯಗಳ ಫಲಿತಾಂಶದ ಮೇಲೆ ಪಂಜಾಬ್ ಭವಿಷ್ಯ ನಿರ್ಧಾರವಾಗಲಿದೆ.

ಈ ಪಂದ್ಯದಲ್ಲಿ ಜಯಿಸಲು ಪಂಜಾಬ್ ಬ್ಯಾಟರ್‌ಗಳು ತಮ್ಮ ನೈಜ ಲಯಕ್ಕೆ ಮರಳಬೇಕಿದೆ. ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್ ಅವರು ಉತ್ತಮ ಬ್ಯಾಟಿಂಗ್ ಪ್ರದರ್ಶಿಸಬೇಕಿದೆ. ಪ್ರಭಸಿಮ್ರನ್ ಕಳೆದ ಐದು ಇನಿಂಗ್ಸ್‌ಗಳಲ್ಲಿ ಕೇವಲ ಒಂದು ಅರ್ಧಶತಕ ಹೊಡೆದಿದ್ದಾರೆ. ಮಧ್ಯ ಕ್ರಮಾಂಕದಲ್ಲಿ ಕೂಪರ್ ಕೊನೊಲಿ ಬಿಟ್ಟರೆ ಉಳಿದವರಿಂದ ಸ್ಥಿರ ಪ್ರದರ್ಶನ ಮೂಡಿಬಂದಿಲ್ಲ.

ಶ್ರೇಯಸ್ ಅಯ್ಯರ್ ಕೂಡ ಆರು ಪಂದ್ಯಗಳಲ್ಲಿ ಕೇವಲ ಒಂದು ಬಾರಿ ಅರ್ಧಶತಕ ಗಳಿಸಿದ್ದಾರೆ. ಬೌಲಿಂಗ್‌ನಲ್ಲಿಯೂ ಅರ್ಷದೀಪ್ ಸಿಂಗ್, ಮಾರ್ಕೊ ಯಾನ್ಸೆನ್, ಝೇವಿಯರ್ ಬಾರ್ಟ್‌ಲೆಟ್ ಹಾಗೂ ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರು ಶಿಸ್ತಿನ ದಾಳಿ ನಡೆಸಿ ಬಿಗಿಹಿಡಿತ ಸಾಧಿಸಬೇಕಿದೆ.

ಏಕೆಂದರೆ; ಲಖನೌ ತಂಡವು ಈಗಾಗಲೇ ಪ್ಲೇ ಆಫ್ ಹಾದಿಯಿಂದ ಹೊರಬಿದ್ದಿದೆ. ಆ ತಂಡಕ್ಕೆ ಇದು ಔಪಚಾರಿಕ ಪಂದ್ಯವಷ್ಟೇ. ಆದ್ದರಿಂದ ಒತ್ತಡವಿಲ್ಲದೇ ಆಡುವುದು ಖಚಿತ. ಆದ್ದರಿಂದ ಒತ್ತಡದಲ್ಲಿರುವ ಪಂಜಾಬ್ ತಂಡವನ್ನು ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿಸಬಹುದು. ಈಚೆಗೆ ಲಖನೌ ತಂಡವು ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸೋಲಿಸಿತ್ತು. ಅದರಿಂದಾಗಿ ಚೆನ್ನೈ ತಂಡದ ಸಣ್ಣದೊಂದು ಅವಕಾಶವೂ ಕೈತಪ್ಪಿತ್ತು. ತವರಿನಂಗಳದಲ್ಲಿ ರಿಷಭ್ ಪಂತ್ ಬಳಗವು ತನ್ನ ಕೊನೆಯ ಪಂದ್ಯವನ್ನು ಜಯಿಸುವುದರೊಂದಿಗೆ ಅಭಿಯಾನಕ್ಕೆ ತೆರೆ ಎಳೆಯುವ ಛಲದಲ್ಲಿದೆ.



ಶ್ರೇಯಸ್ ಅಯ್ಯರ್



ರಿಷಭ್ ಪಂತ್

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ						
ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	14	9	5	0	18	0.783
ಜಿ ಟಿ	14	9	5	0	18	0.695
ಎಸ್‌ಆರ್‌ಎಚ್	14	9	5	0	18	0.524
ಆರ್ ಆರ್	13	7	6	0	14	0.083
ಪಿಬಿಕೆಎಸ್	13	6	6	1	13	0.227
ಕೆಕೆಆರ್	13	6	6	1	13	0.011
ಸಿಎಸ್‌ಕೆ	14	6	8	0	12	- 0.345
ಡಿ ಸಿ	13	6	7	0	12	- 0.871
ಎಂ ಐ	13	4	9	0	8	- 0.510
ಎಲ್‌ಎಸ್‌ಜಿ	13	4	9	0	8	- 0.702
ಆರೆಂಜ್ ಕ್ಯಾಪ್: ಸಾಯಿ ಸುದರ್ಶನ್, ಜಿಟಿ (638 ರನ್)						
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (24 ವಿಕೆಟ್)						

ಇಂದಿನ ಪಂದ್ಯ

ಲಖನೌ ಸೂಪರ್ ಜೈಂಟ್ಸ್ V/s ಪಂಜಾಬ್ ಕಿಂಗ್ಸ್
ತಾಣ: ಲಖನೌ,
ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಅಶ್ಮಿತಾ ಯಶಸ್ಸಿನ ಓಟ ಅಂತ್ಯ

ಕ್ವಾಲಾಲಂಪುರ (ಪಿಟಿಐ): ಭಾರತದ ಅಶ್ಮಿತಾ ಚಾಲಿಹಾ ಅವರು ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಸೂಪರ್ 500 ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಶುಕ್ರವಾರ ಡೆನ್ಮಾರ್ಕ್‌ನ ಲೀನ್ ಕಿಯರ್ಸ್‌ಫೆಲ್ಟ್ ಅವರಿಗೆ ಸೋಲುವ ಮೊದಲು ಸ್ಫೂರ್ತಿಯುತ ಹೋರಾಟ ಪ್ರದರ್ಶಿಸಿದರು.

ಬಲಗಾಲಿನ ನೋವಿಗೆ ಶಸ್ತ್ರಚಿಕಿತ್ಸೆಯಾಗಿ ಎಂಟು ತಿಂಗಳ ಬಳಿಕ ಪುನರಾಗಮನ ಮಾಡಿದ ಅಶ್ಮಿತಾ, ಲೀನ್ ಅವರಿಗೆ 23–21, 18–21, 11–21 ರಲ್ಲಿ ಸೋತರು.

ಋತುರಾಜ್‌ಗೆ ₹24 ಲಕ್ಷ ದಂಡ

ಅಹಮದಾಬಾದ್ (ಪಿಟಿಐ): ಗುಜರಾತ್ ಟೈಟನ್ಸ್ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವು ನಿಗದಿತ ಅವಧಿಯೊಳಗೆ ತನ್ನ ಪಾಲಿನ ಓವರುಗಳನ್ನು ಪೂರೈಸಲು ವಿಫಲವಾದ ಕಾರಣ ನಾಯಕ ಋತುರಾಜ್ ಗಾಯಕವಾಡ್ ಅವರಿಗೆ ₹24 ಲಕ್ಷ ದಂಡ ವಿಧಿಸಲಾಗಿದೆ.

ಇದು ತಂಡ ಮಾಡಿದ ಎರಡನೇ ತಪ್ಪು ಆಗಿರುವುದರಿಂದ ದಂಡದ ಮೊತ್ತ ಹೆಚ್ಚಿಸಲಾಗಿದೆ. ಇಂಪ್ಯಾಕ್ಟ್ ಪ್ಲೇಯರ್ ಸೇರಿ ತಂಡದ ಉಳಿದ ಆಟಗಾರರಿಗೆ ತಲಾ ₹6 ಲಕ್ಷ ಅಥವಾ ಪಂದ್ಯ ಸಂಭಾವನೆಯ ಶೇ 25ರಷ್ಟು– ಇವೆರಡರಲ್ಲಿ ಯಾವುದು ಕಡಿಮೆಯೊ ಅದನ್ನು ದಂಡವನ್ನಾಗಿ ವಿಧಿಸಲಾಗಿದೆ

ಗುರುವಾರ ನಡೆದ ಪಂದ್ಯದಲ್ಲಿ ಶುಭಮನ್ ಗಿಲ್ ನೇತೃತ್ವದ ಟೈಟನ್ಸ್ ತಂಡ 89 ರನ್‌ಗಳಿಂದ ಜಯಗಳಿಸಿತ್ತು. ಸೋತ ಚೆನ್ನೈನ ಪ್ಲೇಆಫ್ ಆಸೆ ಭಗ್ನಗೊಂಡಿತ್ತು.



ಗಾಯಕವಾಡ್

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ


email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER ಕ್ಲಾಸಿಫೈಡ್ಸ್







REAL ESTATE SELLING

Sites

Anjanapura

BDA SITE for Sale Anjanapura 40x60 Commercial, 3600 sqft NE Corner. Call Owner Rajesh: 9845167755

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

FOR SALE BDA EAST FACING 30'x43.5' in BSK 1st stage Srinagar & DC conversion 40'x70' north facing sites in BSK 6th stage, for price 9845380312

'AVAILABLE' BSK _6TH Stage, 4th'B'Block,40x60,West 2.40cr/2nd Block 30x40,East Parallel to 80' Road 9901315949/9731814437

Electronic City

"ELECTRONIC CITY 30x40 DC.conversion E-Katha, Gated`Community 38`Sites`Sale total`1.5`acres with`Basic Amenities, Bank`Loan Available, Ready`for Registration near`VIBGYOR School, 1.75kms`from Hosa_Road, Metro_Station. 9620424103/ 9448670671"

Hanumanthnagar

BDA SITE For Sale 30X50 Hanumanthnagar South Facing & House For Sale 4BHK with Car parking in Hanumanthnagar Near BMS College.Contact :9343742082

Kengeri

KEMPEGOWDA BDA Layout,30x40, S/F, 9000/- Commercial E/S,Corner _Site 1300 Sft, Rs 10,000/- 9740150364/8050511894

Kanakapura Road

"AVAILABLE 30X40, 40x60, 50x80 Residential/ Commercial Sites/ Houses Kanakapura Road, Anjanapura, Banashankari 6th Stage. 9845286505"

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

BDA SITE for Sale at Kempegowda Layout, 3rd Block, F Sector, four Kilometers from Mysore Road, Three Kilometers From Kengeri Upanagara 30x40 North Facing. Mob: 9901549488

KEMPEGOWDA LAYOUT Sites No. 509, 510, 2nd Block West 20x30 Rs. 57 Lakhs Negotiable: 9845793121

BDA SITE South facing, measuring 50x80, 1st K Sector, 60ft Double Road (Commercial), Connects Business Corridor, Kempegowda Layout, Site Sale. 10900/- psqft. Dinesh: 8296101765

Nagarabhavi

NAGARBHAVI MALLTHALLI ITI Employees Society Site No. 785 South Facing For Sale 18,000/- Krishna: 9845059328

Vijayanagar

PRIME LOCATION SITE SALE 60x90 WEST FACING WOC ROAD RPC LAYOUT VIJAYANAGAR CONTACT: 9845038343/ 6363250343

Vishweshwariah Layout

SALE PRIME Location Hill`top BDA`auction North East Corner-Site 2400sqft 8th-Block Sir MV Layout. Only genuine persons Brokers-excuse Call:9945133771

SITE URGENT SALE 30x40 E/F BDA KLE LAW COLLEGE 6TH BLOCK SMV LAYOUT 1.56CR. 9108133156

Kolar

KOLAR PRIME Sites For Sale 50X80 'C' Byre Gowda Nagar,40X60 BEML Layout 2nd Stage. Contact: 9731115176/ 9738920699

Nelamangala

SITE SALE 35x50 West face, Rashi gateway near D-mart, Nelamangala-Tumkur toll. Mob-9880093622



House

Padmanabha Nagar

HOUSE FOR SALE A KATHA AND E-SWATHU.
Total Area 1800 Sqft
7 Nos 2BHK House with fully Furnished in Cchikkalasandra Near kidney Foundation North Facing. Ground floor Car parking, Lift,1Bore Well, Cauvery Water
Contact: 86184 60389, 7760835596

Banashankari

PROPERTY FOR Sale Banagiri Nagar BSK_2nd Stage Opposite kims Hostel 30x40 East_Facing Broker_Excuse Call:9341271138 8147734144

BTM Layout

SALE BDA Semi Commercial Property BTM 2nd stage 51*61 west 38,000/sqft negotiable. Owner 9739760786

Bannerghatta Road

BANNERGHATTA ROAD, Vijaya Bank Layout, 1500Sft, South facing, with 3bhk House 3.30 Crores Reddy 9880226644.

Nagarabhavi

DIRECT OWNER BDA 20x20 G + 2 Independent House NF Pattegarapalya, Nagarabhavi, 68 Lakh: 9739957911

Commerical

Chickpet

GROUND FLOOR showroom for sale 12x55 sqft on BVK Iyengar Road, Chickpet, Bengaluru. Mobile: 9945321732

Yeshwanthpur

FOR_SALE: Premium 4500SFT Office_space with OC`pre-leased to_150`year`old Switzerland Company fetching 3.2L monthly Rental`income in`Yeshwanthpur Call-9916155055

Commercial Building

General

PROPERTIES FOR SALE: Commercial Building with 30 shops at Thokkottu. Commercial Building with 22K sft. with 24 car parking at B.C. Road. 20 Room running Hotel at GOA beach. Pent Houses in good locality in Mangalore city. 10 Acres land within city limits in Mangalore. If you have any requirements we can cater. Call / message to 9449697549

Malleshwaram

FULLY FURNISHED 16,000sft. A/C Showroom For RENT/SALE On Prime Busy Commercial Area, 8th Cross, Malleshwaram. 9845358544/ 9448477419

Industrial & Factory

Kanakapura Road

INDUSTRIAL SHED FOR SALE AT CHUNCHAGHATTA MAIN ROAD
Shed 45 Feet hight. 7400/= Sq.ft 10HP Power with Borewell East Facing and 600 sqft 2BHK & 1BHK fully furnished **FOR SALE** with car parking.
Contact: 7760835596 / 8971391795

Farm House/ Land/ Resorts

Devanahalli

CONVERTED LAND For Sale- Devanahalli 22,325 sft Residentially Converted Land For Sale, STRR, Service Road Approached Land, Devanahalli Taluk, Bangalore North. Excellent Investment Opportunity in Fast-growing North Bangalore Corridor. For Details What'sapp: 9606902899

RENTAL PROPERTIES

Accommodation Available

Commercial

PRIME BUILT UP WAREHOUSE SPACE-57,000 sqft. AVAILABLE FOR LEASE AT DODDAKALLASANDRA NEXT TO METRO STATION, KANAKAPURA MAIN ROAD. CALL OWNERS: Ravi C. 9845006864 K.S. Murthy 9845001381 AGENTS EXCUSE

COMMERCIAL 2000 sqft. Space for Rent K.G. Road, Gandhinagar. Contact: 9448363096.

Flats

THE BHARATHI City Apartment Nikoo Homes Thanisandra Main Road 2 BHK 20th Floor For Rent 45,000/- Including Maintenance & with All Amenities Krishna: 9845059328

REAL ESTATE BUYING

Sites

Banashankari

BDA SITES WANTED ARKAVATI ANJANAPURA BANASHANKARI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Kanakapura Road

WANTED SITE 40x60 30x40 BCCHS LAYOUT NARAYANNAGAR BANASHANKARI 6th STAGE, ANJANAPURA KANAKAPURA ROAD BROKER EXCUSE. Call 9663454878.

Multiple Locations

WANTED SITES COMMERCIAL/ RESIDENTIAL INDIRANAGAR KAMMANAHALLI HENNUR ROAD HORAMAVU JAKKUR YELAHANKA 1,000 SQFT TO 5,000 SQFT. MARKET RATE GENUINE SELLERS/ AGENTS MESSAGE ON WHATSAPP 'FALCON' 9845447868/ 9845061345

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

'WE-FIX' LEAKING ROOF, SUMP, SKYLIGHT, BATHROOM, TILING, HOUSE PAINTING, ROOF COOL EPOXY COATING, MACBOND. 9448572697

BUSINESS

Business to Business

Business

AVAILABLE ON lease a 10 ton ice cubes manufacturing unit at Goa, in operation. 9823594527

PERSONAL

Lost

ದಾಖಲೆ ಕಳೆದುಹೋಗಿದೆ

ನಾನು, ಮಂಜುನಾಥ, ನಂ. 1, 5ನೇ ಬಿ ಅಡ್ಡರಸ್ತೆ, ಮಾಗಡಿ ಮುಖ್ಯರಸ್ತೆ, ಕೊಟ್ಟಿಗೆಪಾಳ್ಯ, ಸಜ್ಜೆಪಾಳ್ಯ, ಬೆಂಗಳೂರು–91 ಇಲ್ಲಿ ವಾಸವಾಗಿರುತ್ತೇನೆ. ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಕರಿವೋಬನಹಳ್ಳಿ ಗ್ರಾಮ, ಸರ್ವೆ ನಂ.102, ಸೈಟ್ ನಂ.18ರ ಮೂಲ ಖಾತಾ ಪತ್ರ ಕಳೆದುಹೋಗಿದೆ ಯಾರಿಗಾದರೂ ಸಿಕ್ಕಲ್ಲಿ ದಯವಿಟ್ಟು ಸಂಪರ್ಕಿಸಿ: 99450604859.

JOB OPPORTUNITIES

General

OFFICE ADMINISTRATOR. Graduate, age group: 30+ required for a firm in Chamrajpet, Bengaluru for invoicing, filing, documentation, follow-up works and other related clerical jobs. To have good computer knowledge and experience in ERP. Call: 080- 26603729 for an interview. E-mail: admin@mahendraperfumery.com

Teachers/ Professors

ST.PHILOMENA'S English_School, Doddabommasandra, Bengaluru_97 Hiring Principal Qualification: B.Ed,M.Ed.`Phd Experience Minimum 5years`SUBJECT: Computer Teacher: Qualification: MCA- Experience 5years Admin_Staff Qualification Bachelor's Degree- Apply now!`WhatsApp 9741275231 Email: office.stps@gmail.com 080-48537655

ವಿಜಯವಾಣಿ

ನಂ. 1 ಕನ್ನಡ ದಿನಪತ್ರಿಕೆ

ಕನ್ನಡಿಗರ ಧ್ವನಿ

ವಿದ್ಯೋತ್ಸವ

ಎಜುಕೇಷನ್ ಎಕ್ಸ್‌ಪೋ 2026

ಪ್ರಸ್ತುತಿ

ವಿಜಯವಾಣಿ
ಕನ್ನಡಿಗರ ಧ್ವನಿ

ಸಹಕಾರ
AD6 advertising
A Unit of Sri Sairam Enterprises

ಉಚಿತ ಪ್ರವೇಶ

ಉಜ್ವಲ ಭವಿಷ್ಯದ ರಹದಾರಿ

ಅಗ್ರ ಕಾಲೇಜುಗಳ ಆಯ್ಕೆ | ವೃತ್ತಿ ಮಾರ್ಗದರ್ಶನ | ಶಿಷ್ಯವೇತನಗಳು
ಒಂದೇ ಸೂರಿನಡಿ ಪ್ರವೇಶಾತಿಗಳು

ಸಪ್ತಗಿರಿ ಎನ್‌ಪಿಎಸ್ ವಿಶ್ವವಿದ್ಯಾಲಯದಿಂದ ಲ್ಯಾಪ್‌ಟಾಪ್ ಬಂಪರ್‌ಬಹುಮಾನ

SAPTHAGIRI NPS UNIVERSITY

Surprise Gifts Await!

ಉದ್ಘಾಟನೆ

ದಿನಾಂಕ: 23ನೇ ಮೇ, 2026
ಸಮಯ: ಬೆಳಗ್ಗೆ 10.30 ಗಂಟೆ



ಶ್ರೀ ರಾಮಲಿಂಗಾರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಖಾತೆ ಸಚಿವರು
ಕರ್ನಾಟಕ ಸರ್ಕಾರ



ಡಾ. ವಿಜಯ ಸಂಕೇಶ್ವರ
ಚೇರ್ಮನ್
ವಿಆರ್‌ಎಲ್ ಸಮೂಹ ಸಂಸ್ಥೆಗಳು

23 ಮತ್ತು 24ನೇ ಮೇ 2026
(ಶನಿವಾರ ಮತ್ತು ಭಾನುವಾರ)
ಸಮಯ: ಬೆ. 10 ರಿಂದ ಸಂ. 7 ಗಂಟೆಯವರೆಗೆ

ನ್ಯಾಷನಲ್ ಕಾಲೇಜು ಜಯನಗರ ಮೈದಾನ
7ನೇ ಹಂತ, ಸಿಟಿ ಕಾಲೇಜು ಹತ್ತಿರ, ಜಯನಗರ
ಬೆಂಗಳೂರು – 560 070

Scan for location

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಬೆಂಗಳೂರು: ಸೌಜನ್ಯ - 88844 32337 | ಸೆಬಾಸ್ಟಿಯನ್ - 82969 60291 ತುಮಕೂರು: ಯತೀಶ್ - 88844 32363

Platinum Sponsors
RAMAIAH UNIVERSITY OF APPLIED SCIENCES
PRESIDENCY UNIVERSITY
REVA UNIVERSITY Bengaluru, India

Diamond Sponsors
CMR UNIVERSITY
SAPTHAGIRI NPS UNIVERSITY
CAMBRIDGE INSTITUTE OF TECHNOLOGY An Autonomous Institution
CHANAKYA UNIVERSITY
GITAM Deemed to be University — Bengaluru • Hyderabad • Visakhapatnam

Gold Sponsors
KLE ACADEMY OF HIGHER EDUCATION AND RESEARCH BELAGAVI-KARNATAKA (Deemed-to-be-University)
EAST POINT GROUP OF INSTITUTIONS
KAMMAVARI SANGHAM GROUP OF INSTITUTIONS
AMITY UNIVERSITY BENGALURU
AMC INSTITUTIONS An Autonomous Institution

Silver Sponsors
CITY INSTITUTIONS
S.E.A GROUP OF INSTITUTIONS
SHRIDEVI EDUCATION
INSIGHTSIAS
SRI SAPTHAGIRI PRE-UNIVERSITY COLLEGE
EAST WEST GROUP OF INSTITUTIONS BENGALURU
IIBS
RV UNIVERSITY
RajaRajeswari College of Engineering
SAIRAM COLLEGE OF ENGINEERING
ATRIA UNIVERSITY
DR.ACS COLLEGE OF ENGINEERING
C.I.T TUMKUR
Seshadripuram College
S-VYASA DEEMED-TO-BE-UNIVERSITY SCHOOL FOR ADVANCED STUDIES
SARVODAYA PRE UNIVERSITY COLLEGE
JYOTHY INSTITUTE OF COMMERCE AND MANAGEMENT
Sri Jagadhguru Murugarajendra University, Chitradurga
GM UNIVERSITY

Stall Partners
SRI KRISHNA GROUP OF INSTITUTIONS
VISION NEET ACADEMY BENGALURU
BANGALORE INSTITUTE OF TECHNOLOGY
MONEY MITHRA CHIT FUND & LOANS
ಡಾಕ್ಟರ್ ಅಬ್ರಾಡ್ DOCTOR ABROAD
ULTRAVIOLETTE ELITE MOTOCRAFT
ADVAITH HYUNDAI
Dr. AMBEDKAR INSTITUTE OF TECHNOLOGY
NMIMS BENGALURU
ICSI THE INSTITUTE OF Company Secretaries of India
VEMANA
SBI The banker to every Indian
GTTC
ATHER
JSS ACADEMY OF TECHNICAL EDUCATION BENGALURU

*Source: ABC July-Dec. 2025

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

